ಭಾನುವಾರ, ಸೆಪ್ಟೆಂಬರ್ 19, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇವಿ ಮೂರ್ತಿ
ದುರ್ಗಾ ಪೂಜೆಗೆ ಪೂರ್ವಭಾವಿಯಾಗಿ ಕೋಲ್ಕತ್ತದಲ್ಲಿ ಕಲಾವಿದರೊಬ್ಬರು ಶನಿವಾರ ದುರ್ಗಾ ದೇವಿಯ ಮೂರ್ತಿ ನಿರ್ಮಾಣದಲ್ಲಿ ನಿರತರಾಗಿದ್ದರು

Azadi Ka Amrit Mahotsav

ಸೇವಾ ಸಮರ್ಪಣಾ ದಿನ

29 ಲಕ್ಷಕ್ಕೂ ಹೆಚ್ಚು
ಕೋವಿಡ್ ಲಸಿಕೆ
ನೀಡಿಕೆಯ ಅಮೋಘ ದಾಖಲೆ
ದೇಶದಲ್ಲೇ ನಂ.2

ಲಸಿಕೆ ಡೋಸ್‌ಗಳ ಪ್ರಮಾಣದಲ್ಲಿ ಕರ್ನಾಟಕದ ಪಾಲು ಶೇ.11.

ರಾಜ್ಯಾದ್ಯಂತ ಅಂದಾಜು
5.18 ಕೋಟಿ
ಕೋವಿಡ್ ಲಸಿಕೆ ನೀಡಿದೆ.

ಜಗತ್ತು ಮೆಚ್ಚಿದ ದಕ್ಷ ಹಾಗೂ ಧೀಮಂತ ನಾಯಕ ಶ್ರೀ ನರೇಂದ್ರ ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿ ಹಾಗೂ ದೇಶದ ಪ್ರಧಾನಮಂತ್ರಿಯಾಗಿ 20 ವರ್ಷಗಳ ಸುದೀರ್ಘ ರಾಜಕೀಯ ಪಯಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದು, ಭಾರತ ದೇಶವನ್ನು ವಿಶ್ವಗುರು ಸ್ಥಾನಕ್ಕೇರಿಸುವ ನಿಟ್ಟಿನಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರವು ಮೋದಿಯವರ ಧೀಮಂತ ನಾಯಕತ್ವ ಮತ್ತು ಆದರ್ಶ ಆಡಳಿತವನ್ನು ಅನುಕರಿಸುತ್ತಾ **"ಸೇವಾ ಸಮರ್ಪಣಾ ದಿನ"**ವನ್ನು ಆಚರಿಸಿದೆ. ಇದರ ಅಂಗವಾಗಿ ಲಸಿಕಾ ಅಭಿಯಾನ ಆಯೋಜಿಸಿ ದಾಖಲೆ ನಿರ್ಮಿಸಿದೆ.

ಪ್ರಧಾನಮಂತ್ರಿಯವರ ಸಮರ್ಥ ಮಾರ್ಗದರ್ಶನದಲ್ಲಿ
ರಾಜ್ಯ ಸರ್ಕಾರದ ಅಮೃತ ಯೋಜನೆಗಳು

ಕರ್ನಾಟಕ ಸರ್ಕಾರವು ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ರೂಪಿಸಿರುವ ಅಮೃತ ಯೋಜನೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಹೊರಡಿಸಲಾಗಿದೆ ಹಾಗೂ ಫಲಾನುಭವಿಗಳನ್ನು ಆಯ್ಕೆ ಮಾಡಲು ಸೂಕ್ತ ಕ್ರಮ ಕೈಗೊಂಡಿದೆ ಮತ್ತು ಪ್ರಗತಿ ಪರಿಶೀಲನೆಗೆ ಪ್ರತಿ ಜಿಲ್ಲೆಗೆ ಸಚಿವರುಗಳನ್ನು ಉಸ್ತುವಾರಿಗಳಾಗಿ ನೇಮಿಸಿದೆ.

- ಅಮೃತ ಗ್ರಾಮ ಪಂಚಾಯ್ತಿಗಳು
- ಅಮೃತ ಗ್ರಾಮೀಣ ವಸತಿ ಯೋಜನೆ
- ಅಮೃತ ರೈತ ಉತ್ಪಾದಕ ಸಂಸ್ಥೆಗಳು
- ಅಮೃತ ನಿರ್ಮಲ ನಗರ
- ಅಮೃತ ಶಾಲಾ ಸೌಲಭ್ಯ ಯೋಜನೆ
- ಅಮೃತ ಅಂಗನವಾಡಿ ಕೇಂದ್ರಗಳು
- ಅಮೃತ ಸ್ವಸಹಾಯ ಕಿರು ಉದ್ದಿಮೆಗಳು
- ಅಮೃತ ಕೌಶಲ್ಯ ತರಬೇತಿ ಯೋಜನೆ
- ಅಮೃತ ನಗರೋತ್ಥಾನ
- ಅಮೃತ ಆರೋಗ್ಯ ಮೂಲಸೌಕರ್ಯ ಉನ್ನತೀಕರಣ ಯೋಜನೆ
- ಅಮೃತ ಸಮುದಾಯ ಅಭಿವೃದ್ಧಿ ಯೋಜನೆ
- ಅಮೃತ ಕ್ರೀಡಾ ದತ್ತು ಯೋಜನೆ

ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ
ಯೋಜನೆಯಡಿ ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ. ಕನಿಷ್ಠ ರೂ.2,500/– ರಿಂದ ಗರಿಷ್ಠ ರೂ.11,000/–.

"ರಾಜ್ಯ ಸರ್ಕಾರವು ಪ್ರಧಾನಿಯವರ ಸಮರ್ಪಣಾ ಭಾವ, ಕಾರ್ಯದಕ್ಷತೆ, ಬದ್ಧತೆಯನ್ನು ಅಳವಡಿಸಿಕೊಳ್ಳುವ ಮೂಲಕ ಅವರಿಗೆ ಗೌರವ ಸಲ್ಲಿಸುವುದರ ಜೊತೆಗೆ ಸಾರ್ವಜನಿಕರ ಹಾಗೂ ರಾಜ್ಯದ ಸಮಗ್ರ ಅಭಿವೃದ್ಧಿಯ ಸೇವೆಯಲ್ಲಿ ತೊಡಗಿಕೊಳ್ಳುವ ಮೂಲಕ ಅವರ ಆದರ್ಶವನ್ನು ಪಾಲಿಸುವುದು."

– ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು"
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಮಾಸ್ಕ್ ಧರಿಸಿ | ಸಾಮಾಜಿಕ ಅಂತರ ಕಾಪಾಡಿಕೊಳ್ಳಿ (6 ಅಡಿ) | ಕೈಗಳನ್ನು ಸ್ವಚ್ಛಗೊಳಿಸಿ | ಲಸಿಕೆ ಹಾಕಿಸಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಿದ್ಯುತ್ ವಾಹನ ಬಳಕೆಗೆ ಉತ್ತೇಜನ: ಇ–ಮೊಬಿಲಿಟಿ ಕಾರ್ಯಾಗಾರದಲ್ಲಿ ಸಚಿವ ಸುನೀಲ್‌ಕುಮಾರ್

‘ರಾಜ್ಯದಲ್ಲಿ ಸಾವಿರ ಇ–ಚಾರ್ಜಿಂಗ್ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯುತ್ ವಾಹನಗಳ ಬಳಕೆ ಉತ್ತೇಜಿಸುವ ನಿಟ್ಟಿನಲ್ಲಿ ರಾಜ್ಯದಾದ್ಯಂತ ವರ್ಷದಲ್ಲಿ ಒಂದು ಸಾವಿರ ಇ–ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದೇವೆ’ ಎಂದು ಇಂಧನ ಸಚಿವ ವಿ. ಸುನೀಲ್‌ಕುಮಾರ್ ಹೇಳಿದರು.

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕರ್ನಾಟಕ ಇ–ಮೊಬಿಲಿಟಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ‘ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಯ ಕಾರ್ಯ ಭರದಿಂದ ಸಾಗಿದೆ’ ಎಂದರು.

‘ರಾಜ್ಯದಲ್ಲಿ 136 ಚಾರ್ಜಿಂಗ್ ಕೇಂದ್ರಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ. ಎರಡನೇ ಹಂತದಲ್ಲಿ ರಾಜ್ಯದಲ್ಲಿ 172 ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಬೆಂಗಳೂರು ನಗರದಲ್ಲಿ 152 ಕೇಂದ್ರಗಳನ್ನು ಕೇಂದ್ರ ಸರ್ಕಾರದ ಫೇಮ್–2 ಯೋಜನೆಯಡಿ ಮತ್ತು ಇತರೆ ಕೇಂದ್ರಗಳನ್ನು ವಿವಿಧ ಕಂಪನಿಗಳೊಂದಿಗಿನ ಒಪ್ಪಂದದ ಮೂಲಕ ಸ್ಥಾಪಿಸಲಾಗುವುದು’ ಎಂದರು.

‘ವಿದ್ಯುತ್ ವಾಹನಗಳ ಬಳಕೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರವು 2017ರಲ್ಲಿಯೇ ವಿದ್ಯುತ್ ವಾಹನ ಮತ್ತು ಶಕ್ತಿ ಸಂಗ್ರಹ ನೀತಿಯನ್ನು ರೂಪಿಸಿದೆ. ದೇಶದಲ್ಲಿಯೇ ಈ ನೀತಿಯನ್ನು ಅಳವಡಿಸಿಕೊಂಡ ಮೊದಲ ರಾಜ್ಯ ಕರ್ನಾಟಕ’ ಎಂದು ಹೇಳಿದರು.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ್ ನಾಯಕ್, ‘ಈಗ ವಿದ್ಯುತ್ ಉತ್ಪಾದನೆಯಲ್ಲಿ ಹಾಗೂ ಬೇಡಿಕೆಯಲ್ಲಿ ವೈವಿಧ್ಯ ಇದೆ. ಇದಕ್ಕೆ ತಕ್ಕಂತೆ ವಿದ್ಯುತ್ ಪೂರೈಕೆ ಜಾಲವೂ ಮೇಲ್ದರ್ಜೆಗೇರಬೇಕಾಗಿದೆ. ಈ ನಿಟ್ಟಿನಲ್ಲಿ ಗ್ರಿಡ್‌ಗಳನ್ನು ಸ್ಮಾರ್ಟ್ ಆಗಿ ರೂಪಿಸುವ ಕೆಲಸ ನಡೆಯುತ್ತಿದೆ’ ಎಂದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್, ‘ಬೆಸ್ಕಾಂ ರಾಜ್ಯದಲ್ಲಿಯೇ ಅತಿದೊಡ್ಡ ವಿದ್ಯುತ್ ಸರಬರಾಜು ಕಂಪನಿ. ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ನೋಡಲ್ ಏಜೆನ್ಸಿಯಾಗಿ ಬೆಸ್ಕಾಂ ನೇಮಕಗೊಂಡಿದೆ’ ಎಂದರು.

‘ಸದ್ಯ ರಾಜ್ಯದಲ್ಲಿ ಅಂದಾಜು 30 ಸಾವಿರ, ಬೆಂಗಳೂರಿನಲ್ಲಿ 18 ಸಾವಿರ ವಿದ್ಯುತ್ ವಾಹನಗಳು ಓಡಾಡುತ್ತಿವೆ. ವಿದ್ಯುತ್ ವಾಹನ ಖರೀದಿಗೆ ಸಹಾಯಧನ, ಕಡಿಮೆ ದರದಲ್ಲಿ ಚಾರ್ಜಿಂಗ್ ಸೌಲಭ್ಯ ಸೇರಿದಂತೆ ಅನೇಕ ಉಪಕ್ರಮಗಳನ್ನು ಕೈಗೊಂಡು ವಿದ್ಯುತ್ ವಾಹನಗಳ ಖರೀದಿ ಉತ್ತೇಜಿಸಲಾಗುತ್ತಿದೆ’ ಎಂದರು.

ವಿದ್ಯುತ್ ವಾಹನಗಳ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಬೆಸ್ಕಾಂ ಮತ್ತು ಇಇಎಸ್ಎಲ್ ಕಂಪನಿಯು ಒಪ್ಪಂದಕ್ಕೆ ಸಹಿ ಹಾಕಿದವು.

ಸನ್ ಮೊಬಿಲಿಟಿ ಸಹಸ್ಥಾಪಕ ಚೇತನ್ ಮೈನಿ, ಸ್ವಿಚ್ ಮೊಬಿಲಿಟಿ ಇಂಡಿಯಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಬಾಬು ಮಾತನಾಡಿದರು.

ಕಿ.ಮೀ.ಗೆ ₹1.20 ಪೈಸೆ ಮಾತ್ರ!

ಎಲೆಕ್ಟ್ರಿಕ್ ವಾಹನದ ಚಾರ್ಜಿಂಗ್‌ಗೆ ಒಂದು ಯುನಿಟ್‌ಗೆ ₹8 ಖರ್ಚಾಗುತ್ತದೆ. 15 ಯುನಿಟ್ ಇದ್ದರೆ, 100 ಕಿ.ಮೀ.ವರೆಗೆ ವಾಹನ ಓಡುತ್ತದೆ. ₹200 ಖರ್ಚು ಮಾಡಿದರೆ, 200 ಕಿ.ಮೀ.ವರೆಗೆ ವಿದ್ಯುತ್ ವಾಹನವನ್ನು ಓಡಿಸಬಹುದು. ಅಂದರೆ, ಒಂದು ಕಿ.ಮೀ.ಗೆ ₹1.20 ಪೈಸೆಯಷ್ಟು ಮಾತ್ರ ವೆಚ್ಚವಾಗುತ್ತದೆ. ಪೆಟ್ರೋಲ್, ಡೀಸೆಲ್‌ಗಿಂತ ಇದು ಮಿತವ್ಯಯಕಾರಿ.

ವಾಹನ ಚಾರ್ಜಿಂಗ್ ದರ

(ಪ್ರತಿ ಯುನಿಟ್‌ಗೆ)

₹6.70
ಎ.ಸಿ ಚಾರ್ಜಿಂಗ್

₹6.84
ಡಿ.ಸಿ. ಚಾರ್ಜಿಂಗ್

ನಗರದಲ್ಲಿ ಚಾರ್ಜಿಂಗ್ ಕೇಂದ್ರಗಳಿರುವ ಉಪವಿಭಾಗಗಳು

- ಬೆಸ್ಕಾಂ ಕಚೇರಿ, ಕೆ.ಆರ್. ವೃತ್ತ
- ಇಂದಿರಾನಗರ
- ಮುರುಗೇಶ್‌ಪಾಳ್ಯ
- ಬಾಣಸವಾಡಿ
- ಮತ್ತಿಕೆರೆ
- ಪೀಣ್ಯ
- ಯಲಹಂಕ
- ಬ್ಯಾಟರಾಯನಪುರ
- ಕತ್ರಿಗುಪ್ಪೆ
- ಬಿಟಿಎಂ ಬಡಾವಣೆ
- ಎಚ್‌ಎಸ್‌ಆರ್ ಬಡಾವಣೆ
- ಮಹದೇವಪುರ

₹30.73 ಕೋಟಿ ಮೌಲ್ಯದ ಆಸ್ತಿ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಒತ್ತುವರಿಯಾಗಿದ್ದ ₹30.73 ಕೋಟಿ ಮೌಲ್ಯದ ಸರ್ಕಾರಿ ಆಸ್ತಿಯನ್ನು ಜಿಲ್ಲಾಡಳಿತದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಒತ್ತುವರಿಯಾಗಿದ್ದ ಕೆರೆ, ಕಟ್ಟೆ, ಗೋಮಾಳ, ಸ್ಮಶಾನ, ರಾಜಕಾಲುವೆಗಳ 18 ಎಕರೆ 15 ಗುಂಟೆ ಒತ್ತುವರಿ ತೆರವಿಗೆ ಅಧಿಕಾರಿಗಳು ಶನಿವಾರ ಕಾರ್ಯಾಚರಣೆ ನಡೆಸಿದರು.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಕುಕ್ಕನಹಳ್ಳಿಯಲ್ಲಿ 9 ಗುಂಟೆ, ಗೋಪಾಲಪುರದಲ್ಲಿ 2 ಗುಂಟೆ ಸೇರಿ ಒಟ್ಟು ₹25 ಲಕ್ಷ ಮೌಲ್ಯದ ಸರ್ಕಾರಿ ಕೆರೆ ಜಾಗ ವಶಪಡಿಸಿಕೊಳ್ಳಲಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಮ್ಮಸಂದ್ರದಲ್ಲಿ 2 ಗುಂಟೆ, ಗುಂಡುತೋಪು, ಕಿತ್ತಗನೂರು ಗ್ರಾಮದಲ್ಲಿ 20 ಗುಂಟೆ ಗೋಮಾಳ, ನಾಡಗೌಡಹಳ್ಳಿ 27 ಗುಂಟೆ ಗುಂಡುತೋಪು, ನಿಂಬೇಕಾಯಿಪುರದಲ್ಲಿ 27 ಗುಂಟೆ ಕೆರೆ ಜಾಗ, ಗೊರವಿಗೆರೆಯಲ್ಲಿ 1 ಎಕರೆ 18 ಗುಂಟೆ ಸರ್ಕಾರಿ ಜಾಗ, ಶೀಗೆಹಳ್ಳಿಯಲ್ಲಿ 27 ಗುಂಟೆ ಗುಂಡುತೋಪು ಹಾಗೂ ವರ್ತೂರು ಹೋಬಳಿಯ ಕೊಡತಿ ಗ್ರಾಮದಲ್ಲಿ 5 ಗುಂಟೆ ಕೆರೆ ಜಾಗ ತೆರವುಗೊಳಿಸಲಾಗಿದೆ. ಪೂರ್ವ ತಾಲ್ಲೂಕಿನಲ್ಲಿ ಒಟ್ಟು ₹7.77 ಕೋಟಿ ಮೌಲ್ಯ 4 ಎಕರೆ 6 ಗುಂಟೆ ಜಮೀನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಜೆ.ಮಂಜುನಾಥ್ ವಿವರಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಗೋಣಿಪುರದಲ್ಲಿ 31 ಗುಂಟೆ ಕೆರೆ ಜಾಗ, ಹೊಮ್ಮದೇವನಹಳ್ಳಿಯಲ್ಲಿ 31 ಗುಂಟೆ ಕೆರೆ, ಕೆರೆಚೂಡಹಳ್ಳಿಯಲ್ಲಿ 12 ಗುಂಟೆ ಕೆರೆ ಜಾಗ ಸೇರಿ ₹3.10 ಕೋಟಿ ಮೌಲ್ಯದ 1 ಎಕರೆ 35 ಗುಂಟೆ ಜಾಗದಲ್ಲಿ ಇದ್ದ ಅಕ್ರಮ ಒತ್ತುವರಿ ತೆರವುಗೊಳಿಸಲಾಗಿದೆ ಎಂದಿದ್ದಾರೆ.

ಆನೇಕಲ್ ತಾಲ್ಲೂಕಿನ ಗೆರಟಿನಗನಬೆಲೆಯಲ್ಲಿ 2 ಎಕರೆ 3 ಗುಂಟೆ ಕೆರೆ ಜಾಗ, ಬ್ಯಾಗಡದೇನಹಳ್ಳಿಯಲ್ಲಿ 8 ಗುಂಟೆ, ಅತ್ತಿಬೆಲೆ ಹೋಬಳಿಯ ಗುಡ್ಡಹಟ್ಟಿಯಲ್ಲಿ 20 ಗುಂಟೆ ಕೆರೆ ಜಾಗ, ಜಿಗಣಿ ಹೋಬಳಿಯಮಹಾಂತ ಲಿಂಗಾಪುರ ಗ್ರಾಮದಲ್ಲಿ 26 ಗುಂಟೆ ಕೆರೆ ಜಾಗ, ಹುಲ್ಲಹಳ್ಳಿ ಗ್ರಾಮದಲ್ಲಿ 25 ಗುಂಟೆ ಗೋಮಾಳ, ವಿ. ಕಲ್ಲಹಳ್ಳಿ ಗ್ರಾಮದಲ್ಲಿ 4 ಎಕರೆ 5 ಗುಂಟೆ, ಹೆಗ್ಗೊಂಡನಹಳ್ಳಿಯಲ್ಲಿ 4 ಎಕರೆ 15 ಗುಂಟೆ ಕೆರೆ ಜಾಗ ತೆರವುಗೊಳಿಸಲಾಗಿದೆ. ಈ ತಾಲ್ಲೂಕಿನಲ್ಲಿ ಒಟ್ಟು ₹19.61 ಕೋಟಿ ಮೌಲ್ಯದ 12 ಎಕರೆ 2 ಗುಂಟೆ ಸ್ವಾಧೀನಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

24ರಂದು ಮುಷ್ಕರ: ಅಂಗನವಾಡಿ ಕಾರ್ಯಕರ್ತೆಯರ ಸಂಘ ಬೆಂಬಲ

ಬೆಂಗಳೂರು: ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಬಿಸಿಯೂಟ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸೆ.24ರಂದು ನಡೆಯಲಿರುವ ಅಖಿಲ ಭಾರತ ಮುಷ್ಕರಕ್ಕೆ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಬೆಂಬಲ ವ್ಯಕ್ತಪಡಿಸಿದೆ.

ಸೇವಾ ವಲಯದಲ್ಲಿ ಕೆಲಸ ಮಾಡುವ ಈ ನೌಕರರಿಗೆ ಉಚಿತ ಲಸಿಕೆ, ಸುರಕ್ಷತಾ ಸಲಕರಣೆ, ₹50 ಲಕ್ಷದ ತನಕ ಆರೋಗ್ಯ ವಿಮೆ ನೀಡಬೇಕು. ಹೆಚ್ಚುವರಿಯಾಗಿ ₹10 ಸಾವಿರ ಕೋವಿಡ್ ಭತ್ಯೆ ನೀಡಬೇಕು. ಕಾರ್ಮಿಕ ವಿರೋಧ ಸಂಹಿತೆಗಳನ್ನು ವಾಪಸ್ ಪಡೆಯಬೇಕು ಎಂದು ಸಂಘದ ಅಧ್ಯಕ್ಷ ಎನ್.ಶಿವಣ್ಣ ಅವರು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಅತಿಯಾಗಿ ಸುರಿದ ಮಳೆಗೆ ಹೆಚ್ಚಿದ ತೇವಾಂಶ– ಕೊಳೆರೋಗಕ್ಕೆ ಸಂಪೂರ್ಣ ಹಾಳಾದ ಬೆಳೆ

ಕೊಳೆತ ಈರುಳ್ಳಿ: ಬೆಲೆ ಕುಸಿತದಿಂದ ಕಂಗೆಟ್ಟ ರೈತ

• ಜಿ.ಬಿ. ನಾಗರಾಜ್

ಚಿತ್ರದುರ್ಗ: ನಿರೀಕ್ಷೆ ಮೀರಿ ಸುರಿದ ಮಳೆಯಿಂದ ಕಾಣಿಸಿಕೊಂಡ ಕೊಳೆರೋಗಕ್ಕೆ ಈರುಳ್ಳಿ ಸಂಪೂರ್ಣ ಹಾಳಾಗುತ್ತಿದೆ. ಇಳುವರಿ ಹಾಗೂ ಬೆಲೆ ಕುಸಿತದಿಂದ ಕಂಗೆಟ್ಟ ಬೆಳೆಗಾರರು ಈರುಳ್ಳಿ ಕೀಳುವ ಬದಲು ಜಮೀನಿನಲ್ಲೇ ನಾಶಪಡಿಸುತ್ತಿದ್ದಾರೆ.

ಮಾರುಕಟ್ಟೆಯಲ್ಲಿ ಈರುಳ್ಳಿ ಖರೀದಿ ದರ ದಿಢೀರ್ ಕುಸಿತ ಕಂಡಿದೆ. ಒಂದು ಕೆ.ಜಿ. ಈರುಳ್ಳಿಗೆ ₹ 2 ಕೂಡ ಸಿಗುತ್ತಿಲ್ಲ. ಮಾರುಕಟ್ಟೆಗೆ ಸಾಗಣೆ ಮಾಡಿದ ವೆಚ್ಚವೂ ಮೈಮೇಲೆ ಬರುತ್ತಿದೆ. ಇದರಿಂದ ಬೇಸರಗೊಂಡ ರೈತರು ಟ್ರ್ಯಾಕ್ಟರ್ ಮೂಲಕ ಈರುಳ್ಳಿ ಬೆಳೆ ನಾಶಪಡಿಸುತ್ತಿದ್ದಾರೆ. ಮತ್ತೆ ಕೆಲವರು ತಿಪ್ಪೆಗೆ, ಜಾನುವಾರುಗಳಿಗೆ ಹಾಕುತ್ತಿದ್ದಾರೆ.

ಕೊಳೆರೋಗದಿಂದ ಹಾಳಾಗುತ್ತಿರುವ ಈರುಳ್ಳಿ

ರಾಜ್ಯದ ವಾಣಿಜ್ಯ ಬೆಳೆಗಳಲ್ಲಿ ಈರುಳ್ಳಿಗೆ ಪ್ರಮುಖ ಸ್ಥಾನವಿದೆ. ಚಿತ್ರದುರ್ಗ, ಗದಗ, ದಾವಣಗೆರೆ, ಬಾಗಕೋಟೆ, ಧಾರವಾಡ, ವಿಜಯಪುರ, ಹಾವೇರಿ ಜಿಲ್ಲೆಗಳು ಸೇರಿ ರಾಜ್ಯದಲ್ಲಿ ಅಂದಾಜು 1.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲಾಗುತ್ತದೆ. ಕಳೆದ ವರ್ಷ ಈರುಳ್ಳಿಗೆ ಭಾರಿ ಬೆಲೆ ಬಂದಿದ್ದರಿಂದ ರೈತರು ಉತ್ಸಾಹದಿಂದಲೇ ಬಿತ್ತನೆ ಮಾಡಿದ್ದರು.

> ಸಾವಿರಾರು ರೂಪಾಯಿ ಖರ್ಚು ಮಾಡಿ ಈರುಳ್ಳಿ ಬೆಳೆದಿದ್ದೇನೆ. ಮಾರುಕಟ್ಟೆಯಲ್ಲಿ ಕಡಿಮೆ ಬೆಲೆ ನಿಗದಿ ಮಾಡಲಾಗುತ್ತಿದೆ. ಬೆಳೆಗೆ ಮಾಡಿದ ವೆಚ್ಚ ಕೂಡ ಕೈಗೆ ಸಿಗುತ್ತಿಲ್ಲ
>
> **ಅಜಯ್,** ಗೊಲ್ಲಹಳ್ಳಿ, ಚಳ್ಳಕೆರೆ ತಾಲ್ಲೂಕು

ಪ್ರಜಾವಾಣಿ ವಿಶೇಷ

ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸುರಿದ ಮಳೆ ಈರುಳ್ಳಿಯನ್ನು ಕೊಳೆಯುವಂತೆ ಮಾಡಿದೆ. ಭೂಮಿಯಲ್ಲಿ ತೇವಾಂಶ ಹೆಚ್ಚಾಗಿ ಈರುಳ್ಳಿ ನೀರು ಹಿಡಿದಿದೆ. ಇದರಿಂದ ಕಾಣಿಸಿಕೊಂಡ ಕೊಳೆರೋಗಕ್ಕೆ ರೈತರು ಕಂಗಾಲಾಗಿದ್ದರು. ಕೀಟನಾಶಕ ಸಿಂಪಡಿಸಿ ರೋಗ ಗುಣಪಡಿಸಲು ಪ್ರಯತ್ನಿಸಿದ್ದರು. ಕಟಾವಿಗೂ ಮೊದಲೇ ಗೆಡ್ಡೆ ಕೊಳೆತು ಹೋಗಿದೆ. ಮೇಲ್ನೋಟಕ್ಕೆ ಉತ್ತಮವಾಗಿ ಕಾಣುವ ಈರುಳ್ಳಿ ಗೆಡ್ಡೆಯ ಒಳಭಾಗ ಸಂಪೂರ್ಣ ಹಾಳಾಗಿದೆ.

ಕೊಳೆ ರೋಗ ಹಾಗೂ ನೇರಳೆಮಚ್ಚೆ ರೋಗದಿಂದ ಈರುಳ್ಳಿ ಇಳುವರಿ ಕುಸಿದಿದೆ. ಚಿಕ್ಕ ಗಾತ್ರದ ಈರುಳ್ಳಿ ನೋಡಿದ ವ್ಯಾಪಾರಿಗಳು ಖರೀದಿಗೆ ಆಸಕ್ತಿ ತೋರುತ್ತಿಲ್ಲ.

ಚಿತ್ರದುರ್ಗದ ಬೆಳೆಗಾರರು ಬೆಂಗಳೂರಿನ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಆಶ್ರಯಿಸಿದ್ದಾರೆ. ಇಲ್ಲಿ ದೊಡ್ಡ ಗಾತ್ರದ ಈರುಳ್ಳಿಯನ್ನು ಮಾತ್ರ ಖರೀದಿ ಮಾಡಲಾಗುತ್ತಿದೆ. ಕಳಪೆ ನೆಪ ಹೇಳಿ 60 ಕೆ.ಜಿ ತೂಕದ ಚೀಲವನ್ನು ₹ 100 ದರ ನಿಗದಿ ಮಾಡಲಾಗುತ್ತಿದೆ.

ಬಿತ್ತನೆ ಈರುಳ್ಳಿ ಬೀಜ, ರಸಗೊಬ್ಬರ ಹಾಗೂ ಕೀಟನಾಶಕದ ಬೆಲೆ ಏರಿಕೆಯಾದ ಪರಿಣಾಮ ಪ್ರಸಕ್ತ ವರ್ಷ ಈರುಳ್ಳಿ ಉತ್ಪಾದನಾ ವೆಚ್ಚ ದ್ವಿಗುಣಗೊಂಡಿದೆ. ಪ್ರತಿ ಕೆ.ಜಿ. ಈರುಳ್ಳಿ ಬೀಜಕ್ಕೆ ₹ 2,500ರಿಂದ ₹ 3 ಸಾವಿರ ತೆತ್ತು ರೈತರು ಬಿತ್ತನೆ ಮಾಡಿದ್ದರು. ಪ್ರತಿ ಎಕರೆಗೆ ರೈತರು ಸರಾಸರಿ ₹ 40 ಸಾವಿರ ವೆಚ್ಚ ಮಾಡಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3ApBCOh

ಶಾಲಾ– ಕಾಲೇಜುಗಳಿಗೆ ಲೋಕಾಯುಕ್ತ ಪೊಲೀಸರ ತಂಡ ಭೇಟಿ

ಬೆಂಗಳೂರು: ಕೇಂದ್ರ–ರಾಜ್ಯ ಸರ್ಕಾರ ಹೊರಡಿಸಿರುವ ಕೋವಿಡ್ ಮಾರ್ಗಸೂಚಿಗಳನ್ನು ಶಾಲೆ–ಕಾಲೇಜುಗಳ ಆಡಳಿತ ವರ್ಗ ಮತ್ತು ವಿದ್ಯಾರ್ಥಿಗಳು ಪಾಲಿಸುತ್ತಿದ್ದಾರೆ ಎಂದು ಪರಿಶೀಲಿಸುವಂತೆ ಲೋಕಾಯುಕ್ತ ಪೊಲೀಸ್ ಘಟಕಕ್ಕೆ ಲೋಕಾಯುಕ್ತರು ನಿರ್ದೇಶನ ನೀಡಿದ್ದಾರೆ.

ಈ ಸೂಚನೆಯಂತೆ, ಲೋಕಾಯುಕ್ತ ನಗರ ವಿಭಾಗದ ಎಸ್‌ಪಿ ಶಾಂತನು ಸಿನ್ಹಾ ಅವರು ಏಳು ಡಿವೈಎಸ್ಪಿಗಳು ಹಾಗೂ 16 ಇನ್‌ಸ್ಪೆಕ್ಟರ್‌ಗಳ ಎಂಟು ತಂಡಗಳನ್ನು ರಚಿಸಿದ್ದು, ಈ ತಂಡಗಳು ನಗರದಾದ್ಯಂತ ಶಾಲೆ ಹಾಗೂ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿವೆ.

ತರಗತಿಗಳನ್ನು ಆರಂಭಿಸುವುದಕ್ಕೂ ಮೊದಲು ಸರ್ಕಾರಿ, ಖಾಸಗಿ, ಅನುದಾನಿತ, ಅನುದಾನ ರಹಿತ ಶಾಲೆ– ಕಾಲೇಜುಗಳು ಆವರಣ ಹಾಗೂ ಕೊಠಡಿಗಳನ್ನು ಹೇಗೆ ಇಟ್ಟುಕೊಳ್ಳಬೇಕು, ಯಾವೆಲ್ಲ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ಶಿಕ್ಷಕರು, ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕೆಂದು ಸರ್ಕಾರ ಸುತ್ತೋಲೆ ಹೊರಡಿಸಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್‌19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.86 ಕೋಟಿ ▲	3.34 ಕೋಟಿ
ಸಕ್ರಿಯ ಪ್ರಕರಣ	1.86 ಕೋಟಿ	3.26 ಲಕ್ಷ ▼
ಗುಣಮುಖ	20.53 ಕೋಟಿ ▲	3.25 ಕೋಟಿ
ಸಾವು	46.96 ಲಕ್ಷ ▲	4.44 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.65 ಲಕ್ಷ ▼	31,121 ▲
ಗುಣಮುಖ	4.86 ಲಕ್ಷ ▼	38,874 ▲
ಸಾವು	8,540 ▲	306 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
1.57 ಲಕ್ಷ ▲	33,519	32,651 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
96.75 ▼	3.2	13.02 ▲

* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.38 ಲಕ್ಷ ▲
ತಮಿಳುನಾಡು	35,288
ದೆಹಲಿ	25,085 ▼

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	65.15
ಕೇರಳ	44.69 ▲
ತಮಿಳುನಾಡು	26.42

ಪ್ರಜಾವಾಣಿ ಗ್ರಾಫಿಕ್ಸ್

‘ವೈದ್ಯಕೀಯ ಶಿಕ್ಷಣದ ಕೃತಿಗಳು ಕನ್ನಡದಲ್ಲಿ ಪ್ರಕಟವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯ ಶಿಕ್ಷಣವನ್ನು ಕನ್ನಡಲ್ಲಿಯೂ ನೀಡಬೇಕೆಂಬ ಕೂಗು ಇದೆ. ಇದು ಸಾಕಾರವಾಗಬೇಕಾದರೆ ಈ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಬೇಕು’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ನವಕರ್ನಾಟಕ ಪ್ರಕಾಶನವು 60ರ ಸಂಭ್ರಮದ ಅಂಗವಾಗಿ ನಗರದಲ್ಲಿ ಶನಿವಾರ ಆಯೋಜಿಸಿದ ಸಮಾರಂಭದಲ್ಲಿ ಡಾ.ಟಿ.ಆರ್. ಅನಂತರಾಮು ಮತ್ತು ಡಾ.ನಾ. ಸೋಮೇಶ್ವರ ಅವರ ‘ನಮ್ಮ ದೇಹದ ವಿಜ್ಞಾನ’ ಕೃತಿಯನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು. ‘ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಮಾಹಿತಿ ನೀಡುವ ಪುಸ್ತಕಗಳು ಕನ್ನಡದಲ್ಲಿ ವಿರಳ. ಆಂಗ್ಲ ಭಾಷೆಯಲ್ಲಿ ಲಕ್ಷಾಂತರ ಪುಸ್ತಕಗಳು ಇವೆ. ಕನ್ನಡದಲ್ಲಿಯೂ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ತಜ್ಞರು ಬರೆಯಬೇಕು’ ಎಂದು ಹೇಳಿದರು.

ಡಾ.ಸಿ.ಎನ್. ಮಂಜುನಾಥ್

‘ನಮ್ಮ ದೇಹದ ವಿಜ್ಞಾನ’ ಕೃತಿ ವೈದ್ಯಕೀಯ ಕ್ಷೇತ್ರಕ್ಕೆ ಕೊಟ್ಟ ಅದ್ಭುತ ಕೊಡುಗೆಯಾಗಿದೆ. ಅಂತರರಾಷ್ಟ್ರೀಯ ವೈದ್ಯಕೀಯ ವಿಜ್ಞಾನ ಪುಸ್ತಕಗಳಿಗೆ ಸರಿಸಮವಾದ ಈ ಕೃತಿಯಲ್ಲಿ ಮನುಷ್ಯನ ತಲೆಯಿಂದ ಕಾಲಿನ ವರೆಗಿನ ಪ್ರತಿಯೊಂದು ಭಾಗದ ಬಗ್ಗೆ ವಿವರಣೆ ನೀಡಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳು ಓದಲೇ ಬೇಕಾದ ಪುಸ್ತಕ ಇದು. ರಾಜ್ಯದ ಎಲ್ಲ ವೈದ್ಯಕೀಯ ಕಾಲೇಜುಗಳು, ಆಸ್ಪತ್ರೆಗಳೂ ಈ ಪುಸ್ತಕವನ್ನು ಹೊಂದಿರಬೇಕು’ ಎಂದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕಿ, ಡಾ. ಪ್ರತಿಮಾ ಮೂರ್ತಿ, ‘ಕೃತಿಯಲ್ಲಿ ಅಂಗಾಂಗಗಳು ಯಾವ ರೀತಿ ಕೆಲಸ ಮಾಡುತ್ತವೆ ಎನ್ನುವುದನ್ನು ಸರಳವಾಗಿ ತಿಳಿಸಲಾಗಿದೆ. ಮಿದುಳು ಮತ್ತು ಮನಸ್ಸಿನ ಬಗ್ಗೆ ಸಾಕಷ್ಟು ವಿವರಣೆಗಳಿವೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಪಾದಕರಾದ ಡಾ.ಟಿ.ಆರ್. ಅನಂತರಾಮು, ಡಾ.ನಾ.ಸೋಮೇಶ್ವರ, ನವಕರ್ನಾಟಕ ಪ್ರಕಾಶನದ ಕಾರ್ಯನಿರ್ವಾಹಕ ನಿರ್ದೇಶಕ ಎ. ರಮೇಶ್ ಉಡುಪ, ವ್ಯವಸ್ಥಾಪಕ ನಿರ್ದೇಶಕ ಡಾ. ಸಿದ್ದನಗೌಡ ಪಾಟೀಲ, ಲೇಖಕರಾದ ಡಾ.ಸಿ.ಆರ್. ಚಂದ್ರಶೇಖರ್, ಡಾ.ಕೆ. ಎಸ್. ಚೈತ್ರಾ, ಡಾ.ಎಚ್.ಆರ್. ಕೃಷ್ಣಮೂರ್ತಿ, ಡಾ.ಕೆ.ಎಸ್. ಪವಿತ್ರ, ಪ್ರೊ.ಕೆ.ಎಸ್. ನಟರಾಜ್, ಡಾ. ಕಿರಣ್ ವಿ.ಎಸ್, ಡಾ.ಕೆ.ಎಸ್. ಶುಭ್ರತಾ ಇದ್ದರು.

ಅಭಿಮಾನ್ ಸ್ಟುಡಿಯೋದಲ್ಲಿನ ವಿಷ್ಣುವರ್ಧನ್ ಭಾವಚಿತ್ರದ ಮುಂದೆ ಅಭಿಮಾನಿಗಳು ಸಂಭ್ರಮಿಸಿದರು. ಸಾಹಿತಿ ನಾಗೇಂದ್ರ ಪ್ರಸಾದ್, ಪುಟ್ಟಣ್ಣ, ಶ್ರೀನಿವಾಸ್, ಲೋಕೇಶ್‌ಗೌಡ ಇದ್ದರು

ಕೆಂಗೇರಿ ಮೆಟ್ರೊ ನಿಲ್ದಾಣಕ್ಕೆ ನಟ ವಿಷ್ಣುವರ್ಧನ್ ಹೆಸರಿಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಕೆಂಗೇರಿ: ನಟ ವಿಷ್ಣುವರ್ಧನ್ ಅವರ 71ನೇ ಹುಟ್ಟುಹಬ್ಬವನ್ನು ಸಾವಿರಾರು ಅಭಿಮಾನಿಗಳು ಕೇಕ್ ಕತ್ತರಿಸುವ ಮೂಲಕ ಶನಿವಾರ ಆಚರಿಸಿದರು. ಬೆಳಗ್ಗೆಯಿಂದಲೇ ಅಭಿಮಾನಿಗಳು ವಿಷ್ಣು ಭಾವಚಿತ್ರಕ್ಕೆ ನಮಿಸಲು ಸಾಲುಗಟ್ಟಿ ನಿಂತಿದ್ದರು.

ಕೆಂಗೇರಿ ಉತ್ತರಹಳ್ಳಿ ಅಭಿಮಾನ್ ಸ್ಟುಡಿಯೊದಲ್ಲಿನ ಸಮಾಧಿ ಸ್ಥಳದಲ್ಲಿ ಕೆಂಗೇರಿ ಸಾಹಸ ಸಿಂಹ ವಿಷ್ಣು ಅಭಿಮಾನಿಗಳ ಸಂಘ, ಶೃಂಗಾರ ಶಿಲ್ಪಿ ವಿಷ್ಣುವರ್ಧನ್ ಅಭಿಮಾನಿಗಳ ಸಂಘ ಹಾಗೂ ಹಿತೈಷಿ ಡಾ.ವಿಷ್ಣು ಅಭಿಮಾನಿಗಳ ಸಂಘದ ಸಹಯೋಗದಲ್ಲಿ ಹುಟ್ಟುಹಬ್ಬ ಆಚರಿಸಲಾಯಿತು.

ನಿರ್ದೇಶಕ ನಾಗೇಂದ್ರ ಪ್ರಸಾದ್ ಮಾತನಾಡಿ, ‘ಅಭಿಮಾನ್ ಸ್ಟುಡಿಯೊ ವಿಷ್ಣುವರ್ಧನ್ ಅಭಿಮಾನಿಗಳ ಪಾಲಿಗೆ ಎಂದಿಗೂ ಪುಣ್ಯಭೂಮಿಯಂತೆ. ಇದೇ ಭಾವನೆಯಿಂದ ಸಾವಿರಾರು ಜನ ಪ್ರತಿದಿನ ಭೇಟಿ ನೀಡುತ್ತಾರೆ. ಅವರ ಪಾಲಿಗೆ ಎಂದಿಗೂ ವಿಷ್ಣು ಅಜರಾಮರ’ ಎಂದು ಹೇಳಿದರು.

‘ಕಾನೂನು ತೊಡಕುಗಳಿಂದ ವಿಷ್ಣು ಸ್ಮಾರಕ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಶೀಘ್ರದಲ್ಲೇ ಎಲ್ಲಾ ತೊಡಕುಗಳು ನಿವಾರಣೆಯಾಗಲಿ’ ಎಂದರು.

ಹಿತೈಷಿ ಡಾ.ವಿಷ್ಣು ಅಭಿಮಾನಿಗಳ ಸಂಘದ ಅಧ್ಯಕ್ಷ ಲೋಕೇಶ್‌ಗೌಡ, ‘ವಿಷ್ಣು ಕುಟುಂಬಸ್ಥರಿಂದ ಬೆಂಬಲ ಸಿಗದ ಕಾರಣ ವಿಷ್ಣು ಸಮಾಧಿ ಸ್ಥಳದ ಅಭಿವೃದ್ಧಿಗೆ ಅಭಿಮಾನಿಗಳೇ ಟೊಂಕ ಕಟ್ಟಿ ನಿಂತಿದ್ದೇವೆ. ಕೆಂಗೇರಿ ಮೆಟ್ರೊ ರೈಲು ನಿಲ್ದಾಣಕ್ಕೆ ವಿಷ್ಣುವರ್ಧನ್ ಹೆಸರಿಡಬೇಕು’ ಎಂದು ಒತ್ತಾಯಿಸಿದರು. ರೆಡ್ ಕ್ರಾಸ್ ಸಂಸ್ಥೆ ಸಹಯೋಗದಿಂದ ಆಯೋಜಿಸಿದ್ದ ರಕ್ತ ನಿಧಿಗೆ 400ಕ್ಕೂ ಹೆಚ್ಚು ಯೂನಿಟ್ ರಕ್ತ ಸಂಗ್ರಹವಾಯಿತು. ಕೆಂಗೇರಿ ಸಾಹಸ ಸಿಂಹ ವಿಷ್ಣು ಅಭಿಮಾನಿಗಳ ಸಂಘದ ಅಧ್ಯಕ್ಷ ಪುಟ್ಟಣ್ಣ, ಶೃಂಗಾರ ಶಿಲ್ಪಿ ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಶ್ರೀನಿವಾಸ್ ಇದ್ದರು.

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು	29,67,083 ▲ (29,66,194 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	15,755 ▼
ಗುಣಮುಖರಾದವರು	29,13,713 ▲
ಒಟ್ಟು ಸಾವು	37,587 ▲

ದಿನದ ಏರಿಕೆ

ಹೊಸ ಪ್ರಕರಣ	889 ▼
ಗುಣಮುಖ	1,080 ▼
ಸಾವು	14 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ತಾ.ಪಂ, ಜಿ.ಪಂ ಚುನಾವಣೆ ಮುಂದೂಡಿಕೆಗೆ ದಾರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ ಸ್ಥಾಪಿಸಿ, ಅದಕ್ಕೆ ಅಧಿಕಾರ ನೀಡುವ ‘ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಕಾಯ್ದೆ’ಗೆ ರಾಜ್ಯಪಾಲರು ಶನಿವಾರ (ಸೆ. 18) ಅಂಕಿತ ಹಾಕಿದ್ದಾರೆ.

ಆ ಮೂಲಕ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಮುಂದೂಡುವ ರಾಜ್ಯ ಸರ್ಕಾರದ ಚಿಂತನೆಗೆ ಬಲ ಸಿಕ್ಕಂತಾಗಿದೆ.

ಮೂರೂ ಹಂತದ ಪಂಚಾಯತ್ ವ್ಯವಸ್ಥೆಯಡಿ ಕ್ಷೇತ್ರ ಪುನರ್ ವಿಂಗಡಣೆ ಮಾಡುವ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂದಕ್ಕೆ ಪಡೆದು ಆಯೋಗ ಸ್ಥಾಪಿಸುವ ಅವಕಾಶ ಕಲ್ಪಿಸಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಈ ತಿದ್ದುಪಡಿಗೆ ವಿಧಾನಮಂಡಲದ ಕಲಾಪದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ವಿರೋಧದ ಮಧ್ಯೆಯೂ ಸರ್ಕಾರ, ಈ ಮಸೂದೆಗೆ ಅಂಗೀಕಾರ ಪಡೆದಿತ್ತು. ಕಾಯ್ದೆ ತಿದ್ದುಪಡಿ ಮಸೂದೆ ವಿಧಾನಸಭೆಯಲ್ಲಿ ಸೆ. 16ರಂದು ಮಂಡನೆಯಾಗಿದ್ದರೆ, ಮರುದಿನ ವಿಧಾನ ಪರಿಷತ್‌ನಲ್ಲಿ ಮಂಡನೆಯಾಗಿತ್ತು. ಇದೀಗ, ರಾಜ್ಯಪಾಲರಿಗೆ ತರಾತುರಿಯಲ್ಲಿ ಮಸೂದೆಯನ್ನು ಕಳುಹಿಸಿ ಸರ್ಕಾರ ಅಂಕಿತ ಪಡೆದುಕೊಂಡಿದೆ.

‘ಮುಂಬರುವ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಮುಂದೂಡುವ ಉದ್ದೇಶದಿಂದಲೇ ಸಂವಿಧಾನಕ್ಕೆ ವಿರೋಧವಾಗಿ ಕಾಯ್ದೆ ತಿದ್ದುಪಡಿಗೆ ಮಸೂದೆ ಮಂಡಿಸಲಾಗಿದೆ. ಇದು ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯನ್ನೇ ದುರ್ಬಲಗೊಳಿಸಲಿದೆ’ ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಎರಡೂ ಸದನಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು. ಅಲ್ಲದೆ, ಮಸೂದೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿದ್ದರು.

ಗ್ರಾಮ ಸಹಾಯಕರ ಮುಷ್ಕರ 22ಕ್ಕೆ

ಬೆಂಗಳೂರು: ಕನಿಷ್ಠ ವೇತನ ಬಿಡುಗಡೆಗೆ ಆಗ್ರಹಿಸಿ ಸೆ.22ರಂದು ವಿಧಾನಸೌಧ ಮುತ್ತಿಗೆ ಮತ್ತು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದ ಅಧ್ಯಕ್ಷ ಎಚ್.ಎನ್.ದೇವರಾಜ ತಿಳಿಸಿದ್ದಾರೆ.

ಗ್ರಾಮ ಸಹಾಯಕರ ಕನಿಷ್ಠ ವೇತನ ತಿಂಗಳಿಗೆ ₹21 ಸಾವಿರ ನಿಗದಿ ಮಾಡಬೇಕು. ಅಡ್ವೊಕೇಟ್ ಜನರಲ್ ವರದಿಯಂತೆ ಅವರನ್ನು ಡಿ ದರ್ಜೆ ನೌಕರರೆಂದು ಘೋಷಣೆ ಮಾಡಬೇಕು ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಯುಎಇಯಲ್ಲಿ ಐಪಿಎಲ್ ಇಂದಿನಿಂದ

ದುಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಹದಿನಾಲ್ಕನೇ ಆವೃತ್ತಿಯ ಎರಡನೇ ಭಾಗವು ಭಾನುವಾರ ಇಲ್ಲಿ ಆರಂಭವಾಗಲಿದೆ.

ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಏಪ್ರಿಲ್–ಮೇ ತಿಂಗಳಲ್ಲಿ ಭಾರತದಲ್ಲಿಯೇ ಐಪಿಎಲ್ ಟೂರ್ನಿ ಆಯೋಜನೆಗೊಂಡಿತ್ತು. ಆದರೆ, ಕೆಲವು ಆಟಗಾರರು ಮತ್ತು ಸಿಬ್ಬಂದಿಗೆ ಕೊರೊನಾ ಸೋಂಕು ತಗಲಿದ್ದ ಕಾರಣದಿಂದಾಗಿ ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು. ಇದೀಗ ಅದರ ಮುಂದುವರಿದ ಭಾಗವು ಯುಎಇಯಲ್ಲಿ ನಡೆಯಲಿದೆ.

ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಹೆಚ್ಚು ಲಸಿಕೆ

ಪ್ರಧಾನಿ ನರೇಂದ್ರ ಮೋದಿ ಜನ್ಮದಿನದಂದು ದಾಖಲೆ ಮಟ್ಟದಲ್ಲಿ ಲಸಿಕೆ ನೀಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನವಾದ ಶುಕ್ರವಾರ ಒಂದೇ ದಿನ 2.5 ಕೋಟಿ ಡೋಸ್‌ನಷ್ಟು ಕೋವಿಡ್ ಲಸಿಕೆ ನೀಡಿ ದೇಶವು ದಾಖಲೆ ನಿರ್ಮಿಸಿದೆ. ಆದರೆ ಇದರಲ್ಲಿ ಶೇ 55ರಷ್ಟು ಡೋಸ್‌ಗಳನ್ನು ಬಿಜೆಪಿ ಮತ್ತು ಬಿಜೆಪಿ ಮಿತ್ರಪಕ್ಷ ಆಳ್ವಿಕೆ ಇರುವ ರಾಜ್ಯಗಳಲ್ಲಿ ನೀಡಲಾಗಿದೆ.

ಶುಕ್ರವಾರ 2.51 ಕೋಟಿ ಡೋಸ್ ಲಸಿಕೆ ನೀಡಿದ್ದರೆ, ಶನಿವಾರ ಈ ಸಂಖ್ಯೆ 81 ಲಕ್ಷಕ್ಕೆ ಕುಸಿದಿದೆ. ಬಿಜೆಪಿ ಆಳ್ವಿಕೆ ಇರುವ ಗುಜರಾತ್, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಅಸ್ಸಾಂ ರಾಜ್ಯಗಳು ಸಹ ಶುಕ್ರವಾರ ಹಲವು ಪಟ್ಟು ಹೆಚ್ಚು ಲಸಿಕೆ ನೀಡಿವೆ. ಬಿಜೆಪಿ ಮಿತ್ರಪಕ್ಷ ಜೆಡಿಯು ಆಳ್ವಿಕೆ ಇರುವ ಬಿಹಾರವೂ ಶುಕ್ರವಾರ ಹಲವು ಪಟ್ಟು ಹೆಚ್ಚು ಲಸಿಕೆ ನೀಡಿವೆ.

ಈ ಎಲ್ಲಾ ರಾಜ್ಯಗಳು ಸೆಪ್ಟೆಂಬರ್ 10-16ರ ಅವಧಿಯಲ್ಲಿ ಪ್ರತಿದಿನ ನೀಡಿದ್ದಕ್ಕಿಂತ, ಶುಕ್ರವಾರ ಹಲವುಪಟ್ಟು ಹೆಚ್ಚು ಡೋಸ್ ಲಸಿಕೆ ನೀಡಿವೆ.

> ಪ್ರಧಾನಿ ಮೋದಿ ಅವರು ಪದೇ ಪದೇ ತಮ್ಮ ಜನ್ಮದಿನ ಆಚರಿಸಿಕೊಳ್ಳಲಿ. ಆಗ ಭಾರತೀಯರೆಲ್ಲರಿಗೂ ಅತ್ಯಂತ ಕಡಿಮೆ ಅವಧಿಯಲ್ಲಿ ಲಸಿಕೆ ನೀಡಲು ಸಾಧ್ಯವಾಗುತ್ತದೆ
>
> **ರಿಜೊ ಜಾನ್,** ಕೋಯಿಕ್ಕೋಡ್ ಐಐಎಂ ಪ್ರಾಧ್ಯಾಪಕ

ಈ ಅವಧಿಯಲ್ಲಿ ಕರ್ನಾಟಕವು ಪ್ರತಿದಿನ ಸರಾಸರಿ 2 ಲಕ್ಷ ಡೋಸ್ ಲಸಿಕೆ ನೀಡಿತ್ತು. ಆದರೆ ಶುಕ್ರವಾರ 31 ಲಕ್ಷ ಡೋಸ್ ಲಸಿಕೆ ನೀಡಿದೆ. ಇದು ಹಿಂದಿನ ವಾರದ ಸರಾಸರಿಗಿಂತ 15ಪಟ್ಟು ಹೆಚ್ಚು. ಇಡೀ ದೇಶದಲ್ಲಿ ನೀಡಿದ ಒಟ್ಟು ಲಸಿಕೆಯಲ್ಲಿ ಶೇ 11ರಷ್ಟನ್ನು ರಾಜ್ಯದಲ್ಲಿ ನೀಡಲಾಗಿದೆ. ಮೋದಿ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲು, ರಾಜ್ಯದಲ್ಲಿ ಒಂದೇ ದಿನ 30 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಶನಿವಾರ ತಿಳಿಸಿದ್ದಾರೆ.

ಏಳುದಿನಗಳ ಸರಾಸರಿಗೆ ಹೋಲಿಸಿದರೆ ಗುಜರಾತ್ ರಾಜ್ಯದಲ್ಲಿ ಶುಕ್ರವಾರ 8 ಪಟ್ಟು ಹೆಚ್ಚು ಲಸಿಕೆ ನೀಡಲಾಗಿದೆ. ಮಧ್ಯಪ್ರದೇಶದಲ್ಲಿ 6.5 ಪಟ್ಟು ಹೆಚ್ಚು, ಬಿಹಾರದಲ್ಲಿ 5 ಪಟ್ಟು ಹೆಚ್ಚು, ಅಸ್ಸಾಂನಲ್ಲಿ 4 ಪಟ್ಟು ಹೆಚ್ಚು ಮತ್ತು ಉತ್ತರ ಪ್ರದೇಶದಲ್ಲಿ 3.5ಪಟ್ಟು ಹೆಚ್ಚು ಲಸಿಕೆ ನೀಡಲಾಗಿದೆ.

ಅದೇ ದಿನ ರಾಜಸ್ಥಾನದಲ್ಲಿ 2.5 ಪಟ್ಟು ಹೆಚ್ಚು, ಮಹಾರಾಷ್ಟ್ರದಲ್ಲಿ 2.2ಪಟ್ಟು ಹೆಚ್ಚು, ದೆಹಲಿಯಲ್ಲಿ 1.2 ಪಟ್ಟು ಹೆಚ್ಚು ಮತ್ತು ಕೇರಳದಲ್ಲಿ 1.3 ಪಟ್ಟು ಹೆಚ್ಚು ಲಸಿಕೆ ನೀಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದಂದು ದಾಖಲೆ ನಿರ್ಮಿಸುವ ಉದ್ದೇಶದಿಂದ, ಬಿಜೆಪಿ ಆಡಳಿತವಿರುವ ರಾಜ್ಯಗಳು ಹಿಂದಿನ ವಾರದಲ್ಲಿ ಕಡಿಮೆ ಡೋಸ್ ಲಸಿಕೆ ನೀಡಿವೆ. ಆ ಎಲ್ಲಾ ಡೋಸ್‌ಗಳನ್ನು ಮೋದಿ ಅವರ ಜನ್ಮದಿನದಂದು ನೀಡಿ ದಾಖಲೆ ನಿರ್ಮಿಸಲಾಗಿದೆ ಎಂದು ವಿರೋಧ ಪಕ್ಷಗಳು ಮತ್ತು ತಜ್ಞರು ಟೀಕಿಸಿದ್ದಾರೆ.

ಇನ್ನೊಂದು ಸುದ್ದಿ 7

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,43,213 ▲ ಒಟ್ಟು ಸೋಂಕಿತರು (12,42,950 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,491 ▲	12,19,639 ▲	16,082 ▲

ದಿನದ ಏರಿಕೆ

ಹೊಸ ಪ್ರಕರಣ	263 ▼
ಗುಣಮುಖ	222 ▼
ಸಾವು	06 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಹಿರಿಯ ರಂಗಕರ್ಮಿ ಬಿ.ವಿ. ರಾಜಾರಾಮ್ ಬೇಸರ

‘ಟಿ.ವಿ ಗಲಾಟೆಯಿಂದ ನಾಟಕಕ್ಕೆ ಪ್ರೇಕ್ಷಕರ ಬರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟಿ.ವಿ ಗಲಾಟೆಯಿಂದ ರಂಗಭೂಮಿ ಪ್ರೇಕ್ಷಕರನ್ನು ಕಳೆದುಕೊಳ್ಳುತ್ತಿದೆ. ಧಾರಾವಾಹಿಗಳಲ್ಲಿ ಪಾತ್ರ ಮಾಡುವ ಕಲಾವಿದರಿಗೆ ಜನಪ್ರಿಯತೆ ಹೆಚ್ಚಿದೆ. ರಂಗಭೂಮಿಯವರನ್ನು ಕೇಳುವವರೇ ಇಲ್ಲ’ ಎಂದು ರಂಗ ನಟ ಹಾಗೂ ನಿರ್ದೇಶಕ ಬಿ.ವಿ. ರಾಜಾರಾಮ್ ಬೇಸರ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಮನೆಯಂಗಳದಲ್ಲಿ ಮಾತುಕತೆ’ 216ನೇ ಸರಣಿಯಲ್ಲಿ ಅವರು ಜೀವನಾನುಭವನ್ನು ಹಂಚಿಕೊಂಡರು. ಈ ಸರಣಿಯು ಕೋವಿಡ್ ಕಾಣಿಸಿಕೊಂಡ ಬಳಿಕ ಸ್ಥಗಿತಗೊಂಡಿತ್ತು. ಒಂದು ವರ್ಷದ ಏಳು ತಿಂಗಳ ಬಳಿಕ ಪುನರಾರಂಭವಾಗಿದೆ.

‘ನಾಟಕ ಮಾಡುವುದು ಬಹಳ ಕಷ್ಟದ ಕೆಲಸ. ರಂಗಭೂಮಿ ಪ್ರದರ್ಶನಗಳಿಗೆ ನಟರಷ್ಟೇ ಮತ್ತು ಪ್ರೇಕ್ಷಕರೂ ಮುಖ್ಯ. ಹಿಂದೆ ಪ್ರತಿ ಪ್ರದರ್ಶನಕ್ಕೆ ಪ್ರೇಕ್ಷಕರು ಸೇರುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಪ್ರೇಕ್ಷಕರೇ ಬಾರದ ಸ್ಥಿತಿ ನಿರ್ಮಾಣವಾಗಿದ್ದನ್ನು ನೋಡಿ ದುಃಖವಾಗುತ್ತದೆ. ಇದಕ್ಕೆ ಟಿ.ವಿ ಮಾಧ್ಯಮವೇ ಮುಖ್ಯ ಕಾರಣ. ‘ಮುಖ್ಯಮಂತ್ರಿ’ ಚಂದ್ರು ಅವರು 500ಕ್ಕೂ ಅಧಿಕ ನಾಟಕಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಆದರೆ, ಕಿರುತೆರೆ ಧಾರಾವಾಹಿಯೊಂದರ ಪಾತ್ರದ ಮೂಲಕ ಅವರನ್ನು ಜನರು ಗುರುತಿಸುತ್ತಾರೆ. ಇದು ಟಿ.ವಿ. ಮಾಧ್ಯಮದ ಜನಪ್ರಿಯತೆಯನ್ನು ತಿಳಿಸುತ್ತದೆ’ ಎಂದರು.

‘ಚಲನಚಿತ್ರದಲ್ಲಿ ಕೂಡ ಸಾಕಷ್ಟು ಬದಲಾವಣೆಗಳನ್ನು ಗುರುತಿಸಬಹುದು. ಕನ್ನಡದ ಅದ್ಭುತವಾದ ಕಾದಂಬರಿ, ಸಣ್ಣ ಕತೆಗಳು ಈ ಹಿಂದೆ ಸಿನಿಮಾ ಆಗುತ್ತಿದ್ದವು. ಇತ್ತೀಚಿನ ದಿನಗಳಲ್ಲಿ ನಮ್ಮ ನೆಲದ ಸಂಸ್ಕೃತಿಯ ಕತೆಗಳೇ ತೆರೆಯ ಮೇಲೆ ಬರುತ್ತಿಲ್ಲ. ನೆಲದ ಸಂಸ್ಕೃತಿ, ಕಲಾವಿದರು ತೆರೆಯ ಮೇಲೆ ಬರುವಂತಾಗಬೇಕು’ ಎಂದರು.

ಮನೆಯಂಗಳದಲ್ಲಿ ಮಾತುಕತೆ

ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಬಿ.ವಿ. ರಾಜಾರಾಮ್ ಮಾತನಾಡಿದರು

ಟಿಕೆಟ್ ಮಾರಾಟಕ್ಕೆ ಅಲೆದಾಟ: ‘ಬಾಲ್ಯದಿಂದಲೂ ನಾಟಕದ ಮೇಲೆ ಆಸಕ್ತಿಯಿತ್ತು. ರಂಗಭೂಮಿ ದೊಡ್ಡ ಕ್ಷೇತ್ರ ಎನ್ನುವುದು ಬೆಂಗಳೂರಿಗೆ ಬಂದಮೇಲೆಯೇ ತಿಳಿಯಿತು. ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರೊ.ಬಿ. ಚಂದ್ರಶೇಖರ್ ಅವರ ‘ತುಘಲಕ್’ ನಾಟಕವನ್ನು ವೀಕ್ಷಿಸಿ ರೋಮಾಂಚನವಾಯಿತು. ಕಲಾಗಂಗೋತ್ರಿ ಕಾಲೇಜಿನಲ್ಲಿ ಓದುತ್ತಿರುವಾಗ ಕಲಾಗಂಗೋತ್ರಿ ತಂಡದೊಂದಿಗೆ ಹಲವು ನಾಟಕಗಳನ್ನು ಪ್ರದರ್ಶಿಸಿದೆವು. ಜನರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು’ ಎಂದು ಹಳೆಯ ದಿನಗಳನ್ನು ನೆನಪಿಸಿಕೊಂಡರು.

‘ನಾಟಕ ಮಾಡುತ್ತಿದ್ದ ಪ್ರಾರಂಭಿಕ ದಿನಗಳಲ್ಲಿ ಪ್ರದರ್ಶನದ ಟಿಕೆಟ್ ದರ ₹ 3 ನಿಗದಿಪಡಿಸಲಾಗುತಿತ್ತು. ಆ ಟಿಕೆಟ್‌ಗಳನ್ನು ಮಾರಾಟ ಮಾಡಲು ದಿನವಿಡೀ ಅಲೆದಾಟ ಮಾಡಬೇಕಾಗಿತ್ತು. ಚಲನಚಿತ್ರ ನಿರ್ದೇಶಕರೂ ನಾಟಕ ವೀಕ್ಷಣೆಗೆ ಬರುತ್ತಿದ್ದರು. ಆ ದಿನಗಳಲ್ಲಿ ‘ಪ್ರಜಾವಾಣಿ’ಯ ವಿಮರ್ಶೆ ನಾಟಕದ ಯಶಸ್ಸನ್ನು ನಿರ್ಧರಿಸುತ್ತಿತ್ತು. ಒಂದು ವೇಳೆ ವಿಮರ್ಶೆ ಬರದಿದ್ದರೆ ಆ ನಾಟಕ ಚೆನ್ನಾಗಿಲ್ಲ ಎಂದು ತೀರ್ಮಾನಿಸಲಾಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳೂ ನಾಟಕಗಳ ವಿಮರ್ಶೆಗೆ ಆದ್ಯತೆ ನೀಡುತ್ತಿಲ್ಲ’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದಕ್ಷಿಣ ಭಾರತದ ಟಿ.ವಿ ಧಾರಾವಾಹಿಗಳು ಇತ್ತೀಚೆಗೆ ಕೃಷ್ಣ ಸುಂದರಿಯರ ಜಪವನ್ನೇ ಮಾಡುತ್ತಿವೆಯಲ್ಲಾ ಏಕೆ?

'ಲಸಿಕೆ ಅಭಿಯಾನದಿಂದ ಪಕ್ಷವೊಂದಕ್ಕೆ ಜ್ವರ' 7
ಜೆಡಿಎಸ್ ತೊರೆದು ಕಾಂಗ್ರೆಸ್ ಸೇರುತ್ತೇನೆ: ಶ್ರೀನಿವಾಸಗೌಡ 3A
ಜಿಎಸ್‌ಟಿಆರ್–1: ಜನವರಿ 1ರಿಂದ ಹೊಸ ನಿಯಮ 12

ಪಶು ವೈದ್ಯಕೀಯ ಮತ್ತು ಪಶು ಸಂಗೋಪನೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

ಅರ್ಧದಷ್ಟು ಹುದ್ದೆ ಖಾಲಿ

ಒಳನೋಟ
ಪಶುಪಾಲನೆ ಪಡಿಪಾಟಲು
ಪ್ರತಿಕ್ರಿಯಿಸಿ: 9606038256
feedback@prajavani.co.in

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯದಲ್ಲಿ ಪಶು ಸಂಗೋಪನೆ ಮತ್ತು ಹೈನುಗಾರಿಕೆ ಚಟುವಟಿಕೆಗಳ ಬೆನ್ನೆಲುಬಾಗಿ ಕೆಲಸ ಮಾಡಬೇಕಿರುವ ಪಶು ವೈದ್ಯಕೀಯ ಮತ್ತು ಪಶು ಸಂಗೋಪನೆ ಇಲಾಖೆಯು, ಸಿಬ್ಬಂದಿ ಕೊರತೆಯಿಂದ ಸೊರಗಿದೆ. ಮಂಜೂರಾದ ಒಟ್ಟು ಹುದ್ದೆಗಳಲ್ಲಿ ಸರಿ ಸುಮಾರು ಅರ್ಧದಷ್ಟು ಖಾಲಿ ಬಿದ್ದಿವೆ.

ಈ ಇಲಾಖೆಯಲ್ಲಿ ಎರಡು ವಿಧದ ಹುದ್ದೆಗಳಿವೆ. ಇಲಾಖೆಯ ಕಚೇರಿಗಳಿಗೆ ಸೀಮಿತವಾದ ಆಡಳಿತ ಸಿಬ್ಬಂದಿ ಒಂದು ಗುಂಪಿನಲ್ಲಿದ್ದರೆ; ಪಶು ವೈದ್ಯರು, ಸಹಾಯಕರು ಸೇರಿದಂತೆ ಕ್ಷೇತ್ರದಲ್ಲಿ ಕೆಲಸ ಮಾಡುವ ಇನ್ನೊಂದು ಗುಂಪು ಇದೆ. ಎರಡೂ ವರ್ಗದಲ್ಲಿ ಮಂಜೂರಾದ ಹುದ್ದೆಗಳಿಗೆ ಹೋಲಿಸಿದರೆ ಬಹುತೇಕ ಅರ್ಧದಷ್ಟು ಹುದ್ದೆಗಳು ಖಾಲಿ ಇವೆ.

ಗ್ರಾಮೀಣ ಪ್ರದೇಶಗಳಲ್ಲಿರುವ ಪಶುಚಿಕಿತ್ಸಾ ಕೇಂದ್ರಗಳು ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಹೆಚ್ಚುತ್ತಲೇ ಇದೆ. ಮುಖ್ಯ ಪಶು ವೈದ್ಯಾಧಿಕಾರಿಗಳು, ಹಿರಿಯ ಪಶು ವೈದ್ಯಾಧಿಕಾರಿಗಳು, ಪಶು ವೈದ್ಯಾಧಿಕಾರಿಗಳು, ಜಾನುವಾರು ಅಭಿವೃದ್ಧಿ ಅಧಿಕಾರಿ, ಜಾನುವಾರು ಅಧಿಕಾರಿ, ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು, ಪಶು ವೈದ್ಯಕೀಯ ಪರಿವೀಕ್ಷಕರು ಮತ್ತು ಪಶು ವೈದ್ಯಕೀಯ ಸಹಾಯಕರ ಕೊರತೆಯು ನೇರವಾಗಿ ಪಶುಸಂಗೋಪನೆ ಹಾಗೂ ಹೈನುಗಾರಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ.

ಆರ್ಥಿಕ ಇಲಾಖೆಯ ತಡೆ: ಖಾಲಿ ಇರುವ ಹುದ್ದೆಗಳ ಭರ್ತಿಗೆ ಹಲವು ವರ್ಷಗಳಿಂದಲೂ ಪ್ರಯತ್ನ ನಡೆಯುತ್ತಿದೆ. ಆದರೆ, ಆರ್ಥಿಕ ಇಲಾಖೆಯ ಒಪ್ಪಿಗೆ ದೊರೆಯದ ಕಾರಣದಿಂದ ನೇಮಕಾತಿ ವಿಳಂಬವಾಗುತ್ತಿದೆ. ಕೋವಿಡ್ ಬಿಕ್ಕಟ್ಟಿನಿಂದಾಗಿ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಹೀಗಾಗಿ ಪಶು ವೈದ್ಯ ಇಲಾಖೆಯಲ್ಲಿನ ಸಿಬ್ಬಂದಿಯ ಕೊರತೆಯ ಸಮಸ್ಯೆಗೆ ಕಾಲಮಿತಿಯೊಳಗೆ ಪರಿಹಾರ ದೊರಕುವ ಲಕ್ಷಣಗಳೂ ಗೋಚರಿಸುತ್ತಿಲ್ಲ.

ಇಲಾಖೆಯಲ್ಲಿನ ಸಿಬ್ಬಂದಿ ಕೊರತೆಯ ಸಮಸ್ಯೆಯು ವಿಧಾನಮಂಡಲ ಅಧಿವೇಶನದಲ್ಲೂ ಪ್ರತಿಧ್ವನಿಸಿದೆ. ಆರ್ಥಿಕ ಇಲಾಖೆಯ ಅನುಮತಿ ಇಲ್ಲದೇ ನೇಮಕಾತಿ ಅಸಾಧ್ಯ ಎಂಬ ಉತ್ತರ ನೀಡಿರುವ ಪಶು ಸಂಗೋಪನಾ ಸಚಿವ ಪ್ರಭು ಚವಾಣ್, 'ಆರ್ಥಿಕ ಇಲಾಖೆ ಒಪ್ಪಿದರೆ ಮುಂದಿನ ದಿನಗಳಲ್ಲಿ ನೇಮಕಾತಿ ಮಾಡುತ್ತೇವೆ' ಎಂದು ಅಸಹಾಯಕತೆ ತೋಡಿಕೊಂಡಿದ್ದಾರೆ.

ಯಲ್ಲಾಪುರ ತಾಲ್ಲೂಕಿನ ಕುಂದರಗಿಯ ಪಶು ಚಿಕಿತ್ಸಾಲಯದ ಆವರಣದಲ್ಲಿರುವ ಜಾನುವಾರು ಚಿಕಿತ್ಸಾ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿ ರಾಶಿ ಹಾಕಲಾಗಿದೆ

ಪಶು ವೈದ್ಯಕೀಯ ಮತ್ತು ಪಶು ಸಂಗೋಪನಾ ಇಲಾಖೆ



ಖಾಲಿ ಇರುವ ಪ್ರಮುಖ ಹುದ್ದೆಗಳು

ಹುದ್ದೆ	ಮಂಜೂರು	ಭರ್ತಿ	ಖಾಲಿ
ಹಿರಿಯ ಪಶು ವೈದ್ಯಾಧಿಕಾರಿ	970	817	153
ಪಶು ವೈದ್ಯಾಧಿಕಾರಿ	1,572	544	1,028
ಜಾನುವಾರು ಅಭಿವೃದ್ಧಿ ಅಧಿಕಾರಿ	227	142	85
ಜಾನುವಾರು ಅಧಿಕಾರಿ	500	358	142
ಹಿರಿಯ ಪಶು ವೈದ್ಯಕೀಯ ಪರೀಕ್ಷಕ	1,825	1,405	420
ಪಶು ವೈದ್ಯಕೀಯ ಪರೀಕ್ಷಕ	1,847	1,294	553
ಪಶು ವೈದ್ಯಕೀಯ ಸಹಾಯಕ	2,144	1,194	950

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹೈರಾಣಾದ ಹೈನುಗಾರ

• ಸದಾಶಿವ ಎಂ.ಎಸ್

ಕಾರವಾರ: ಪಶುಆಸ್ಪತ್ರೆಗೆ ಸುಸಜ್ಜಿತವಾದ ಕಟ್ಟಡಗಳಿವೆ. ಆದರೆ, ಅದಕ್ಕೆ ಹಾಕಿದ ಬೀಗ ತೆರೆಯಲೂ ಜನರಿಲ್ಲ. ಔಷಧ ಖರೀದಿಗೆ ಅನುದಾನವಿದೆ. ಆದರೆ, ಔಷಧ ಶಿಫಾರಸು ಮಾಡಿ ಜಾನುವಾರು ಜೀವ ಉಳಿಸಲು ವೈದ್ಯರು, ಸಿಬ್ಬಂದಿ ಇಲ್ಲ. ಇದು ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆ ಇಲಾಖೆಯ ಸ್ಥಿತಿ.

ಕ್ಷೀರೋದ್ಯಮವನ್ನು 'ಕ್ರಾಂತಿ'ಯಂತೆ ಬೆಳೆಸಲು ಹಲವು ಕ್ರಮಗಳನ್ನು ಕೈಗೊಳ್ಳುತ್ತಿರುವುದಾಗಿ ಸರ್ಕಾರವು ಪದೇಪದೇ ಹೇಳುತ್ತಿದೆ. ಜೊತೆಗೆ ಹೈನುಗಾರರು ಮತ್ತಷ್ಟು ಸುಧಾರಿತ ತಳಿಗಳ ಜಾನುವಾರು ಸಾಕಣೆ ಮಾಡಿ ಹೆಚ್ಚು ಹಾಲು ಉತ್ಪಾದಿಸಲು ಸಲಹೆ ನೀಡುತ್ತಿದೆ. ಹಾಗಿದ್ದರೆ, ಅದಕ್ಕೆ ಪೂರಕವಾಗಿ ಬೇಕಿರುವ ವಿವಿಧ ಅಗತ್ಯ ಸೌಲಭ್ಯಗಳಿವೆಯೇ ಎಂದು ಪರಿಶೀಲಿಸಿದಾಗ ಕಾಣುವುದು ನಿರಾಸೆಯ ಚಿತ್ರಣ.

ದಕ್ಷಿಣ ಕನ್ನಡದಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಹಾಗಿದ್ದರೆ, ತುರ್ತು ಚಿಕಿತ್ಸೆಗೆ ಏನು ಪರಿಹಾರೋಪಾಯ ಎಂದು ಸುಳ್ಯದ ಕೃಷಿಕ ವಿಘ್ನೇಶ್ವರ ಅವರನ್ನು ಕೇಳಿದರೆ, 'ಪಾರಂಪರಿಕ ಔಷಧಗಳು, ರೂಢಿಗತವಾಗಿ ಬಂದಿರುವ ಜ್ಞಾನವೇ ಆಧಾರ. ಇಂಥ ಸಂದರ್ಭಗಳಲ್ಲಿ ಹಲವು ಆಕಳನ್ನು ಕಳೆದುಕೊಂಡಿದ್ದೇವೆ' ಎಂದೂ ಹೇಳುತ್ತಾರೆ.

6ನೇ ಪುಟ ನೋಡಿ

ಶೀಘ್ರ ಕ್ರಮ

ರಾಜ್ಯದಲ್ಲಿ 900 ಪಶು ವೈದ್ಯರ ನೇಮಕಾತಿ ಮಾಡಿಕೊಳ್ಳಲು ಹಣಕಾಸು ಇಲಾಖೆಗೆ ಈಗಾಗಲೇ ಪ್ರಸ್ತಾವ ಸಲ್ಲಿಸಲಾಗಿದೆ. ಹಣಕಾಸು ಇಲಾಖೆಯಿಂದ ಅನುಮತಿ ದೊರೆಯಲು ವಿಳಂಬವಾದರೆ 600 ಪಶು ವೈದ್ಯರನ್ನು ಶೀಘ್ರದಲ್ಲೇ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.

ಕಲ್ಯಾಣ ಕರ್ನಾಟಕದಲ್ಲಿ 47 ಪಶು ವೈದ್ಯರ ನೇಮಕಾತಿಗೆ ಸಿಂಧುತ್ವ ಪ್ರಮಾಣಪತ್ರ ಪರಿಶೀಲಿಸಲಾಗುತ್ತಿದೆ. ಶೀಘ್ರದಲ್ಲೇ ನೇಮಕಾತಿ ಆದೇಶ ಕೊಡಲಾಗುವುದು.

ಪಶು ಚಿಕಿತ್ಸಾಲಯದಲ್ಲಿ ಸಾಂಕೇತಿಕ ಶುಲ್ಕ ಪಡೆಯುವ ನಿರ್ಧಾರವನ್ನು ಕೈಬಿಡಲಾಗಿದೆ. ಮೊದಲಿನಂತೆ ಪಶುಗಳಿಗೆ ಉಚಿತ ಚಿಕಿತ್ಸೆ ನೀಡುವುದು ಮುಂದುವರಿಯಲಿದೆ.

ಪ್ರಭು ಚವಾಣ್
ಪಶು ಸಂಗೋಪನೆ ಸಚಿವ

ಇನ್ನಷ್ಟು ಸುದ್ದಿಗಳು 6

ಸಾಮಾಜಿಕ ಮಾಧ್ಯಮ: ನೌಕರರಿಗೆ ನಿರ್ಬಂಧ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳನ್ನು ವೇದಿಕೆಗಳನ್ನಾಗಿ ಬಳಸಿಕೊಂಡು ಸರ್ಕಾರದ ಸಾಧನೆಗಳನ್ನು ಅಧಿಕಾರಿಗಳ ಅಥವಾ ನೌಕರರ ವೈಯಕ್ತಿಕ ಸಾಧನೆ ಎಂದು ಪ್ರದರ್ಶಿಸಿಕೊಳ್ಳುವುದನ್ನು ಸರ್ಕಾರ ಕಡ್ಡಾಯವಾಗಿ ನಿಷೇಧಿಸಿದೆ.

ಸುತ್ತೋಲೆ ಹೊರಡಿಸಿರುವ ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್, ನಿಯಮ ಉಲ್ಲಂಘಿಸಿದರೆ ಕರ್ನಾಟಕ ರಾಜ್ಯ ನಾಗರಿಕ ಸೇವಾ ನಿಯಮಗಳು 2021ರ ಅನ್ವಯ ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. 'ಸರ್ಕಾರದ ಅಧಿಕೃತ ಮಾಹಿತಿಯನ್ನು ಪ್ರಸಾರ ಮಾಡುವುದೂ ಸೇರಿದಂತೆ ಅಧಿಕೃತ ಕರ್ತವ್ಯ ನಿರ್ವಹಿಸಲು ಮಾತ್ರ ಅಧಿಕಾರಿಗಳು ಇಲಾಖೆ/ಕಚೇರಿಯ ಹೆಸರಿನಲ್ಲಿ ತೆರೆದ ಸಾಮಾಜಿಕ ಮಾಧ್ಯಮಗಳ ಖಾತೆಗಳನ್ನು ಬಳಸಬಹುದು. ವೈಯಕ್ತಿಕ ಖಾತೆಯನ್ನು ಬಳಸುವಂತಿಲ್ಲ. ಕುಂದು ಕೊರತೆ ವ್ಯಕ್ತಪಡಿಸಲು, ತಮ್ಮ ಅನಿಸಿಕೆಗಳನ್ನು ಹೇಳಿ ಸರ್ಕಾರದ ವರ್ಚಸ್ಸಿಗೆ ಧಕ್ಕೆ ಉಂಟು ಮಾಡಿದರೆ ಶಿಸ್ತುಕ್ರಮ ಅನಿವಾರ್ಯ' ಎಂದಿದ್ದಾರೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ

ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ರಾಜೀನಾಮೆ

ಚಂಡೀಗಡ (ಪಿಟಿಐ): ಪಂಜಾಬ್ ಕಾಂಗ್ರೆಸ್‌ನ ಹಿರಿಯ ನಾಯಕ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಶನಿವಾರ ಪಂಜಾಬ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಅಮರಿಂದರ್ ಸಿಂಗ್

ರಾಜ್ಯ ಕಾಂಗ್ರೆಸ್‌ನಲ್ಲಿ ಹಲವು ತಿಂಗಳಿನಿಂದ ನಡೆಯುತ್ತಿದ್ದ ನಾಯಕತ್ವ ಸಂಘರ್ಷಕ್ಕೆ ಅವರು ಈ ಮೂಲಕ ತೆರೆ ಎಳೆದಿದ್ದಾರೆ.

'ನಮ್ಮ ತಂದೆ ಇಂದು ರಾಜೀನಾಮೆ ನೀಡಲಿದ್ದಾರೆ' ಎಂದು ಅಮರಿಂದರ್ ಅವರ ಪುತ್ರ ಶನಿವಾರ ಮಧ್ಯಾಹ್ನ ಟ್ವೀಟ್ ಮಾಡಿದ್ದರು. ಅಂತೆಯೇ ಅಮರಿಂದರ್ ಸಿಂಗ್ ಅವರು ರಾಜಭವನಕ್ಕೆ ತೆರಳಿ, ಸಂಜೆ ರಾಜ್ಯಪಾಲರಿಗೆ ರಾಜೀನಾಮೆ ನೀಡಿದರು. ಪಂಜಾಬ್ ವಿಧಾನಸಭೆಗೆ ನಾಲ್ಕೇ ತಿಂಗಳಲ್ಲಿ ಚುನಾವಣೆ ನಡೆಯಲಿದೆ.

ಶನಿವಾರ ಸಂಜೆ 5 ಗಂಟೆಗೆ ನಡೆಯಬೇಕಿದ್ದ ಕಾಂಗ್ರೆಸ್ ಶಾಸಕಾಂಗ ಸಭೆಗೆ ಕೆಲವೇ ನಿಮಿಷಗಳ ಮೊದಲು ಅಮರಿಂದರ್ ರಾಜೀನಾಮೆ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಧಿಕಾರದ ಸಂಬಂಧ ಪಕ್ಷವು ಮೂರು ಬಾರಿ ಶಾಸಕಾಂಗ ಸಭೆ ಕರೆದಿದೆ. ನನ್ನ ಮೇಲಿನ ಅಪನಂಬಿಕೆಯಿಂದಲೇ ಹೀಗೆ ಮಾಡಲಾಗಿದೆ. ನನಗೆ ಅವಮಾನವಾಗಿದೆ. ಹೀಗಾಗಿ ರಾಜೀನಾಮೆ ನೀಡಿದೆ' ಎಂದು ಅವರು ತೀವ್ರ ಬೇಸರ ವ್ಯಕ್ತಪಡಿಸಿದರು.

'ನನ್ನ ಮುಂದೆ ಸದಾ ಬೇರೆ ಆಯ್ಕೆ ಇತ್ತು. ಈಗ ಕಾಂಗ್ರೆಸ್ ಪಕ್ಷದಲ್ಲಿದ್ದೇನೆ. ಪಕ್ಷದಲ್ಲಿನ ನನ್ನ ಬೆಂಬಲಿಗರ ಜತೆ ಚರ್ಚಿಸಿ ಮುಂದಿನ ತೀರ್ಮಾನ ತೆಗೆದುಕೊಳ್ಳಲಿದ್ದೇನೆ. ಬೇರೆ ಆಯ್ಕೆಯನ್ನು ಬಳಸಿಕೊಳ್ಳುವ ಸಂದರ್ಭ ಬಂದಾಗ ಅದನ್ನು ಬಳಸಿಕೊಳ್ಳುತ್ತೇನೆ' ಎಂದು ಹೇಳಿದರು.

12ನೇ ಪುಟ ನೋಡಿ

ಪೂರ್ಣಾವಧಿ ಅಧ್ಯಕ್ಷರು ಬೇಕು: ತರೂರ್

ಕಾಂಗ್ರೆಸ್‌ಗೆ ಈಗ ಪೂರ್ಣಾವಧಿ ಅಧ್ಯಕ್ಷರ ಅವಶ್ಯಕತೆ ಇದೆ ಎಂದು ಪಕ್ಷದ ಸಂಸದ ಶಶಿ ತರೂರ್ ಪ್ರತಿಪಾದಿಸಿದ್ದಾರೆ.

'ನಾವೆಲ್ಲರೂ ಸೋನಿಯಾ ಗಾಂಧಿ ಅವರ ನಾಯಕತ್ವವನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಈಗ ನಾವು ಮಧ್ಯಂತರ ಅಧ್ಯಕ್ಷರನ್ನು ಮಾತ್ರ ಹೊಂದಿದ್ದೇವೆ. ಎರಡು ವರ್ಷದಿಂದ ಪಕ್ಷಕ್ಕೆ ಪೂರ್ಣಾವಧಿ ಅಧ್ಯಕ್ಷರಿಲ್ಲ. ಪಕ್ಷಕ್ಕೆ ಚೈತನ್ಯ ತುಂಬಲು ಆ ಸ್ಥಾನಕ್ಕೆ ಪೂರ್ಣಾವಧಿ ಅಧ್ಯಕ್ಷರ ಅವಶ್ಯಕತೆ ಇದೆ. ಅದು ರಾಹುಲ್ ಗಾಂಧಿ ಅವರ ಅಧೀನದಲ್ಲೇ ಇದ್ದರೂ ಸರಿ. ಆದರೆ ಆ ಕೆಲಸ ಶೀಘ್ರವಾಗಿ ಆಗಬೇಕು' ಎಂದು ಅವರು ಪ್ರತಿಪಾದಿಸಿದ್ದಾರೆ.

ಸೋನು ಸೂದ್ ವಿರುದ್ಧ ₹ 20 ಕೋಟಿ ತೆರಿಗೆ ವಂಚನೆ ಆರೋಪ

ನವದೆಹಲಿ (ಪಿಟಿಐ): ನಟ ಸೋನು ಸೂದ್ ಹಾಗೂ ಅವರ ಪಾಲುದಾರರು ₹ 20ಕೋಟಿಗೂ ಹೆಚ್ಚು ತೆರಿಗೆ ವಂಚಿಸಿದ್ದಾಗಿ ನೇರ ತೆರಿಗೆಗಳ ಕೇಂದ್ರ ಮಂಡಳಿ (ಸಿಬಿಡಿಟಿ) ಶನಿವಾರ ಆರೋಪಿಸಿದೆ.



ಅವರ ಮನೆ, ಕಚೇರಿ ಹಾಗೂ ಲಖನೌ ಮೂಲದ ಕಂಪನಿಯ ಮೇಲೆ ಆದಾಯ ತೆರಿಗೆ ಇಲಾಖೆಯ ದಾಳಿ ನಡೆದ ಸಂದರ್ಭದಲ್ಲಿ, ಅವರು ತಮ್ಮ ಅನಧಿಕೃತ ಆದಾಯವನ್ನು ಬೋಗಸ್ ಸಂಸ್ಥೆಗಳ ಮೂಲಕ ಪಡೆದ ನಕಲಿ ಸಾಲವಾಗಿ ತೋರಿಸಿರುವುದು ಪತ್ತೆಯಾಗಿದೆ. ಇಂಥ ನಕಲಿ ಸಾಲವನ್ನು ಹೂಡಿಕೆಗೆ ಹಾಗೂ ಆಸ್ತಿ ಖರೀದಿಗೆ ಬಳಸಲಾಗಿದೆ. ಶೋಧ ಸಂದರ್ಭದಲ್ಲಿ, ತೆರಿಗೆ ವಂಚನೆ ಮಾಡಿದ ಬಗ್ಗೆ ಸಾಕ್ಷ್ಯಗಳೂ ಸಿಕ್ಕಿವೆ ಎಂದು ಹೇಳಿದೆ.

ನಟ ಸೂದ್, ವಿದೇಶಗಳಿಂದ ದೇಣಿಗೆ ಪಡೆದ ಸಂದರ್ಭದಲ್ಲಿ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆಯನ್ನೂ (ಎಫ್‌ಸಿಆರ್‌ಎ) ಉಲ್ಲಂಘಿಸಿದ್ದಾಗಿ ತೆರಿಗೆ ಮಂಡಳಿ ಆರೋಪಿಸಿದೆ.

ಬೋಗಸ್ ಗುತ್ತಿಗೆ ಹಾಗೂ ಲಖನೌ ಮತ್ತು ಜೈಪುರದ ಕಂಪನಿಗಳೊಂದಿಗೆ ಅನುಮಾನಾಸ್ಪದವಾಗಿ ವೃತ್ತೀಯ ವಹಿವಾಟು ನಡೆಸಿರುವುದು ಸೇರಿದಂತೆ ₹ 250 ಕೋಟಿ ಯಷ್ಟು ಅಕ್ರಮ ವ್ಯವಹಾರ ನಡೆದಿರುವುದಾಗಿ ಹೇಳಿದೆ.

ಸೂದ್ ಮನೆ, ಕಚೇರಿ ಹಾಗೂ ಲಖನೌ ಮೂಲದ ಮೂಲಸೌಕರ್ಯ ಕ್ಷೇತ್ರದಲ್ಲಿನ ಉದ್ಯಮಗಳ ಸಮೂಹದ ಮೇಲೆ ಆದಾಯ ತೆರಿಗೆ ಇಲಾಖೆ ಸೆ.15ರಿಂದ ಶೋಧ ಆರಂಭಿಸಿದೆ. ಇದುವರೆಗೆ ₹20 ಕೋಟಿಗೂ ಹೆಚ್ಚು ತೆರಿಗೆ ವಂಚನೆ ಆಗಿರುವ ಬಗ್ಗೆ ತಿಳಿದುಬಂದಿದೆ. ₹1.8 ಕೋಟಿ ನಗದು ವಶಪಡಿಸಿಕೊಳ್ಳಲಾಗಿದ್ದು, 11 ಲಾಕರ್‌ಗಳನ್ನು ನಿರ್ಬಂಧಿಸಲಾಗಿದೆ. ಶೋಧ ಕಾರ್ಯ ಮುಂದುವರಿದಿರುವುದಾಗಿ ಸಿಬಿಡಿಟಿ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

12ನೇ ಪುಟ ನೋಡಿ

ಎಲ್ಲಾ ತರಹದ ತರಕಾರಿ ಮತ್ತು ಹಣ್ಣು-ಹಂಪಲುಗಳನ್ನು ಈಗ ಪಡೆಯಿರಿ ಕೇವಲ 15 ರಿಂದ 30 ನಿಮಿಷಗಳಲ್ಲಿ.

ದಿನಕ್ಕೊಂದು ಆ್ಯಪಲ್? ಪೌಷ್ಠಿಕಾಂಶ ಭರಿತವಾದ ಉತ್ತಮ ಆಹಾರ ? ಅಥವಾ ಉತ್ತಮವಾದ ದೈನಂದಿನ ತರಕಾರಿ ಸಹಿತವಾದ ಆಹಾರ ?
ಪ್ರತಿದಿನವೂ ಇವುಗಳ ಸೇವನೆಯು ವಿನೂತನ ಫಲಿತಾಂಶವನ್ನು ನೀಡುತ್ತದೆ.
Swiggy Instamart ಅತ್ಯಂತ ತಾಜಾ ಹಣ್ಣುಗಳು ಮತ್ತು ತರಕಾರಿಗಳನ್ನು ಹೊಂದಿದ್ದು, ಕ್ಷಣಮಾತ್ರದಲ್ಲಿ ನೀವಿರುವಲ್ಲಿಗೆ ಆದನ್ನು ಕೊಂಡುಬರುತ್ತದೆ.

ಪ್ರತಿದಿನವೂ ತಾಜಾ ಸ್ಟಾಕ್‌ಗಳು
ಪ್ರತಿದಿನವೂ ವಿನೂತನ ಹಣ್ಣುಗಳು ಮತ್ತು ತರಕಾರಿಗಳು
ಡೆಲಿವರಿ 15-30 ನಿಮಿಷಗಳಲ್ಲಿ



SWIGGY APP ನಲ್ಲಿ ನೀವು SWIGGY INSTAMART ಕಂಡುಕೊಳ್ಳಬಹುದು.

ಬೆಂಗಳೂರು, ದಿನಸಿ ವಸ್ತುಗಳು ಈಗ ಕೇವಲ 15-30 ನಿಮಿಷಗಳಲ್ಲಿ.

SWIGGY instamart | ಬೆಳಿಗ್ಗೆ 6.00 ರಿಂದ ಮಧ್ಯರಾತ್ರಿಯ ವರೆಗೂ ತೆರೆದಿರುತ್ತದೆ.**

ಹಣ್ಣುಗಳು, ತರಕಾರಿಗಳು ಮತ್ತು ದಿನಸಿ ವಸ್ತುಗಳ ಮೇಲೆ 40% ವರೆಗೆ ರಿಯಾಯಿತಿ ಪಡೆಯಿರಿ.

* ಷರತ್ತುಗಳು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ. | ** ಸರಕಾರದ ನಿಯಮ-ನಿಬಂಧನೆಗಳು ಸ್ವಿಗ್ಗಿಯ ಕಾರ್ಯಾವಧಿಯ ಮೇಲೆ ಪರಿಣಾಮ ಬೀರಬಲ್ಲದು.

ಭಾನುವಾರದ ಉಷ್ಣಾಂಶ 31° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಆಗಾಗ್ಗೆ ಅಲ್ಲಲ್ಲಿ ಸಣ್ಣದಾಗಿ ಮಳೆಯಾಗುವ ಸಾಧ್ಯತೆ ಇದೆ

ಮುನ್ಸೂಚನೆ: ಸೋಮವಾರ 30° 20° | ಮಂಗಳವಾರ 30° 20° | ಬುಧವಾರ 29° 21

 ಸೂರ್ಯೋದಯ: 6:08 ಸೂರ್ಯಾಸ್ತ : 6:18 ಚಂದ್ರೋದಯ: ಸ. 4:42 ಚಂದ್ರಾಸ್ತ: ಮುಂ. 3:37 ಶನಿವಾರದ ಹವಾಮಾನ : ಗರಿಷ್ಠ 31° ಕನಿಷ್ಠ 21°

ಎಲ್‌ಐಸಿಯಿಂದ 'ಪ್ರಗತಿ' ಆ್ಯಪ್ ಬಿಡುಗಡೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತನ್ನ ಡೆವಲಪ್‌ಮೆಂಟ್ ಆಫಿಸರ್‌ಗಳಿಗಾಗಿ ಪ್ರಗತಿ ಆ್ಯಪ್ (ಪರ್ಫಾರ್ಮೆನ್ಸ್ ರಿವ್ಯು ಅಪ್ಲಿಕೇಷನ್, ಗ್ರೋತ್ ಆ್ಯಂಡ್ ಟ್ರೆಂಡ್ ಇಂಡಿಕೇಟರ್) ಬಿಡುಗಡೆ ಮಾಡಿದೆ.

ಕಂತು ಸಂಗ್ರಹ ಮತ್ತು ಏಜೆನ್ಸಿ ಸಕ್ರಿಯಗೊಳಿಸುವಿಕೆ ಸೇರಿದಂತೆ ಇನ್ನೂ ಹಲವು ಮಾಹಿತಿಗಳನ್ನು ಈ ಆ್ಯಪ್ ಒದಗಿಸಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ಎಲ್‌ಐಸಿ'ಯು ತನ್ನ ಗ್ರಾಹಕರ ಅನುಕೂಲಕ್ಕಾಗಿ ಹಲವು ಗ್ರಾಹಕ ಕೇಂದ್ರಿತ ಕ್ರಮಗಳನ್ನು ಹಾಗೂ ಅಧಿಕಾರಿಗಳ ಕೆಲಸಗಳನ್ನು ಸುಲಭಗೊಳಿಸಲು ಡಿಜಿಟಲ್ ಉಪಕ್ರಮಗಳನ್ನು ಜಾರಿಗೊಳಿಸುತ್ತಿದೆ ಎಂದೂ ಹೇಳಿದೆ.

Walk-in-interview

Is scheduled at **Air Force School ASTE, Murugeshpalya NAL Wind Tunnel Road, Bengaluru – 560 017**, for the post of **TGT (English)** on **01 Oct 2021.** Candidates are to report at **0830 hrs** with their resume/CV, original educational certificates, marksheets, documents, testimonials and self attested photocopies of the same. Details can be checked on www.afsaste.edu.in. Contact No.080-25272332 / 25276920.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

KARNATAKA POWER CORPORATION LTD.

CIN : U85110KA1970SGC001919

ಸಂ: ಕೆಪಿಸಿಎಲ್/2021–22/ಆಕ್ಷನ್–187&188 ದಿನಾಂಕ: 18.09.2021

ಇ–ಹರಾಜಿನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಕೋರಮಂಗಲದ ರಾಷ್ಟ್ರೀಯ ಕ್ರೀಡಾ ಸಂಕೀರ್ಣದ **(National Games village)**, ಕಾವೇರಿ ಬ್ಲಾಕ್‌ನ 2ನೇ ಮಹಡಿಯಲ್ಲಿರುವ 3 ಬೆಡ್‌ರೂಂಗಳ (Approximate Super built up Area of each flat: 133.33 Square metre) ಫ್ಲಾಟ್ ಸಂಖ್ಯೆ203 ಹಾಗೂ 204ಗಳನ್ನು "AS IS WHERE IS BASIS" ಮೇಲೆ ಇ–ಹರಾಜು ಪ್ರಕ್ರಿಯೆಯನ್ನು ಪ್ರತ್ಯೇಕವಾಗಿ ಆಹ್ವಾನಿಸಿದೆ. ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ಭಾಗವಹಿಸಬಹುದಾಗಿದೆ. ಇ.ಎಂ.ಡಿ. ಮೊತ್ತ: **ರೂ.8,50,000/-** (ರೂ. ಎಂಟು ಲಕ್ಷ ಐವತ್ತು ಸಾವಿರ ಮಾತ್ರ) ಪ್ರತಿ ಫ್ಲಾಟ್‌ಗೆ ಭಾಗವಹಿಸುವಿಕೆಯ ಆಸಕ್ತಿಯನ್ನು ವ್ಯಕ್ತಪಡಿಸುವ ಕೊನೆಯ ದಿನಾಂಕ: **21.10.2021ರ ಸಂಜೆ 4.00 ಗಂಟೆಯವರೆಗೆ.** ಇ–ಹರಾಜು ಪ್ರಕ್ರಿಯೆಯ ಲೈವ್ ಬಿಡ್ಡಿಂಗ್ (Live Bidding) ದಿನಾಂಕ: **29.10.2021ರ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ4.00 ಗಂಟೆಯವರೆಗೆ.** ಇತರೆ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾವಣಿ ಮಾಡದೇ ಇರುವ ಆಸಕ್ತಿಯುಳ್ಳ ಬಿಡ್‌ದಾರರು ನೊಂದಾವಣಿ ಮಾಡಿಕೊಂಡು ಇ–ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ, ಕೆಲಸದ ವೇಳೆಯಲ್ಲಿ **ಅಧೀಕ್ಷಕ ಅಭಿಯಂತರರು(ಕಾ) ಆರ್‌ಟಿ, ನಂ. 82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001, ದೂರವಾಣಿ: 080–22257842, 9449784846 ಇಲ್ಲಿಂದ ಪಡೆಯಬಹುದು.**

ಪ್ಯಾನ್‌ಗೆ ಆಧಾರ್ ಜೋಡಣೆ: 2022ರ ಮಾರ್ಚ್‌ವರೆಗೆ ಅವಕಾಶ

ನವದೆಹಲಿ (ಪಿಟಿಐ): ಪ್ಯಾನ್‌ಗೆ ಆಧಾರ್ ಜೋಡಿಸಲು ನೀಡಿದ್ದ ಗಡುವನ್ನು 2022ರ ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ.

ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಜನರು ಎದುರಿಸು-ತ್ತಿರುವ ಸಂಕಷ್ಟಗಳನ್ನು ಗಮನದಲ್ಲಿ ಇಟ್ಟುಕೊಂಡು ಗಡುವು ವಿಸ್ತರಣೆ ಮಾಡಲಾಗಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯು(ಸಿಬಿಡಿಟಿ) ಪ್ರಕಟಣೆಯಲ್ಲಿ ತಿಳಿಸಿದೆ.

ಈ ಮುಂಚೆ 2021ರ ಸೆಪ್ಟೆಂಬರ್ 30ರ ಗಡುವು ನೀಡಲಾಗಿತ್ತು.

ಸುಪ್ರೀಂ ಕೋರ್ಟ್ ನ್ಯಾ. ಮೋಹನ್ ಎಂ. ಶಾಂತನಗೌಡರ್ ನುಡಿನಮನದಲ್ಲಿ ಸಿಜೆಐ ಅಭಿಮತ

ನ್ಯಾಯದಾನ ವ್ಯವಸ್ಥೆಯ ಭಾರತೀಕರಣದ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ನ್ಯಾಯದಾನ ವ್ಯವಸ್ಥೆ ಸದ್ಯ ಬ್ರಿಟಿಷ್ ವಸಾಹತುಶಾಹಿ ಮನೋಭಾವ ಹೊಂದಿದ್ದು, ಅದನ್ನು ಭಾರತೀಕರಣ ಮಾಡುವ ತುರ್ತು ಅಗತ್ಯವಿದೆ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್‌.ವಿ. ರಮಣ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ದಿವಂಗತ ಮೋಹನ್ ಎಂ. ಶಾಂತನಗೌಡರ್ ಅವರ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬ್ರಿಟಿಷರ ಕಾಲದ ಹಳೆಯ ಕಾನೂನುಗಳು ನ್ಯಾಯದಾನ ದಲ್ಲಿ ಬಳಕೆಯಾಗುತ್ತಿವೆ. ಅವುಗಳ ಪರಿ ಭಾಷೆ ಕಕ್ಷಿದಾರರಿಗೆ ಅರ್ಥವಾಗು ತ್ತಿಲ್ಲ. ನ್ಯಾಯದಾನವು ಕಾರ್ಯಸಾಧು, ವಾಸ್ತವಿಕ ನೆಲೆಗಟ್ಟು ಹೊಂದಿದ್ದರೆ ಕಕ್ಷಿದಾರರು ಸುಲಭವಾಗಿ ತಿಳಿದುಕೊಳ್ಳ-ಬಹುದು' ಎಂದರು.

'ನ್ಯಾಯಾಲಯಗಳು ಕಕ್ಷಿದಾರ ಕೇಂದ್ರೀಕೃತವಾಗಬೇಕು. ಕಕ್ಷಿದಾರರೇ ನ್ಯಾಯಾಲಯದ ಅಂತಿಮ ಫಲಾನು ಭವಿಗಳು. ಹೀಗಾಗಿ, ಸರಳವಾದ ರೀತಿ ಯಲ್ಲಿ ನ್ಯಾಯದಾನ ಮಾಡುವುದು ನಮ್ಮ ಅಂತಿಮ ಕಳಕಳಿಯಾಗಬೇಕು' ಎಂದರು.



ನ್ಯಾ. ಮೋಹನ್ ಎಂ. ಶಾಂತನಗೌಡರ್ ಅವರ ಭಾವಚಿತ್ರಕ್ಕೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಪುಷ್ಪನಮನ ಸಲ್ಲಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು ಪ್ರಜಾವಾಣಿ ಚಿತ್ರ

'ನ್ಯಾಯಾಲಯ ಮತ್ತು ನ್ಯಾಯ-ಮೂರ್ತಿಗಳ ಬಗ್ಗೆ ಜನಸಾಮಾನ್ಯರು ಭಯಭೀತರಾಗಬಾರದು. ಸಾಮಾನ್ಯ ಜನರಿಗೆ ಸಾಂತ್ವನ ಹೇಳುವ ರೀತಿಯಲ್ಲಿ ನ್ಯಾಯಾಲಯಗಳು ಇರಬೇಕು. ಇಂಥ ವಾತಾವರಣವನ್ನು ಮೊಕದ್ದಮೆ ದಾರರು ಮತ್ತು ಸಂಬಂಧಪಟ್ಟ ಎಲ್ಲರಿಗೂ ಕಲ್ಪಿಸುವುದು ನ್ಯಾಯ ಮೂರ್ತಿಗಳು ಮತ್ತು ವಕೀಲರ ಕರ್ತವ್ಯ' ಎಂದೂ ಹೇಳಿದರು.

ನ್ಯಾ. ಶಾಂತನಗೌಡರ್ ಅವರ ಸರಳತೆ, ಸಜ್ಜನಿಕೆ, ಹಾಸ್ಯಪ್ರಜ್ಞೆ, ಕರ್ತವ್ಯ ಪ್ರಜ್ಞೆಯನ್ನು ಮೆಲುಕುಹಾಕಿದ ಮುಖ್ಯ ನ್ಯಾಯಮೂರ್ತಿ, ಡಿ.ವಿ. ಗುಂಡಪ್ಪ ಅವರ ಮಂಕುತಿಮ್ಮನ ಕಗ್ಗದ 'ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ, ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ, ಎಲ್ಲರೊಳ ಗೊಂದಾಗು ಮಂಕುತಿಮ್ಮ' ಎಂಬ ಸಾಲುಗಳು ಅವರಿಗೆ ಅಕ್ಷರಶಃ ಅನ್ವಯಿ-ಸುತ್ತವೆ' ಎಂದರು.

ನ್ಯಾಯಮೂರ್ತಿ ಮೋಹನ್ ಶಾಂತನಗೌಡರ್ ಕುರಿತ ಸಾಕ್ಷ್ಯಚಿತ್ರವ-ನ್ನು ಬಿಡುಗಡೆ ಮಾಡಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅವರ ಜೊತೆಗಿನ ಒಡನಾಟವನ್ನು ನೆನಪಿಸಿಕೊಂಡರು.

'ನ್ಯಾ. ಶಾಂತನಗೌಡರು ಒಮ್ಮೆ ನಮ್ಮ ತಂದೆ ಎಸ್‌.ಆರ್‌. ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆ ವ್ಯಕ್ತಪಡಿಸಿದ್ದರು. ಆಗ, ತಂದೆಯವರು ನಿಮಗೆ ಅತ್ಯುತ್ತಮವಾದ ಕಾನೂನು ಜ್ಞಾನ ಇದೆ. ಅದೇ ಕ್ಷೇತ್ರದಲ್ಲಿ ನೀವು ಮುಂದುವರಿಯಿರಿ ಎಂದು ಸಲಹೆ ನೀಡಿದ್ದರು. ಹಾಗೆ ಮಾಡಿದ್ದ ನ್ಯಾ. ಶಾಂತನಗೌಡರ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು ಇತಿಹಾಸ. ಸಾಧಕರಿಗೆ ಎಂದಿಗೂ ಸಾವಿಲ್ಲ' ಎಂದು ಬೊಮ್ಮಾಯಿ ಹೇಳಿದರು.

ಸುಪ್ರೀಂ ಕೋರ್ಟ್‌ನ ನ್ಯಾ. ಬಿ.ವಿ. ನಾಗರತ್ನ, ನ್ಯಾ. ಅಬ್ದುಲ್ ನಜೀರ್, ನ್ಯಾ.ಎ.ಎಸ್. ಬೋಪಣ್ಣ, ನ್ಯಾ.ಎ.ಎಸ್. ಓಕಾ, ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶಚಂದ್ರ ಶರ್ಮ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಶ್ರದ್ಧಾಂಜಲಿ ಸಲ್ಲಿಸಿದರು.

'ಉಂಗುರದ ಹರಳು ಹುಡುಕಿ ಕೊಟ್ಟಿದ್ದರು'

'ನಾನು ನ್ಯಾಯಮೂರ್ತಿಯಾಗಿದ್ದಾಗ ಸಾಯಿ ಬಾಬಾ ನೀಡಿದ್ದ ಉಂಗುರದ ಹರಳನ್ನು ಒಮ್ಮೆ ಕಳೆದುಕೊಂಡಿದ್ದೆ. ನ್ಯಾ. ಮೋಹನ್ ಶಾಂತನಗೌಡರ್ ಅವರಿಗೆ ಈ ವಿಷಯ ತಿಳಿಸಿದೆ. ಹರಳಿನ ಮಹತ್ವ ಅವರಿಗೆ ಅರಿವಾಗಿ, ಸುಪ್ರೀಂ ಕೋರ್ಟ್ ಲಾಂಜ್‌ನಲ್ಲಿ ಸುತ್ತಾಡಿ ಅದನ್ನು ಹುಡುಕಿ ಕೊಟ್ಟಿದ್ದರು. ಅಷ್ಟರಮಟ್ಟಿಗೆ ಅವರು ಮತ್ತೊಬ್ಬರ ಬಗ್ಗೆ ಕಾಳಜಿ ವಹಿಸುತ್ತಿದ್ದರು' ಎಂದು ನ್ಯಾಯಮೂರ್ತಿ ಮೋಹನ್ ಎಂ. ಶಾಂತನಗೌಡರ್ ಜೊತೆಗಿನ ಒಡನಾಟವನ್ನು ಸಿಜೆಐ ರಮಣ ಸ್ಮರಿಸಿದರು.

ಮಲ್ಲೇಶ್ವರದಲ್ಲಿ ಅಂಬಾ ಪರ್ಲ್ಸ್ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಬಾ ಪರ್ಲ್ಸ್ ಆ್ಯಂಡ್ ಜ್ಯುವೆಲರ್ಸ್ ಆಭರಣ ಮಳಿಗೆ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಆರಂಭಗೊಂಡಿದೆ.

ಗುಣಮಟ್ಟದ ಮುತ್ತುಗಳು, ಮುತ್ತಿನ ಆಭರಣಗಳು, ಗುಲಾಬಿ ಮುತ್ತುಗಳು, ಹವಳ, ಅಮೆರಿಕನ್ ಡೈಮಂಡ್, ಪ್ರೀಷಿಯಸ್ ಹಾಗೂ ಸೆಮಿ-ಪ್ರೀಷಿಯಸ್ ಹರಳಿನ ಆಭರಣಗಳು, 1 ಗ್ರಾಂ ಚಿನ್ನದ ಆಭರಣಗಳು, ಬೆಳ್ಳಿಯಲ್ಲಿ ಚಿನ್ನ ಲೇಪಿತ ಆಭರಣಗಳೂ ಸಹ ಇಲ್ಲಿ ಲಭ್ಯ ಇವೆ ಎಂದು ಮಳಿಗೆಯ ಮಾಲೀಕರಾದ ಈಶ್ವರಭಾಯಿ ತಿಳಿಸಿದ್ದಾರೆ.

ಗ್ರಾಹಕರಿಂದ ಪ್ರೋತ್ಸಾಹ ದೊರೆತರೆ ಮುಂದಿನ ದಿನಗಳಲ್ಲಿ ನಗರದ ವಿವಿಧೆಡೆ ಮಳಿಗೆ ತೆರೆಯುವ ಉದ್ದೇಶ ಇದೆ ಎಂದು ಅವರು ಹೇಳಿದ್ದಾರೆ.

ಶಿವಾಜಿನಗರದ ಹಫಿಜಿಯಾ ಶಾಲೆಯ ನವೀಕರಣ ಕಾಮಗಾರಿಗೆ ಬಿಬಿಎಂಪಿ ಮುಖ್ಯ ಆಯುಕ್ತರು ಗೌರವ್ ಗುಪ್ತ ಅವರು ಗುದ್ದಲಿಪೂಜೆ ನೆರವೇರಿಸಿದರು. ಶಾಸಕ ರಿಜ್ವಾನ್ ಅರ್ಷದ್ ಹಾಗೂ ಇತರರು ಇದ್ದಾರೆ

₹12 ಕೋಟಿ ವೆಚ್ಚದಲ್ಲಿ ಹಫಿಜಿಯಾ ಶಾಲೆ ನವೀಕರಣ

ಬೆಂಗಳೂರು: ಶಿವಾಜಿನಗರದಲ್ಲಿರುವ ಹಫಿಜಿಯಾ ಶಾಲೆಯನ್ನು ₹12 ಕೋಟಿ ವೆಚ್ಚದಲ್ಲಿ ನವೀಕರಿಸುವ ಕಾಮಗಾರಿಗೆ ಶಾಸಕ ರಿಜ್ವಾನ್ ಅರ್ಷದ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಶನಿವಾರ ಚಾಲನೆ ನೀಡಿದರು.

'ಬಿಬಿಎಂಪಿಯು ಹಫಿಜಿಯಾ ಶಾಲೆ ನವೀಕರಿಸುವುದರಿಂದ ಮತ್ತು ನೂತನ ಕಟ್ಟಡ ನಿರ್ಮಿಸುವುದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲ ವಾಗಲಿದೆ. ಈ ಶಾಲೆಗೆ 100ಕ್ಕೂ ಅಧಿಕ ವರ್ಷಗಳ ಇತಿಹಾಸವಿದೆ. ಈ ಶಾಲೆಯನ್ನು ಬೆಂಗಳೂರಿನ ಸರ್ಕಾರಿ ಶಾಲೆಗಳ ಪೈಕಿ ಮೊದಲನೇ ಸ್ಥಾನದಲ್ಲಿ ನಿಲ್ಲುವ ರೀತಿಯಲ್ಲಿ ಅಭಿವೃದ್ಧಿ ಪಡಿಸ ಲಾಗುವುದು' ಎಂದು ರಿಜ್ವಾನ್ ಅರ್ಷದ್ ತಿಳಿಸಿದರು.

'ಬಿಬಿಎಂಪಿ ನಿರ್ಮಿಸುವ ಶಾಲಾ ಕಟ್ಟಡದ ನೀಲನಕ್ಷೆ ನೋಡಿದಾಗಲೇ ಇದು ಅಂತರರಾಷ್ಟ್ರೀಯ ಗುಣಮಟ್ಟದ್ದು ಎಂಬುದು ಮನದಟ್ಟಾಗುತ್ತದೆ. ಎಜು ಕೇಷನ್ ಡಿಸೈನ್ ಇಂಟರ್ ನ್ಯಾಷನಲ್ ಸಂಸ್ಥೆಯು ಶಾಲಾ ಕಟ್ಟಡದ ವಿನ್ಯಾಸ ಸಿದ್ಧಪಡಿಸಿದೆ. ಇದಕ್ಕೆ ಯಾವುದೇ ಹಣ ಪಡೆದಿಲ್ಲ' ಎಂದರು.

ಗೌರವ್ ಗುಪ್ತ, 'ಕಟ್ಟಡ ನಿರ್ಮಾ ಣಕ್ಕಾಗಿ ಈಗಾಗಲೇ ಟೆಂಡರ್ ಕರೆಯ ಲಾಗಿದೆ' ಎಂದರು. ವಲಯ ಆಯುಕ್ತ ಮನೋಜ್ ಜೈನ್, ವಲಯದ ಜಂಟಿ ಆಯುಕ್ತರಾದ ಪಲ್ಲವಿ, ಕಾರ್ಯ ನಿರ್ವಾಹಕ ಎಂಜಿನಿಯರ್ ಸೈಫುದ್ದೀನ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

'ಪದವಿ ಪ್ರಮಾಣಪತ್ರ ಪ್ರಧಾನಿಗೆ ಹಿಂದಿರುಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರುದ್ಯೋಗಿ ಯುವಕರು ತಮ್ಮ ಪದವಿ ಪ್ರಮಾಣಪ-ತ್ರವನ್ನು ಪ್ರಧಾನಿ ನರೇಂದ್ರ ಮೋದಿಗೆ ಹಿಂದಿರುಗಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ಸದಾಶಿವನಗರದ ತಮ್ಮ ನಿವಾಸದ ಬಳಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆ ಎಂದಿದ್ದ ಪ್ರಧಾನಿ, ನುಡಿದಂತೆ ನಡೆದುಕೊಳ್ಳಲು ವಿಫಲರಾಗಿದ್ದಾರೆ' ಎಂದರು.

ಡಿ.ಕೆ. ಶಿವಕುಮಾರ್

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣಿಗಳು ನುಡಿದಂತೆ ನಡೆಯಬೇಕು. ಅದೇ ನಮ್ಮ ನೀತಿ ಹಾಗೂ ಧರ್ಮ. ನಾವು ಜನರ ಸೇವೆ ಮಾಡಲು ಬಂದಿದ್ದು, ಕೊಟ್ಟ ಮಾತು ಉಳಿಸಿಕೊಳ್ಳಬೇಕು. ಇದನ್ನು ನಮ್ಮ ದೇಶ ಹಾಗೂ ನಾಡಿನ ಎಲ್ಲ ಧರ್ಮದಲ್ಲೂ ಬಸವಣ್ಣನವರ ಕಾಲದಿಂದಲೂ ನಾಯಕರು ಪ್ರತಿಪಾದಿ-ಸಿಕೊಂಡು ಬಂದಿದ್ದಾರೆ' ಎಂದರು.

'ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುತ್ತೇವೆ ಎಂದು ಮಾತು ಕೊಟ್ಟಿದ್ದ ಮೋದಿ, ಅದು ಸಾಧ್ಯವಾಗದಿದ್ದ-ರೂ ಕನಿಷ್ಠ ಖಾಸಗಿ ಉದ್ಯೋಗ ಸೃಷ್ಟಿ ಆಗುವಂತೆ ಮಾಡಬೇಕಿತ್ತು. ಉದ್ಯೋಗ ಸೃಷ್ಟಿಗೆ ಅಗತ್ಯ ನೀತಿ ರೂಪಿಸಬೇಕಾಗಿತ್ತು' ಎಂದೂ ಅವರು ಹೇಳಿದರು.

'ಕೋವಿಡ್ ಸಂದರ್ಭದಲ್ಲಿ ದೇಶದಲ್ಲಿ 2 ಕೋಟಿ ಉದ್ಯೋಗ ನಷ್ಟವಾಗಿದೆ. ಸರ್ಕಾರ ಉದ್ಯೋಗ ಸೃಷ್ಟಿ ಮಾಡಲು ಸಾಧ್ಯವಾಗದ ಕಾರಣ ಮೋದಿ ಅವರ ಜನ್ಮದಿನವನ್ನು ಯುವ ಕಾಂಗ್ರೆಸ್ ವತಿಯಿಂದ ನಿರುದ್ಯೋಗ ದಿನವಾಗಿ ಆಚರಿಸಿದ್ದಾರೆ' ಎಂದು ಶಿವಕಕುಮಾರ್ ತಿಳಿಸಿದರು.

ವಿದ್ಯುತ್ ವ್ಯತ್ಯಯ ಇಂದು, ನಾಳೆ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಮತ್ತು ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 19 ಮತ್ತು 20ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾ-ಗಲಿದೆ ಎಂದು ಬೆಸ್ಕಾಂ ಹೇಳಿದೆ.

19: ಬೆಲ್ಮಾರ್ ಬಡಾವಣೆ, ಎಚ್‌ಎಂಟಿ ಬಡಾವಣೆ, ವಿನಾಯಕ ನಗರ, ಜಾಲಹಳ್ಳಿ ಅಡ್ಡರಸ್ತೆ, ಶೋಭಾ ಅಪಾರ್ಟ್‌ಮೆಂಟ್ಸ್, ಗೃಹಲಕ್ಷ್ಮಿ ಬಡಾವಣೆ, ಶಿವಪುರ, ಪೀಣ್ಯ ಎರಡನೇ ಹಂತ, ತಿಗಳರ ಪಾಳ್ಯ ಮುಖ್ಯರಸ್ತೆ, ರುಕ್ಮಿಣಿ ನಗರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ಸಹಕಾರ ನಗರ, ಬ್ಯಾಟರಾಯನ ಪುರ, ಬಿ.ಬಿ. ರಸ್ತೆ, ತಲಕಾವೇರಿ ಬಡಾವಣೆ, ಚಿತ್ರಕೂಟ, ವಿದ್ಯಾಶಿಲ್ಪ, ಶೋಭಾ ಡೆವಲಪರ್ಸ್, ಜಕ್ಕೂರು ಬಡಾವಣೆ, ಕೃಷಿ ವಿಶ್ವವಿದ್ಯಾಲಯ ಬಡಾವಣೆ, ಅಮೃತನಗರ, ಕಾಶಿನಗರ, ಭುವನೇಶ್ವರಿ ನಗರ, ವರ್ಮಾ ಬಡಾವಣೆ, ಅಮೃತಹಳ್ಳಿ, ಶ್ರೀರಾಮಪುರ, ಟೆಲಿಕಾಂ ಬಡಾವಣೆ, ಶಿವರಾಮಕಾರಂತ ನಗರ, ಜವಹರಲಾಲ್ ಸಂಸ್ಥೆ, ರಕ್ಷಣಾ ಬಡಾವಣೆ, ನವ್ಯನಗರ, ವಿಆರ್‌ಎಲ್, ಸಂಪಿಗೆಹಳ್ಳಿ, ತಿರುಮನಹಳ್ಳಿ, ಚೊಕ್ಕನಹಳ್ಳಿ, ಹೆಗ್ಡೆ ನಗರ, ಅಗ್ರಹಾರ ಬಡಾವಣೆ, ಕೋಗಿಲು ಬಡಾವಣೆ, ಡಯಾನ ಕಾಲೇಜು.

ವಿದ್ಯಾರಣ್ಯಪುರ, ಅಟ್ಟೂರು ಬಡಾ ವಣೆ, ಸಂತೋಷ ನಗರ, ಮುನೇಶ್ವರ ಬಡಾವಣೆ, ವೀರಸಾಗರ, ಕೆಂಪನಹಳ್ಳಿ, ಶಾಮರಾಜಪುರ, ಬಸವ ಸಮಿತಿ, ನಂಜಪ್ಪ ವೃತ್ತ, ವೆಂಕಟೇಶ್ವರ ಬಡಾವಣೆ, ಗುರುದರ್ಶನ ಬಡಾವಣೆ, ಗಣೇಶ್ವರ ಬಡಾವಣೆ, ಸಪ್ತಗಿರಿ ಬಡಾವಣೆ, ತಿಂಡ್ಲು, ಎಎಂಎಸ್ ಬಡಾವಣೆ, ಬಾಲಾಜಿ ಬಡಾವಣೆ, ರಾಘವೇಂದ್ರ ಕಾಲೊನಿ, ಕೆಎಂಎಫ್, ಉನ್ನಿಕೃಷ್ಣನ್ ರಸ್ತೆ, ಶೇಷಾದ್ರಿಪುರ ಕಾಲೇಜು ರಸ್ತೆ, ಚಂದ್ರ ಕೆಫೆ ರಸ್ತೆ, ಟಿಎಂ ಎನ್‌ಕ್ಲೇವ್, ಡೇರಿ ವೃತ್ತ, ಮಾತೃ ಬಡಾವಣೆ, ಸೋಮೇಶ್ವರ ನಗರ, ನ್ಯಾಯಾಂಗ ಬಡಾವಣೆ, ಪುರವಂಕರ, ಸಗ್ಗಪ್ಪ ಬಡಾವಣೆ, ಚೌಡೇಶ್ವರಿ ಬಡಾವಣೆ, ಕಾಮಾಕ್ಷಿಪುರ ಬಡಾವಣೆ, ಎನ್‌ಸಿಬಿಎಸ್.

ಕಮ್ಮಗೊಂಡನಹಳ್ಳಿ, ರಾಘವೇಂದ್ರ ಬಡಾವಣೆ, ಲಕ್ಷ್ಮೀಪುರ, ವಡೇರಹಳ್ಳಿ, ಅಬ್ಬಿಗೆರೆ ಕೈಗಾರಿಕಾ ಪ್ರದೇಶ, ವಾಯುಪಡೆ, ಸಿಂಗಪುರ, ಪೈಪ್‌ಲೈನ್ ರಸ್ತೆ, ನಿಸರ್ಗ ಬಡಾವಣೆ, ಕೆಂಪೇಗೌಡ ಬಡಾವಣೆ, ಕಲ್ಯಾಣನಗರ ಮುಖ್ಯರಸ್ತೆ, ವಿಶ್ವೇಶ್ವರಯ್ಯ ಬಡಾವಣೆ, ಎಚ್‌ವಿವಿ ಬಡಾವಣೆ, ಕುವೆಂಪು ನಗರ, ಕಾನ್ಶಿರಾಮ್ ನಗರ, ವರದರಾಜ ನಗರ, ಎಂ.ಎಸ್. ಪಾಳ್ಯ ವೃತ್ತ, ವಿನಾಯಕನ ನಗರ, ಸೋಮಣ್ಣ ಗಾರ್ಡನ್, ಶ್ರೀನಿಧಿ ಬಡಾವಣೆ, ನಾರಾಯಣ ಬಡಾವಣೆ, ಎನ್‌ಟಿಐ ಬಡಾವಣೆ, ಮೇಡಿ ಅಗ್ರಹಾರ, ಲಕ್ಕಪ್ಪ ಬಡಾವಣೆ ಮತ್ತು ಸುತ್ತ–ಮುತ್ತಲಿನ ಪ್ರದೇಶ.

ಅಯ್ಯಪ್ಪ ನಗರ, ಎಸ್.ಎಂ. ರಸ್ತೆ, ಶಬರಿನಗರ, ಸಿದ್ಧಾರ್ಥ ನಗರ, ಕಾಳಹಸ್ತಿ ನಗರ, ಕಾಫಿಡೇ, ಎಸ್. ಎಂ. ರಸ್ತೆ, ಕೆಎಸ್‌ಆರ್‌ಟಿಸಿ ಬಡಾವಣೆ, ತ್ರಿವೇಣಿ, ಜೆಮಿನಿ ಇಂಡಸ್ಟ್ರೀಸ್, ರವಿ ಕಿರ್ಲೋಸ್ಕರ್ ಆಸ್ಪತ್ರೆ, ಜಾನ್ ಕ್ರೇನ್, ಪ್ರಿಂಟಿಂಗ್ ಪ್ರೆಸ್, ಸಿಎಂಟಿಐ ಕ್ವಾರ್ಟರ್ಸ್, ರವೀಂದ್ರ ನಗರ, ಪ್ರಶಾಂತ ನಗರ, ರವೀಂದ್ರ ನಗರ, ಸಂತೋಷ ನಗರ, ಜಾಲಹಳ್ಳಿ ಪಶ್ಚಿಮ, ವಿಪ್ರೊ, ಐಟಿಸಿ, ವೋಲ್ವೊ, ಹಿಟಾಚಿ ಮತ್ತು ಸುತ್ತ–ಮುತ್ತಲಿನ ಪ್ರದೇಶ.

ರಿಲಯನ್ಸ್ ಕೈಗಾರಿಕೆ, ಕರ್ಲಾನ್, ಜೈಭಾರತ್ ಕೈಗಾರಿಕಾಪ್ರದೇಶ, ಟಾಟಾ ಪ್ರದೇಶ, ರಾಘವೇಂದ್ರ ಬಡಾವಣೆ, ಆರ್‌ಎನ್‌ಎಸ್ ಮೋಟಾರ್, ಮುನೇಶ್ವರ ನಗರ, ವೈಷ್ಣವಿ ನಕ್ಷತ್ರ ಅಪಾರ್ಟ್‌ಮೆಂಟ್ಸ್ ಸಮುಚ್ಚಯ, ಇಸ್ರೊ, ದೂರದರ್ಶನ, ಆದಾಯ ತೆರಿಗೆ ಕ್ವಾರ್ಟರ್ಸ್, ಪೀಣ್ಯ, ಹನುಮಾನ್ ಕಾರ್ಖಾನೆ, ಎಚ್‌ಎಂಟಿ ರಸ್ತೆ, ಜಲಸೌಧ ಮತ್ತು ಸುತ್ತ–ಮುತ್ತಲಿನ ಪ್ರದೇಶ.

20: ಐಟಿಐ ಬಡಾವಣೆ, ಗುರುಸಾರ್ವಭೌಮ ಬಡಾವಣೆ, ನಗರ ಹಳ್ಳಿ, ಓಂ ಶಕ್ತಿ ದೇವಸ್ಥಾನ, ಮಹಾವೀರ ಅಪಾರ್ಟ್‌ಮೆಂಟ್ಸ್, ಜಲಮಂಡಳಿ ಕಚೇರಿ, ಗೃಹಲಕ್ಷ್ಮಿ ಬಡಾವಣೆ, ಸುವರ್ಣ ನಗರ, ಸರ್ ಎಂ.ವಿ. ಬಡಾವಣೆ 1ನೇ ಹಂತ, ಉಲ್ಲಾಳ ನಗರ, ಮಾರುತಿ ನಗರ, ಆರ್‌ಎಚ್‌ಸಿಎಸ್ ಬಡಾವಣೆ, ಅನ್ನಪೂರ್ಣೇಶ್ವರಿ ನಗರ, ಹೆಲ್ತ್ ಬಡಾವಣೆ, ಡಿ ಗ್ರೂಪ್ ಬಡಾವಣೆ, ವಿನಾಯಕ ಬಡಾವಣೆ, ನಾಗರಬಾವಿ 9ನೇ ಹಂತ. ಶೋಭಾ ಅಪಾರ್ಟ್‌ಮೆಂಟ್ಸ್ ಸಮುಚ್ಚಯ, ಸರ್ಜಾಪುರ ರಸ್ತೆಯ ಇಬ್ಬಲೂರು ಗ್ರಾಮ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.

ಬ್ಯಾಡರಹಳ್ಳಿಯಲ್ಲಿ ಐವರು ಮೃತಪಟ್ಟ ಪ್ರಕರಣ • ಪತ್ನಿ ವಿರುದ್ಧವೇ ದೂರು ಕೊಟ್ಟ ಶಂಕರ್

‘ಹೆಣ್ಮಕ್ಕಳ ಜೀವನ ಹಾಳು ಮಾಡುತ್ತಿದ್ದ ಪತ್ನಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಕೂಸು ಸೇರಿ ಒಂದೇ ಕುಟುಂಬದ ಐವರು ಮೃತಪಟ್ಟ ಪ್ರಕರಣದಲ್ಲಿ, ಸಾವುಕಂಡ ಭಾರತಿ ಅವರ ಪತಿ ಹಲ್ಲೇಗೆರೆ ಶಂಕರ್ ಅವರು ಪೊಲೀಸರಿಗೆ ಎಂಟು ಪುಟಗಳ ದೂರು ನೀಡಿದ್ದಾರೆ.

‘ಪತ್ನಿ ಭಾರತಿಯ ಪ್ರೇರಣೆ ಹಾಗೂ ಒತ್ತಡದಿಂದ ಮಕ್ಕಳು ಮಾನಸಿಕವಾಗಿ ಜರ್ಝರಿತರಾಗಿರಬಹುದು. ಅದರಿಂದಲೇ ಮಕ್ಕಳಾದ ಸಿಂಚನಾ ಕುಮಾರ್, ಸಿಂಧುರಾಣಿ, ಮಧುಸಾಗರ, 9 ತಿಂಗಳ ಗಂಡು ಮಗು ಹಾಗೂ ಪತ್ನಿ ಭಾರತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ದೂರಿನಲ್ಲಿ ಶಂಕರ್ ಹೇಳಿದ್ದಾರೆ.’

‘33 ವರ್ಷಗಳ ಹಿಂದೆ ಭಾರತಿ ಮದುವೆಯಾಗಿದ್ದೆ. ಅಂದಿನಿಂದಲೂ ಒಂದಿಲ್ಲೊಂದು ಕಷ್ಟಪಡುತ್ತಿದ್ದೆ. ಮೊದಲ ಮಗಳು ಸಿಂಚನಾ ಕುಮಾರಿಗೆ 2015ರಲ್ಲಿ ಮದುವೆ ಮಾಡಿಕೊಡಲಾಗಿತ್ತು. ಪತಿ ಜೊತೆ ಇರಲು ಒಪ್ಪದ ಆಕೆ, ನಿತ್ಯವೂ ಜಗಳ ಮಾಡುತ್ತಿದ್ದಳು. ಇದಕ್ಕೆ ಪತ್ನಿ ಭಾರತಿ ಕುಮ್ಮಕ್ಕು ನೀಡುತ್ತಿದ್ದಳು. ಗಂಡನೊಂದಿಗೆ ಹೊಂದಿಕೊಂಡು ಹೋಗಬೇಕೆಂದು ಹಲವು ಬಾರಿ ಹೇಳಿದರೂ ಮಾತು ಕೇಳುತ್ತಿರಲಿಲ್ಲ.’

‘ಅಳಿಯ ಹಾಗೂ ಬೀಗರನ್ನೂ ಮಗಳು ಹೆದರಿಸುತ್ತಿದ್ದಳು. ಗಂಡನ ಮನೆಯಲ್ಲೂ ಕೈ ಕೊಯ್ದುಕೊಂಡಿದ್ದಳು. ಆಕೆಯನ್ನು ಬೀಗರೇ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದ್ದರು. ನಂತರ, ಮನೆಗೆ ಬಂದ ಮಗಳಿಗೆ ಪತ್ನಿ ಇಲ್ಲಸಲ್ಲದನ್ನು ಹೇಳಿ ತಲೆ ಕೆಡಿಸಿದ್ದಳು. ಗಂಡನ ಮನೆಗೆ ಹೋಗದಂತೆ ತಡೆಯುತ್ತಿದ್ದಳು’ ಎಂಬ ಅಂಶವೂ ದೂರಿನಲ್ಲಿದೆ.

‘ಎರಡನೇ ಮಗಳು ಸಿಂಧುರಾಣಿಗೆ 2020ರ ಫೆಬ್ರುವರಿಯಲ್ಲಿ ಮದುವೆಯಾಗಿತ್ತು. ಆಕೆಗೂ ಇಲ್ಲಸಲ್ಲದನ್ನು ಹೇಳಿ ಪತಿ ಜೊತೆ ಹೊಂದಾಣಿಕೆ ಆಗದಂತೆ ಪತ್ನಿ ಮಾಡಿದ್ದಳು. ಮೊದಲ ಮಗಳ ಜೀವನ ಹಾಳಾಗಿದ್ದು, ಎರಡನೇ ಮಗಳದ್ದೂ ಆ ರೀತಿಯಾಗುವುದು ಬೇಡವೆಂದು ಹೇಳಿದರೂ ಬುದ್ಧಿ ಕಲಿಯಲಿಲ್ಲ. ಬಸವೇಶ್ವರನಗರದ ನಿಸರ್ಗ ಪಾರ್ಟಿ ಹಾಲ್‌ನಲ್ಲಿ 2021ರ ಸೆ. 2ರಂದು ಮಗುವಿನ ನಾಮಕರಣ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಗಿತ್ತು.’

‘ಮಗುವಿಗೆ ಕಿವಿ ಚುಚ್ಚುವುದು ಬೇಡವೆಂದು ಅಳಿಯ ಹೇಳಿದ್ದ. ಆ ಬಗ್ಗೆ ನನಗೆ ಗೊತ್ತಿಲ್ಲವೆಂದು ಸುಮ್ಮನಾಗಿದ್ದೆ. ಕಿವಿ ಚುಚ್ಚಿಸಿರಬಹುದೆಂದು ತಿಳಿದ ಅಳಿಯ, ಮಗಳಿಗೆ ಕರೆ ಮಾಡಿ ವಿಚಾರಿಸಿದ್ದ. ಅಷ್ಟಕ್ಕೆ ಕೋಪಗೊಂಡಿದ್ದ ಮಗಳು, ‘ಕಿವಿ ಚುಚ್ಚಿಸಿದರೆ, ಪ್ರಪಂಚ ಮುಳುಗಿ ಹೋಗುತ್ತಾ?’ ಎಂದು ಬಾಯಿಗೆ ಬಂದಂತೆ ಬೈದಿದ್ದಳು. ನಂತರ, ಪತ್ನಿ ಹಾಗೂ ಮಕ್ಕಳೆಲ್ಲರೂ ಒಂದಾಗಿ, ಮಗುವಿನ ನಾಮಕರಣ ನಡೆಯಲು ಬಿಡಲಿಲ್ಲ. ಕಾಲು ಹಿಡಿದುಕೊಂಡು ಕೇಳಿದರೂ ಅವರ ಮನಸ್ಸು ಕರಗಲಿಲ್ಲ.’

ಆತ್ಮಹತ್ಯೆಗೆ ಯತ್ನಿಸಿದ್ದ ಮಗಳು: ‘ರಾತ್ರಿ 11 ಗಂಟೆ ಸುಮಾರಿಗೆ ಕಚೇರಿಯಿಂದ ಮನೆಗೆ ಬರುತ್ತಿದ್ದಂತೆ, ಮನೆಯಲ್ಲಿ ವಾತಾವರಣ ಬದಲಾಗಿತ್ತು. ಪತ್ನಿ ಕೊಠಡಿಯೊಂದಕ್ಕೆ ಹೋಗಿ ನೋಡಿದಾಗ, ಮಗಳು 25–30 ಮಾತ್ರೆ ತೆಗೆದುಕೊಂಡು ಪ್ರಜ್ಞೆ ಕಳೆದುಕೊಂಡಿದ್ದಳು. ಕೂಡಲೇ ಆಕೆಯನ್ನು ಆಂಬುಲೆನ್ಸ್‌ನಲ್ಲಿ ಲಕ್ಷ್ಮಿ ನರ್ಸಿಂಗ್ ಹೋಮ್‌ಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಯಿತು. ವೈದ್ಯರು, ಘಟನೆ ಬಗ್ಗೆ ಬ್ಯಾಡರಹಳ್ಳಿ ಠಾಣೆಗೆ ಮೆಮೊ ಕಳುಹಿಸಿದ್ದರು’ ಎಂದೂ ದೂರಿನಲ್ಲಿ ಹೇಳಲಾಗಿದೆ.

‘ಆಸ್ಪತ್ರೆಗೆ ಬಂದ ಪೊಲೀಸರು, ಸಿಂಧುರಾಣಿಯಿಂದ 4 ಪುಟ ಹೇಳಿಕೆ ಪಡೆದರು. ನನ್ನ ಹಾಗೂ ನನ್ನ ಶ್ರೀಕಾಂತ್ ವಿರುದ್ಧ ಹೇಳಿಕೆ ನೀಡಿದ್ದಳು. ನಮ್ಮಿಬ್ಬರನ್ನು ಪೊಲೀಸರು ಠಾಣೆಗೆ ಕರೆಸಿದ್ದರು. ನಾನು ಅವರ ತಂಟೆಗೆ ಹೋಗುವುದಿಲ್ಲವೆಂದು ಹೇಳಿ ಠಾಣೆಗೆ ಮುಚ್ಚಳಿಗೆ ಬರೆದುಕೊಟ್ಟಿದ್ದೆ.’

‘ಮಗನ ಹೆಸರಿನಲ್ಲಿ ಬಾರ್ ಆ್ಯಂಡ್ ರೆಸ್ಟೋರೆಂಟ್ ತೆರೆಯಲು ಸಿದ್ಧತೆ ನಡೆಸಿದ್ದೆ. ಈ ವಿಚಾರವಾಗಿಯೂ ಮಗ ಜಗಳ ಮಾಡಿದ್ದ. ಆಸ್ತಿ, ಆಭರಣ ಏನು ಬೇಡವೆಂದಿದ್ದ ನಾನು, ಆಶ್ರಮ ತೆರೆಯುವುದಾಗಿ ಹೇಳಿದ್ದೆ. ಆಶ್ರಮಕ್ಕಾಗಿ ಮಂಡ್ಯ ತಾಲ್ಲೂಕಿನಲ್ಲಿ 5 ಎಕರೆ 1 ಗುಂಟೆ ಜಾಗ ಖರೀದಿಸಲು ಮಗನ ಬಳಿ ಇದ್ದ ₹ 10 ಲಕ್ಷ ಕೊಡುವಂತೆ ಕೇಳಿದ್ದೆ. ಆತ ಕೊಡಲಿಲ್ಲ. ಮನೆಯಲ್ಲಿ ಉಳಿದರೆ ಜಗಳವಾಗುತ್ತದೆಂದು ತಿಳಿದು ಕಚೇರಿಗೆ ಹೋಗಿದ್ದೆ’ ಎಂಬ ಸಂಗತಿಯೂ ದೂರಿನಲ್ಲಿದೆ.

‘ಭಾನುವಾರ (ಸೆ. 12) ಸಂದೇಶ ಕಳುಹಿಸಿದ್ದ ಮಗ ಮಧುಸಾಗರ್, ‘ನಾಳೆ ನಿಮಗೆ ಬೇಕಾದ ಹಣ ಸಿಗುತ್ತದೆ’ ಎಂದಿದ್ದ. ತಡವಾಗಿ ಸಂದೇಶದ ನೋಡಿ, ಆತನಿಗೆ ಕರೆ ಮಾಡಿದ್ದೆ. ಪ್ರತಿಕ್ರಿಯೆ ಸಿಕ್ಕಿರಲಿಲ್ಲ. ಮನೆಗೆ ಹೋಗಿ ನೋಡಿದಾಗ, ಬೀಗ ಹಾಕಿತ್ತು. ಬಾಡಿಗೆ ಕಾರಿನಲ್ಲಿ ಎಲ್ಲರೂ ದೇವಸ್ಥಾನಕ್ಕೆ ಹೋಗಿರಬಹುದೆಂದು ತಿಳಿದಿದ್ದೆ. ನಾಲ್ಕು ದಿನ ಕಳೆದರೂ ಮನೆ ಬಳಿ ಯಾರೂ ಬಂದಿರಲಿಲ್ಲ.’

‘ಆತಂಕ ಹಾಗೂ ಭಯವಾಗಿ ಮನೆ ಬಳಿ ಹೋಗಿ ಬೀಗ ಕೀಗಾಗಿ ಹುಡುಕಾಟ ನಡೆಸಿದ್ದೆ. ಕಿಟಕಿ ಬಳಿ ಹೋದಾಗ, ದುರ್ನಾತ ಬರುತ್ತಿತ್ತು. ಬ್ಯಾಡರಹಳ್ಳಿ ಠಾಣೆಗೆ ಮಾಹಿತಿ ನೀಡಿದೆ. ಹೊಯ್ಸಳ ವಾಹನದ ಸಿಬ್ಬಂದಿ ಹಾಗೂ ಸಾರ್ವಜನಿಕರ ಜೊತೆ ಮನೆಯೊಳಗೆ ಹೋಗಿ ನೋಡಿದಾಗಲೇ ಮೃತದೇಹಗಳು ಕಂಡವು. ಈ ಘಟನೆಯಲ್ಲಿ ನನ್ನ, ಬೀಗರ, ಅಳಿಯಂದಿರ ಯಾವುದೇ ಪಾತ್ರ ಇರುವುದಿಲ್ಲ’ ಎಂದೂ ದೂರಿನಲ್ಲಿ ಶಂಕರ್ ತಿಳಿಸಿದ್ದಾರೆ.

‘ಮನೆ ಕೆಲಸದ ಮಹಿಳೆ, ಅಳಿಯಂದಿರ ವಿಚಾರಣೆ’

‘ಕಲಬುರ್ಗಿಯ ಮಹಿಳೆಯೊಬ್ಬರು ಮನೆಯಲ್ಲಿ ಕೆಲಸಕ್ಕೆ ಇದ್ದರು. ಕಳೆದ ತಿಂಗಳು ಕೆಲಸ ಬಿಟ್ಟು ಹೋಗಿದ್ದರು. ಅವರ ಜಾಗಕ್ಕೆ ಬೇರೊಬ್ಬ ಮಹಿಳೆ ಬಂದಿದ್ದರೆಂದು ಗೊತ್ತಾಗಿದೆ. ಅವರೂ ಭಾನುವಾರದಿಂದ ಕೆಲಸಕ್ಕೆ ಬಂದಿರಲಿಲ್ಲ. ಆ ಮಹಿಳೆಯನ್ನು ಪತ್ತೆ ಮಾಡಿ ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮನೆ ಮಾಲೀಕ ಶಂಕರ್, ಅಳಿಯಂದಿರು ಹಾಗೂ ಇತರರನ್ನು ವಿಚಾರಣೆ ನಡೆಸಲಾಗುತ್ತಿದೆ. ಮೊಬೈಲ್‌ಗಳನ್ನು ವಶಕ್ಕೆ ಪಡೆದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಎಲ್ಲರ ಹೇಳಿಕೆ ಪಡೆದು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದೂ ಮೂಲಗಳು ತಿಳಿಸಿವೆ.

ಮನೆಯಲ್ಲಿ ಡೈರಿ, ಮರಣಪತ್ರ ಪತ್ತೆ

‘ಪತ್ನಿ ಹಾಗೂ ಮಕ್ಕಳ ವಾಸಕ್ಕಾಗಿ ಶಂಕರ್, ಐಷಾರಾಮಿ ಮನೆ ಕಟ್ಟಿಸಿದ್ದರು. ಆತ್ಮಹತ್ಯೆ ನಂತರ, ಮನೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ಮಗ ಮಧುಸಾಗರ್ ಬರೆಯುತ್ತಿದ್ದ ಎನ್ನಲಾದ ಡೈರಿ ಹಾಗೂ ಮರಣ ಪತ್ರ ಸಿಕ್ಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತಂದೆ ಹಾಗೂ ಮಗನ ಜೊತೆ ಹಲವು ಬಾರಿ ಗಲಾಟೆ ಆಗಿತ್ತು. ಠಾಣೆಯಲ್ಲೂ ಸಂಧಾನ ನಡೆದಿತ್ತು. ಈ ಅಂಶವನ್ನು ಮಗ, ಡೈರಿಯಲ್ಲಿ ಬರೆದಿದ್ದಾನೆ. ಉಳಿದಂತೆ ಎಲ್ಲ ಸಂಗತಿಗಳ ಪರಿಶೀಲನೆ ನಡೆಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

‘ಯುಪಿಎಸ್ಸಿ ತರಬೇತಿ ಪಡೆಯುತ್ತಿದ್ದ ಮಕ್ಕಳು’

‘ಹೆಣ್ಣು ಮಕ್ಕಳನ್ನು ಐಎಎಸ್ ಅಧಿಕಾರಿ ಮಾಡಬೇಕೆಂದುಕೊಂಡಿದ್ದ ಶಂಕರ್, ಸಿಂಧುರಾಣಿ ಹಾಗೂ ಸಿಂಚನಾ ಅವರನ್ನು ಯುಪಿಎಸ್ಸಿ ಪರೀಕ್ಷೆ ತರಬೇತಿಗಾಗಿ ಸಂಸ್ಥೆಯೊಂದಕ್ಕೆ ಸೇರಿಸಿದ್ದರು. ಅವರಿಬ್ಬರು ಸಂಸ್ಥೆಗೆ ಹೋಗಿಬರಲು ಪ್ರತ್ಯೇಕ ಕಾರಿನ ವ್ಯವಸ್ಥೆಯನ್ನು ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಿಂಧುರಾಣಿ, ಎಂಬಿಎ ಪದವೀಧರೆ. ಇನ್ನೊಬ್ಬ ಮಗಳು ಸಿಂಚನಾ, ಬಿ.ಇ ಪದವಿ ಮುಗಿಸಿ ಖಾಸಗಿ ಕಂಪನಿಯಲ್ಲಿ ಕೆಲ ವರ್ಷ ಕೆಲಸ ಮಾಡಿದ್ದರು. ಮಗು ಆದ ಬಳಿಕ ಕೆಲಸ ಬಿಟ್ಟಿದ್ದರು. ಮಗ ಮಧುಸಾಗರ್, ಬಿ.ಇ ಪದವೀಧರ. ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದ. ಆತನ ಬಳಿ ತಂದೆ ಕುಟುಂಬ ನಿರ್ವಹಣೆಗೆ ಹಣ ಕೇಳುತ್ತಿರಲಿಲ್ಲ. ಹೆಚ್ಚಿನ ದುಡಿಮೆಗೆ ಆತನಿಗೆ ಬಾರ್ ತೆರೆದುಕೊಡಲು ತೀರ್ಮಾನಿಸಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ವಿಶೇಷ ತಂಡದಿಂದ ತನಿಖೆ’

‘ಐವರು ಮೃತಪಟ್ಟ ಬಗ್ಗೆ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ವಿಶೇಷ ತಂಡದಿಂದ ತನಿಖೆ ಮುಂದುವರಿದಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

‘ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲಾಗುವುದು. ತನಿಖೆ ಪೂರ್ಣಗೊಂಡ ಬಳಿಕವೇ ಆತ್ಮಹತ್ಯೆಗೆ ನಿಖರ ಕಾರಣವೇನು? ಹಾಗೂ ಆತ್ಮಹತ್ಯೆ ಮಾಡಿಕೊಂಡಿದ್ದು ಹೇಗೆ ಎಂಬುದು ತಿಳಿಯಲಿದೆ’ ಎಂದೂ ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಲಾಗಿರುವ ಚಿನ್ನಾಭರಣ

ಮನೆಗೆ ನುಗ್ಗಿ ಸರ ಕಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಸವೇಶ್ವರನಗರ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ಚಿನ್ನದ ಸರ ಕಳವು ಮಾಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಕೋಲಾರದ ಮಂಜುನಾಥ್ (23) ಹಾಗೂ ಪ್ರಶಾಂತ್ (27) ಬಂಧಿತರು. ಅವರಿಂದ ₹ 8 ಲಕ್ಷ ಮೌಲ್ಯದ 200 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಸವೇಶ್ವರನಗರದ ನಿವಾಸಿಯೊಬ್ಬರು ಸೆ. 18ರಂದು ಬೆಳಿಗ್ಗೆ ವಾಯುವಿಹಾರಕ್ಕೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಮನೆಗೆ ನುಗ್ಗಿದ್ದ ಆರೋಪಿಗಳು, ಚಿನ್ನದ ಸರ ಕದ್ದುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು’ ಎಂದೂ ತಿಳಿಸಿದರು.

‘ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯರನ್ನು ಹಿಂಬಾಲಿಸಿ ಸರ ಕಳವು ಮಾಡುತ್ತಿದ್ದ ಆರೋಪಿಗಳು, ಕೆಲವೆಡೆ ಮನೆಗಳಲ್ಲೂ ಕಳವು ಮಾಡಿದ್ದರು. ಇವರಿಬ್ಬರ ಬಂಧನದಿಂದ ಹಲವು ಪ್ರಕರಣಗಳು ಪತ್ತೆಯಾಗಿವೆ’ ಎಂದೂ ಪೊಲೀಸರು ಹೇಳಿದರು.

‘ಅನುಗೊಂಡನಹಳ್ಳಿ, ಸರ್ಜಾಪುರ ಹಾಗೂ ಶ್ರೀನಿವಾಸಪುರ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಅಪರಾಧ ಕೃತ್ಯ ಎಸಗಿರುವುದು ಗೊತ್ತಾಗಿದೆ’ ಎಂದೂ ಮಾಹಿತಿ ನೀಡಿದರು.

ಜೆಡಿಎಸ್ ತೊರೆದು ಕಾಂಗ್ರೆಸ್ ಸೇರುತ್ತೇನೆ: ಶ್ರೀನಿವಾಸಗೌಡ

ಪ್ರಜಾವಾಣಿ ವಾರ್ತೆ

ಕೋಲಾರ: ಜೆಡಿಎಸ್ ಶಾಸಕ ಕೆ.ಶ್ರೀನಿವಾಸಗೌಡರು ಕಾಂಗ್ರೆಸ್ ಸೇರುತ್ತಾರೆ ಎಂದು ಕ್ಷೇತ್ರದಲ್ಲಿ ಹರಿದಾಡುತ್ತಿದ್ದ ಊಹಾಪೋಹಕ್ಕೆ ತೆರೆ ಎಳೆದ ಶ್ರೀನಿವಾಸಗೌಡರು, ‘ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತೇನೆ’ ಎಂದು ಬಹಿರಂಗವಾಗಿ ಘೋಷಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ದೇವೇಗೌಡರು ಮತ್ತು ಅವರ ಮಕ್ಕಳು ಬಹಳ ದೊಡ್ಡವರು. ನನ್ನನ್ನು ಪಕ್ಷದಿಂದ ಉಚ್ಚಾಟಿಸಿದ್ದಾರೆ. ನಾನು 4 ಬಾರಿ ಬೇರೆ ಬೇರೆ ಪಕ್ಷದಿಂದ ಗೆದ್ದು ಶಾಸಕನಾಗಿದ್ದೇನೆ. ಜೆಡಿಎಸ್‌ನಿಂದ ಉಚ್ಚಾಟನೆ ಮಾಡಿರೋದು ಸಂತೋಷ’ ಎಂದು ಕುಟುಕಿದರು.

‘ಕಾಂಗ್ರೆಸ್‌ಗೆ ಸೇರ್ಪಡೆಯಾಗುವ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ರ ಬಳಿ ಚರ್ಚಿಸಿದ್ದು, ಅವರಿಂದ ಗ್ರೀನ್ ಸಿಗ್ನಲ್ ಸಿಕ್ಕಿದೆ. ಈ ಹಿಂದೆ ಕಾಂಗ್ರೆಸ್ ಬಿಟ್ಟು ಜೆಡಿಎಸ್ ಸೇರಿದ್ದೆ. ಆಗ

ಶ್ರೀನಿವಾಸಗೌಡ

ಕಾಂಗ್ರೆಸ್‌ನ ಒಬ್ಬ ಮಹಾನುಭಾವ ಪಕ್ಷದಿಂದ ಉಚ್ಚಾಟನೆ ಮಾಡಿಸಿದ್ದ. ಈಗ ಆ ಮಹಾನುಭಾವ ಹೆಸರಿಗೆ ಇಲ್ಲದಂತೆ ಹೋಗಿದ್ದಾನೆ. ಜನ ಸಹ ಆತನನ್ನು ಮರೆತಿದ್ದಾರೆ. ಆತನ ಹೆಸರು ಹೇಳಲು ನಾಚಿಕೆಯಾಗುತ್ತೆ’ ಎಂದು ಪರೋಕ್ಷವಾಗಿ ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ವಿರುದ್ಧ ಹರಿಹಾಯ್ದರು.

‘ಕೆ.ಸಿ ವ್ಯಾಲಿ ಯೋಜನೆಯಿಂದ ಜಿಲ್ಲೆಗೆ ನೀರು ತಂದ ಶಾಸಕರಾದ ರಮೇಶ್ ಕುಮಾರ್ ಹಾಗೂ ಕೃಷ್ಣ ಬೈರೇಗೌಡರು ಮಹಾನುಭಾವರು. ನಾನು ಅವರನ್ನು ಹೊಗಳಿದ್ದಕ್ಕೆ ಕುಮಾರಸ್ವಾಮಿಗೆ ಬಾಧೆಯಾಗಿದೆ. ಕೆ.ಸಿ ವ್ಯಾಲಿಯದು ಕೊಚ್ಚೆ ನೀರೆಂದು ಕುಮಾರಸ್ವಾಮಿ ಹೇಳಿದ್ದಾರೆ. ಅದೇ ಕೊಚ್ಚೆ ನೀರು ನಾನು ಕುಡಿದಿಲ್ವಾ? ನಾನು ಸತ್ತೋಗಿದ್ದಿನಾ?’ ಎಂದು ಪ್ರಶ್ನಿಸಿದರು.

‘ನಾರಾಯಣಕುಮಾರ್ ಹೆಸರಿನಲ್ಲಿ ದತ್ತಿ ಸ್ಥಾಪನೆಗೆ ₹5 ಲಕ್ಷ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿ. ನಾರಾಯಣಕುಮಾರ್ ಅವರ ಹೆಸರಿನಲ್ಲಿ ದತ್ತಿ ಸ್ಥಾಪನೆಗೆ ₹5 ಲಕ್ಷ ದೇಣಿಗೆ ನೀಡುತ್ತೇನೆ. ಇದನ್ನು ಸಮಾಜದ ಅಭಿವೃದ್ಧಿಗೆ ಬಳಸಿ’ ಎಂದು ವಸತಿಸಚಿವವಿ.ಸೋಮಣ್ಣತಿಳಿಸಿದರು.

ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿಯು ಚಿತ್ರಕಲಾ ಪರಿಷತ್‌ನಲ್ಲಿ ಹಮ್ಮಿಕೊಂಡಿದ್ದ ಜಿ. ನಾರಾಯಣಕುಮಾರ್ ಸಂಸ್ಮರಣೆ ಹಾಗೂ ‘ಜಿನಾಕು’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಶನಿವಾರ ಮಾತನಾಡಿದರು.

‘ನಾರಾಯಣಕುಮಾರ್ ಅವರು ನಾಡು ಕಂಡ ಅಪರೂಪದ ರಾಜಕಾರಣಿ ಹಾಗೂ ಕನ್ನಡಪರ ಹೋರಾಟಗಾರ. ಶಾಸಕರಾಗಿ ಅನೇಕ ಜನಪರ ಕಾರ್ಯಗಳನ್ನು ಮಾಡಿದ್ದ ಅವರು ಕನ್ನಡ ಭಾಷೆ ಹಾಗೂ ನಾಡಿಗೆ ಸಂಕಷ್ಟ ಎದುರಾದಾಗ ಹೋರಾಟದ ಹಾದಿ ಹಿಡಿಯುತ್ತಿದ್ದರು’ ಎಂದು ಸ್ಮರಿಸಿದರು.

ಸಮಾರಂಭದಲ್ಲಿ (ಕುಳಿತವರು; ಎಡದಿಂದ) ವೈ.ಜಿ.ಅಶೋಕ್ ಕುಮಾರ್, ಶಿವರಾಮೇಗೌಡ, ಬಾನಂದೂರು ಕೆಂಪಯ್ಯ ಮತ್ತು ಪ್ರೊ.ಜಿ.ಅಬ್ದುಲ್ ಬಷೀರ್ ಅವರಿಗೆ ‘ಜಿನಾಕು ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ಪತ್ರಕರ್ತ ಸಮೀವುಲ್ಲಾ, ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಫಾಲನೇತ್ರ, ಸಮಿತಿ ಅಧ್ಯಕ್ಷ ಗುರುದೇವ್ ನಾರಾಯಣಕುಮಾರ್, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ, ವಸತಿ ಸಚಿವ ವಿ.ಸೋಮಣ್ಣ ಇದ್ದಾರೆ

ಬೆಂಗಳೂರು ಪ್ರೆಸ್‌ಕ್ಲಬ್‌ನ ಮಾಜಿ ಕಾರ್ಯದರ್ಶಿ ವೈ.ಜಿ.ಅಶೋಕ್ ಕುಮಾರ್, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಶಿವರಾಮೇಗೌಡ, ಕರ್ನಾಟಕ ಜನಪದ ಅಕಾಡೆಮಿಯ ಮಾಜಿ ಅಧ್ಯಕ್ಷ ಬಾನಂದೂರು ಕೆಂಪಯ್ಯ ಮತ್ತು ಲೇಖಕ ಹಾಗೂ ವಿಮರ್ಶಕ ಪ್ರೊ. ಜಿ.ಅಬ್ದುಲ್ ಬಷೀರ್ ಅವರಿಗೆ ‘ಜಿನಾಕು ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ನಿವೃತ್ತ ಎಸಿಪಿಗೆ ₹ 55 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಮಾರಾಟದ ವ್ಯವಹಾರದಲ್ಲಿ ನಿವೃತ್ತ ಸಹಾಯಕ ಪೊಲೀಸ್ ಕಮಿಷನರ್ (ಎಸಿಪಿ) ಲವ್‌ಕುಮಾರ್ (74) ಅವರಿಗೆ ₹ 55 ಲಕ್ಷ ವಂಚನೆ ಮಾಡಲಾಗಿದ್ದು, ಈ ಬಗ್ಗೆ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜೆ.ಪಿ.ನಗರ 7ನೇ ಹಂತದ ನಿವಾಸಿ ಲವ್‌ಕುಮಾರ್ ಇತ್ತೀಚೆಗೆ ದೂರು ನೀಡಿದ್ದಾರೆ. ಎಂ.ಎಸ್. ನಿರ್ಮಾಣ್ ಶೆಲ್ಟರ್ಸ್ ಕಂಪನಿಯ ನಿರ್ದೇಶಕ ಲಕ್ಷ್ಮಿನಾರಾಯಣ, ಶಶಿ ಪಾಟೀಲ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆನೇಕಲ್ ತಾಲ್ಲೂಕಿನ ಜಿಗಣಿ ರಾಜಪುರಹಳ್ಳಿಯ ನವ್ಯ ಬಡಾವಣೆಯಲ್ಲಿ ಎಸಿಪಿ ಅವರಿಗೆ ಸೇರಿದ್ದ ಮೂರು ನಿವೇಶನಗಳಿವೆ. ಅವುಗಳನ್ನು ಮಾರಲು ತೀರ್ಮಾನಿಸಿದ್ದ ಎಸಿಪಿ, ಆರೋಪಿಗಳ ಜೊತೆ ಮಾತುಕತೆ ನಡೆಸಿದ್ದರು. ನಿವೇಶನಗಳನ್ನು ಮಾರಿ ಹಣ ಕೊಡುವುದಾಗಿ ಆರೋಪಿಗಳು ಹೇಳಿದ್ದರು.’

‘ದಾಖಲೆ ಪಡೆದಿದ್ದ ಆರೋಪಿಗಳು, ₹ 85 ಲಕ್ಷಕ್ಕೆ ನಿವೇಶನಗಳನ್ನು ಮಾರಿದ್ದರು. ಅದರಲ್ಲಿ ₹ 30 ಲಕ್ಷವನ್ನು ಮಾತ್ರ ಲವ್‌ಕುಮಾರ್ ಅವರಿಗೆ ಕೊಟ್ಟಿದ್ದರು. ಉಳಿದ ಹಣ ನೀಡದೇ ವಂಚಿಸಿದ್ದಾರೆ. ಈ ಸಂಗತಿ ದೂರಿನಲ್ಲಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಯುವಕ ಆತ್ಮಹತ್ಯೆ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಕಟ್ಟಡವೊಂದರ 14ನೇ ಮಹಡಿಯಿಂದ ಜಿಗಿದು ಹೃತಿಕ್ ಈಶ್ವರ್ (21) ಎಂಬುವರು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಬಿಹಾರದ ಹೃತಿಕ್, ನಿರ್ಮಾಣ ಹಂತದ ಕಟ್ಟಡಗಳಲ್ಲಿ ಬಡಿಗೆ ಕೆಲಸ ಮಾಡುತ್ತಿದ್ದರು. ಆತ್ಮಹತ್ಯೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದೇವೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

‘ಮಾನ್ಯತಾ ಟೆಕ್ ಪಾರ್ಕ್ ಬಳಿ ಬಹುಮಹಡಿ ಕಟ್ಟಡ ನಿರ್ಮಿಸಲಾಗುತ್ತಿತ್ತು. ಅದೇ ಕಟ್ಟಡದ 14ನೇ ಮಹಡಿಗೆ ಹೋಗಿದ್ದ ಹೃತಿಕ್, ಅಲ್ಲಿಂದಲೇ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಬೆತ್ತಲೆ ವಿಡಿಯೊ ಸಂಗ್ರಹಿಸಿ ಬ್ಲ್ಯಾಕ್‌ಮೇಲ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಯುವತಿಯರ ಹೆಸರಿನಲ್ಲಿ ನಕಲಿ ಖಾತೆ ತೆರೆದು ಸಾರ್ವಜನಿಕರನ್ನು ಪರಿಚಯಿಸಿಕೊಂಡು ಬೆತ್ತಲೆಗೊಳಿಸಿ ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಜಾಲವನ್ನು ಸಿಐಡಿ ಸೈಬರ್ ಕ್ರೈಂ ಪೊಲೀಸರು ಭೇದಿಸಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಹರಿಯಾಣದ ಇಕ್ಬಾಲ್, ಮುಜಾಹೀದ್ ಹಾಗೂ ಆಸೀಫ್ ಬಂಧಿತರು. ರಾಜ್ಯದಲ್ಲಿ ಹೆಚ್ಚಾಗುತ್ತಿದ್ದ ವಂಚನೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಸೈಬರ್ ಕ್ರೈಂ ವಿಭಾಗದ ತಂಡ, ಹರಿಯಾಣಕ್ಕೆ ತೆರಳಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾಮಾಜಿಕ ಜಾಲತಾಣಗಳಲ್ಲಿ ಯುವತಿಯರ ಹೆಸರಲ್ಲಿ ನಕಲಿ ಖಾತೆ ತೆರೆಯುತ್ತಿದ್ದ ಆರೋಪಿಗಳು, ಸಾರ್ವಜನಿಕರನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು. ಯುವತಿಯರ ಹೆಸರಿನಲ್ಲಿ ಸಂದೇಶ ಕಳುಹಿಸುತ್ತಿದ್ದರು. ಅದರಿಂದ ಪ್ರಚೋದನೆಗೆ ಒಳಗಾದ ಜನ, ಮೈ ಮೇಲಿನ ಬಟ್ಟೆ ತೆಗೆದು ನಿಲ್ಲುತ್ತಿದ್ದರು. ಅದೇ ದೃಶ್ಯವನ್ನು ಚಿತ್ರೀಕರಿಸಿಕೊಳ್ಳುತ್ತಿದ್ದ ಆರೋಪಿಗಳು, ಸಾರ್ವಜನಿಕರಿಗೆ ಕಳುಹಿಸಿ ಹಣಕ್ಕೆ ಬೇಡಿಕೆ ಇರಿಸುತ್ತಿದ್ದರು. ಹಣ ನೀಡದಿದ್ದರೆ ಯೂಟ್ಯೂಬ್, ಫೇಸ್‌ಬುಕ್ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಬಿಡುವುದಾಗಿ ಬೆದರಿಸುತ್ತಿದ್ದರು’ ಎಂದೂ ತಿಳಿಸಿವೆ.

ಸಿಮ್ ಕಾರ್ಡ್ ಮಾರುತ್ತಿದ್ದ ಆರೋಪಿ: ‘ಆರೋಪಿ ಮುಜಾಹಿದ್, ಸಾರ್ವಜನಿಕರಿಗೆ ಸಿಮ್ ಕಾರ್ಡ್ ವಿತರಿಸುವ ಏಜೆನ್ಸಿ ಪಡೆದಿದ್ದ. ತನ್ನ ಬಳಿ ಸಿಮ್ ಖರೀದಿಸುತ್ತಿದ್ದ ಗ್ರಾಹಕರ ದಾಖಲೆಗಳನ್ನು ನಕಲು ಮಾಡಿ, ಅವರ ಹೆಸರಿನಲ್ಲೇ ಮತ್ತೊಂದು ಸಿಮ್ ಕಾರ್ಡ್ ಖರೀದಿಸಿ ವಂಚನೆಗೆ ಬಳಸುತ್ತಿದ್ದ. ಇದಕ್ಕೆ ಆಸೀಫ್ ಸಹಕರಿಸುತ್ತಿದ್ದ’ ಎಂದು ಮೂಲಗಳು ಹೇಳಿವೆ.

‘ಇನ್ನೊಬ್ಬ ಆರೋಪಿ ಇಕ್ಬಾಲ್, ಜೆರಾಕ್ಸ್ ಅಂಗಡಿ ಇಟ್ಟುಕೊಂಡಿದ್ದ. ನಕಲಿ ದಾಖಲೆಗಳನ್ನು ಸಿದ್ಧಪಡಿಸಲು ಮುಜಾಹಿದ್ ಹಾಗೂ ಆಸೀಫ್‌ಗೆ ಸಹಾಯ ಮಾಡುತ್ತಿದ್ದ. ಮೂವರು ಸೇರಿ ಇದುವರೆಗೂ 3,900 ಮಂದಿಗೆ ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಕರ್ನಾಟಕ ಹಾಗೂ ನೆರೆಯ ರಾಜ್ಯಗಳಲ್ಲೂ ಆರೋಪಿಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ’ ಎಂದೂ ತಿಳಿಸಿವೆ.

ಪೊಲೀಸರ ಕರ್ತವ್ಯಕ್ಕೆ ಅಡ್ಡಿ: ‘ಆರೋಪಿಗಳನ್ನು ಬಂಧಿಸಲು ಹೋದ ಸೈಬರ್ ಕ್ರೈಂ ಪೊಲೀಸರ ತಂಡದ ಮೇಲೆಯೇ ಸ್ಥಳೀಯರು ಹಲ್ಲೆಗೆ ಯತ್ನಿಸಿದ್ದರು. ಸ್ಥಳೀಯ ಪೊಲೀಸರ ನೆರವಿನಿಂದಾಗಿ ಆರೋಪಿಗಳನ್ನು ವಶಕ್ಕೆ ಪಡೆದು ರಾಜ್ಯಕ್ಕೆ ಕರೆತರುವಲ್ಲಿ ಸಿಐಡಿ ತಂಡ ಯಶಸ್ವಿಯಾಗಿದೆ’ ಎಂದೂ ಮೂಲಗಳು ಹೇಳಿವೆ.

ನಿಧನ ವಾರ್ತೆ

ಕೆ.ಎಸ್. ಶಾಂತಾರಾಮ್

ಬೆಂಗಳೂರು: ಪತ್ರಿಕೆಗಳ ಹವ್ಯಾಸಿ ಛಾಯಾಗ್ರಾಹಕ ಯಲಹಂಕದ ಕೆ.ಎಸ್. ಶಾಂತಾರಾಮ್ (84) ಅವರು ಶನಿವಾರ ನಿಧನರಾದರು.

ಅವರಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದರು.

ಶಾಂತಾರಾಮ್ ಇಚ್ಛೆಯಂತೆ ಅವರ ಪಾರ್ಥಿವ ಶರೀರವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾನ ಮಾಡಲಾಗಿದೆ.

ದಲಿತ ಉದ್ದಿಮೆದಾರರ ಸಂವಾದದಲ್ಲಿ ಕೇಂದ್ರ ಸಚಿವ ನಾರಾಯಣಸ್ವಾಮಿ ಪ್ರಶ್ನೆ

‘ಬಿಜೆಪಿಯಿಂದ ಮಂತ್ರಿಯಾದ ಮಾತ್ರಕ್ಕೆ ದಲಿತರಲ್ಲವೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯಿಂದ ಮಂತ್ರಿಯಾದ ಮಾತ್ರಕ್ಕೆ ದಲಿತ ಅಲ್ಲ ಎಂಬಂತೆ ಸಮುದಾಯ ನೋಡುತ್ತಿದೆ. ಈ ರೀತಿಯ ಮನಸ್ಥಿತಿ ಬದಲಾಗಬೇಕು’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ.ನಾರಾಯಣಸ್ವಾಮಿ ಹೇಳಿದರು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘ ಶನಿವಾರ ಆಯೋಜಿಸಿದ್ದ ದಲಿತ ಉದ್ದಿಮೆದಾರರ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘2 ವರ್ಷ 1 ತಿಂಗಳ ಕಾಲ ರಾಜ್ಯದಲ್ಲಿ ಸಮಾಜ ಕಲ್ಯಾಣ ಸಚಿವನಾಗಿ ಕಾರ್ಯ ನಿರ್ವಹಿಸಿದ್ದೇನೆ. ಆ ವೇಳೆ ದಲಿತ ಸಂಘಟನೆಗಳು ನನ್ನ ಬಳಿ ಬರಲೇ ಇಲ್ಲ. ಬಿಜೆಪಿಯಿಂದ ಮಂತ್ರಿಯಾದ ಕೂಡಲೇ ನಾನು ದಲಿತನಲ್ಲವೇ’ ಎಂದು ಪ್ರಶ್ನಿಸಿದರು.

‘ಮನಸ್ಥಿತಿ ಬದಲಾಗದಿದ್ದರೆ ಸಮುದಾಯದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಈ ಬಗ್ಗೆ ಮುಕ್ತವಾಗಿ ಚರ್ಚೆ ಆಗಬೇಕು. ಇಡೀ ದೇಶದ ದಲಿತರನ್ನು ರಕ್ಷಿಸುವ ಜವಾಬ್ದಾರಿಯುತ ವ್ಯಕ್ತಿ ನಾನು. ದಲಿತ ಹೋರಾಟಗಾರನಾಗಿ ಮಾತನಾಡುವುದು ಹೇಗೆ, ಮಂತ್ರಿಯಾಗಿ ಮಾತನಾಡುವುದು ಹೇಗೆ ಎಂಬುದು ಗೊತ್ತಿದೆ’ ಎಂದರು.

ಸಚಿವ ಎ.ನಾರಾಯಣಸ್ವಾಮಿ ಅವರಿಗೆ ಸಂಘದ ಪರವಾಗಿ ಎಲ್.ಹನುಮಂತಯ್ಯ ಮನವಿ ಸಲ್ಲಿಸಿದರು. ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಎನ್.ನಾಗಾಂಬಿಕಾದೇವಿ, ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸನ್, ಆದರ್ಶ ಯಲ್ಲಪ್ಪ, ಶಾಸಕ ಎನ್.ಮಹೇಶ್ ಇದ್ದರು ಪ್ರಜಾವಾಣಿ ಚಿತ್ರ

‘ಕೆಲವರು 60 ವರ್ಷಗಳ ಕಾಲ ಈ ಸಮಾಜಕ್ಕೆ ದುಡಿದಿದ್ದೇವೆ ಎಂದು ಹೇಳುತ್ತಾರೆ. ದಲಿತರ ಪರಿಸ್ಥಿತಿ ಬದಲಾಗಿಲ್ಲ. ಆ ನಿಟ್ಟಿನಲ್ಲಿ ಪ್ರಯತ್ನಗಳೇ ನಡೆದಿಲ್ಲ’ ಎಂದು ಹೇಳಿದರು.

ದಲಿತ ಯುವಕರಿಗೆ ಉದ್ಯಮದಲ್ಲಿ ತೊಡಗಿಕೊಳ್ಳುವ ಬಗ್ಗೆ ಮಾಹಿತಿ ಇಲ್ಲ. ಉದ್ದಿಮೆದಾರರ ಸಂಘ ಜಿಲ್ಲಾ ಮಟ್ಟದಲ್ಲಿ ವಿಚಾರ ಸಂಕಿರಣಗಳನ್ನು ನಡೆಸಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ರಾಜ್ಯಸಭಾ ಸದಸ್ಯ ಡಾ.ಎಲ್. ಹನುಮಂತಯ್ಯ ಮಾತನಾಡಿ, ‘ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಅದೇ ಮಾದರಿಯಲ್ಲಿ ದಲಿತ ಉದ್ದಿಮೆದಾರರಿಗೂ ಸರ್ಕಾರ ಸಾಲ ನೀಡಬೇಕು’ ಎಂದು ಮನವಿ ಮಾಡಿದರು.

ಶಾಸಕ ಎನ್.ಮಹೇಶ್ ಮಾತನಾಡಿ, ‘ದಲಿತರ ಸ್ಥಿತಿಯನ್ನು ಹಾಗೇ ಉಳಿಸಿ ಈ ದೇಶವನ್ನು ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಮೇಲೆತ್ತದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವ ಹೃದಯವಂತಿಕೆ ಅಧಿಕಾರಿ ವರ್ಗಕ್ಕೂ ಇರಬೇಕು’ ಎಂದು ಹೇಳಿದರು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸನ್, ಸಮಾಜ ಕಲ್ಯಾಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ನಾಗಾಂಬಿಕಾದೇವಿ ಇದ್ದರು.

ನಗರದಲ್ಲಿ ಇಂದು

ಪ್ರೊ.ಎಚ್.ಆರ್.ರಾಮಕೃಷ್ಣರಾವ್ ಅವರ ಆತ್ಮಕಥೆ ‘ಅಂಬಿಗಾ! ದಡ ಹಾಯಿಸು’ ಗ್ರಂಥ ಬಿಡುಗಡೆ ಕಾರ್ಯಕ್ರಮ: ಗ್ರಂಥ ಪರಿಚಯ ಹಾಗೂ ಲೋಕಾರ್ಪಣೆ: ಪ್ರಸಾರ ಭಾರತಿ ವಿಶ್ರಾಂತ ಉಪ ಮಹಾನಿರ್ದೇಶಕ ಎಚ್.ಆರ್.ಕೃಷ್ಣಮೂರ್ತಿ, ಅಧ್ಯಕ್ಷತೆ: ಅಮೆರಿಕದ ಕಂಪ್ಯೂಟರ್ ವಿಜ್ಞಾನ ಪ್ರಾಧ್ಯಾಪಕ ಎಸ್.ಎಸ್.ಅಯ್ಯಂಗಾರ್, ಆಯೋಜನೆ: ಉದಯಭಾನು ಉನ್ನತ ಅಧ್ಯಯನ ಕೇಂದ್ರ, ವಿಜ್ಞಾನ –ತಂತ್ರಜ್ಞಾನ ಅಧ್ಯಯನಾಂಗ, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಬೆಳಿಗ್ಗೆ 10

ನಂದಿನಿ ಹೆದ್ದುರ್ಗ ಅವರ ‘ರತಿಯ ಕಂಬನಿ’ ಕವನ ಸಂಕಲನ ಬಿಡುಗಡೆ: ಎಚ್.ಎಲ್.ಪುಷ್ಪಾ, ಕೃತಿ ಪರಿಚಯ: ಬಿ.ಎಂ.ಹನೀಫ್, ಅಧ್ಯಕ್ಷತೆ: ಬಿ.ಆರ್. ಲಕ್ಷ್ಮಣರಾವ್, ಆಯೋಜನೆ: ವಿಕಾಸ ಪ್ರಕಾಶನ, ಸ್ಥಳ: ಎಂವಿಸೀ ಸಭಾಂಗಣ, ಬಿ.ಎಂ. ಶ್ರೀ.ಪ್ರತಿಷ್ಠಾನ, ಎನ್. ಆರ್.ಕಾಲೊನಿ, ಬೆಳಿಗ್ಗೆ 10.30



ಬಿ.ಆರ್. ಲಕ್ಷ್ಮಣರಾವ್

ಶ್ರೀ ಸಾಮಾನ್ಯ ಕನ್ನಡಿಗ–ಕನ್ನಡತಿ ಕಾರ್ಯಕ್ರಮ: ಮುಖ್ಯ ಅತಿಥಿ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಆಹ್ವಾನಿತರು: ಸಂಗೀತ ನಿರ್ದೇಶಕ ವಿ.ಮನೋಹರ್, ಅಧ್ಯಕ್ಷತೆ: ಇಂಡಿಯಾ ಆಯುರ್ವೇದ ಫೌಂಡೇಷನ್ ಅಧ್ಯಕ್ಷ ಡಾ.ಸಿ.ಎ.ಕಿಶೋರ್, ಆಯೋಜನೆ: ಕನಕಪುರ ರಸ್ತೆ ಕನ್ನಡ ಬಳಗ, ಸ್ಥಳ: ಎಸ್.ಎಂ.ಕಲ್ಯಾಣ ಮಂಟಪ, ಜರಗನಹಳ್ಳಿ, ಬೆಳಿಗ್ಗೆ 10.30

ಟಿ.ಎಸ್. ನಾಗಾಭರಣ

ಎಚ್.ವಿ.ವೆಂಕಟಸುಬ್ಬಯ್ಯ ಅವರಿಗೆ ‘ರಂಗ ಗೌರವ’ ಮತ್ತು ಆರ್.ನಾಗೇಶ್ ರಂಗವಿಹಂಗಮ ಪುಸ್ತಕ ಬಿಡುಗಡೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಭಾಗವಹಿಸುವವರು: ಶ್ರೀನಿವಾಸ ಜಿ.ಕಪ್ಪಣ್ಣ, ಜೆ.ಲೋಕೇಶ್, ಬಿ.ವಿ. ರಾಜಾರಾಂ, ಕೆ.ವಿ.ನಾಗರಾಜಮೂರ್ತಿ, ಶಶಿಧರ ಭಾರಿಘಾಟ್, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ರಂಗಸಂಪದ, ಕಲಾಗಂಗೋತ್ರಿ, ರಂಗಚಂದಿರ, ಭಾಗವತರು, ಸ್ಥಳ: ಸಿ.ಅಶ್ವತ್ಥ್ ಕಲಾಸೌಧ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ಕೆ.ನಟರಾಜ್ ಅವರ 5 ಪುಸ್ತಕಗಳ ಬಿಡುಗಡೆ ಸಮಾರಂಭ: ಭಾಗವಹಿಸುವವರು: ಪ್ರೊ.ಎಸ್. ಚಂದ್ರಶೇಖರ್, ಪ್ರೊ.ನಾ ದಾಮೋದರ ಶೆಟ್ಟಿ, ಎಲ್.ಎನ್.ಮುಕುಂದ ರಾಜ್, ಅಧ್ಯಕ್ಷತೆ: ಕವಿ ಡುಂಡಿರಾಜ್, ಆಯೋಜನೆ: ಕಪ್ಪಣ್ಣ ಅಂಗಳ, ಸ್ಥಳ: ಐ.ಟಿ.ಐ.ಕಾಲೊನಿ, ಜೆ.ಪಿ.ನಗರ 1ನೇ ಹಂತ, ಬೆಳಿಗ್ಗೆ 10.30

ಪೆರಿಯಾರ್ ಇ.ವಿ.ರಾಮಸ್ವಾಮಿ ಜನ್ಮದಿನಾಚರಣೆ ಪ್ರಯುಕ್ತ ‘ಪೆರಿಯಾರ್ ಹೋರಾಟದ ಕಿಡಿ ಇಂದಿಗೂ ಜೀವಂತ ಹಾಗೂ ಪ್ರಸ್ತುತ’ ಕುರಿತು ಉಪನ್ಯಾಸ: ಚಿಂತಕಿ ಕಲ್ಪೆ ಸೆಲ್ವಿ, ಅಧ್ಯಕ್ಷತೆ: ಎ.ಎಸ್. ನಟರಾಜ್, ಆಯೋಜನೆ: ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್ (ಆನ್‌ಲೈನ್ ಕಾರ್ಯಕ್ರಮ), ಬೆಳಿಗ್ಗೆ 11

‘ತೇಜಸ್ವಿ ಜೀವಲೋಕ–9, ಕುರಿಂಜಿ ಲೋಕ’ ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮ: ಆಯೋಜನೆ: ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಪೀಣ್ಯ ಕೈಗಾರಿಕಾ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ, ಬೆಳಿಗ್ಗೆ 11



ಪೂರ್ಣಚಂದ್ರ ತೇಜಸ್ವಿ

ಜೇಡಿ ಮರ ವೃತ್ತದ ಬಳಿ ಗಿಡ ನೆಡುವ ಕಾರ್ಯಕ್ರಮ: ಭಾಗವಹಿಸುವವರು: ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ, ಬಿ.ರೆಡ್ಡಿ ಶಂಕರ್ ಬಾಬು, ಜೆ.ಮಂಜುನಾಥ್, ಎಸ್.ಕೆ.ನಟರಾಜ್, ಪ್ರಕಾಶ್ ಬೆಳವಾಡಿ, ಆಯೋಜನೆ: ಪ್ರಾಜೆಕ್ಟ್ ವೃಕ್ಷ ಫೌಂಡೇಷನ್ ಮತ್ತು ಬಿಬಿಎಂಪಿ ಅರಣ್ಯ ವಿಭಾಗ, ಸ್ಥಳ: ಶಾಪರ್ಸ್ ಸ್ಟಾಪ್, ವೆಗಾಸಿಟಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಲೇಖಕಿ ಬಿ.ಟಿ.ಲಲಿತಾ ನಾಯಕ್ ಅವರ ಹೋರಾಟದ ಬದುಕಿಗೆ 75 ವಸಂತಗಳು ತುಂಬುವ ಸಲುವಾಗಿ ‘ಕವಿಗೋಷ್ಠಿ’: ಅಧ್ಯಕ್ಷತೆ: ಚಿಂತಕ ಎಸ್.ಜಿ.ಸಿದ್ದರಾಮಯ್ಯ, ಆಯೋಜನೆ: ಬಂಜಾರ ಸಾಹಿತಿ ಮತ್ತು ಕಲಾವಿದರ ವೇದಿಕೆ ಹಾಗೂ ಬಿ.ಟಿ.ಲಲಿತಾ ನಾಯಕ್ ಅಭಿಮಾನಿಗಳು ಮತ್ತು ಹಿತೈಷಿಗಳ ಬಳಗ, ಸ್ಥಳ: ಶಾಸ್ತ್ರಿ ಮೆಮೋರಿಯಲ್ ಹಾಲ್, ರಾಜಮಹಲ್ ವಿಲಾಸ್ 2ನೇ ಹಂತ, ಕಲ್ಪನಾ ಚಾವ್ಲಾ ರಸ್ತೆ, ಸಂಜಯನಗರ, ಬೆಳಿಗ್ಗೆ 11.30

ಬಿ.ಟಿ.ಲಲಿತಾ ನಾಯಕ್

ದಾಸವಾಣಿ ಉತ್ಸವ ಸಮಾರೋಪ: ಮುಖ್ಯ ಅತಿಥಿ: ಗಾಯಕ ಶಂಕರ್ ಶಾನ್‌ಭೋಗ್, ಉಪಸ್ಥಿತಿ: ಸವಿಗಾನ ಲಹರಿ ಅಧ್ಯಕ್ಷ ರಾಜಾರಾಮ್, ಶ್ರುತಿ ಸಂಗೀತ ವಿದ್ಯಾಲಯದ ಅಧ್ಯಕ್ಷೆ ಅನುಪಮಾ ರಾವ್, ಆಯೋಜನೆ: ಭಾವಸಾಗರ, ಸ್ಥಳ: ಜ್ಞಾನಸೌಧ, ಮೂಡಲಪಾಳ್ಯ, ಶಕ್ತಿಗಾರ್ಡನ್, ಸಂಜೆ 5

ರಿಷಿಕಾ ರೆಡ್ಡಿ ರಂಗಪ್ರವೇಶದ ಪ್ರಯುಕ್ತ ಸಿ.ರಾಧಾಕೃಷ್ಣ ಮತ್ತು ಮಾಲಾ ಶಶಿಕಾಂತ್ ಅವರಿಂದ ಗುರು ಚರಣಾಮೃತ ಕಾರ್ಯಕ್ರಮ ಪ್ರಸ್ತುತಿ: ಭಾಗವಹಿಸುವವರು: ಕೊರಟಗೆರೆ ತಾಲ್ಲೂಕಿನ ನರಸಿಂಹಗಿರಿ ಸುಕ್ಷೇತ್ರ, ಎಲೆರಾಂಪುರ ಸಂಸ್ಥಾನಮಠದ ಹನುಮಂತನಾಥ ಸ್ವಾಮೀಜಿ, ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 6

ರಿಷಿಕಾ ರೆಡ್ಡಿ

ವಿದ್ಯುನ್ಮಾನ, ಐ.ಟಿ - ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ಎಲಿವೇಟ್ ನವೋದ್ಯಮಗಳಿಗೆ ಆಹ್ವಾನ

ಭಾರತದ ಪ್ರಪ್ರಥಮ ಸಮಗ್ರ ವಾಣಿಜ್ಯೋದ್ಯಮ ವೇದಿಕೆ

ವಾಣಿಜ್ಯೋದ್ಯಮವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಸಲುವಾಗಿ ಕರ್ನಾಟಕ ಸರ್ಕಾರವು ಅತ್ಯಂತ ನಾವೀನ್ಯತೆಯುಳ್ಳ ನವೋದ್ಯಮಗಳನ್ನು ಹುಡುಕುತ್ತಿದೆ.

ಎಲಿವೇಟ್ 2021 (ಕರ್ನಾಟಕ ನವೋದ್ಯಮ ನೀತಿ 2015-2020ರಂತೆ ನವೋದ್ಯಮಗಳಿಗೆ Idea2PoC ಅನುದಾನ)

ಎಲಿವೇಟ್ ಉನ್ನತಿ (ಪ.ಜಾತಿ / ಪ.ವರ್ಗದ ನವೋದ್ಯಮಗಳಿಗೆ Idea2PoC ಅನುದಾನ)

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30 ಸಂಜೆ 5.00 ಗಂಟೆಯವರೆಗೆ ವಿಸ್ತರಿಸಲಾಗಿದೆ

ಕೊನೆಯ 11 ದಿನಗಳು

ಹೆಚ್ಚಿನ ಮಾಹಿತಿಗಾಗಿ 080-22231007 ಗೆ ಸಂಪರ್ಕಿಸಿ ಅಥವಾ ಹೆಚ್ಚಿನ ವಿವರಗಳಿಗೆ ಇಮೇಲ್ ಕಳುಹಿಸಿ elevate-ktech@ka.gov.in

Idea2poc ಗ್ರ್ಯಾಂಟ್ 2021 ಗೆ ಅರ್ಜಿ ಸಲ್ಲಿಸಲು

ಅರ್ಜಿ ಸಲ್ಲಿಸಲು ಮತ್ತು ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ www.missionstartupkarnataka.org/elevate2021

K-tech | STARTUP KARNATAKA | INNOVATE KARNATAKA Department of IT-BT and S&T

ಹೆಸರಘಟ್ಟ ಮುಖ್ಯರಸ್ತೆಯಲ್ಲಿ ತೋಡಿದ್ದ ಗುಂಡಿಯಲ್ಲಿ ಬಿದ್ದು ಅವಘಡ

ದ್ವಿಚಕ್ರ ವಾಹನ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಜಲಮಂಡಳಿಯ ಕಾಮಗಾರಿ ಸಲುವಾಗಿ ತೋಡಿದ್ದ ಗುಂಡಿಯಲ್ಲಿ ಬಿದ್ದು ದ್ವಿಚಕ್ರ ವಾಹನ ಸವಾರ ಆನಂದಪ್ಪ (47) ಎಂಬುವರು ಮೃತಪಟ್ಟಿದ್ದು, ಈ ಬಗ್ಗೆ ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನಂದಪ್ಪ

‘ಬಾಗಲಗುಂಟೆ ನಿವಾಸಿ ಆನಂದಪ್ಪ, ಬಟ್ಟೆ ತೊಳೆಯುವ ಯಂತ್ರ ದುರಸ್ತಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರು ಶುಕ್ರವಾರ ರಾತ್ರಿ 1 ಗಂಟೆ ಸುಮಾರಿಗೆ ಕೆಲಸ ಮುಗಿಸಿ ದ್ವಿಚಕ್ರ ವಾಹನದಲ್ಲಿ ಮನೆಗೆ ಮರಳುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘8ನೇ ಮೈಲಿಯಿಂದ ಹೆಸರಘಟ್ಟಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಹಲವೆಡೆ ಜಲಮಂಡಳಿಯ ಕಾಮಗಾರಿಗಾಗಿ ಗುಂಡಿಗಳನ್ನು ತೋಡಲಾಗಿತ್ತು. ಇಲ್ಲಿನ ದೊಡ್ಡ ಗಾತ್ರದ ಗುಂಡಿಗಳು ಅಪಾಯಕ್ಕೆ ಆಹ್ವಾನ ನೀಡುವಂತಿದ್ದವು. ಗುಂಡಿ ಸುತ್ತಮುತ್ತ ಬ್ಯಾರಿಕೇಡ್ ಸಹ ನಿಲ್ಲಿಸಲಾಗಿತ್ತು. ಆದರೆ, ವಾಹನ ಸವಾರರು ಗುಂಡಿಗೆ ಬೀಳುವುದನ್ನು ತಪ್ಪಿಸಲು ಇದು ಸಾಲುತ್ತಿರಲಿಲ್ಲ’ ಎಂದೂ ಮೂಲಗಳು ತಿಳಿಸಿವೆ.

ಗುಂಡಿಗೆ ಬಿದ್ದು ತಲೆಗೆ ಪೆಟ್ಟು: ‘ಆನಂದಪ್ಪ ಅವರು ಸಾಗುತ್ತಿದ್ದ ದ್ವಿಚಕ್ರ ವಾಹನವು ಗುಂಡಿ ಬಳಿ ಉರುಳಿ ಬಿದ್ದ ಪರಿಣಾಮ, ಅವರು ವಾಹನದಿಂದ ಗುಂಡಿಯೊಳಗೆ ಬಿದ್ದಿದ್ದರು. ಅವರ ಮೇಲೆಯೇ ವಾಹನವೂ ಬಿದ್ದಿತ್ತು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ವಾಹನ ಹಾಗೂ ಆನಂದಪ್ಪ ಅವರನ್ನು ಕಂಡ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಪ್ರಜ್ಞೆ ತಪ್ಪಿದ್ದ ಆನಂದಪ್ಪ ಅವರನ್ನು ಸಪ್ತಗಿರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಘಟನೆ ಬಗ್ಗೆ ಕುಟುಂಬದವರು ದೂರು ನೀಡಿದ್ದು, ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಕರೆ ಸ್ವೀಕರಿಸದ ಆನಂದಪ್ಪ: ‘ಆನಂದಪ್ಪ ಅವರಿಗೆ ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಆನಂದಪ್ಪ ಅವರು ಮನೆಗೆ ಬಾರದಿದ್ದರಿಂದ ಗಾಬರಿಗೊಂಡ ಕುಟುಂಬದವರು, ಅವರ ಮೊಬೈಲ್‌ಗೆ ಕರೆ ಮಾಡಿದ್ದರು. ಯಾವುದೇ ಸ್ಪಂದನೆ ಸಿಕ್ಕಿರಲಿಲ್ಲ’ ಎಂದೂ ಸಂಬಂಧಿಕರೊಬ್ಬರು ಹೇಳಿದರು.

ಅವಘಡ ಸಂಭವಿಸಿದ್ದ ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ ಗುಂಡಿ

‘ಬೆಳಿಗ್ಗೆ ಪುನಃ ಕರೆ ಮಾಡಿದಾಗ ಪೊಲೀಸರು ಮಾತನಾಡಿದರು. ಆನಂದಪ್ಪ ಮೃತಪಟ್ಟಿದ್ದು, ಸಪ್ತಗಿರಿ ಆಸ್ಪತ್ರೆಗೆ ಬರುವಂತೆ ಹೇಳಿದ್ದರು. ಮರಣೋತ್ತರ ಪರೀಕ್ಷೆ ಮುಗಿಸಿ ಶನಿವಾರ ಮೃತದೇಹ ಹಸ್ತಾಂತರಿಸಿದ್ದಾರೆ’ ಎಂದೂ ತಿಳಿಸಿದರು.

'ಆನಂದಪ್ಪ ಅವರ ಸಾವಿಗೆ ಜಲಮಂಡಳಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ನಿರ್ಲಕ್ಷ್ಯವೇ ಕಾರಣ. ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದೂ ಸಂಬಂಧಿಕರು ಒತ್ತಾಯಿಸಿದರು.

‘ಎರಡು ತಿಂಗಳುಗಳಿಂದ ಕಾಮಗಾರಿ’

‘ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಎರಡು ತಿಂಗಳಿನಿಂದ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಡೆಯುತ್ತಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ ಕಾಮಗಾರಿ ಸ್ಥಳದ ಸುತ್ತಲೂ ಬ್ಯಾರಿಕೇಡ್ ಸಹ ಅಳವಡಿಸಲಾಗಿತ್ತು’ ಎಂದು ಜಲಮಂಡಳಿ ಅಧಿಕಾರಿಯೊಬ್ಬರು ಹೇಳಿದರು.

‘ಆನಂದಪ್ಪ ಅವರು ದ್ವಿಚಕ್ರ ವಾಹನದಲ್ಲಿ ವೇಗವಾಗಿ ಬಂದು ಬ್ಯಾರಿಕೇಡ್‌ಗೆ ಗುದ್ದಿ, ಗುಂಡಿಯೊಳಗೆ ಬಿದ್ದಿದ್ದ ಮಾಹಿತಿ ಇದೆ. ಘಟನೆ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಪ್ರತಿಕ್ರಿಯಿಸಲಾಗುವುದು’ ಎಂದೂ ಅವರು ತಿಳಿಸಿದರು.

ಪಾನಮತ್ತರಾಗಿ ಚಾಲನೆ 46 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ಪಾನಮತ್ತರಾಗಿ ವಾಹನ ಚಲಾಯಿಸುತ್ತಿದ್ದ 46 ಮಂದಿಯನ್ನು ಸಂಚಾರ ಪೊಲೀಸರು ನಗರದಲ್ಲಿ ಶುಕ್ರವಾರ ರಾತ್ರಿ ವಿಶೇಷ ಕಾರ್ಯಾಚರಣೆ ಸಂದರ್ಭದಲ್ಲಿ ಪತ್ತೆ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಕೋವಿಡ್ ನಿಯಂತ್ರಣದ ಸಲುವಾಗಿ ಒಂದೂವರೆ ವರ್ಷದಿಂದ ತಪಾಸಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಇದನ್ನೇ ದುರುಪಯೋಗಪಡಿಸಿಕೊಂಡ ಹಲವರು, ಪಾನಮತ್ತರಾಗಿ ಚಾಲನೆ ಮಾಡುತ್ತಿದ್ದ ಸಂಗತಿ ಗಮನಕ್ಕೆ ಬಂತು. ಇದರಿಂದ ಅಪಘಾತಗಳು ಹೆಚ್ಚಾಗಿದ್ದವು. ಹೀಗಾಗಿ, ವಿಶೇಷ ಕಾರ್ಯಾಚರಣೆ ನಡೆಸಬೇಕಾಯಿತು’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದರು.

‘ನಗರದ 44 ಸಂಚಾರ ಠಾಣೆಗಳ ವ್ಯಾಪ್ತಿಯಲ್ಲಿ ರಾತ್ರಿ 9.30ರಿಂದ 12.30ರವರೆಗೆ ವಾಹನಗಳ ತಪಾಸಣೆ ನಡೆಸಲಾಯಿತು. ಮದ್ಯ ಕುಡಿದು ಚಾಲನೆ ಮಾಡುತ್ತಿದ್ದ ಅನುಮಾನದಡಿ ಹಲವರನ್ನು ವಶಕ್ಕೆ ಪಡೆದು ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. 44 ಮಂದಿ ಮದ್ಯ ಕುಡಿದಿದ್ದುದು ವರದಿಯಲ್ಲಿ ದೃಢಪಟ್ಟಿದೆ.’ ‘ವಾಹನಗಳನ್ನು ಜಪ್ತಿ ಮಾಡಿ, ದಂಡ ಪಾವತಿಸಲು ನ್ಯಾಯಾಲಯಕ್ಕೆ ದೋಷಾರೋಪ ಸಲ್ಲಿಸಲಾಗಿದೆ. 46 ಮಂದಿಯ ಚಾಲನಾ ಪರವಾನಗಿಯನ್ನು (ಡಿ.ಎಲ್) ರದ್ದುಪಡಿಸುವಂತೆ ಸಾರಿಗೆ ಇಲಾಖೆಗೂ ಪತ್ರ ಬರೆಯಲಾಗಿದೆ’ ಎಂದೂ ಅವರು ತಿಳಿಸಿದರು.

‘ವಿವಿಧ ಕಡೆ ಸಂಚಾರ ನಿಯಮ ಉಲ್ಲಂಘಿಸಿದ್ದ 1,408 ಮಂದಿ ವಿರುದ್ಧ ಕಾರ್ಯಾಚರಣೆ ವೇಳೆಯಲ್ಲೇ ದಂಡ ವಿಧಿಸಲಾಗಿದೆ’ ಎಂದೂ ಹೇಳಿದರು.

ಇಬ್ಬರ ಬಂಧನ: ಬಳ್ಳಾರಿ ರಸ್ತೆಯಲ್ಲಿ ಬೈಕ್ ವ್ಹೀಲಿಂಗ್ ಮಾಡುತ್ತಿದ್ದ ಆರೋಪದಡಿ ಫಯಾಸ್ ಖಾನ್ ಹಾಗೂ ಮಹಮ್ಮದ್ ಆದಿಲ್ ಬೇಗ್ ಎಂಬುವರನ್ನೂ ಬಂಧಿಸಲಾಗಿದೆ ಎಂದು ರವಿಕಾಂತೇಗೌಡ ಮಾಹಿತಿ ನೀಡಿದರು.

ತಾಂತ್ರಿಕ ದೋಷ ರನ್‌ವೇನಲ್ಲಿ ನಿಂತ ವಿಮಾನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶನಿವಾರ ದೆಹಲಿಗೆ ಹೊರಡಲು ರನ್‌ವೇಗೆ ಬಂದಿದ್ದ ಏರ್ ಇಂಡಿಯಾ ಎಐ 505 ವಿಮಾನದಲ್ಲಿ ತಾಂತ್ರಿಕ ದೋಷ ಕಂಡು ಬಂದಿದೆ. ಇದರಿಂದ, ವಿಮಾನ ರನ್ ವೇನಲ್ಲಿ ನಿಂತಿದ್ದರಿಂದ ಭಾರೀ ಅನಾಹುತ ತಪ್ಪಿದೆ.

ವಿಮಾನ ಟೇಕ್ ಆಫ್ ಸಮಯದಲ್ಲಿ ಮುಂಭಾಗದ ಚಕ್ರ ಜಾಮ್ ಆಗಿದ್ದರಿಂದ ತಾಂತ್ರಿಕ ದೋಷ ಕಂಡು ಬಂದಿತು. ಹೊಸ ರನ್ ವೇ ಮೂಲಕ ವಿಮಾನಗಳ ಹಾರಾಟ ಮತ್ತು ಲ್ಯಾಂಡಿಂಗ್‌ಗೆ ಅವಕಾಶ ಮಾಡಿಕೊಡಲಾಗಿದೆ.

RR ನಗರ್, ಬೆಂಗಳೂರು ಷೋರೂಂಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ.

GRT JEWELLERS Since 1964

ಸ್ಥಾನ	ಕನಿಷ್ಠ ಅರ್ಹತೆ	ವಯಸ್ಸು
ಸೇಲ್ಸ್‌ಮನ್	10ನೇ ತರಗತಿ, PUC ಅಥವಾ ಪದವೀಧರರು	22 ರಿಂದ 27
ಸೇಲ್ಸ್‌ಗರ್ಲ್ಸ್	10ನೇ ತರಗತಿ, PUC ಅಥವಾ ಪದವೀಧರರು	22 ರಿಂದ 27
ಸೇಲ್ಸ್ ಅಸಿಸ್ಟೆಂಟ್ಸ್	10ನೇ ತರಗತಿ, PUC (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು)	17 ರಿಂದ 22

ದಿನಾಂಕ ಮತ್ತು ಸಮಯ:

20-09-2021, ಸೋಮವಾರ, 21-09-2021, ಮಂಗಳವಾರ (10.00 AM to 5.00 PM)

Email: recruitment@grtjewels.com

ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು. ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.

ಇತರೆ ಪ್ರಾಂತ್ಯಗಳವರಿಗೆ ಊಟ ಮತ್ತು ವಸತಿ ಸೌಲಭ್ಯ ಒದಗಿಸಲಾಗುತ್ತದೆ.

ಸ್ಥಳ :

ಹೋಟೆಲ್ ರಾಯಲ್ ಇಂದ್ರಪ್ರಸ್ಥ

202, 4ನೇ ಹಂತ, BEML ಲೇಔಟ್, ಕಾರ್ಯಪ್ಪ ಪಾರ್ಕ್ ಎದುರು, ರಾಜ ರಾಜೇಶ್ವರಿ ನಗರ, RR ನಗರ ಪೊಲೀಸ್ ಠಾಣೆ ಹತ್ತಿರ, ಬೆಂಗಳೂರು – 560 098.

ಸಂಪರ್ಕ ಸಂಖ್ಯೆಗಳು : 96869 05786, 96867 99888

ಶಿರಸಿ: ಅ.3ರಂದು ಸಮ್ಮೇಳನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ ಒಂಬತ್ತನೇ ಸಮ್ಮೇಳನ ಅ. 3ರಂದು ಶಿರಸಿಯ ರುದ್ರದೇವರಮಠದ ಸಭಾಂಗಣದಲ್ಲಿ ಜರುಗಲಿದೆ ಎಂದು ಪರಿಷತ್ತಿನ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಬಸವ ರಮಾನಂದ ಸ್ವಾಮೀಜಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ವನಕಲ್ಲ ಮಲ್ಲೇಶ್ವರ ಮಹಾಸಂಸ್ಥಾನ ಮಠದ ಬಸವ ರಮಾನಂದ ಸ್ವಾಮೀಜಿ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ನಿಕಟ ಪೂರ್ವ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಚುಟುಕು ಸಾಹಿತ್ಯದಲ್ಲಿ ಕವಿಗೋಷ್ಠಿ, ವಿಚಾರಗೋಷ್ಠಿ, ಪ್ರತಿಭಾ ಪುರಸ್ಕಾರ, ಚುಟುಕು ವಾಚನ ಸ್ಪರ್ಧೆಗಳು ಜರುಗಲಿದ್ದು, ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು. ಆಸಕ್ತರು ಸೆ. 22ರ ಒಳಗೆ 9482181305 ಸಂಪರ್ಕಿಸಿ ಹೆಸರು ನೋಂದಾಯಿಸಬೇಕು ಎಂದು ಪರಿಷತ್ತಿನ ಪ್ರಸಾರಾಂಗ ವಿಭಾಗದ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ತಿಳಿಸಿದ್ದಾರೆ.

MBBS

Ministry Of Health Of Russia

SMOLENSK STATE MEDICAL UNIVERSITY, RUSSIA

Invites Indian students for direct Government Admissions

Recognized by India, WHO, USA & UK, Min. Qual. 50% in XII in PCB

UNIVERSITY - Founded in 1920, 101 years old, Smolensk is 380 km west of Moscow, Very high standards of education, strict disciplinary system. **1500** Indian students (**650** Girls) studying, **167** got degree in **2021,** English Medium in all years, Closed type campus system, **8** attached hospitals (**6000** Beds).

MCI SCREENING TEST – Our graduates of **2008** to **2020** have given **BEST** results among graduates of all foreign medical colleges (Official web sites of Indian Embassy, Moscow and National Board of Examination, New Delhi who conducts MCI Screening Test confirm this).

SPECIAL HOSTELS ONLY FOR INDIAN STUDENTS WITH INDIAN MESS

Fee (Tuition+Hostel+Med.Ins.) – **USD 6000** (Approx. Rs. 4,50,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.

Scholarship to all Indian students.

Bank loans from Indian banks are available.

Contact Foreign advisor to Chancellor: Dr.Alok Aeron+79605805555(Russia)

Official web site: www.sgmu.info DM us on insta: @sgmu.info

Admission details: admission.sgmu.live

INFORMATION CENTERS (Parents of Students or Our Graduates):

Bangalore & Manglore: Mrs. Sudha Kamath - 9740622038

Chitradurga: Mr. R. Venkatashiva – 9448839235

Mysore: Dr. Mothukar – 8105616675, Mr. Ganesh S. - 8073709996

Hubli-Dharwad & Belgavi: Dr. Suchita Halli - 9916187559

Karwar: Mrs. Bhat – 8884057559; **Hassan:** Ms. Nayana B.R. – 9606265744

ರೇರಾ (RERA)- ಸಾರ್ವಜನಿಕರ ನಂಬಿಕೆ ಮತ್ತು ಪಾರದರ್ಶಕತೆಯ ಆಧಾರಸ್ತಂಭ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ವಿ. ಸೋಮಣ್ಣ
ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

- ರೇರಾ – ರಿಯಲ್ ಎಸ್ಟೇಟ್ ವಲಯದಲ್ಲ ಆರೋಗ್ಯಕರ / ಸ್ಪರ್ಧಾತ್ಮಕ ಬೆಳವಣಿಗೆ, ಪಾರದರ್ಶಕತೆ ಹಾಗೂ ಪರಿಣಾಮಕಾರಿಯಾಗಿ ಪ್ರಕ್ರಿಯೆಗಳ ಮೂಲಕ ಅಭಿವೃದ್ಧಿ ಮತ್ತು ನಿಯಂತ್ರಿಸುವುದು. ನಿವೇಶನ / ಮನೆ / ವಾಣಿಜ್ಯ ಮಳಿಗೆ ಖರೀದಿಸುವ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕೇಂದ್ರ ಕಾಯ್ದೆ 2016 ರನ್ವಯ, ರಾಜ್ಯ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಪ್ರಾಧಿಕಾರವನ್ನು 2017 ರಲ್ಲಿ ಸ್ಥಾಪಿಸಿದೆ.
- ರಿಯಲ್ ಎಸ್ಟೇಟ್ ಅಭಿವೃದ್ಧಿದಾರರು/ಪ್ರವರ್ತಕರಿಂದ ಅಭಿವೃದ್ಧಿಪಡಿಸುವ ನಿವೇಶನ, ಅಪಾರ್ಟ್‌ಮೆಂಟ್/ ವಾಣಿಜ್ಯ ಮಳಿಗೆಗಳು/ ಅಂಗಡಿಗಳು/ವಿಲ್ಲಾಸ್/ ಸಾಲು ಮನೆಗಳನ್ನು ಗೃಹ ಖರೀದಿದಾರರು ಖರೀದಿಸುವ ಮುನ್ನ – ಈ ವಸತಿ ಯೋಜನೆ ರೇರಾ ಪ್ರಾಧಿಕಾರದಲ್ಲ ನೋಂದಣಿ ಮಾಡಿಸಲಾಗಿದೆಯೇ ಎಂಬುದನ್ನು ಖಾತರಿ ಪಡಿಸಿಕೊಳ್ಳಿ.
- ನಿವೇಶನ/ಗೃಹ ಯೋಜನೆಯು ರೇರಾದಲ್ಲಿ ನೋಂದಣಿ ಆಗಿದೆಯೇ ಎಂಬುದನ್ನು ಪ್ರಾಧಿಕಾರದ ವೆಬ್‌ಸೈಟ್ **www.rera.kar.gov.in** ನಲ್ಲ ಮಾಹಿತಿ ಲಭ್ಯವಿರುವುದು.
- ದಿನಾಂಕ 01.05.2017ರಿಂದ ಪ್ರಗತಿಯಲ್ಲಿರುವ ಹಾಗೂ ಎಲ್ಲಾ ಹೊಸ ರಿಯಲ್ ಎಸ್ಟೇಟ್ ಯೋಜನೆಗಳಿಗೆ ಮತ್ತು 500 ಚ.ಮೀ. ಗಳಿಗೂ ಹೆಚ್ಚು ಭೂಮಿ/ನಿವೇಶನ ಪ್ರದೇಶಗಳನ್ನು ಹೊಂದಿರುವ, ಇಲ್ಲವೇ 8 ಯೂನಿಟ್‌ಗಳಿಗೂ ಹೆಚ್ಚಿನ ಸಂಖ್ಯೆಯಲ್ಲಿರುವ ಸಾರ್ವಜನಿಕರಿಗೆ ಮಾರಾಟ ಮಾಡಲು ಉದ್ದೇಶಿಸಿರುವ ಯೋಜನೆಗಳಿಗೆ ರೇರಾದಲ್ಲಿ ನೋಂದಣಿಯನ್ನು ಕಡ್ಡಾಯಗೊಳಸಲಾಗಿದೆ.
- ರೇರಾ ಕಾಯ್ದೆ ಕಲಂ 2 (zk) (iv) ರಂತೆ ಕೋ-ಆಪರೇಟಿವ್ ಹೌಸಿಂಗ್ ಫೈನಾನ್ಸ್ ಸೊಸೈಟಿ ಅಥವಾ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಗಳನ್ನು ಸಹಾ ಪ್ರವರ್ತಕರು/ಅಭಿವೃದ್ಧಿದಾರರೆಂದು ಪರಿಗಣಿಸಲಾಗಿರುತ್ತದೆ ಇವರುಗಳು ಕಡ್ಡಾಯವಾಗಿ ರೇರಾ ಪ್ರಾಧಿಕಾರದಲ್ಲ ನೋಂದಣಿ ಮಾಡಿಕೊಳ್ಳುವುದು.
- ರೇರಾ ಕಾಯ್ದೆ ಕಲಂ 3(1)ರಂತೆ ಯಾವುದೇ ಪ್ರವರ್ತಕರು / ಅಭಿವೃದ್ಧಿದಾರರು (Promoters / Developers) ರವರುಗಳು ರೇರಾ ಪ್ರಾಧಿಕಾರದಲ್ಲ ರಿಯಲ್ ಎಸ್ಟೇಟ್ ಯೋಜನೆಯನ್ನು ನೋಂದಣಿ ಮಾಡದೇ ಪ್ರಕಟಣೆ ಹಾಗೂ ಮಾರಾಟ ಮಾಡುವಂತಿಲ್ಲ. ಯಾವುದೇ ರೀತಿಯ ಮಾರಾಟ ಮಾಡಿದಲ್ಲ ರೇರಾ ಕಾಯ್ದೆ ಕಲಂ 3(1)ರ ಉಲ್ಲಂಘನೆಯಾಗುವುದರಿಂದ ರೇರಾ ಕಾಯ್ದೆ ಕಲಂ 59(1) ರಂತೆ ನಿಯಮಾನುಸಾರ ದಂಡ ವಿಧಿಸಲಾಗುವುದು ಹಾಗೂ ಆದೇಶವನ್ನು ಪಾಲಸದಿದ್ದಲ್ಲ ರೇರಾ ಕಾಯ್ದೆ ಕಲಂ 59(2)ರಂತೆ ಪ್ರವರ್ತಕರು / ಅಭಿವೃದ್ಧಿದಾರರುಗಳಿಗೆ (Promoters / Developers) 3 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಲು ಅವಕಾಶ ಕಲ್ಪಸಲಾಗಿದೆ.
- ನಿವೇಶನ / ಮನೆ / ವಾಣಿಜ್ಯ ಮಳಿಗೆ ಖರೀದಿದಾರರು, ನಿವೇಶನ / ಮನೆ / ವಾಣಿಜ್ಯ ಮಳಿಗೆ ಖರೀದಿಗೆ ಪಾವತಿಸುವ ಮುಂಗಡ ಹಣವನ್ನು ಅಭಿವೃದ್ಧಿದಾರರು ಬ್ಯಾಂಕ್‌ಗಳಲ್ಲಿ ಪ್ರತ್ಯೇಕ ಖಾತೆ ತೆರೆದು ಇಡುತ್ತಾರೆ.
- ರೇರಾ ಪ್ರಾಧಿಕಾರದಲ್ಲ ನೋಂದಾಯಿತ ಅಭಿವೃದ್ಧಿದಾರರ ಮೂಲಕ ನಿವೇಶನ / ಮನೆ / ವಾಣಿಜ್ಯ ಮಳಿಗೆ ಖರೀದಿಸಿದಲ್ಲಿ ನಿಗದಿತ ಅವಧಿಯಲ್ಲಿ ನಿಮ್ಮ ಕನಸಿನ ಮನೆ ನಿಮ್ಮದಾಗುತ್ತದೆ.
- ರಿಯಲ್ ಎಸ್ಟೇಟ್ ಅಭಿವೃದ್ಧಿದಾರರು ಯೋಜನೆಯ ನಿವೇಶನ ಸ್ಥಳದ ಮುಂಭಾಗದಲ್ಲಿ, ಯೋಜನೆಯ ಹೆಸರು ಮತ್ತು ಯೋಜನೆಯ ವಿವರಗಳನ್ನು ನಾಮಫಲಕದ ಬಲ ಭಾಗದಲ್ಲಿ ರೇರಾ ಪ್ರಾಧಿಕಾರದ ನೋಂದಣಿ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ.
- ನಿವೇಶನ / ಮನೆ / ವಾಣಿಜ್ಯ ಮಳಿಗೆ ಖರೀದಿದಾರರು ರೇರಾ ನೋಂದಣಿ ಸಂಖ್ಯೆಯನ್ನು ಕೇಳುವುದು ನಿಮ್ಮ ಹಕ್ಕು, ಹಾಗಾಗಿ ರೇರಾದಲ್ಲ ನೋಂದಣಿಯಾಗಿರುವ ಅಭಿವೃದ್ಧಿದಾರರಿಂದ ಖರೀದಿಸುವುದು.
- ರೇರಾ ಪ್ರಾಧಿಕಾರದಲ್ಲ ಯೋಜನೆಗಳ ನೋಂದಣಿ, ಏಜೆಂಟರುಗಳ ನೋಂದಣಿ, ತ್ರೈಮಾಸಿಕ ವರದಿ ನವೀಕರಣ, ದೂರುಗಳ ನೋಂದಣಿ, ರೇರಾ ಪ್ರಾಧಿಕಾರದ ಎಲ್ಲಾ ಚಟುವಟಿಕೆಗಳು ರೇರಾ ವೆಬ್ ಪೋರ್ಟ್‌ನಲ್ಲ ಲಭ್ಯವಿರುತ್ತವೆ.

ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿದಂತೆ ಪರಿಸರವನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲ ಕರ್ತವ್ಯ

ಹೆಚ್ಚಿನ ಮಾಹಿತಿಗಾಗಿ :

ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ), ಕರ್ನಾಟಕ

ಸಿಲ್ವರ್ ಜ್ಯುಬಿಲಿ ಬ್ಲಾಕ್, ಯೂನಿಟಿ ಬಿಲ್ಡಿಂಗ್, ಸಿಎಸ್‌ಐ ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು-560 027

080-22249798, 22249799, 080-41624455, 41692244 contact.krera@ka.gov.in https://rera.karnataka.gov.in

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು-560 002.

ಸಾರ್ವಜನಿಕ ಪ್ರಕಟಣೆ

ನಾಗರಿಕರ ಅನುಕೂಲಕ್ಕಾಗಿ ಬಿಬಿಎಂಪಿ 24/7 ಉಚಿತ ಸಹಾಯವಾಣಿ 1533 ಸಜ್ಜು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ **“ಬಿಬಿಎಂಪಿ 24/7 ಉಚಿತ ಸಹಾಯವಾಣಿ 1533”** ಅನ್ನು ಸಜ್ಜುಗೊಳಿಸಲಾಗಿದ್ದು, ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಕೋವಿಡ್-19 ಹಾಗೂ ಪಾಲಿಕೆಗೆ ಸಂಬಂಧಿಸಿದಂತೆ ಮಾಹಿತಿ/ಸಮಸ್ಯೆ/ದೂರುಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಈ ಹಿಂದೆ ಕೋವಿಡ್ ಸಂಬಂಧಿಸಿದ ಸಹಾಯ / ದೂರು / ಮಾಹಿತಿಗಾಗಿ 1912ಗೆ ಕರೆಮಾಡಿ ಮಾಹಿತಿ ಪಡೆಯಬಹುದಾಗಿತ್ತು ಹಾಗೂ ಬಿಬಿಎಂಪಿ ದೂರುಗಳಿಗಾಗಿ ಪಾಲಿಕೆಯ ನಿಯಂತ್ರಣ ಕೊಠಡಿ ಸಂಖ್ಯೆ 9480685700 / 080-22660000ಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿತ್ತು.

ಇದೀಗ ನಾಗರಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೋವಿಡ್ ಹಾಗೂ ಪಾಲಿಕೆಯ ಸಹಾಯ / ದೂರು / ಮಾಹಿತಿಗಳಿಗೆ ಸಂಬಂಧಿಸಿದಂತೆ ಒಂದೇ ಸಹಾಯವಾಣಿಯಿದ್ದು, ನಾಗರಿಕರು '1533'ಗೆ ಕರೆ ಮಾಡಿದಾಗ '1' ಅನ್ನು ಆಯ್ಕೆ ಮಾಡಿದರೆ ಕೋವಿಡ್‌ಗೆ ಸಂಬಂಧಿಸಿದ ಹಾಗೂ '2' ಅನ್ನು ಆಯ್ಕೆ ಮಾಡಿದರೆ ಪಾಲಿಕೆಗೆ ಸಂಬಂಧಿಸಿದ ಸಹಾಯ / ದೂರು / ಮಾಹಿತಿಗಳ ಬಗ್ಗೆ ನಾಗರಿಕರು ಕೇಳುವ ಮಾಹಿತಿಗನುಗುಣವಾಗಿ ಸಿಬ್ಬಂದಿ ಸ್ಪಂದಿಸಲಿದ್ದಾರೆ.

ಸಹಾಯವಾಣಿ ಸಂಖ್ಯೆ ಕಾರ್ಯವೈಖರಿಯ ಪ್ರಮುಖ ಅಂಶಗಳು

ಬಿಬಿಎಂಪಿ ಸಹಾಯವಾಣಿ 1533

ಕೋವಿಡ್‌ಗೆ ಸಂಬಂಧಿಸಿದಂತೆ ‘1’ಅನ್ನು ಆಯ್ಕೆ ಮಾಡಿ

- **ಕೋವಿಡ್ ಸಂಬಂಧಿಸಿದಂತೆ ಕೆಳಕಂಡ ಅಂಶಗಳ ಬಗ್ಗೆ 1533ಗೆ ಕರೆ ಮಾಡಿ ಅಗತ್ಯ ಮಾಹಿತಿ ಪಡೆಯಬಹುದು:**
  - ಕೋವಿಡ್ ಲಸಿಕೆ ಪಡೆಯುವ ಮತ್ತು ಕೋವಿಡ್ ಪರೀಕ್ಷೆ ಮಾಡುವ ಕೇಂದ್ರಗಳ ಮಾಹಿತಿ.
  - ಕೋವಿಡ್ ಹಾಸಿಗೆ ವ್ಯವಸ್ಥೆಯ ಮಾಹಿತಿ.
  - ಕೋವಿಡ್ ಆರೈಕೆ ಕೇಂದ್ರ ಮತ್ತು ಫಿಜಿಕಲ್ ಟ್ರಯಾಜ್ ಸೆಂಟರ್‌ಗಳ ಮಾಹಿತಿ.
  - ಕ್ವಾರಂಟೈನ್ / ಐಸೋಲೇಷನ್ ಮಾಹಿತಿ.
  - ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಾಹಿತಿ.
  - ಆಂಬ್ಯುಲೆನ್ಸ್ / ಶವ ಸಾಗಿಸುವ ವಾಹನಗಳ ವ್ಯವಸ್ಥೆ ಹಾಗೂ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ಪಡೆಯಬಹುದಾಗಿದೆ.

ಪ್ರತಿಯೊಂದು ಕರೆಗೂ ಟಿಕೆಟ್ ಸಂಖ್ಯೆ ನಿಗದಿಯಾಗುತ್ತದೆ ಹಾಗೂ ಪ್ರತಿಯೊಂದು ಕರೆಯು ರೆಕಾರ್ಡ್ ಆಗಲಿದ್ದು, ಯಾವ ಕಾರಣಕ್ಕೆ ಕರೆ ಮಾಡಲಾಗಿದೆ, ಯಾವ ಸಮಯ ಹಾಗೂ ಆ ಸಮಸ್ಯೆ ಬಗೆಹರಿದಿದೆಯೆ ಎಂಬ ಸಂಪೂರ್ಣ ಮಾಹಿತಿಯು ಸಾಫ್ಟ್‌ವೇರ್‌ನಲ್ಲಿ ಲಭ್ಯವಿರಲಿದೆ. ನಿಗದಿಯಾಗಿರುವ ಟಿಕೆಟ್ ಸಂಖ್ಯೆಯನ್ನು ಕರೆ ಮಾಡಿರುವ ವ್ಯಕ್ತಿಗೆ ನೀಡಲಾಗುವುದು. ಸಮಸ್ಯೆ ಬಗೆಹರಿದ ನಂತರ ಟಿಕೆಟ್ ಸಂಖ್ಯೆಯನ್ನು ನಿಷ್ಕ್ರಿಯಗೊಳಿಸಲಾಗುತ್ತದೆ.

ರಾಕೇಶ್ ಸಿಂಗ್, ಭಾ.ಆ.ಸೇ
ಆಡಳಿತಗಾರರು, ಬಿಬಿಎಂಪಿ

ಗೌರವ ಗುಪ್ತ, ಭಾ.ಆ.ಸೇ
ಮುಖ್ಯ ಆಯುಕ್ತರು, ಬಿಬಿಎಂಪಿ

“ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ”

ವಿಷ್ಣುವರ್ಧನ್ ಪ್ರತಿಮೆ ತೆರವು ಅಭಿಮಾನಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಸಮೀಪ ನಟ ವಿಷ್ಣುವರ್ಧನ್ ಉದ್ಯಾನದಲ್ಲಿ ಶುಕ್ರವಾರ ರಾತ್ರಿ ಸ್ಥಾಪಿಸಿದ್ದ ವಿಷ್ಣುವರ್ಧನ್ ಪ್ರತಿಮೆಯನ್ನು ಪಾಲಿಕೆಯು ಶನಿವಾರ ಬೆಳಿಗ್ಗೆ ತೆರವುಗೊಳಿಸಿದ್ದನ್ನು ವಿರೋಧಿಸಿ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು.

‘10 ವರ್ಷದಿಂದ ಮನವಿ ಸಲ್ಲಿಸಿದರೂ ಪ್ರತಿಮೆ ನಿರ್ಮಾಣವಾಗದೇ ಇದ್ದುದರಿಂದ ಅಭಿಮಾನಿಗಳೇ ಪ್ರತಿಮೆಯನ್ನು ಸ್ಥಾಪಿಸಿದ್ದರು. ಅಧಿಕಾರಿಗಳ ಕಾಲಿಗೆ ಬಿದ್ದು, ತೆರವುಗೊಳಿಸದಂತೆ ಒತ್ತಾಯಿಸಿದರೂ ಕರುಣೆ ತೋರಲಿಲ್ಲ. ಜನ್ಮದಿನದಂದೇ ವಿಷ್ಣು ಅವರ ಕೊಲೆಯಾಗಿದೆ’ ಎಂದು ಡಾ.ವಿಷ್ಣುಸೇನಾ ಸಮಿತಿ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ ಆಕ್ರೋಶ ವ್ಯಕ್ತಪಡಿಸಿದರು.

‘ಸಮಿತಿಯು ರಕ್ತದಾನ ಶಿಬಿರ ಮತ್ತು ಸಾಧಕರಿಗೆ ಸನ್ಮಾನವನ್ನು ಆಯೋಜಿಸಿತ್ತು. 200 ಮಂದಿ ರಕ್ತದಾನ ಮಾಡುವವರಿದ್ದರು, ಘಟನೆಯಿಂದ ಅಭಿಮಾನಿಗಳಿಗೆ ನೋವಾಗಿದೆ. ರಾಜ್ಯದಲ್ಲಿ ಇರುವ ಎಲ್ಲ ಅನಧಿಕೃತ ಪ್ರತಿಮೆಗಳನ್ನು ತೆರವುಗೊಳಿಸಲಿ’ ಎಂದು ಆಗ್ರಹಿಸಿದರು.

ಕರಾವಳಿಯಲ್ಲಿ ಕಟ್ಟೆಚ್ಚರಕ್ಕೆ ಸೂಚನೆ?

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿ ಹಾಗೂ ಮಲೆನಾಡಿನಲ್ಲಿ ಕೆಲ ದಿನಗಳ ಹಿಂದೆ ನಿಷೇಧಿತ ಸ್ಯಾಟಲೈಟ್ ಫೋನ್ ಕರೆ ಸಂಪರ್ಕ ಪತ್ತೆಯಾದ ಬಳಿಕ ಉಗ್ರರ ಕೃತ್ಯದ ಸಾಧ್ಯತೆ ಬಗ್ಗೆ ಕೇಂದ್ರ ಗುಪ್ತಚರ ಇಲಾಖೆ ಕಟ್ಟೆಚ್ಚರ ವಹಿಸುವಂತೆ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಪಂಜಾಬ್‌ನ ಅಮೃತಸರದಲ್ಲಿ ತಿಂಡಿ ಡಬ್ಬದಲ್ಲಿ ಸ್ಫೋಟಕ ಪತ್ತೆಯಾದ ಘಟನೆಗೆ ಸಂಬಂಧಿಸಿ, ಆರು ಉಗ್ರರನ್ನು ಪೊಲೀಸ್ ಇಲಾಖೆ ಬಂಧಿಸಿತ್ತು. ವಿಚಾರಣೆ ವೇಳೆ ಉಗ್ರರು, ತಿಂಡಿ ಡಬ್ಬಿಯಲ್ಲಿ ಬಾಂಬ್ ಇಟ್ಟು ಸ್ಫೋಟ ನಡೆಸಲು ಸಂಚು ರೂಪಿಸಿದ್ದ ಬಗ್ಗೆ ಬಾಯ್ಬಿಟ್ಟಿದ್ದರು. ಈ ಹಿನ್ನೆಲೆಯಲ್ಲಿ ಸಮುದ್ರ ಮಾರ್ಗದ ಮೂಲಕ ಉಗ್ರರು ನುಸುಳುವ ಸಾಧ್ಯತೆಯನ್ನು ಗಮನದಲ್ಲಿಟ್ಟು, ಕರಾವಳಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಗುಪ್ತಚರ ಇಲಾಖೆಯು ಪೊಲೀಸರು, ಕರಾವಳಿ ಕಾವಲು ಪಡೆ ಹಾಗೂ ಎಲ್ಲ ಭದ್ರತಾ ವಿಭಾಗಗಳಿಗೆ ಸೂಚನೆ ನೀಡಿದೆ. ಅಲ್ಲದೆ, ಪ್ರಮುಖ ಸ್ಥಳಗಳಿಗೂ ಬಿಗಿ ಭದ್ರತೆ ಒದಗಿಸುವಂತೆ ತಿಳಿಸಿದೆ ಎನ್ನಲಾಗಿದೆ.

ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಅವರನ್ನು ‘ಪ್ರಜಾವಾಣಿ’ ಸಂಪರ್ಕಿಸಿದಾಗ, ‘ಈ ಸಂಬಂಧ ನಮಗೆ ಅಧಿಕೃತ ಮಾಹಿತಿ ಯಾವುದೇ ಬಂದಿಲ್ಲ’ ಎಂದರು.

‘ಶಿಕ್ಷಣ ಪಠ್ಯಕ್ರಮ ಬದಲಾವಣೆ: ಒಂದು ಚರ್ಚೆ’ ಕುರಿತು ನಡೆದ ಸಂವಾದ

‘ಚೌಕಟ್ಟಿನ ಅಡಿಯಲ್ಲೇ ಬದಲಾಗಲಿ’

ಬೆಂಗಳೂರು: ‘ಪಠ್ಯಕ್ರಮ ಬದಲಾವಣೆಗೆ ನಿರ್ದಿಷ್ಟ ಚೌಕಟ್ಟು ಇರುತ್ತದೆ. ಅದು ದೇಶದ ಕಾನೂನು ಕೂಡ. ಏನೇ ಬದಲಾವಣೆ ಮಾಡಬೇಕಾದರೂ ಈ ಚೌಕಟ್ಟಿನ ಅಡಿಯಲ್ಲೇ ಮುಂದುವರಿಯಬೇಕಾಗುತ್ತದೆ. ಪಠ್ಯಪುಸ್ತಕ ಪರಿಶೀಲನಾ ಸಮಿತಿ ಸದಸ್ಯರಿಗೂ ಈ ಬಗ್ಗೆ ಅರಿವು ಮೂಡಿಸಬೇಕಿದೆ’...

‘ಶಿಕ್ಷಣ ಪಠ್ಯಕ್ರಮ ಬದಲಾವಣೆ: ಒಂದು ಚರ್ಚೆ’ ಕುರಿತು ನಡೆದ ‘ಪ್ರಜಾವಾಣಿ’ ಸಂವಾದದಲ್ಲಿ ಶನಿವಾರ ವ್ಯಕ್ತವಾದ ಅಭಿಪ್ರಾಯವಿದು.

‘ಇತಿಹಾಸವು ಸತ್ಯ ಘಟನೆಗಳನ್ನು ಆಧರಿಸಿರುವುದು. ಅದನ್ನು ಬರೆಯುವಾಗ ಎಲ್ಲಾ ಆಯಾಮಗಳಿಂದಲೂ ವಿಶ್ಲೇಷಣೆ ಮಾಡಲಾಗಿರುತ್ತದೆ. ಅದನ್ನು ತಿರುಚುವ ಕೆಲಸಕ್ಕೆ ಕೈ ಹಾಕಬಾರದು. ಅಭಿಪ್ರಾಯ ಹೇರಿಕೆಯೂ ಸರಿಯಲ್ಲ. ಮಕ್ಕಳಲ್ಲಿ ತಾರ್ಕಿಕ ಭಾವನೆ ಬೆಳೆಸುವುದೇ ನಿಜವಾದ ಶಿಕ್ಷಣ’ ಎಂಬ ಮಾತುಗಳೂ ವ್ಯಕ್ತವಾದವು.

ಪ್ರಜಾವಾಣಿ ಸಂವಾದ

‘ಸಂಸ್ಕೃತಿ, ಸಂಪ್ರದಾಯದ ಆಧಾರದಲ್ಲಿ ಶಿಕ್ಷಣ’

‘ಭಾರತದ ಇತಿಹಾಸ ಪ್ರಾಚೀನವಾದುದು. ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯದ ಆಧಾರದಲ್ಲಿ ಶಿಕ್ಷಣ ನೀಡುವುದು ತುಂಬಾ ಅಗತ್ಯ. ಅದಕ್ಕೆ ಈಗ ಒತ್ತು ನೀಡಲಾಗುತ್ತಿದೆ. ನಮ್ಮ ಮಕ್ಕಳಿಗೆ ನಮ್ಮ ದೇಶದ ವಿಚಾರಗಳನ್ನು ಕಲಿಸದೆ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಪರಿಚಯಿಸಬೇಕೆ?’.

‘ಪಠ್ಯಕ್ರಮ ಚೌಕಟ್ಟು ಸಿದ್ಧಪಡಿಸಲು 21 ಜನರ ಸಮಿತಿ ರಚಿಸಲಾಗುತ್ತಿದೆ. ಕಾಲ ಕಾಲಕ್ಕೆ ಶಿಕ್ಷಣದಲ್ಲಿ ಸುಧಾರಣೆ ತರಲು ಸ್ವಾತಂತ್ರ್ಯವಿದೆ. ಅದಕ್ಕೆ ಕಾನೂನು ಕಟ್ಟಳೆಗಳ ಅಗತ್ಯವಿಲ್ಲ. 2005ರಲ್ಲಿ ಮಾಡಿದ್ದನ್ನೇ ಈಗಲೂ ಪಾಲಿಸಬೇಕು ಎಂಬ ನಿಯಮವೇನೂ ಇಲ್ಲ. ಎನ್‌ಸಿಎಫ್ ಕೂಡ ಸರ್ವಸ್ವವಲ್ಲ. ಅಪೌಷ್ಟಿಕತೆ ಸಮಸ್ಯೆ ಮೊದಲಿನಿಂದಲೂ ಇದೆ. ಇದಕ್ಕೂ ಪಠ್ಯಕ್ರಮ ಪರಿಷ್ಕರಣೆಗೂ ತಳುಕು ಹಾಕುವುದು ಸರಿಯಲ್ಲ’.

‘ಎಲ್ಲವನ್ನೂ ಬದಲಾವಣೆ ಮಾಡಬೇಕು. ಎಲ್ಲವೂ ಸುಧಾರಣೆಯಾಗಬೇಕು. ಅದಕ್ಕೆ ವಿರೋಧ ವ್ಯಕ್ತಪಡಿಸುವುದು ಎಷ್ಟು ಸರಿ. ರೋಹಿತ್ ಚಕ್ರತೀರ್ಥ ಗಣಿತ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಮಕ್ಕಳ ಕಥೆಗಳನ್ನೂ ಬರೆದಿದ್ದಾರೆ. ಅವರ ನೇಮಕಕ್ಕೆ ವಿರೋಧವೇಕೆ. ಸರ್ಕಾರವು ಶಿಕ್ಷಣವನ್ನು ಕೇಸರೀಕರಣಗೊಳಿಸಲು ಮುಂದಾಗಿದೆ ಎಂದು ಹೇಳುತ್ತಿರುವುದೂ ತಪ್ಪು. ಕೇಸರೀಕರಣ ಎಂದರೆ ಏನು ಎಂಬುದನ್ನು ಮೊದಲು ವಿವರಿಸಿ.

ಡಾ.ಎಸ್.ಆರ್.ಲೀಲಾ, ನಿವೃತ್ತ ಪ್ರಾಧ್ಯಾಪಕಿ, ವಿಧಾನಪರಿಷತ್‌ನ ಮಾಜಿ ಸದಸ್ಯೆ

‘ಪಠ್ಯಕ್ರಮ ಬದಲಾವಣೆ ಅನಿವಾರ್ಯ’



‘ಇತ್ತೀಚಿನ ದಿನಗಳಲ್ಲಿ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಆವಿಷ್ಕಾರಗಳು ನಡೆದಿವೆ. ಕೆಲ ಉದ್ಯೋಗಗಳೇ ಮರೆಯಾಗಿವೆ. ಈ ಕಾರಣಕ್ಕಾಗಿ ಪಠ್ಯಕ್ರಮ ಬದಲಾವಣೆ ಅನಿವಾರ್ಯ. ಇದನ್ನು ರಾಜಕೀಯ ಹಿನ್ನೆಲೆಯಲ್ಲಿ ನೋಡಬಾರದು. ಹೊಸ ಪಠ್ಯಕ್ರಮದ ಜೊತೆಗೆ ಕಲಿಕಾ ಪದ್ಧತಿಯೂ ಬದಲಾಗಬೇಕು. ಮಕ್ಕಳಲ್ಲಿ ಸ್ವಯಂ ಕಲಿಕೆಯ ಗುಣ ಬೆಳೆಸಲು ಒತ್ತು ನೀಡಬೇಕು’.

‘ಇತಿಹಾಸದಲ್ಲಿ ತಪ್ಪುಗಳಿದ್ದರೆ ತಿದ್ದುಪಡಿ ಮಾಡಬಹುದು. ಬಾಲ ಹಿಡಿದು ಆನೆಯೇ ಬೇಡ ಎಂದು ಹೇಳುವುದು ಸರಿಯಲ್ಲ. ಕೆಲವೊಮ್ಮೆ ಅವಸರದಲ್ಲಿ ನೀತಿಗಳನ್ನು ಜಾರಿ ಮಾಡಲಾಗುತ್ತದೆ. ಅದು ಅಪಾಯಕಾರಿ. ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕರ ಕೊರತೆ ಇದೆ. ಗುಣಮಟ್ಟದ ಶಿಕ್ಷಕರದ್ದು ಮತ್ತೊಂದು ಸಮಸ್ಯೆ. ಕನ್ನಡ ಭಾಷೆ ಶಿಕ್ಷಕರಾಗಲು ಬಯಸುವವರಿಗೆ ಕುವೆಂಪು, ದ.ರಾ.ಬೇಂದ್ರೆಯವರ ನಾಲ್ಕೈದು ಪುಸ್ತಕಗಳ ಹೆಸರೇ ಗೊತ್ತಿರುವುದಿಲ್ಲ’.

‘ದೇಶದ ಪ್ರತಿಯೊಬ್ಬ ನಾಗರಿಕರಿಗೂ ಇತಿಹಾಸ ಮತ್ತು ಸಂಸ್ಕೃತಿಯ ಅರಿವು ಇರಬೇಕು. ಬ್ರಿಟಿಷರು ಅಳವಡಿಸಿದ್ದ ಶಿಕ್ಷಣ ಪದ್ಧತಿಯನ್ನು ನಾವು ಮುಂದುವರಿಸಿಕೊಂಡು ಬಂದಿದ್ದೇವೆ. ಅದು ಬದಲಾಗಬೇಕು’.

ಪ್ರೊ.ಎಸ್.ಕೆ.ಸೈದಾಪುರ, ವಿಶ್ರಾಂತ ಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

‘ಬದಲಾವಣೆಗೆ ವಿರೋಧವಿಲ್ಲ; ಅನುಸರಿಸುತ್ತಿರುವ ಮಾರ್ಗ ಸರಿಯಿಲ್ಲ’

‘ಪಠ್ಯಕ್ರಮ ಬದಲಾವಣೆಗೆ ಯಾರ ವಿರೋಧವೂ ಇಲ್ಲ. ಆದರೆ ಅದು ಯಾವ ಬಗೆಯದ್ದು, ಅದನ್ನು ಯಾವ ಹಂತದಲ್ಲಿ, ಯಾವ ಅಂಶಗಳನ್ನು ಆಧರಿಸಿ ಬದಲಾವಣೆ ಮಾಡಲಾಗುತ್ತಿದೆ ಎಂಬುದನ್ನು ಗಮನಿಸಬೇಕು’.

‘ಪಠ್ಯಪುಸ್ತಕ ಬದಲಾವಣೆಗೆ ಒಂದು ಕ್ರಮ ಇರುತ್ತದೆ. ಅದರ ಆಧಾರದಲ್ಲಿ ಪಠ್ಯವಸ್ತು ರಚಿಸಬೇಕಾಗುತ್ತದೆ. ಅದನ್ನು ಆಧಾರವಾಗಿಟ್ಟುಕೊಂಡು ಪಠ್ಯಪುಸ್ತಕ ತಯಾರಿಸುವ ಪದ್ಧತಿ ಇದೆ. ಅದನ್ನು ಅರಿತುಕೊಳ್ಳಬೇಕು’.

‘ವೇದಗಳ ಕಾಲದಲ್ಲಿದ್ದ ಕೆಲ ಪದ್ಧತಿ ಹಾಗೂ ಆಚರಣೆಗಳು ಜನರ ಪರವಾಗಿರಲಿಲ್ಲ. ಜನರು ಆಹಾರದ ಸಮಸ್ಯೆ ಎದುರಿಸುತ್ತಿರುವಾಗ ಯಾಗ ಹಾಗೂ ಯಜ್ಞದ ಹೆಸರಿನಲ್ಲಿ ಆಹಾರ ವ್ಯರ್ಥ ಮಾಡುವುದು ಎಂಬ ಅಭಿಪ್ರಾಯ ಮೂಡಿದ್ದರಿಂದ ಹೊಸ ಧರ್ಮಗಳ ಉದಯವಾದವು ಎಂಬ ಅಂಶ ಪಠ್ಯಕ್ರಮದಲ್ಲಿತ್ತು. ಈಗ ಅದನ್ನು ತೆಗೆದುಹಾಕಲು ತಯಾರಿ ನಡೆಯುತ್ತಿದೆ. ಅದು ಸರಿಯಲ್ಲ’.

‘ಪಠ್ಯಕ್ರಮದ ಚೌಕಟ್ಟು ಇಟ್ಟುಕೊಂಡು ಬದಲಾವಣೆ ಮಾಡಿದ್ದೇ ಆದರೆ, ಮಕ್ಕಳಿಗೆ ಕಲಿಯಲು ಸ್ವಲ್ಪವಾದರೂ ಸಮಯ ಬೇಕಲ್ಲವೇ. 2005ರಲ್ಲಿ ಪಠ್ಯಕ್ರಮ ಚೌಕಟ್ಟನ್ನು ಆಧರಿಸಿ ಪಠ್ಯಕ್ರಮ ಬದಲಿಸಲಾಗಿದೆ. ಅದೇ ಬೇಡವೆಂದಾದರೆ ಇನ್ನೊಂದು ಪಠ್ಯಕ್ರಮ ಚೌಕಟ್ಟು ಸಿದ್ಧಪಡಿಸುವವರೆಗೂ ಕಾಯಬೇಕಲ್ಲವೇ. ಮಕ್ಕಳ ಅಪೌಷ್ಟಿಕತೆ ಮತ್ತು ಪಠ್ಯಪುಸ್ತಕದ ಪರಿಷ್ಕರಣೆ, ಇವೆರಡರಲ್ಲಿ ಸರ್ಕಾರದ ಆದ್ಯತೆ ಯಾವುದಾಗಿರಬೇಕು?’.

ಡಾ.ವಿ.ಪಿ.ನಿರಂಜನಾರಾಧ್ಯ
ಪ್ರಾಧ್ಯಾಪಕ, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು

ಧರ್ಮಸ್ಥಳ, ಕುಕ್ಕೆ: ಸೇವೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋವಿಡ್ ಪಾಸಿಟಿವಿಟಿ ದರ ಇಳಿಕೆಯಾಗಿರುತ್ತಿರುವ ಕಾರಣ ಜಿಲ್ಲೆಯ ಪ್ರಮುಖ ಧಾರ್ಮಿಕ ಕ್ಷೇತ್ರಗಳಾದ ಧರ್ಮಸ್ಥಳ ಹಾಗೂ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ದೇವರ ದರ್ಶನ ಹಾಗೂ ಸೇವೆಗಳಿಗೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ವಾರಾಂತ್ಯದ ನಿರ್ಬಂಧಗಳನ್ನು ರದ್ದುಗೊಳಿಸಲಾಗಿದೆ. ಆದರೆ, ದೇಗುಲಗಳಲ್ಲಿ ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ ಶನಿವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಅಂಕೋಲಾ ತಾಲ್ಲೂಕಿನ ಕೈಗಡಿ ಗ್ರಾಮದಲ್ಲಿ ಶನಿವಾರ ನಡೆದ 'ಅನ್ನದಂಗಳದ ಮಾತುಕತೆ' ಕಾರ್ಯಕ್ರಮಕ್ಕೆ ತೆರಳಲು ಗಂಗಾವಳಿ ನದಿಯನ್ನು ದಾಟಲು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಗುಳ್ಳಾಪುರದಲ್ಲಿ ದೋಣಿಯೇರಿದರು

ಕೈಗಡಿಯಲ್ಲಿ ಸಚಿವೆ ಶೋಭಾಗೆ ಪ್ರಶ್ನೆಗಳ ಸಾಲು

ಪ್ರಜಾವಾಣಿ ವಾರ್ತೆ

ಕೈಗಡಿ (ಅಂಕೋಲಾ, ಉತ್ತರ ಕನ್ನಡ): ಈ ವರ್ಷ ಉಕ್ಕೇರಿ ಸೇತುವೆ ಆಪೋಷನ ಪಡೆದಿದ್ದ ಗಂಗಾವಳಿಯ ತಟದಲ್ಲಿ ಶನಿವಾರ ವಿಶೇಷ ಸಂಭ್ರಮ. ಪ್ರವಾಹದ ಬಳಿಕ ಎಂದೂ ಬಾರದಷ್ಟು ಜನ, ಜನಪ್ರತಿನಿಧಿಗಳು ತಮ್ಮ ಊರಿಗೆ ಬರುವ ಸಡಗರ. ತಮ್ಮ ಅಹವಾಲು ಸಲ್ಲಿಸಬೇಕು ಎಂಬ ಹಂಬಲ.

ಅಂಕೋಲಾ ತಾಲ್ಲೂಕಿನ ಡೊಂಗ್ರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅತ್ಯಂತ ಕುಗ್ರಾಮ ಕೈಗಡಿಯ ಕೃಷಿಕರಾದ ರಾಮಚಂದ್ರ ಹೆಗಡೆ, ಸುಬ್ರಾಯ ಹೆಗಡೆ ಅವರ ಮನೆಯಂಗಳದಲ್ಲಿ ಶನಿವಾರ ಕೃಷಿ ಇಲಾಖೆ ಮತ್ತು ಸಾವಯವ ಕೃಷಿ ಅಭಿಯಾನ ಆಯೋಜಿಸಿದ್ದ ‘ಅನ್ನದಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ಕಂಡುಬಂದ ದೃಶ್ಯಗಳಿವು.

ಪುಟ್ಟ ದೋಣಿಯನ್ನೇರಿ ಗಂಗಾವಳಿ ನದಿಯನ್ನು ದಾಟಿ ಗ್ರಾಮಕ್ಕೆ ಬಂದ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉತ್ತರ ಕನ್ನಡ, ಹಾವೇರಿ, ಗದಗ, ಹಾಸನ,ಮತ್ತಿತರ ಜಿಲ್ಲೆಗಳ ರೈತರು ಸಚಿವರನ್ನು ಪ್ರಶ್ನಿಸಿದರು.

ವಿಧಾನಸಭೆ, ಲೋಕಸಭೆಗಳಲ್ಲಿ ವರ್ಷದಲ್ಲಿ ಕನಿಷ್ಠ ಎರಡು ದಿನವಾದರೂ ವಿಶೇಷ ಅಧಿವೇಶನ ಏರ್ಪಡಿಸಬೇಕು. ಪಹಣಿ ಇಲ್ಲದ ರೈತರಿಗೂ ಸರ್ಕಾರದ ಎಲ್ಲ ಸವಲತ್ತು ಸಿಗುವಂತಾಗಬೇಕು, ಪಶುವೈದ್ಯರ ಕೊರತೆ ನೀಗಿಸಬೇಕು ಎಂದು ಆಗ್ರಹಿಸಿದರು.

ಸಚಿವ ಹೆಬ್ಬಾರ ಮಾತನಾಡಿ, 'ಜಿಲ್ಲೆಯಲ್ಲಿ ಅರಣ್ಯಭೂಮಿ ಹಕ್ಕುಪತ್ರಕ್ಕೆ 93,855 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಹಕ್ಕುಪತ್ರ ನೀಡಲು ಮೂರು ತಲೆಮಾರಿನ ದಾಖಲೆ ಸಲ್ಲಿಸಬೇಕು ಎಂದು ಅರಣ್ಯ ಹಕ್ಕು ಕಾಯ್ದೆ 2005ರಲ್ಲಿ ತಿಳಿಸಲಾಗಿದೆ. 75 ವರ್ಷಗಳ ದಾಖಲೆ ನೀಡುವುದೇ ಸಮಸ್ಯೆಯಾಗಿದೆ. ಈ ಬಗ್ಗೆ ದೆಹಲಿಗೆ ನಿಯೋಗ ಬರುತ್ತೇವೆ. ರಾಜ್ಯದ 2.39 ಲಕ್ಷ ಕುಟುಂಬಗಳಿಗೆ ಬದುಕು ಕಟ್ಟಿಕೊಡಲು ಸಾಧ್ಯ' ಎಂದರು.

ವಿಧಾನಪರಿಷತ್ ಸದಸ್ಯ ಶಾಂತರಾಮ ಸಿದ್ದಿ ಮಾತನಾಡಿ, ‘ಬುಡಕಟ್ಟು ಜನಾಂಗದವರು ಅರಣ್ಯಭೂಮಿ ಹಕ್ಕುಪತ್ರಕ್ಕಾಗಿ ಕಾಯುತ್ತಿದ್ದಾರೆ. ನಮ್ಮ ತಂದೆ ಏಳು ಎಕರೆ ಜಮೀನು ಹೊಂದಿದ್ದರು. ಅರಣ್ಯ ಕಾಯ್ದೆಯಿಂದಾಗಿ ಐದು ಗುಂಟೆಯಲ್ಲಿ ಜೀವನ ನಡೆಸುತ್ತಿದ್ದೇವೆ’ ಎಂದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಶೋಭಾ ಕರಂದ್ಲಾಜೆ, ‘ಈ ಆಗ್ರಹಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಗಮನಕ್ಕೆ ತರಲಾಗುವುದು. ಅರಣ್ಯಭೂಮಿ ಹಕ್ಕುಪತ್ರಕ್ಕೆ 15 ವರ್ಷಗಳ ದಾಖಲೆ ನೀಡುವಂತೆ ಮಾಡಲು ಸಾಧ್ಯವೇ ಎಂದು ಪರಿಶೀಲಿಸಲಾಗುವುದು’ ಎಂದರು.

ಆಹಾರ ಉತ್ಪಾದನೆಯಲ್ಲಿ ದಾಖಲೆ

‘ಕೋವಿಡ್ ಸಂದರ್ಭದಲ್ಲಿಯೂ ದೇಶವು ಆಹಾರ ಉತ್ಪಾದನೆಯಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಕಳೆದ ವರ್ಷ ದೇಶದಲ್ಲಿ 305 ಮಿಲಿಯನ್ ಟನ್ ಆಹಾರ ಉತ್ಪಾದನೆ ಮಾಡಿದೆ. 326 ಮಿಲಿಯನ್ ಟನ್ ತರಕಾರಿ ಉತ್ಪಾದನೆ ಮಾಡಿದ್ದು ದಾಖಲೆಯಾಗಿದೆ’ ಎಂದು ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

‘ರೈತರ ಆದಾಯ ದ್ವಿಗುಣಗೊಳಿಸಲು ಅಗತ್ಯ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಆಹಾರ ಸಂಸ್ಕರಣೆ ಮತ್ತು ಸಂಗ್ರಹಣೆ ಸುಧಾರಿಸಲು ಪ್ರಯತ್ನಿಸಲಾಗುತ್ತಿದೆ. ಕೃಷಿ ಉತ್ಪನ್ನಗಳ ರಫ್ತು ಬಗ್ಗೆ ಚರ್ಚಿಸಲು ಸೆ.22ರಂದು ಬೆಂಗಳೂರಿನ ಅಶೋಕ ಹೋಟೆಲ್‌ನಲ್ಲಿ ರಫ್ತುದಾರರ ಸಮಾವೇಶ ಹಮ್ಮಿಕೊಳ್ಳಲಾಗಿದೆ’ ಎಂದು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.59	7,086	10,951
ಹಾರಂಗಿ	2,859	2,858.52	2,397	1,850
ಕಬಿನಿ	2284.00	2,283.45	4,500	3,500
ಹೇಮಾವತಿ	2,922	2,916.90	4,603	5,372
ಲಿಂಗನಮಕ್ಕಿ	1,819	1,816.40	6,192	7,271
ಸೂಪಾ (ಮೀ)	564	557.09	4660.39	4214.04
ಮಾಣಿ	594.36	587.94	779	779
ತುಂಗಭದ್ರಾ	1,633	1,632.99	27,105	22,054
ಮಲಪ್ರಭಾ	2079.50	2,079.50	2,394	2,394
ಘಟಪ್ರಭಾ	2175	2,175.00	5,104	5,104
ಭದ್ರಾ	186	185.5	4,621	4,621
ಆಲಮಟ್ಟಿ (ಮೀ)	519.60	519.50	81,108	42,597
ನಾರಾಯಣಪುರ (ಮೀ)	492.25	492.12	42,000	49,480

* ನೆಲಮಟ್ಟದಿಂದ

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
ಸಂಖ್ಯೆ:ಕಗೃಮಂ/e-auction cell/ಇ–ಹರಾಜು ಪ್ರಕಟಣೆ–2, ದಿನಾಂಕ 01.09.2021
ಪ್ರಕಟಣೆಯನ್ನು ರದ್ದುಪಡಿಸಿರುವ ಆದೇಶ ದಿನಾಂಕ: 18.09.2021
ಕರ್ನಾಟಕ ಗೃಹ ಮಂಡಳಿಯ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ ಮೂಲೆ ನಿವೇಶನ/ಮನೆ/ಫ್ಲಾಟ್‌ಗಳನ್ನು ಇ–ಹರಾಜು ಮೂಲಕ ವಿಲೇವಾರಿ ಮಾಡಲು ಸಾರ್ವಜನಿಕ ಪ್ರಕಟಣೆಯನ್ನು ಸಂಖ್ಯೆ:ಕಗೃಮಂ/e-auction cell/ಇ–ಹರಾಜು ಪ್ರಕಟಣೆ–2 ದಿನಾಂಕ:01.09.2021 ನೀಡಲಾಗಿತ್ತು. ತಾಂತ್ರಿಕ ದೋಷಗಳಿಂದ ಇ–ಹರಾಜಿಗೆ ನೋಂದಣಿಯಾಗಲು ಹಾಗೂ ಹಣ ಪಾವತಿಸಲು ಸಾಧ್ಯವಾಗದ ಕಾರಣ ಸಾರ್ವಜನಿಕರಿಂದ ತುಂಬಾ ಅಹವಾಲುಗಳು ಬಂದ ಹಿನ್ನಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಇ–ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸಲಾಗಿದೆ. ಸದರಿ ಸ್ವತ್ತುಗಳ ಹರಾಜು ಪ್ರಕಟಣೆಯನ್ನು ಸಧ್ಯದಲ್ಲೆ ಮತ್ತೊಮ್ಮೆ ನೀಡಲಾಗುವುದು.
ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/BAN.U/KC/1580/2021-22
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ
ಸಂಖ್ಯೆ: ಕಾಪಾಅ/ಶಿವಿಶಿ/ಜೆಇ–1/ಐಎಫ್‌ಟಿ–13/2021–22 ದಿ:16.09.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು
3054–ಜಿ.ಮು.ರ ನಿರ್ವಹಣೆ : 1. ಸೊರಬ ತಾಲ್ಲೂಕು: 1 ಕಾಮಗಾರಿ. (ಇ ನಂ.140256 2ನೇ ಕರೆ)
ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು
3054–ರಾ.ಹೆ ನಿರ್ವಹಣೆ 2. ಸೊರಬ ತಾಲ್ಲೂಕು: 1 ಕಾಮಗಾರಿ. (ಇ ನಂ. 140251 2ನೇ ಕರೆ)
ಟೆಂಡರ್ ದಾಖಲಾತಿಗಳನ್ನು ಡೌನ್ಲೋಡ್ ಮಾಡಲು ಮತ್ತು ಸಲ್ಲಿಸಲು : ದಿನಾಂಕ:20–09–2021 ರಿಂದ 27–09–2021 ರವರೆಗೆ, ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 31–03–2022 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–23010900 / 080–23010901 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾ.ಇಂ, ಲೋ.ಇ ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–64/09/ಎಂಸಿಎ/21–22/597

ಕರ್ನಾಟಕ ಸರ್ಕಾರ
ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಹಾಸನ ಜಿಲ್ಲೆ.
e-mail:hassanddwo@yahoo.in phone: 08172-264546
ಸಂ:ಉನಿಹಾ:ಅಂಕವಿ:ಬಾಹ್ಯಮೂಲ;ಸೇವೆ;2021–22 ದಿನಾಂಕ:16–09–2021
ಟೆಂಡರ್ ಪ್ರಕಟಣೆ
ವಿಷಯ: 2021–22 ನೇ ಸಾಲಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಹಾಸನ ಇಲ್ಲಿಗೆ ಮಾನವ ಸಂಪನ್ಮೂಲ ಸೇವೆಯನ್ನು ಅರ್ಹ ಸೆಕ್ಯುರಿಟಿ ಸಂಸ್ಥೆಗಳ/ಏಜೆನ್ಸಿಗಳ ಮುಖಾಂತರ ನೇಮಕಾತಿ ಮಾಡಲು ಟೆಂಡರ್ ಪ್ರಕಟಣೆ ಹೊರಡಿಸುವ ಬಗ್ಗೆ. ಉಲ್ಲೇಖ: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ. ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ ಟೆಂಡರ್‌ದಾರರು/ಏಜೆನ್ಸಿಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗೆ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಸಲ್ಲಿಸತಕ್ಕದ್ದು. ಟೆಂಡರ್ ವೇಳಾಪಟ್ಟಿ: 1)ಟೆಂಡರ್ ಅರ್ಜಿಯನ್ನು ಪಡೆಯುವ ದಿನಾಂಕ: 17–09–2021 ರಿಂದ 16–10–2021 ಸಂಜೆ 4.30ರೊಳಗೆ 2)ಟೆಂಡರ್ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಅಂತಿಮ ದಿನಾಂಕ: 16–10–2021 ಸಂಜೆ 5.30 ಗಂಟೆಯವರೆಗೆ. 3)ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 18–10–2021 ಬೆಳಿಗ್ಗೆ 11.00 ಗಂಟೆಗೆ. 4)ಇ.ಎಂ.ಡಿ ಮೊತ್ತ: ರೂ. 6,000/– (ಆರು ಸಾವಿರಗಳು ಮಾತ್ರ) 5)ಟೆಂಡರ್ ಅಂದಾಜು ಮೌಲ್ಯ: ರೂ.4.60 ಲಕ್ಷಗಳು 6)ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಛೇರಿ ವಿವರ: ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, 9ನೇ ಕ್ರಾಸ್, ಶಂಕರಮಠ ರಸ್ತೆ, ಕೆ.ಆರ್. ಪುರಂ, ಹಾಸನ–573201 ದೂರವಾಣಿ ಸಂ:08172–264546/295546 E-mail:- hassanddwo @yahoo.in
ಸಹಿ/– ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಹಾಸನ ಜಿಲ್ಲೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/398/2021–22

ಕಾರ್ಯಪಾಲಕ ಅಭಿಯಂತರ ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕೋಲಾರ ವಿಭಾಗ, ಕೋಲಾರ.
"ವಿಜಯಶ್ರೀ ನಿಲಯ" 14ನೇ ವಾರ್ಡ್, ಪೇಟೆಚಾಮನಹಳ್ಳಿ, ಬೈಪಾಸ್, ಕೋಲಾರ–563102
ದೂ: 08152–222331 | ಇ–ಮೇಲ್: eerdwsd.klr@gmail.com
ಸಂಖ್ಯೆ:ಕಾಪಾಅ/ಗ್ರಾಕುನೀ&ಕೋ/04/2020–21 ದಿನಾಂಕ:17.09.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) (ದ್ವಿ–ಲಕೋಟೆ ಪದ್ಧತಿ & ಕೆಡಬ್ಲ್ಯೂ–4)
(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರ ನಿಬಂಧನೆಗೊಳಪಟ್ಟಂತೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ 4215–ಎನ್.ಆರ್.ಡಿ.ಡಬ್ಲ್ಯೂಪಿ ಕೊಳವೆಬಾವಿ ಕೊರೆಯುವ ಯೋಜನೆಗಳ ಅನುಷ್ಠಾನಕ್ಕಾಗಿ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕೋಲಾರ ಜಿಲ್ಲೆಯ ಕೋಲಾರ, ಬಂಗಾರಪೇಟೆ, ಕೆ.ಜಿ.ಎಫ್, ಮಾಲೂರು, ಮುಳಬಾಗಿಲು & ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಕೊರೆಯುವ ಬೋರ್‌ವೆಲ್‌ಗಾಗಿ ಬೋರ್‌ವೆಲ್ ಡ್ರಿಲ್ಲಿಂಗ್ ಏಜೆನ್ಸಿ ಎಂಪ್ಯಾನಲ್‌ಮೆಂಟ್‌ನ್ನು ಐಟಂವಾರು ಟೆಂಡರ್ ಮೂಲಕ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://eproc.karnataka.gov.in ರ ಮೂಲಕ ಸಲ್ಲಿಸಲು ಕೋರಲಾಗಿದೆ. 1) ಪ್ರೀ ಬಿಡ್ ಸಭೆಯ **ದಿನಾಂಕ: 22.09.2021** (ಸ್ಥಳ: ಕೋಲಾರ), 2) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 01.10.2021 ರಂದು 17.00ಗಂಟೆಗೆ,** 3) ತಾಂತ್ರಿಕ ಬಿಡ್ ಟೆಂಡರ್ ತೆರೆಯುವ **ದಿನಾಂಕ: 04.10.2021 ರಂದು 11:00 ಗಂಟೆಗೆ.** 4) ಆರ್ಥಿಕ ಬಿಡ್ ಟೆಂಡರ್ ತೆರೆಯುವ **ದಿನಾಂಕ: 07.10.2021 ರಂದು 11.00 ಗಂಟೆಗೆ** ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ. (ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ)
ಸೂಚನೆ: ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಸಹಾವಾಣಿ ಸಂಖ್ಯೆ: +91 8025501216 ಮತ್ತು +91 802551227ನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಕೋಲಾರ/ಜಿಎ/209/2021–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ–4, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ
ಜಾಹೀರಾತು
2021–22 ಸಾಲಿನ ಶೈಕ್ಷಣಿಕ ವರ್ಷಕ್ಕೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಮತ್ತು ತಾತ್ಕಾಲಿಕ ಸಹಾಯಕ ಗ್ರಂಥಪಾಲಕರು ಹಾಗೂ ತಾತ್ಕಾಲಿಕ ಯೋಜನಾ ಸಹಾಯಕರು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **30.09.2021** ಹೆಚ್ಚಿನ ಮಾಹಿತಿಗಾಗಿ **Janapadauniversity.ac.in** ದೂರವಾಣಿ ಸಂಖ್ಯೆ **08362255180 / 8105462759 / 9448789295** ರ ಮೂಲಕ ಸಂಪರ್ಕಿಸಬಹುದಾಗಿದೆ.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಪ್ರಧಾನ ಕಚೇರಿ, ಸೈರಾ ಬಾಗ್, ನಂ–19/4, 3ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–560052, ದೂರವಾಣಿ: 080–23221320/29551320
E-mail:ksskdc03@gmail.com Website:www.ksskdc.kar.nic.in
2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ ದಿನಾಂಕ ಮುಂದೂಡಿಕೆ
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡ ಯೋಜನೆಗಳಾದ **1. ಸ್ವಯಂ ಉದ್ಯೋಗ ಯೋಜನೆ, 2. ಐರಾವತ ಯೋಜನೆ, 3. ಮೈಕ್ರೋ ಕ್ರೆಡಿಟ್/ಪ್ರೇರಣಾ ಯೋಜನೆ** ಮತ್ತು **4. ಭೂ ಒಡೆತನ ಯೋಜನೆ**ಗಳಿಗೆ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನಿಸಿ ದಿನಾಂಕ 05–08–2021 ರಂದು ಪ್ರಕಟಣೆ ನೀಡಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 20–09–2021 ಎಂದು ತಿಳಿಸಲಾಗಿತ್ತು. ಇದೀಗ ತಾಂತ್ರಿಕ ಕಾರಣಗಳಿಂದ ಸದರಿ ಯೋಜನೆಗೆ **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 30–09–2021 ರವರೆಗೆ ಮುಂದೂಡಲಾಗಿದೆ.** ಅರ್ಹ ಫಲಾಪೇಕ್ಷಿಗಳು ಗಮನಿಸಬೇಕಾಗಿ ವಿನಂತಿ.
ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಅಥವಾ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ರವರನ್ನು ಸಂಪರ್ಕಿಸಬಹುದು
ಸಹಿ/– (ಕೆ. ಬಿ. ಮಲ್ಲಿಕಾರ್ಜುನ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ
ಬೆಂಗಳೂರು
ವಾ.ಸಾ.ಸಂ.ಇ/ಬೆಂ.ನಗರ/1574/ಆಕಾರ್/2021–22
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001.
ದೂ.080–25586520/25589112 ಫ್ಯಾಕ್ಸ್ : 080–25886321
ಇ-ಮೇಲ್: ho@kspcb.gov.in ವೆಬ್‌ಸೈಟ್: http://kspcb.karnataka.gov.in
ಸಂಖ್ಯೆ:ಮಾನಿಮಂ/5/ಬಿಎಲ್‌ಡಿ/2021–22/2766 ದಿನಾಂಕ:09.09.2021
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ 1ನೇ ಕರೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, (ಕೆಎಸ್‌ಪಿಸಿಬಿ) ವತಿಯಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಕಾಮಗಾರಿಯ ಹೆಸರು: ಕಲಬುರ್ಗಿಯಲ್ಲಿ ಸಿಎಕ್ಯೂಎಂ ಸ್ಟೇಷನ್‌ಅನ್ನು ಅಳವಡಿಸಲು ಪ್ರದರ್ಶನ ಫಲಕ ಹಾಗೂ ಪ್ಲಾಟ್‌ಫಾರ್ಮ್ ನಿರ್ಮಾಣ ಮತ್ತು ಸರಿಹೊಂದುವ ಸ್ಟೀಲ್ ರಚನಾತ್ಮಕಗಳನ್ನು ಒದಗಿಸಲು ಟೆಂಡರ್ ಕಾಮಗಾರಿಯ ಅಂದಾಜು ಮೊತ್ತ **ರೂ.7.30 ಲಕ್ಷಗಳು.**
ಹೆಚ್ಚಿನ ಮಾಹಿತಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ಗೆ ಭೇಟಿ ನೀಡುವುದು.
ಸಹಿ/–
ಸದಸ್ಯ ಕಾರ್ಯದರ್ಶಿ
DIPR/DDU/KAVITA/1568/2021-22
“ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ”
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು
ಸಂಖ್ಯೆ:ಕಾಇಂ/ಗ್ರಾಕು.ನೀ.ನೈ ವಿ/ತುಮ/ಎಇ–1/ಟೆಂಡರ್/2021–22 ದಿನಾಂಕ 16.09.2021
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 15/2021–22
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4, (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು ವ್ಯಾಪ್ತಿಯ, 2020–21 ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಡಿ ಅನುಮೋದನೆಯಾಗಿರುವ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 1 (ಇಂಡೆಂಟ್ ನಂ.34490) ಕಾಮಗಾರಿಗೆ ಹಾಗೂ ತುರುವೇಕೆರೆ ತಾಲ್ಲೂಕಿನ–01 ಕಾಮಗಾರಿಗೆ (ಇಂಡೆಂಟ್ ನಂ.34491), ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.karnataka.gov.in ಮುಖಾಂತರ ಫಾರಂ ಫೀ ಮೊತ್ತವನ್ನು ಸಲ್ಲಿಸಿ ಟೆಂಡರ್‌ಗಳನ್ನು online ಮೂಲಕ Download ಮಾಡಿಕೊಂಡು online ಮೂಲಕ ಕಾಮಗಾರಿಗಳನ್ನು ದಿನಾಂಕ **16.09.2021** ರಿಂದ **30.09.2021**ರ ಸಂಜೆ 5.00 ಗಂಟೆ ಒಳಗಾಗಿ ಸಲ್ಲಿಸಬಹುದಾಗಿದೆ. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: **01.10.2021** ಸಂಜೆ 5.30 ಗಂಟೆ ನಂತರ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **08.10.2021** ಬೆಳಿಗ್ಗೆ 11.00 ಗಂಟೆ ನಂತರ ತೆರೆಯಲಾಗುವುದು. ಸದರಿ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು www.eproc.karnataka.gov.in ನಲ್ಲಿ ಲಾಗ್ ಇನ್ ಆಗುವ ಮುಖಾಂತರ ಹಾಗೂ ಈ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2252937. ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ ಮತ್ತು ನೈ ವಿಭಾಗ, ತುಮಕೂರು
DIPR/TMK/299/MCA/2021-22

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ (ಪೂ), ಸಯ್ಯಾಜಿರಾವ್ ರಸ್ತೆ
ಮೈಸೂರು – 570024
ಸಂಖ್ಯೆ: ಮೈನಪಾ/ಕಾಇಂ(ಪೂ)/ಟಿಎನ್–44/21–22 ದಿನಾಂಕ: 17–09–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪಾಲಿಕೆ ಅನುದಾನದಲ್ಲಿ ಮಂಜೂರಾಗಿರುವ ಒಟ್ಟು 04 (ರೂ.200.00 ಲಕ್ಷಗಳು) ಇಂಡೆಂಟ್ ನಂ. 120387, 120360, 120357, 120356 ಕಾಮಗಾರಿಗೆ ಮೇಲೆ ಕಾಣಿಸಿದ ಉಲ್ಲೇಖದನ್ವಯ ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: **18–09–2021**ರ ನಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ **https://eproc.karnataka.gov.in** ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: **27–09–2021** ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: **28–09–2021**. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂ) ಕಚೇರಿಯಿಂದ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್ (ಪೂ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/YC/517/2021-22

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರಸಂ:ಕಾಇಂ:ಲೋಇವಿ:ತುಮ:ಕಿಇಂ–3:ಟೆಂಡರ್–15/2021–22 ದಿನಾಂಕ: 16.09.2021
ಟೆಂಡರ್ ಪ್ರಕಟಣೆ ಸಂ.15/2021–22 ದಿನಾಂಕ: 16.09.2021
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 15/2021–22:ದಿನಾಂಕ 16–09–2021 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 04 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ.516.74ಲಕ್ಷಗಳು,** ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ.41.54ಲಕ್ಷಗಳು,** ಇ.ಎಂ.ಡಿ ಮೊತ್ತ **ರೂ.775200/–ಗಳು.** ಅರ್ಹ ಗುತ್ತಿಗೆದಾರರು : 1,2ಮತ್ತು 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 11 ತಿಂಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **30.09.2021** ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **17.09.2021** ರಿಂದ **01.10.2021**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **01.10.2021** ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **04.10.2021** ಸಂಜೆ 11.00 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **08.10.2021** ಸಂಜೆ 11.00 ಗಂಟೆಗೆ. ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/297/MCA/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
ದೂರವಾಣಿ: 0824-2413205. E-mail ID:supwenlock@gmail.com
ಸಂ:ಎಸ್‌ಯುಪಿ(1)ಸಿ–14/2021–22 ದಿನಾಂಕ: 09.09.2021
ಅಲ್ಪಾವಧಿ ಟೆಂಡರ್ ಅಧಿಸೂಚನೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ವಿಷಯ: ವೆನ್ಲಾಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ಕೋವಿಡ್ ಮತ್ತು ವಿವಿಧ ವಿಭಾಗಗಳ ರೋಗಿಗಳ ಉಪಯೋಗಕ್ಕಾಗಿ ಕನ್ಸ್ಯೂಮೇಬಲ್/ ಡಿಸ್ಪೋಸೇಬಲ್ / ಕೆಮಿಕಲ್ಸ್ / ಮೆಡಿಕಲ್‌ಗ್ಯಾಸ್‌ಗಳನ್ನು ಖರೀದಿಗಾಗಿ ಟೆಂಡರ್ ಅಧಿಸೂಚನೆ.
ವೆನ್ಲಾಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ಕೋವಿಡ್ ಮತ್ತು ವಿವಿಧ ವಿಭಾಗಗಳ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಕನ್ಸ್ಯೂಮೇಬಲ್/ ಡಿಸ್ಪೋಸೇಬಲ್ / ಕೆಮಿಕಲ್ಸ್ / ಮೆಡಿಕಲ್‌ಗ್ಯಾಸ್‌ಗಳ ಅಂದಾಜು ಮೊತ್ತ ರೂ. 99,00,000/– ಖರೀದಿಗಾಗಿ ಕೆ.ಟಿ.ಪಿ.ಪಿ. 1999–2000 ನಿಯಮದಂತೆ **ದ್ವಿ–ಲಕೋಟೆ** ಪದ್ಧತಿಯಲ್ಲಿ ಟೆಂಡರ್‌ಗಳನ್ನು e-procurement portal ಮೂಲಕ ಆಹ್ವಾನಿಸಲಾಗಿದೆ.
ಆಸಕ್ತಿಯುಳ್ಳ ಟೆಂಡರುದಾರರು ಇ–ಟೆಂಡರ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು ಪ್ರೊಸೆಸಿಂಗ್ ಶುಲ್ಕ ರೂ. 550/– ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ–12/2020, ಬೆಂಗಳೂರು, ದಿನಾಂಕ: 22.12.2020 ರಂತೆ ಇ.ಎಂ.ಡಿ ಮೊತ್ತವನ್ನು ಪಾವತಿಸುವ ಬಗ್ಗೆ ಮುಂದಿನ ಆದೇಶದವರೆಗೆ ತಡೆ ಹಿಡಿಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್: www.eproc.karnataka.gov.in ನಲ್ಲಿ **ದಿನಾಂಕ: 24.03.2021** ರಿಂದ ವೀಕ್ಷಿಸಬಹುದು.
(1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ **ದಿನಾಂಕ: 15.09.2021** (2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ **ದಿನಾಂಕ: 29.09.2021 ಅಪರಾಹ್ನ 4.30 ರ ಒಳಗಾಗಿ** (3) ಬಿಡ್‌ಗಳನ್ನು ತೆರೆಯುವ **ದಿನಾಂಕ: 30.09.2021** (ಅಥವಾ ಅಂತಿಮ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದರೆ ಮರುದಿನ ಸರ್ಕಾರಿ ಕೆಲಸದ ದಿನದಂದು ಬಿಡ್‌ಗಳನ್ನು ತೆರೆಯಲಾಗುವುದು). ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಸಹಿದಾರರಿಗೆ ಕಾಯ್ದಿರಿಸಿಕೊಳ್ಳಲಾಗಿದೆ.
ಸಹಿ/– ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು.
DIPR/ADM/MCA/473/21-22 dt.18.09.2021

‘ಗಾಂಧೀಜಿಯನ್ನೇ ಬಿಟ್ಟಿಲ್ಲ ನಾವು..’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಹಿಂದೂ ವಿರೋಧಿ ವಿಚಾರ ಬಂದಾಗ ನಾವು ಗಾಂಧೀಜಿಯನ್ನೇ ಬಿಟ್ಟಿಲ್ಲ. ನೀವು ಯಾವ ಲೆಕ್ಕ? ಹಿಂದೂಗಳ ಮೇಲೆ ನಡೆದ ದಾಳಿಯನ್ನು ಖಂಡಿಸಿ, ಗಾಂಧಿ ಹತ್ಯೆ ಮಾಡಲಿಕ್ಕಾಗುತ್ತದೆ ಎಂದಾದರೆ, ನಿಮ್ಮ ವಿಚಾರದಲ್ಲಿ ನಾವು ಆಲೋಚನೆ ಮಾಡಲು ಸಾಧ್ಯವಿಲ್ಲ ಎನ್ನುತ್ತೀರಾ’ ಎಂದು ಅಖಿಲ ಭಾರತ ಹಿಂದೂ ಮಹಾಸಭಾದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಧರ್ಮೇಂದ್ರ ಅವರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಹಿಂದೂ ದೇವಾಲಯಗಳನ್ನೇ ಗುರಿಯಾಗಿಟ್ಟು, ಧ್ವಂಸ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ತಾಲಿಬಾನ್ ಆಡಳಿತ ಇದೆಯೇ? ತಾಲಿಬಾನ್‌ಗಿಂತ ಕೀಳುಮಟ್ಟದ ಆಡಳಿತವನ್ನು ಬಿಜೆಪಿ ನಡೆಸುತ್ತಿದೆ’ ಎಂದರು.

ದೂರು ದಾಖಲು: ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದ ಅಖಿಲ ಭಾರತ ಹಿಂದೂ ಮಹಾಸಭಾದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಧರ್ಮೇಂದ್ರ ವಿರುದ್ಧ ಮಂಗಳೂರು ಬರ್ಕೆ ಠಾಣೆಯಲ್ಲಿ ದೂರು ದಾಖಲಾಗಿದೆ

ಬೆಂಗಳೂರು ಮಹಾಲಕ್ಷ್ಮಿ ಲೇಔಟ್‌ನ ಲೋಹಿತ್ ಕುಮಾರ್ ಸುವರ್ಣ ಎಂಬುವರು ದೂರು ನೀಡಿದ್ದಾರೆ.

ಹಲವು ಸ್ಥಳಗಳಿಗೆ ಚೆನ್ನೈನ ಅಮೆರಿಕ ರಾಯಭಾರಿ ಕಚೇರಿ ಅಧಿಕಾರಿ ಭೇಟಿ

ಸ್ಮಾರಕಗಳ ಸಂರಕ್ಷಣೆ: ಸಮೀಕ್ಷೆ

• ಎಂ. ಮಹೇಶ

ಮುಖ್ಯಾಂಶಗಳು
- ವಿವಿಧ ವಿಷಯಗಳ ಅಧ್ಯಯನ
- ಸ್ಮಾರಕಗಳಿಗೆ ಮನಸೋತ ಆನ್ ಲೀ

ಪ್ರಜಾವಾಣಿ ವಿಶೇಷ

ಬೆಳಗಾವಿ: ಮೈಸೂರಿನ ಜಯಲಕ್ಷ್ಮಿ ವಿಲಾಸ ಅರಮನೆ, ವಿಜಯಪುರದ ಗೋಳಗುಮ್ಮಟ ಮತ್ತು ತಾಜ್ ಬಾವಡಿ ಸೇರಿದಂತೆ ದಕ್ಷಿಣ ಭಾರತದ ಹಲವು ಐತಿಹಾಸಿಕ ಸ್ಮಾರಕಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸುತ್ತಿರುವ ಚೆನ್ನೈನ ಅಮೆರಿಕ ರಾಯಭಾರಿ ಕಚೇರಿಯ ಅಧಿಕಾರಿಗಳು, ಅವುಗಳಿಗೆ ‘ರಾಯಭಾರಿ ನಿಧಿ’ಯಲ್ಲಿ ಆರ್ಥಿಕ ನೆರವು ಕಲ್ಪಿಸಲು ಯೋಜಿಸಿದ್ದಾರೆ.

ಆನ್ ಲೀ ಶೇಷಾದ್ರಿ

ಐತಿಹಾಸಿಕ, ಪಾರಂಪರಿಕ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ತಾಣಗಳಲ್ಲಿ ಅಧ್ಯಯನ ಪ್ರವಾಸವನ್ನು ಅವರು ಕೈಗೊಂಡಿದ್ದಾರೆ. ಕೆಲವು ದಿನ ಇಲ್ಲಿದ್ದು ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ಆ ತಾಣಗಳ ಮಹತ್ವವನ್ನು ದಾಖಲಿಸಿಕೊಂಡಿದ್ದಾರೆ. ಆಯ್ಕೆಯಾಗುವ ಸ್ಮಾರಕಕ್ಕೆ ಪುನಶ್ಚೇತನ ಕಲ್ಪಿಸುವ ನಿಟ್ಟಿನಲ್ಲಿ ಸಹಾಯಹಸ್ತ ಚಾಚುವುದು ರಾಯಭಾರಿ ಕಚೇರಿಯವರ ಉದ್ದೇಶವಾಗಿದೆ.

ಪ್ರವಾಸದ ವೇಳೆ ನಗರದಲ್ಲಿ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಚೆನ್ನೈನ ಕೌನ್ಸಿಲ್ ಫಾರ್ ಪಬ್ಲಿಕ್ ಡಿಪ್ಲೊಮಸಿ ಅಂಡ್ ಪಬ್ಲಿಕ್ ಅಫೇರ್ಸ್‌ನ ಸಾರ್ವಜನಿಕ ವ್ಯವಹಾರಗಳ ಅಧಿಕಾರಿ ಆನ್ ಲೀ ಶೇಷಾದ್ರಿ ಅವರು ವಿವಿಧ ಕಾರ್ಯಕ್ರಮಗಳ ಕುರಿತು ಮಾಹಿತಿ ಹಂಚಿಕೊಂಡರು. ‘ಕರ್ನಾಟಕ, ಕೇರಳ ಹಾಗೂ ತಮಿಳುನಾಡಿನಲ್ಲಿನ ಕೆಲವು ಸಾಂಸ್ಕೃತಿಕ ಸಂಪತ್ತಿನ ಸಂರಕ್ಷಣೆ’ಗೆ ರಾಯಭಾರಿ ಕಚೇರಿ ಕ್ರಮ ವಹಿಸಲಿದೆ ಎಂದು ತಿಳಿಸಿದರು.

ಪುನರುಜ್ಜೀವನ ಕಾರ್ಯ: ‘ಅಮೆರಿಕದ ಎಎಫ್‌ಸಿಪಿ (ಅಂಬಾಸಿಡರ್ಸ್ ಫಂಡ್ ಫಾರ್ ಕಲ್ಚರಲ್ ಪ್ರಿಸರ್ವೇಷನ್) ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಹಾಗೂ ಪಾರಂಪರಿಕ ತಾಣಗಳ ಸಂರಕ್ಷಣೆಗೆ ಅನುದಾನ ದೊರೆಯುತ್ತದೆ. ಇದು ಜಾಗತಿಕವಾಗಿ ನೀಡುವ ನಿಧಿಯಾಗಿದೆ. ಭಾರತದಲ್ಲಿ ಉತ್ತರದ ತಾಣಗಳಿಗೆ ಹೆಚ್ಚಿನ ಪಾಲು ದೊರೆತಿರುವುದನ್ನು ಗಮನಿಸಲಾಗಿದೆ. ದಕ್ಷಿಣ ಭಾರತಕ್ಕೂ ವಿಸ್ತರಿಸಲು ಇಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ. ಆಯ್ಕೆಯಾಗುವ ಐತಿಹಾಸಿಕ ತಾಣಗಳಲ್ಲಿ ಸ್ಥಳೀಯ ಸರ್ಕಾರದ ಸಹಕಾರದೊಂದಿಗೆ ಪುನರುಜ್ಜೀವನ ಕಾರ್ಯ ಕೈಗೊಳ್ಳಲಾಗುವುದು’ ಎನ್ನುತ್ತಾರೆ ಅವರು.

‘ವಿಜಯಪುರದಲ್ಲಿ ಸ್ಮಾರಕಗಳಿಗೆ ಮಾರು ಹೋಗಿದ್ದೇನೆ. ಗೋಳಗುಮ್ಮಟ, ತಾಜ್ ಬಾವಡಿ, ಇಬ್ರಾಹಿಂ ರೋಜಾ ಮೊದಲಾದವುಗಳನ್ನು ವೀಕ್ಷಿಸಿದ್ದೇವೆ. ಅವುಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕಾದ ಅಗತ್ಯವಿದೆ ಎನಿಸಿದೆ. ಸಮೀಕ್ಷೆಯ ಬಳಿಕ ವರದಿಯನ್ನು ಅಮೆರಿಕದ ರಾಯಭಾರಿ ಕಚೇರಿಗೆ ಸಲ್ಲಿಸಲಾಗುವುದು. ಅಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ಬಳಿಕ ಅನುದಾನದ ಬಗ್ಗೆ ನಿರ್ಧರಿಸಲಾಗುತ್ತದೆ. ಕಾಯಕಲ್ಪಕ್ಕೆ ಕೈಗೆತ್ತಿಕೊಳ್ಳಲಾಗುವ ತಾಣಕ್ಕೆ ಅಮೆರಿಕ ರಾಯಭಾರಿಯೇ ಭೇಟಿ ಕೊಡುವರು’ ಎಂದು ಮಾಹಿತಿ ನೀಡಿದರು.

55,000 ವೀಸಾಕ್ಕೆ ಅನುಮೋದನೆ

‘ಅಮೆರಿಕದಲ್ಲಿ ವ್ಯಾಸಂಗಕ್ಕೆ ಭಾರತೀಯ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದ್ದಾರೆ. ಈ ಬೇಸಿಗೆಯಲ್ಲಿ ದಾಖಲೆಯ 55,000 ಮಂದಿಯ ವೀಸಾಕ್ಕೆ ಅನುಮೋದನೆ ಸಿಕ್ಕಿದೆ’ ಎಂದು ಆನ್ ಲಿ ತಿಳಿಸಿದರು.

‘ಎಜುಕೇಷನ್ ಯುಎಸ್‌ಎ’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿ ಒದಗಿಸುವ ಕೆಲಸವನ್ನು ಉಚಿತವಾಗಿ ಮಾಡುತ್ತಿದ್ದೇವೆ. ಬೆಂಗಳೂರಿನವರಿಗೆಂದೇ ಯಾಶ್ನಾ ಟ್ರಸ್ಟ್ ಸಹಯೋಗದಲ್ಲಿ ನಡೆಸುತ್ತಿದ್ದೇವೆ. ಅಮೆರಿಕದಲ್ಲಿರುವ ಮಾನ್ಯತೆ ಪಡೆದ ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಬಗ್ಗೆ ಮಾಹಿತಿ ನೀಡುತ್ತಿದ್ದೇವೆ. 4,500ಕ್ಕೂ ಹೆಚ್ಚಿನ ವಿಶ್ವವಿದ್ಯಾಲಯಗಳಿದ್ದು, ಭಾರತದ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು’ ಎಂದು ತಿಳಿಸಿದರು.

‘ಫುಲ್‌ಬ್ರೈಟ್’ ಶಿಕ್ಷಣ ವಿನಿಮಯ ಕಾರ್ಯಕ್ರಮದಲ್ಲಿ ಅಲ್ಲಿನ ವಿದ್ಯಾರ್ಥಿಗಳು ಇಲ್ಲಿಗೆ ಹಾಗೂ ಇಲ್ಲಿನವರು ಅಮೆರಿಕದಲ್ಲಿ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಹವಾಮಾನ ವೈಪರೀತ್ಯದ ಬಗ್ಗೆ ಹೊಸದಾಗಿ ಫೆಲೋಶಿಪ್ ಆರಂಭಿಸುತ್ತಿದ್ದೇವೆ. ಅತ್ಯುತ್ತಮ ತಯಾರಿ ಮತ್ತು ಶೈಕ್ಷಣಿಕವಾಗಿ ಸಾಧನೆ ತೋರುವ ಭಾರತೀಯ ವಿದ್ಯಾರ್ಥಿಗಳು ಮತ್ತಷ್ಟು ಬರಲೆಂದು ನಮ್ಮ ವಿಶ್ವವಿದ್ಯಾಲಯಗಳು ಬಯಸುತ್ತಿವೆ’ ಎಂದು ಹೇಳಿದರು.

₹2 ಲಕ್ಷ ಲಂಚ: ಇನ್‌ಸ್ಪೆಕ್ಟರ್ ಬಂಧನ

ಪ್ರಜಾವಾಣಿ ವಾರ್ತೆ

ರಾಘವೇಂದ್ರ

ಬೆಂಗಳೂರು: ಜಮೀನು ವಿವಾದದ ಬಗ್ಗೆ ಪ್ರಕರಣ ದಾಖಲಿಸಿ ತನಿಖೆ ನಡೆಸಲು ₹2 ಲಕ್ಷ ಲಂಚ ಪಡೆಯುತ್ತಿದ್ದ ಚಿಕ್ಕಜಾಲ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ರಾಘವೇಂದ್ರ ಎಸಿಬಿ(ಭ್ರಷ್ಟಾಚಾರ ನಿಗ್ರಹ ದಳ) ಬಲೆಗೆ ಬಿದ್ದಿದ್ದಾರೆ.

‘ಲಂಚ ಹಣದ ಸಮೇತ ರಾಘವೇಂದ್ರ ಅವರನ್ನು ಬಂಧಿಸಲಾಗಿದೆ. ತನಿಖೆ ಮುಂದುವರಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಫಲಕ ಕಿತ್ತು ಹಾಕಿರುವ ಕುರಿತು ಚಿಕ್ಕಜಾಲದ ನಿವಾಸಿಯೊಬ್ಬರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲು ₹10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ರಾಘವೇಂದ್ರ, ₹8 ಲಕ್ಷವನ್ನು ಈ ಹಿಂದೆಯೇ ಪಡೆದಿದ್ದರು. ಶನಿವಾರ ₹2 ಲಕ್ಷ ಸ್ವೀಕರಿಸುವಾಗ ದಾಳಿ ನಡೆಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಕ್ಲಬ್ ಹೌಸ್ — ಮುಕ್ತ ಸಂವಾದ

ಪ್ರಜಾವಾಣಿ ಆಲದಮರ — 10.30 ರಿಂದ 12.30

ಕನ್ನಡ ಧಾರಾವಾಹಿಗಳಲ್ಲಿ ಮಹಿಳೆ

ಪಿ. ಶೇಷಾದ್ರಿ, ಧಾರಾವಾಹಿ, ಚಲನಚಿತ್ರ ನಿರ್ದೇಶಕ
ಆರ್. ಪ್ರೀತಂ ಶೆಟ್ಟಿ, ಕಿರುತೆರೆ ಧಾರಾವಾಹಿ, ಚಲನಚಿತ್ರ ನಿರ್ದೇಶಕ.
ರಂಜನಿ ರಾಘವನ್, ಕನ್ನಡತಿ ಧಾರಾವಾಹಿಯ ‘ಭುವನೇಶ್ವರಿ ಟೀಚರ್’
ನಂದಿನಿ ವಿಠ್ಠಲ್, ಮುಕ್ತ ಮುಕ್ತ ಧಾರಾವಾಹಿಯ ‘ದೇವಯಾನಿ’.
ಮಾಧುರಿ ಶಿವಣಗಿ, ಕಿರುತೆರೆ ಚಿತ್ರಕಥೆ ಬರಹಗಾರ್ತಿ

ಹರಟೆ ಕಟ್ಟೆ ಮಧ್ಯಾಹ್ನ 3 ರಿಂದ

ನೀಟ್ ಪರೀಕ್ಷೆ ಬೇಕೋ? ಬೇಡವೋ?

ಚರ್ಚೆಯಲ್ಲಿ ಭಾಗವಹಿಸುವವರು: ಉಮರ್ ಯು.ಹೆಚ್. ಸ್ಥಾಪಕ ಅಧ್ಯಕ್ಷ, ಕರಿಯರ್ ಗೈಡೆನ್ಸ್ ಮತ್ತು ಇನ್ಫಾರ್ಮೇಶನ್ ಸೆಂಟರ್, ಮಂಗಳೂರು ಮತ್ತು **ಡಾ. ಸತೀಶ್ ಕುಮಾರ ಭಂಡಾರಿ,** ಕುಲಪತಿ, ನಿಟ್ಟೆ ವಿಶ್ವವಿದ್ಯಾಲಯ, ಮಂಗಳೂರು

ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ಮಧ್ಯಾಹ್ನ 3: ಹರಟೆಕಟ್ಟೆ, 4: ವೈದ್ಯಮಿತ್ರ, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್

ಪ್ರಜಾವಾಣಿ ಕನ್ನಡ ಧ್ವನಿ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ — ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು ‘Deccan Herald--Prajavani Relief Trust’ ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಎಇ ಶ್ರೀಕಂಠಯ್ಯ ಸೇರಿ ಐವರು ಎಸಿಬಿ ಬಲೆಗೆ

ಪ್ರಜಾವಾಣಿ ವಾರ್ತೆ


ಶ್ರೀಕಂಠಯ್ಯ

ಮಡಿಕೇರಿ: ಕಾಮಗಾರಿಯ ಟೆಂಡರ್ ನೀಡಲು ಗುತ್ತಿಗೆದಾರರಿಂದ ಲಂಚ ಪಡೆಯುತ್ತಿದ್ದ ವೇಳೆ ಕೊಡಗು ಜಿಲ್ಲಾ ಪಂಚಾಯಿತಿಯ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಶ್ರೀಕಂಠಯ್ಯ ಸೇರಿ ಐವರು ಶನಿವಾರ ಭ್ರಷ್ಟಾಚಾರ ನಿಗ್ರಹ ದಳದ ಬಲೆಗೆ ಬಿದ್ದಿದ್ದಾರೆ.

‘ಸಹಾಯಕ ಎಂಜಿನಿಯರ್ ತೌಸಿಫ್, ದ್ವಿತೀಯ ದರ್ಜೆ ಸಹಾಯಕ ರಮೇಶ್, ಕಚೇರಿ ಸಿಬ್ಬಂದಿ ಕವನ್ ಹಾಗೂ ಮಧ್ಯವರ್ತಿ ಸಂತೋಷ್ ಬಂಧಿತರು. ಕಾರು, ಮನೆ ಹಾಗೂ ಕಚೇರಿಯಲ್ಲಿದ್ದ ಒಟ್ಟು ₹ 4.10 ಲಕ್ಷವನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಎಸಿಬಿ ಎಸ್‌ಪಿ ಅರುಣಾಂಶು ಗಿರಿ ಮಾಹಿತಿ ನೀಡಿದರು.

‘ಕಚೇರಿಯ ಮೇಲೆ ದಾಳಿ ಕಾರ್ಯಾಚರಣೆ ನಡೆಯುತ್ತಿದ್ದಂತೆ, ಗುತ್ತಿಗೆದಾರರಿಂದ ಪಡೆದಿದ್ದ ಹಣವನ್ನು ಆರೋಪಿಗಳು ಕಿಟಕಿಯಿಂದ ಪಕ್ಕದ ಕಾಡಿಗೆ ಎಸೆದಿದ್ದರು. ಅಧಿಕಾರಿಗಳು ಹುಡುಕಿ ವಶಕ್ಕೆ ಪಡೆದರು. ಶ್ರೀಕಂಠಯ್ಯ ಅವರ ಮನೆಯ ಮೇಲೂ ದಾಳಿ ನಡೆದಿದೆ. ಗುತ್ತಿಗೆದಾರ ನಂದ ಅವರು ದಾಖಲೆ ಸಹಿತ ದೂರು ಸಲ್ಲಿಸಿದ್ದರು.

‘ಕಡಗದಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಯಾದ ರಸ್ತೆ, ಸೇತುವೆ ನಿರ್ಮಿಸಲು ₹ 23 ಲಕ್ಷದ ಕಾಮಗಾರಿ ಹಾಗೂ ನಗರದ ಸ್ಟೋನ್ ಹಿಲ್‌ನಲ್ಲಿ ಕಸ ವಿಲೇವಾರಿ ಘಟಕ ನಿರ್ಮಿಸಲು ₹ 28.5 ಲಕ್ಷ ಮೊತ್ತದ ಕಾಮಗಾರಿಗೆ ಗುತ್ತಿಗೆದಾರ ಅರ್ಜಿ ಸಲ್ಲಿಸಿದ್ದರು. ಗುತ್ತಿಗೆ ನೀಡಲು ಅಧಿಕಾರಿಗಳು ಲಂಚ ಕೇಳಿದ್ದರು’ ಎನ್ನಲಾಗಿದೆ.

‘ತೌಸಿಫ್ ಮುಂಗಡವಾಗಿ ₹ 14 ಸಾವಿರ ಪಡೆದುಕೊಂಡಿದ್ದ. ಶನಿವಾರ ಕಚೇರಿಯಲ್ಲಿ ಎಲ್ಲರೂ ಸೇರಿ ₹ 2.53 ಲಕ್ಷ ಲಂಚ ಪಡೆಯುವ ವೇಳೆ ಬಂಧಿಸಲಾಯಿತು. ಆರೋಪಿಗಳು ಮಧ್ಯವರ್ತಿ ಸಂತೋಷ್ ಮೂಲಕ ಲಂಚದ ಹಣ ಪಡೆದುಕೊಳ್ಳುತ್ತಿದ್ದರು’ ಎಂದು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅಧಿಕಾರಿಗಳು ಮಾಹಿತಿ ನೀಡಿದರು. ಎರಡು ವರ್ಷಗಳ ಹಿಂದೆ ಎನ್‌ಡಿಆರ್‌ಎಫ್ ಅನುದಾನ ದುರ್ಬಳಕೆಯ ಆರೋಪದ ಮೇಲೆ ಶ್ರೀಕಂಠಯ್ಯ ಅಮಾನತುಗೊಂಡಿದ್ದರು. ಬಳಿಕ ಸೇವೆಗೆ ಮರಳಿದ್ದರು.

ಐಟಿಐ ಅತಿಥಿ ಬೋಧಕರ ಪ್ರತಿಭಟನೆ ನಾಳೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ತಡೆಹಿಡಿತ ವೇತನವನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ತರಗತಿ ಬಹಿಷ್ಕರಿಸಿ ಮೌರ್ಯ ವೃತ್ತದಲ್ಲಿ ಸೋಮವಾರ ಬೆಳಿಗ್ಗೆ ಪ್ರತಿಭಟನೆ ನಡೆಸಲು ಸರ್ಕಾರಿ ಐಟಿಐ ಅತಿಥಿ ಬೋಧಕರು ನಿರ್ಧರಿಸಿದ್ದಾರೆ.

2019–20 ಮತ್ತು 2020–21ನೇ ಸಾಲಿನ ಲಾಕ್‌ಡೌನ್ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿ ಡಿಪ್ಲೊಮಾ, ಪದವಿ ಕಾಲೇಜುಗಳ ಉಪನ್ಯಾಸಕರಿಗೆ ವೇತನ ಮಂಜೂರು ಮಾಡಲಾಗಿದೆ. ಆದರೆ, ಸರ್ಕಾರಿ ಐಟಿಐಗಳಲ್ಲಿ ಕೆಲಸ ಮಾಡುವ ಅತಿಥಿ ಬೋಧಕರಿಗೆ ಈ ಅವಧಿಯ ವೇತನವನ್ನು ಕೌಶಲಾಭಿವೃದ್ಧಿ ಇಲಾಖೆ ನೀಡಿಲ್ಲ.

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್.,
(ಕರ್ನಾಟಕ ಸರ್ಕಾರದ ಅಧೀನ ಉದ್ಯಮ)
Paints with Royal Legacy SINCE 1937
ಹೊಸ ಬನ್ನಿಮಂಟಪ ಬಡಾವಣೆ, ಮೈಸೂರು – 570 015, ಕರ್ನಾಟಕ.
ದೂ.ಸಂ.: 91-821-2493831/2497469/2499340 Email: accts-mpvl@karnataka.gov.in
ಉಲ್ಲೇಖ: ಮೈಪೆವಾಲಿ/2021–22/ಹರಾಜು22&23 ದಿನಾಂಕ: 16.09.2021

ಸ್ಥಿರ ಠೇವಣಿಗಳಿಗಾಗಿ ಇ– ಬಿಡ್ಡಿಂಗ್ ಆಹ್ವಾನ

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿ., (ಮೈಪೆವಾಲಿ.,) ಸಾರ್ವಜನಿಕ ವಲಯದ ಬ್ಯಾಂಕ್ (PSU)/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳಲ್ಲಿ (RRB) ಮತ್ತು ಖಾಸಗಿ ವಲಯದ ಬ್ಯಾಂಕ್ ಗಳಲ್ಲಿ (Pvt.SCB) ತನ್ನ ಹೆಚ್ಚುವರಿ ಹಣವನ್ನು 366 ದಿನಗಳಿಗೆ ವಿನಿಯೋಗಿಸಲು ಉದ್ದೇಶಿಸಿದೆ. ನಿಗದಿತ ಮೊತ್ತ ಮತ್ತು ಅವಧಿ ಮತ್ತು ಇತರೇ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ವಿವರಗಳು	ಹೂಡಿಕೆಯ ಮೊತ್ತ	ದಿನಗಳು
01.	ಸಾರ್ವಜನಿಕ ವಲಯದ ಬ್ಯಾಂಕ್/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್	25.00 ಕೋಟಿ	366 ದಿನಗಳು
02.	ಖಾಸಗಿ ವಲಯದ ಬ್ಯಾಂಕ್	3.60 ಕೋಟಿ	366 ದಿನಗಳು

ಇ ಹರಾಜಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ– ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ ಹರಾಜಿಗೆ ಸಂಬಂಧಿಸಿದ ವೇಳಾಪಟ್ಟಿ ಈ ಕೆಳಗಿನಂತಿದೆ.

● ಇ ಹರಾಜು ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿ: 16.09.2021 ● ಅನುಬಂಧ–ಎ ಮತ್ತು ಬಿ, ಇ– ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಲು ಕೊನೆಯ ದಿ: 27.09.2021 ಮಧ್ಯಾಹ್ನ 4–00 ಗಂಟೆ ಒಳಗೆ. ● ನೇರ ಹರಾಜು: 01.10.2021 ಬೆಳಗ್ಗೆ 11.00 ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳ್ಳಲಿದೆ.

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್ ಪರವಾಗಿ
ಸಹಿ/–
ಪ್ರಧಾನ ವ್ಯವಸ್ಥಾಪಕರು (ಆಡಳಿತ)/
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ (TIA)

DIPR/DDMYS/MCA/519/2021-22

ಬೆಂಗಳೂರು ನಗರ ವಿಶ್ವವಿದ್ಯಾಲಯ BENGALURU CITY UNIVERSITY
ಆಗು ನೀ ಅನಿಕೇತನ BE BOUNDLESS
ಸೆಂಟ್ರಲ್ ಕಾಲೇಜು ಆವರಣ, ಡಾ॥. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ದೂರವಾಣಿ ಸಂ: 080 – 22131385/22961016, ಇ–ಮೇಲ್: registrarbcu@gmail.com
ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಅಧಿ/2021–22 ದಿನಾಂಕ: 18.09.2021

ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ

2021–22 ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ (ಬೆಂ.ನ.ವಿ) ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

I. **ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ / ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:**

ಅ. ಕಲಾ ನಿಕಾಯ: (1) ಎಂ.ಎ: ಕನ್ನಡ, ಇಂಗ್ಲೀಷ್, ಫ್ರೆಂಚ್, ಜರ್ಮನ್, ಸ್ಪಾನಿಷ್, ಜಪಾನೀಸ್, ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಕಾರ್ಯ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ದೃಶ್ಯ ಕಲೆ, ನಗರ ಅಧ್ಯಯನ ಮತ್ತು ಯೋಜನೆ.

ಆ. ವಿಜ್ಞಾನ ನಿಕಾಯ: (1) ಎಂ.ಎಸ್ಸಿ.: ಪ್ರಾಣಿವಿಜ್ಞಾನ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ರಸಾಯನಶಾಸ್ತ್ರ, ಗಣಿತ, ಸೂಕ್ಷ್ಮಜೀವ ಶಾಸ್ತ್ರ, ಭೌತಶಾಸ್ತ್ರ, ಸಸ್ಯವಿಜ್ಞಾನ, ಮನಃಶಾಸ್ತ್ರ, ಮಾನಸಿಕ ಸಮಾಲೋಚನೆ ಮತ್ತು ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ, ಪರಿಸರ ವಿಜ್ಞಾನ, ಗಣಕ ವಿಜ್ಞಾನ.

ಇ. ವಾಣಿಜ್ಯ ನಿಕಾಯ: (1) ವಾಣಿಜ್ಯ ಸ್ನಾತಕೋತ್ತರ (ಎಂ.ಕಾಂ), (2) ಸ್ವಯಂ–ಪೋಷಿತ (Self Financing) ವಿಷಯಗಳು: ಎಂ.ಕಾಂ. (ಫೈನಾನ್ಸ್ ಮತ್ತು ಅಕೌಂಟಿಂಗ್), ಎಂ.ಕಾಂ. (ಇಂಟರ್‌ನ್ಯಾಷನಲ್ ಬಿಸಿನೆಸ್) ಎಂ.ಟಿ.ಟಿ.ಎಂ. (ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರಾವಲ್ ಮ್ಯಾನೇಜ್‌ಮೆಂಟ್). ಎಂ. ಎಂ. ಎಸ್ (ಮಾಸ್ಟರ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್)

ಈ. ಶಿಕ್ಷಣ ನಿಕಾಯ: ಎಂ.ಎಡ್ (ಶಿಕ್ಷಣ)

ಉ. ಎಲ್.ಎಲ್.ಎಂ.

II. **ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

1) ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯದ ಪಾಲಿನ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.
2) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
3) ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು.
4) ಅರ್ಜಿ ಶುಲ್ಕ ರೂ. 200/– ಪ್ರತಿ ಅರ್ಜಿಗೆ (ಪ.ಜಾ/ಪ.ಪಂ, ಪ್ರವರ್ಗ–1 ಮತ್ತು ತೃತೀಯಲಿಂಗ ಅಭ್ಯರ್ಥಿಗಳಿಗೆ ರೂ. 100/– ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ ಅರ್ಜಿ ಶುಲ್ಕವನ್ನು ಪಾವತಿಸಬೇಕು.
5) ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿ ಮತ್ತು ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: http://bcu.ac.in ನ್ನು ಸಂಪರ್ಕಿಸಲು ಕೋರಿದೆ.
6) ಅರ್ಜಿಯನ್ನು ಆನ್‌ಲೈನ್ ಮುಖಾಂತರವೇ ಸಲ್ಲಿಸಬೇಕು (ಜಾಲತಾಣ: http://bcu.ac.in)
7) **ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಒಂದು ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ “ಅಧ್ಯಕ್ಷರು, ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001” ಈ ವಿಳಾಸಕ್ಕೆ ಕಳುಹಿಸತಕ್ಕದ್ದು.**
8) ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು.
9) **ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ:080–22961016 / 22131385 ಮಿಂಚಂಚೆ: registrarbcu@gmail.com**

ಪ್ರವೇಶ ಪ್ರಕ್ರಿಯೆಯ ತಾತ್ಕಾಲಿಕ ವೇಳಾ ಪಟ್ಟಿ

1.	ಅಂತರಜಾಲದಲ್ಲಿ ಅರ್ಜಿ ನಮೂನೆ ಲಭ್ಯತೆ ದಿನಾಂಕ	20.09.2021
2.	ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	05.10.2021
3.	ರೂ.100/– ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	13.10.2021
4.	ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ	13.10.2021
5.	ಜೇಷ್ಠತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	18.10.2021
6.	ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ	21.10.2021
7.	ಕಲಾ ಮತ್ತು ಶಿಕ್ಷಣ ವಿಭಾಗಗಳಿಗೆ , ವಿಜ್ಞಾನ ವಿಷಯ ಮತ್ತು ವಾಣಿಜ್ಯ ವಿಭಾಗಗಳಿಗೆ ಪ್ರವೇಶ ಪ್ರಕ್ರಿಯೆಯ ದಿನಾಂಕಗಳು	22.10.2021 ರಿಂದ 27.10.2021
8.	ಪ್ರಥಮ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ದಿನಾಂಕ	02.11.2021

DIPR/DDU/RO1583/2021-22 ಸಹಿ/–, ಕುಲಸಚಿವರು

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, “ಸಂಪರ್ಕ ಸೌಧ”, ಡಾ. ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇಮೇಲ್: cekrdcl@gmail.com ವೆಬ್‌ಸೈಟ್: http://www.krdcl.in
ಸಂಖ್ಯೆ: ಕೆಆರ್‌ಡಿಸಿಎಲ್/ಐಎಫ್‌ಬಿ/2021–22/10 ದಿನಾಂಕ: 18.09.2021

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

1) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆಆರ್‌ಡಿಸಿಎಲ್), ಐಟಂದರದ ಟೆಂಡರ್ ಆಧಾರದ ಮೇಲೆ ದ್ವಿಲಕೋಟೆ ಪದ್ಧತಿಯಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರ ಅಗತ್ಯತೆಯಂತೆ ಸಂಬಂಧಿತ ಕಾಮಗಾರಿಗಳಲ್ಲಿ ಅನುಭವವಿರುವ ಏಜೆನ್ಸಿಗಳಿಂದ ಆಫರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಕೋಟಿಗಳಲ್ಲಿ)	ಇಎಂಡಿ ಮೊತ್ತ	ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿದಂತೆ)
1	ಬೆಂಗಳೂರು ನಗರದಲ್ಲಿ ಬಿ–ಟ್ರ್ಯಾಕ್/ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸರಿಗಾಗಿ ಸಾಫ್ಟ್‌ವೇರ್‌ನೊಂದಿಗೆ ಬಾಡಿ ವಾರ್ನ್ ಕ್ಯಾಮೆರಾ, ಲೈವ್ ಸ್ಟ್ರೀಮಿಂಗ್, ಟ್ರ್ಯಾಕಿಂಗ್ ಮತ್ತು ಎವಿಡೆನ್ಸ್ ಮ್ಯಾನೇಜ್‌ಮೆಂಟ್ ವ್ಯವಸ್ಥೆಯನ್ನು ಒದಗಿಸುವುದು ಮತ್ತು ಕಾರ್ಯಚಾಲನೆಗೊಳಿಸುವ ಕಾಮಗಾರಿ. **ಟೆಂಡರ್ ಸಂಖ್ಯೆ: ಕೆಆರ್‌ಡಿಸಿಎಲ್/2021–22/ಬಿಟಿ/ವರ್ಕ್_ ಇಂಡೆಂಟ್372**	4.55	ಇ–ಪೋರ್ಟಲ್‌ನಂತೆ ಮತ್ತು ಬಿಡ್ಡಿಂಗ್ ದಾಖಲೆಯಲ್ಲಿ ಒದಗಿಸಲಾದ ಅನುಬಂಧದ ಪ್ರಕಾರ ಘೋಷಣೆಯನ್ನು ಒದಗಿಸಬೇಕು.	1 ತಿಂಗಳು
2	ಬೆಂಗಳೂರು ನಗರದಲ್ಲಿ ಬಿ–ಟ್ರ್ಯಾಕ್/ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸರಿಗಾಗಿ ಕೊಲ್ಯಾಪ್ಸಿಬಲ್ ಬ್ಯಾರಿಕೇಡ್ ಒದಗಿಸುವುದು. **ಟೆಂಡರ್ ಸಂಖ್ಯೆ: ಕೆಆರ್‌ಡಿಸಿಎಲ್/2021–22/ಬಿಟಿ/ವರ್ಕ್_ ಇಂಡೆಂಟ್367/2ನೇ ಕರೆ.**	1.00	ಇ–ಪೋರ್ಟಲ್‌ನಂತೆ ಮತ್ತು ಬಿಡ್ಡಿಂಗ್ ದಾಖಲೆಯಲ್ಲಿ ಒದಗಿಸಲಾದ ಅನುಬಂಧದ ಪ್ರಕಾರ ಘೋಷಣೆಯನ್ನು ಒದಗಿಸಬೇಕು.	2 ತಿಂಗಳು

2) ಆಸಕ್ತ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಬಿಡ್‌ಗಳು ಮತ್ತು ಇಎಂಡಿಯನ್ನು (ಎಲೆಕ್ಟ್ರಾನಿಕ್ ವಿಧಾನ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸಲ್ಲಿಸಬೇಕು.

3) ವಿವಿಧ ಚಟುವಟಿಕೆಗಳ ಟೆಂಡರ್ ದಿನಾಂಕಗಳು ಈ ಕೆಳಗಿನಂತಿವೆ:

ಎ) ಬಿಡ್ ಪೂರ್ವ ಸಭೆಯನ್ನು ದಿನಾಂಕ: **28.09.2021ರಂದು 11.30 ಗಂಟೆಗೆ ಕೆಆರ್‌ಡಿಸಿಎಲ್ ಕೇಂದ್ರ ಕಚೇರಿ, ಬೆಂಗಳೂರು** ಇಲ್ಲಿನ ಮೇಲ್ಕಂಡ ವಿಳಾಸದಲ್ಲಿ ನಡೆಸಲಾಗುವುದು ಹಾಗೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿದಾರರು ಇ–ಮೇಲ್:cekrdcl@gmail.com ಮೂಲಕ ಸಲ್ಲಿಸಬೇಕು.

ಬಿ) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **18.10.2021ರ 17.30 ಗಂಟೆವರೆಗೆ.**

ಸಿ) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **21.10.2021ರಂದು 11.00 ಗಂಟೆಗೆ** ತೆರೆಯಲಾಗುವುದು.

ಟೆಂಡರ್ ಷೆಡ್ಯೂಲ್‌ನಲ್ಲಿ ಯಾವುದೇ ಬದಲಾವಣೆ, ತಿದ್ದುಪಡಿ ಇದ್ದಲ್ಲಿ ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೇವಲ ಇ–ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

DIPR/DDU/YC/1577/2021-22

ಸಹಿ/–
ಮುಖ್ಯ ಅಭಿಯಂತರರು
ಕೆಆರ್‌ಡಿಸಿಎಲ್

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
KARNATAKA THANDA
#19/4, 2ನೇ ಮಹಡಿ, ಸೈರ್‌ಬಾಗ್ ಬಿಲ್ಡಿಂಗ್, ಕನ್ನಿಂಗ್ ಹ್ಯಾಂ ರೋಡ್, ಬೆಂಗಳೂರು–560052,
ಕಛೇರಿ ದೂರವಾಣಿ:080–22285561,62,63,65
E-mail:ktdclit@gmail.com, Website: www.banjarathanda.kar.nic.in

2021–22ನೇ ಸಾಲಿನ ನಿಗಮದಿಂದ ಉಚಿತವಾಗಿ ನೀಡಲಾಗುವ ವಿವಿಧ ತರಬೇತಿ ಮತ್ತು ಕಲಾಮಳಾವೊ ಕಾರ್ಯಕ್ರಮಗಳಿಗೆ ಪರಿಶಿಷ್ಟ ಜಾತಿಯ ಬಂಜಾರ /ಲಂಬಾಣಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ.

ತರಬೇತಿ ಕಾರ್ಯಕ್ರಮಗಳು

1. **ವಾಹನ ಚಾಲನಾ ತರಬೇತಿ:** ಲಘು ವಾಹನ, ಭಾರೀ ವಾಹನ, ಜೆಸಿಬಿ ಮತ್ತು ಹಿಟ್ಯಾಚಿ ವಾಹನಗಳ ಚಾಲನ ತರಬೇತಿಯನ್ನು ಕೆಎಸ್‌ಆರ್‌ಟಿಸಿ ತರಬೇತಿ ಕೇಂದ್ರಗಳ ಮೂಲಕ ಹಾಗೂ ತಾಲ್ಲೂಕು ಮಟ್ಟದಲ್ಲಿ ನೀಡಲಾಗುವುದು.
2. **ವಾಹನ ರಿಪೇರಿ / ಸರ್ವೀಸ್ ತರಬೇತಿ: ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ನ್ಯಾಷನಲ್ ಟ್ರೈನಿಂಗ್ ಫೆಸಿಲಿಟಿ ಫಾರ್ ಸ್ಕಿಲ್ಸ್** ಸಹಯೋಗದಲ್ಲಿ ಮುದ್ದೇನಹಳ್ಳಿಯಲ್ಲಿ ವಿವಿಧ ಹಂತದ 2 ರಿಂದ 4 ತಿಂಗಳ ಅವಧಿಯ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ರಿಪೇರಿ/ಸರ್ವೀಸ್ ತರಬೇತಿ ನೀಡಲಾಗುತ್ತದೆ.
3. **ಸೈನಿಕ ಮತ್ತು ಸಂಬಂಧಿತ ಪೂರ್ವಭಾವಿ ತರಬೇತಿ.**
4. **ಕಟ್ಟಡ ನಿರ್ಮಾಣ ತರಬೇತಿ ಕಾರ್ನಿಕ ಸಹಯೋಗದಲ್ಲಿ :** ಮೇಸನ್, ಬಾರ್ ಬೆಂಡರ್ ಮತ್ತು ಸ್ಟೀಲ್ ಫಿಕ್ಸರ್, ಎಲೆಕ್ಟ್ರಿಷಿಯನ್, ಪೇಂಟರ್ ಆ್ಯಂಡ್ ಡೆಕೊರೇಟರ್ ಮತ್ತು ಪ್ಲಂಬರ್.
5. **ಸಾಂಪ್ರದಾಯಿಕ ಬಂಜಾರ ಕಸೂತಿ:** ಮಹಿಳೆಯರಿಗೆ ಬಂಜಾರ ಕಸೂತಿ ಕಲೆ ಮತ್ತು ಹೊಲಿಗೆ ತರಬೇತಿ.
6. **ಕಲಾಮಳಾವೊ:– ಬಂಜಾರರ ಸಾಂಸ್ಕೃತಿಕ ಕಲಾ ಪ್ರಕಾರಗಳು.**

1. ವಾಜಾವಾದ್ಯ 2. ಸಾಂಪ್ರದಾಯಿಕ ಮಹಿಳಾ ನೃತ್ಯ, 3. ಜಾನಪದ ನೃತ್ಯ 4. ಘೂಮರ್ ನೃತ್ಯ 5. ಲೆಂಗಿ ನೃತ್ಯ 6. ನಂಗಾರ ಠೋಳಿ ಬಿಡಿಸುವ ನೃತ್ಯ 7. ಬಂಜಾರ ಕಥನ ಗಾಯನ 8. ಮಹಿಳೆಯರ ಸಾಂಪ್ರದಾಯಿಕ ಗಾಯನ 9. ಬಂಜಾರರ ಸುಗಮ ಸಂಗೀತ 10. ಬಂಜಾರರ ಬಾಲಕರ ಕಲಾ ಪ್ರದರ್ಶನ 11. ಬಂಜಾರರ ಬಾಲಕಿಯರ ಕಲಾ ಪ್ರದರ್ಶನ.

ವಿಭಾಗ ಮತ್ತು ರಾಜ್ಯ ಮಟ್ಟದ ಕಲಾ ಪ್ರದರ್ಶನದಲ್ಲಿ ಭಾಗವಹಿಸಿ ವಿಜೇತರಾದ ಕಲಾ ತಂಡಗಳಿಗೆ ಬಹುಮಾನ/ ಪ್ರಶಸ್ತಿ ಪತ್ರ ನೀಡಲಾಗುವುದು.

ಅರ್ಜಿ ಸಲ್ಲಿಸುವ ವಿಧಾನ:

ಅಭ್ಯರ್ಥಿಗಳು ಅನ್‌ಲೈನ್ ಮೂಲಕ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್: www.banjarathanda.kar.nic.in ನಲ್ಲಿ ಸಲ್ಲಿಸಬೇಕು.

ಪ್ರಾರಂಭದ ದಿನಾಂಕ: 19.09.2021 | ಕೊನೆಯ ದಿನಾಂಕ: 18.10.2021

ಸಹಿ/–
(ಯು. ಚಂದ್ರಾನಾಯಕ್)
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಬೆಂ.ನ./ಜಿಎ/1571/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರೈತರ ಅಭಿಪ್ರಾಯ

ಅಗತ್ಯ ಸಿಬ್ಬಂದಿ ಕೊರತೆ

ಸರ್ಕಾರಿ ಪಶು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದ್ದು, ಸಕಾಲಕ್ಕೆ ಚಿಕಿತ್ಸೆ ಸಿಗದೇ ಜಾನುವಾರು ಸಾವನ್ನಪ್ಪುತ್ತಿವೆ. ಇನ್ನೊಂದೆಡೆ ಅವುಗಳನ್ನೇ ನಂಬಿಕೊಂಡ ರೈತರೂ ಸಂಕಷ್ಟದಲ್ಲಿದ್ದಾರೆ. ಆಸ್ಪತ್ರೆಗಳಿಗೆ ಅಗತ್ಯ ಸಿಬ್ಬಂದಿ ಹಾಗೂ ಜಾನುವಾರುಗಳಿಗೆ ಔಷಧಿ ಮತ್ತು ಲಸಿಕೆ ಒದಗಿಸಬೇಕು

ಚೀಲೂರು ಮುನಿರಾಜು
ಅಧ್ಯಕ್ಷ, ಜಿಲ್ಲಾ ರೈತ ಸಂಘದ ಘಟಕ, ರಾಮನಗರ

ಗದಾಪ್ರಹಾರ ಸರಿಯಲ್ಲ

ರೈತರು ಹೈನುಗಾರಿಕೆ ನಂಬಿ ಸ್ವಾಭಿಮಾನದಿಂದ ಬದುಕುತ್ತಿದ್ದಾರೆ. ರೈತ ವಿರೋಧಿ ಧೋರಣೆ ಅನುಸರಿಸುತ್ತಿರುವ ಸರ್ಕಾರ ಅನ್ನದಾತರ ಹಿತ ಕಾಯುವುದನ್ನು ಬಿಟ್ಟು ತುಘಲಕ್ ದರ್ಬಾರ್ ನಡೆಸುತ್ತಿದೆ

ಕೆ. ನಾರಾಯಣಗೌಡ, ರೈತ ಮುಖಂಡ, ಕೋಲಾರ

ಜನತಂತ್ರ ವಿರೋಧಿ ನೀತಿ

ಎಲ್ಲಾ ಸೇವೆಗಳನ್ನೂ ಶುಲ್ಕ ಪಾವತಿಸಿಯೇ ಪಡೆಯುವುದಾದರೆ ಸರ್ಕಾರ ಇರುವುದಾದರು ಏಕೆ? ರೈತರು ಪಾವತಿಸುವಷ್ಟು ಪರೋಕ್ಷ ತೆರಿಗೆಯನ್ನು ಇತರೆ ಬೇರಾವ ವರ್ಗವೂ ಪಾವತಿಸುವುದಿಲ್ಲ. ಹಾಲಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಲು ಸಾಧ್ಯವಾಗಿಲ್ಲ. ಗ್ರಾಮೀಣರ ಆರ್ಥಿಕತೆ ನಿಂತಿರುವುದೇ ಹೈನುಗಾರಿಕೆಯ ಮೇಲೆ. ಆಸ್ಪತ್ರೆ ಹಾಗೂ ವೈದ್ಯರನ್ನು ನೇಮಿಸಲಿ

ಮುತ್ತೇಗೌಡ, ರೈತ ಸಂಘದ ಮುಖಂಡ, ದೊಡ್ಡಬಳ್ಳಾಪುರ

ವೈದ್ಯರ ನೇಮಕಕ್ಕೆ ಕ್ರಮ ವಹಿಸಿ

ಈಗ, ರಾಸುಗಳಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಔಷಧಿಗಳನ್ನು ಅಂಗಡಿಗಳಿಂದ ತರುವಂತೆ ವೈದ್ಯರು ಸೂಚಿಸುತ್ತಿದ್ದಾರೆ. ಗ್ರಾಮೀಣ ಭಾಗದ ಪಶು ಆಸ್ಪತ್ರೆಗಳಲ್ಲಿ ವೈದ್ಯರೇ ಇಲ್ಲ. ಇಂತಹ ಹೊತ್ತಿನಲ್ಲಿ ಯಾವುದು ಆದ್ಯತೆ ಆಗಬೇಕು ಎನ್ನುವುದನ್ನು ಮೊದಲು ಮನಗಾಣಬೇಕು.

ಅಶ್ವತ್ಥನಾರಾಯಣಬಾಬು
ನಿರ್ದೇಶಕ, ಕೋಚಿಮುಲ್, ಚಿಂತಾಮಣಿ

ಮೊದಲು ವೈಜ್ಞಾನಿಕ ಬೆಲೆ ನೀಡಿ

ರೈತರು ಬೆಳೆದ ಬೆಳೆಗೆ ಮೊದಲು ವೈಜ್ಞಾನಿಕ ಬೆಲೆ ಕೊಡಲಿ. ಪಶುಗಳು ಕೃಷಿಯ ಭಾಗವೇ ಆಗಿದ್ದು, ಅವುಗಳಿಲ್ಲದೆ ರೈತರು ಬದುಕು ಕಂಡುಕೊಳ್ಳಲು ಸಾಧ್ಯವಿಲ್ಲ. ಪಶುಪಾಲನಾ ಇಲಾಖೆಯನ್ನು ಮುಂದಿಟ್ಟುಕೊಂಡು ಸರ್ಕಾರ ಲಾಭ ಮಾಡುವ ಕೆಲಸಕ್ಕೆ ಕೈಹಾಕಬಾರದು. ಇದು ಲಾಭ ಮಾಡುವ ಇಲಾಖೆಯೂ ಅಲ್ಲ. ಎಲ್ಲ ಮೂಲಸೌಕರ್ಯ ಹಾಗೂ ಸಿಬ್ಬಂದಿಯನ್ನು ಒದಗಿಸಬೇಕು

ಎ. ಗೋವಿಂದರಾಜು, ರೈತ ಮುಖಂಡ, ತುಮಕೂರು

ಅಮೃತ್ ಮಹಲ್, ಗಿಡ್ಡ ತಳಿ ಸಂರಕ್ಷಣೆಗೆ ಆಗ್ರಹ

ಚಿಕ್ಕಮಗಳೂರು: ಕಾಫಿನಾಡಿನ ಅಮೃತ್ ಮಹಲ್ ಕೇಂದ್ರಗಳಲ್ಲಿ (ಅಜ್ಜಂಪುರ, ಲಿಂಗದಹಳ್ಳಿ) ರಾಸುಗಳ ನಿರ್ವಹಣೆ ವ್ಯವಸ್ಥಿತವಾಗಿಲ್ಲ. ಇಲ್ಲಿನ ಮಲೆನಾಡು ಗಿಡ್ಡ ತಳಿಯ ಸಂರಕ್ಷಣೆಯನ್ನೂ ನಿರ್ಲಕ್ಷಿಸಲಾಗುತ್ತಿದ್ದು, ಸರ್ಕಾರ ಆಸಕ್ತಿ ತೋರಬೇಕು ಎಂಬುದು ಹೈನುಗಾರರ ಆಗ್ರಹ.

ಜಾನುವಾರು ಹತ್ಯೆ ನಿಷೇಧ ಕಾಯ್ದೆ ಜಾರಿ ನಂತರ ಗಂಡು ಕರುಗಳು ಅಡವಿ, ಬೀದಿಪಾಲಾಗುವುದು ಹೆಚ್ಚಾಗುತ್ತಿದೆ.

ಮಲೆನಾಡು ಮತ್ತು ಬಯಲುಸೀಮೆಯಲ್ಲಿ ಹೈನುಗಾರಿಕೆಗೆ ರೈತರ ಒಲವು ಇದೆ. ಆದರೆ, ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟ ಇಲ್ಲದಿರುವುದು ಹಿನ್ನಡೆಯಾಗಿದೆ.

ಪಶು ಆಹಾರ: ಮೂರು ತಿಂಗಳಲ್ಲಿ ಚೀಲಕ್ಕೆ ₹400 ಹೆಚ್ಚಳ ● ಹೊರೆಯಾದ ಪಶು ಸಾಕಾಣಿಕೆ

ಹಿಂಡಿ ದುಬಾರಿ; ಹಾಲಿಗೆ ಮಾತ್ರ ಅದೇ ದರ

● ವೆಂಕಟೇಶ ಜಿ.ಎಚ್

ಅಣ್ಣೇಶ ಪರಮಗೊಂಡ

ಬಾಗಲಕೋಟೆ: ಮೂರು ತಿಂಗಳ ಹಿಂದಷ್ಟೇ 45 ಕೆ.ಜಿ ತೂಗುವ ಹತ್ತಿಕಾಳಿನ ಹಿಂಡಿಯ ಚೀಲಕ್ಕೆ ₹1,400 ಇತ್ತು. ಈಗ ಏಕಾಏಕಿ ₹1,800 ಆಗಿದೆ. ಪೆಟ್ರೋಲ್–ಡೀಸೆಲ್ ಸೇರಿ ಎಲ್ಲವೂ ಬೆಲೆ ಜಾಸ್ತಿ ಆಗಿದೆ. ಹತ್ತಿಕಾಳಿನ ಹಿಂಡಿ ದರವೂ ಹೆಚ್ಚಾಗಿದೆ ಎಂದು ವ್ಯಾಪಾರಸ್ಥರು ಹೇಳುತ್ತಾರೆ. ನಾವು ಡೇರಿಗೆ ಹಾಕುವ ಹಾಲಿನ ದರವೂ ಹೆಚ್ಚಬೇಕಲ್ಲವೇ? ಎಂದು ಜಮಖಂಡಿ ತಾಲ್ಲೂಕಿನ ಆಲಗೂರಿನ ರೈತ ಅಣ್ಣೇಶ ಪರಮಗೊಂಡ ಪ್ರಶ್ನಿಸುತ್ತಾರೆ.

ಬಾಗಲಕೋಟೆ ಜಿಲ್ಲೆಯ ಬಹುತೇಕ ಭಾಗದಲ್ಲಿ ಈಗ ರೈತರು ವಾಣಿಜ್ಯ ಬೆಳೆ ಕಬ್ಬು ಹೆಚ್ಚಾಗಿ ಬೆಳೆಯುತ್ತಾರೆ. ದ್ರಾಕ್ಷಿ, ದಾಳಿಂಬೆ ತೋಟಗಳು ಕಾಣಸಿಗುತ್ತಿವೆ. ಹೀಗಾಗಿ ದನಗಳಿಗೆ ಹಿಂಡಿ, ಬೂಸಾ ಮಾತ್ರವಲ್ಲ, ನಿತ್ಯ ಹಾಕುವ ಮೇವನ್ನೂ ಹೊರಗಿನಿಂದ ಖರೀದಿಸಿ ತರಬೇಕು. ಜೋಳ, ಮೆಕ್ಕೆಜೋಳ, ಕಡಲೆಹೊಟ್ಟು ಖರೀದಿಸಬೇಕು. ಕಳೆದ ಮೂರು ವರ್ಷಗಳಿಂದ ಸತತವಾಗಿ ಆಲಗೂರು ಪ್ರವಾಹಕ್ಕೆ ಸಿಲುಕಿದೆ. ಇದ್ದ ಮೇವು ಕೃಷ್ಣೆಯಲ್ಲಿ ಕೊಚ್ಚಿ ಹೋಗಿದೆ. ತಮ್ಮ ಬಾಳು (ರೈತರದ್ದು) ಬರೀ ನಷ್ಟದ ಬಾಬತ್ತೇ ಆಗಿದೆ ಎಂದು ಅಣ್ಣೇಶ ನೊಂದುಕೊಂಡರು.

ಡೇರಿಯವರ ಮರ್ಜಿ!: 'ಹಳ್ಳಿಯಲ್ಲಿ ಪಶುಪಾಲಕರ ಬದುಕು ಡೇರಿಯಲ್ಲಿ ಹಾಲು ಅಳೆಯುವವರ ಮರ್ಜಿಯನ್ನು ಅವಲಂಬಿಸಿದೆ. ಹಾಲಿಗೆ ಲ್ಯಾಕ್ಟೊಮೀಟರ್‌ನಲ್ಲಿ ಒಂದು ಪ್ರಮಾಣಕ್ಕೆ ಬರಬೇಕಿದ್ದರೂ, ಕೊಬ್ಬಿನ ಅಂಶ ನಿಗದಿ ಆಗಿ ಅದಕ್ಕೆ ದರ ಹೆಚ್ಚಬೇಕಿದ್ದರೂ ನಾವು ಒಂಟಿ ಕಾಲಲ್ಲಿ ನಿಲ್ಲಬೇಕು. ನಾನು, ಬೆಳಿಗ್ಗೆ ಹಾಗೂ ಸಂಜೆ ಹಾಲು ಹಾಕುತ್ತೇನೆ. ಅದೇ ಹಾಲಿಗೆ ಮುಂಜಾನೆ ಒಂದು ದರ, ಸಂಜೆಗೆ ಮತ್ತೊಂದು ದರ ನಿಗದಿಯಾಗುತ್ತದೆ' ಎಂದು ಮುಗುಳ್ನಗುತ್ತಾರೆ.



ಜವಾರಿ ಎಮ್ಮೆ ದಿನಕ್ಕೆ ಐದಾರು ಲೀಟರ್ ಹಾಲು ಕೊಟ್ಟರೆ, ಮುರ್‍ರಾ, ಜಾಫ್ರಾಬಾದಿ, ಮೋಳಿ ತಳಿ 18 ಲೀಟರ್ ಹಿಂಡುತ್ತವೆ. ಆ ರಾಸುಗಳ ಬೆಲೆಯೂ ₹1.30 ಲಕ್ಷದಿಂದ 1.50 ಲಕ್ಷ ಆಗಿದೆ. ಆದರೆ ಇವನ್ನು ಸಾಕಲೆಂದೇ ಒಬ್ಬರು ಪೂರ್ಣಾವಧಿಗೆ ಮೀಸಲಿರಬೇಕು. ವಾತಾವರಣದಲ್ಲಿ ಸ್ವಲ್ಪ ಏರುಪೇರಾದರೂ ಮೇವು–ನೀರು ಬಿಟ್ಟು ಮಲಗುತ್ತವೆ. ಜ್ವರ ಬಂದರೂ ಹಾಲಿನ ಇಳುವರಿ ತಗ್ಗುತ್ತದೆ. ಔಷಧೋಪಚಾರ ಸಿಗದಿದ್ದರೆ ಸಾವು ನಿಶ್ಚಿತ. ಅತ್ತ ಎಮ್ಮೆ ಕೊಳ್ಳಲು ಮಾಡಿದ ಸಾಲದ ಬಡ್ಡಿ ಮಾತ್ರ ಏರುತ್ತಲೇ ಇರುತ್ತದೆ. ಇದೊಂಥರಾ ಜೂಜಾಟ ಎನ್ನುತ್ತಾರೆ ಅವರು.

ಮಳೆಗಾಲದಲ್ಲಿ ಪ್ರವಾಹದಿಂದ ಮೇವಿನ ಕೊರತೆ ಆಗಲಿದೆ ಎಂದು ₹34 ಸಾವಿರಕ್ಕೆ ಎಮ್ಮೆ ಮಾರಾಟ ಮಾಡಿದ್ದೆ. ಈಗ ಅಂಥದ್ದನ್ನೇ ಕೊಳ್ಳಬೇಕೆಂದರೂ ₹65 ಸಾವಿರ ಹೇಳುತ್ತಿದ್ದಾರೆ. ಹೈನುಗಾರರ ಅಸಹಾಯಕತೆಯೂ ದಲ್ಲಾಳಿಗಳಿಗೆ ಲಾಭದ ಪಾಲು. ಪಶುಸಾಕಾಣಿಕೆ ಖಂಡಿತವಾಗಿಯೂ ಹೊರೆಯಾಗುತ್ತಿದೆ ಎನ್ನುತ್ತಾರೆ.

ಹೈನುಗಾರಿಕೆ ಸಣ್ಣ ರೈತರಿಗೆ ಅಪಥ್ಯ

ಕೆಎಂಎಫ್, ಮೊದಲು ಲೀಟರ್ ಹಾಲಿಗೆ ಹೈನುಗಾರರಿಗೆ ₹24 ಕೊಡುತ್ತಿತ್ತು. ಜೊತೆಗೆ ₹5 ಪ್ರೋತ್ಸಾಹಧನ ಸೇರಿ ಲೀಟರ್‌ಗೆ ₹29ರವರೆಗೆ ಸಿಗುತ್ತಿತ್ತು.ಕೋವಿಡ್ ಲಾಕ್‌ಡೌನ್ ವೇಳೆ ಹಾಲು ವಾಣಿಜ್ಯ ಉದ್ದೇಶಕ್ಕೆ ಕಡಿಮೆ ಬಳಕೆ ಆಯಿತು. ಜೂನ್‌ನಿಂದ ಹಾಲಿನ ದರ ₹22ಕ್ಕೆ ಇಳಿಸಿದೆ. ಪ್ರೋತ್ಸಾಹಧನ ಸೇರಿ ₹27 ಸಿಗುತ್ತದೆ. ಹೈನುಗಾರಿಕೆಗೆ ಪೂರಕವಾದ ಎಲ್ಲ ಪದಾರ್ಥಗಳ ಬೆಲೆಯೂ ಕಳೆದೊಂದು ವರ್ಷದಲ್ಲಿ ದುಪ್ಪಟ್ಟಾಗಿದೆ. ಆದಾಯ ಮಾತ್ರ ಇಳಿಕೆಯಾಗಿದೆ ಎಂದು ಕೂಡಲಸಂಗಮದಲ್ಲಿ ಡೇರಿ ನಡೆಸುವ ಅಮರೇಶ ಯಲಿಗಾರ ಹೇಳುತ್ತಾರೆ.

ಹೈಬ್ರೀಡ್ ಆಕಳು, ಎಮ್ಮೆಗಳಿಗೆ ಪ್ರತಿ ದಿನ ಮೇವಿನ ಜೊತೆಗೆ ತಲಾ ಎರಡು ಕೆ.ಜಿ ಪೌಷ್ಟಿಕ ಆಹಾರ ಕೊಡಬೇಕು. ಔಷಧಿ ವೆಚ್ಚ ಸೇರಿ ದಿನವೊಂದಕ್ಕೆ ₹100 ಖರ್ಚು ಬರುತ್ತದೆ. ಆದರೆ ಹಾಲು ಮಾರಾಟದಿಂದ ₹300ರಿಂದ 350 ಸಿಗುತ್ತದೆ. ನಿರ್ವಹಣೆ ಮಾಡುವವರ ಕೂಲಿ ಲೆಕ್ಕ ಹಾಕಿದರೆ ದಿನಕ್ಕೆ ₹100 ಉಳಿಯುವುದು ಕಷ್ಟ. ಒಂದೆರಡು ಹಸು ಸಾಕುವ ಬದಲು ದಿನಗೂಲಿಯೇ ಉತ್ತಮ ಆಯ್ಕೆ ಎನಿಸುತ್ತಿದೆ. ದಿನಕ್ಕೆ ₹300 ಕೂಲಿ ಸಿಗುತ್ತದೆ. ಹೈನುಗಾರಿಕೆ ಲಾಭದಾಯಕ ಆಗಲು ದೊಡ್ಡ ಪ್ರಮಾಣದಲ್ಲಿ ಎಮ್ಮೆ, ಹಸುಗಳನ್ನು ಸಾಕಬೇಕು. ಆದರೆ ಸಣ್ಣ ರೈತರು ಅಷ್ಟೊಂದು ಬಂಡವಾಳ ಎಲ್ಲಿಂದ ತರುವುದು ಎಂದು ಅಮರೇಶ ಪ್ರಶ್ನಿಸುತ್ತಾರೆ.

ಹೊರೆಯಾದವು ಹಸುಗಳು

ಹಸು ಸಾಕಾಣಿಕೆ ಹೊರೆಯಾಗಲು ಕಾರಣ, ಇದೀಗ ಅವನ್ನು ಕಸಾಯಿಖಾನೆಗಳಿಗೆ ಮಾರಾಟ ಮಾಡುವಂತಿಲ್ಲ. ಪ್ರತಿಜಿಲ್ಲೆಯಲ್ಲಿಯೂ ಗೋಶಾಲೆಗಳಿಲ್ಲ.

ಅವುಗಳಿಗಾಗಿ ಗೋಮಾಳಗಳೂ ಇಲ್ಲ. ಎಮ್ಮೆ, ಕೋಣ, ಎತ್ತುಗಳ ವಧೆಗೂ ಅನುಮತಿ ಪಡೆಯಬೇಕು. ಅದಕ್ಕಾಗಿ ಪಶು ವೈದ್ಯರಿಂದ ವಯಸ್ಸಿನ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ. ಆದರೆ ಬಹುತೇಕ ಕಡೆ ಪಶುಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯರಿಲ್ಲ. ದೂರದ ಜಿಲ್ಲಾಕೇಂದ್ರಗಳಿಗೆ ಕರೆದೊಯ್ದು, ಪ್ರಮಾಣ ಪತ್ರ ಪಡೆಯುವುದೂ ಖರ್ಚಿನ ಬಾಬ್ತಾಗಿದೆ.

ಹೆಚ್ಚುತ್ತಿರುವ ಹಾಲು ಉತ್ಪಾದನೆ

ಮಂಗಳೂರು: ಬೀಡಿ ಉದ್ಯಮ ಕುಸಿದ ಬಳಿಕ, ಹೈನುಗಾರಿಕೆಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಅತಿ ಸಣ್ಣ ಮತ್ತು ಭೂ ರಹಿತ ಕೃಷಿಕರನ್ನು ಆರ್ಥಿಕ ಸಂಕಷ್ಟ ಕಾಲದಲ್ಲಿ ಕೈ ಹಿಡಿದಿದೆ.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಉದ್ಯೋಗ ಕಳೆದುಕೊಂಡವರು ಹಾಗೂ ಹೊರ ದೇಶ, ರಾಜ್ಯ, ಜಿಲ್ಲೆಗಳಿಂದ ತವರಿಗೆ ಮರಳಿದ ಹೆಚ್ಚಿನವರು ಹೈನುಗಾರಿಕೆಯನ್ನು ಆಶ್ರಯಿಸಿದ್ದಾರೆ ಎಂಬುದಕ್ಕೆ ಹಾಲು ಉತ್ಪಾದನೆ ಶೇ 8ರಷ್ಟು ಹೆಚ್ಚಿರುವುದು ಸಾಕ್ಷಿ.

ಉಭಯ ಜಿಲ್ಲೆಗಳಲ್ಲಿ ಅಂದಾಜು 4 ಲಕ್ಷ ಜಾನುವಾರುಗಳಿದ್ದು (ದನ, ಎತ್ತು, ಎಮ್ಮೆ, ಕೋಣ ಇತ್ಯಾದಿ), ಈ ಪೈಕಿ 2.5 ಲಕ್ಷದಷ್ಟು ಹೈನುಗಾರಿಕೆಯಲ್ಲಿವೆ. ಒಟ್ಟು 1.44 ಲಕ್ಷ ಹೈನುಗಾರರಿದ್ದು, ಸುಮಾರು 60 ಸಾವಿರ ಮಂದಿ ಸಕ್ರಿಯರಾಗಿದ್ದಾರೆ. ಈ ಮೊದಲು ದಿನಕ್ಕೆ ಸುಮಾರು 5 ಲಕ್ಷ ಲೀಟರ್‌ನಷ್ಟು ಹಾಲು ಸಂಗ್ರವಾಗುತ್ತಿದ್ದರೆ, ಈಚೆಗೆ ಅದು 5.40 ಲಕ್ಷ ಲೀಟರ್‌ಗೆ ಹೆಚ್ಚಿದೆ.

ಆದರೆ, ಹಾಲು ಮತ್ತು ಅದರ ಉತ್ಪನ್ನಗಳ ಮಾರುಕಟ್ಟೆ ಕುಸಿತ ಹಾಗೂ ಪಶು ಆಹಾರಗಳ ಬೆಲೆ ಏರಿಕೆ ಮತ್ತು ಅಲಭ್ಯತೆಯು ಹೈನುಗಾರರನ್ನು ಸಂಕಷ್ಟಕ್ಕೆ ದೂಡಿದೆ. ಹಾಲಿನ ಉತ್ಪಾದನೆ ಹೆಚ್ಚಿದ ಕಾರಣಕ್ಕೆ ಹಾಲು ಉತ್ಪಾದಕರ ಸಂಘಗಳೂ ಹಾಲಿನ ಜಿಡ್ಡು (3.5), ಜಿಡ್ಡೇತರ ಘನ ಪದಾರ್ಥಗಳನ್ನೂ (8.5) ಕಟ್ಟುನಿಟ್ಟಾಗಿ ಪರಿಶೀಲಿಸಿಕೊಂಡು ಖರೀದಿಸುತ್ತಿವೆ.

'ಒಂದು ಲೀಟರ್ ಹಾಲಿಗೆ ₹28 ಸಿಕ್ಕಿದರೆ, ಒಂದು ಕೆ.ಜಿ. ಹಿಂಡಿಗೆ ₹58 ಇದೆ. ಎರಡು ಲೀಟರ್ ಹಾಲು ಮಾರಿ, ಒಂದು ಕೆ.ಜಿ. ಹಿಂಡಿ ಖರೀದಿಸಬೇಕಾಗಿದೆ' ಎಂದು ಹೈನುಗಾರ ರಾಜೇಶ್ ಹೇಳುತ್ತಾರೆ.

ಉಭಯ ಜಿಲ್ಲೆಗಳಲ್ಲಿ ಜನವಸತಿ ಚದುರಿದ ರೀತಿಯಲ್ಲಿದ್ದು, ಕುರಿ ಇತ್ಯಾದಿ ಸಾಕಾಣಿಕೆ ವಿರಳ. ಇದರಿಂದಾಗಿ ರೋಗ ಬಾಧೆ ಕಡಿಮೆ. ಆದರೆ, ಗರ್ಭಧಾರಣೆ, ಚಿಕಿತ್ಸೆ ಇತ್ಯಾದಿಗಳಿಗೆ ಪಶುವೈದ್ಯರ ಅವಲಂಬನೆಯು ತ್ರಾಸದಾಯಕವಾಗಿದೆ. ಶೇ 75ರಷ್ಟು ಸಿಬ್ಬಂದಿ ಕೊರತೆಯಿಂದ ಬಳಲುತ್ತಿರುವ ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮೇಲೆ ಹೆಚ್ಚಿನ ಹೊರೆ ಬಿದ್ದಿದೆ.

ಸೋಂಕಿನ ತೀವ್ರತೆ ಹೈಬ್ರಿಡ್ ತಳಿಗಳಲ್ಲಿ ಹೆಚ್ಚು ● ಜಾಗೃತಿ–ಕೊರತೆ ಲಸಿಕೆ ಕೊಡಿಸದ ರೈತರು

ಕಾಯಿಲೆಗಳಿಗೆ ನಿರ್ಲಕ್ಷ್ಯವೇ ಕಾರಣ

● ಕೆ.ಎಸ್.ಗಿರೀಶ

ಮೈಸೂರು: ಜಾನುವಾರುಗಳಿಗೆ ಬರುವ ಕಾಲುಬಾಯಿಜ್ವರ ಸೇರಿದಂತೆ ಇತರೆ ಕಾಯಿಲೆಗಳಿಗೆ ಸರ್ಕಾರ ಹಾಗೂ ರೈತರ ನಿರ್ಲಕ್ಷ್ಯವೇ ಬಹುಮುಖ್ಯ ಕಾರಣ. ಲಸಿಕೆಯ ಮಹತ್ವದ ಜಾಗೃತಿ ರೈತರಲ್ಲಿ ಮೂಡದೇ ಇರುವುದರಿಂದ ಕಾಯಿಲೆ ಉಲ್ಬಣಗೊಳ್ಳುತ್ತಿದೆ.

ದೇಸಿ ತಳಿ ಹಸುಗಳಿಗೆ ಹೋಲಿಸಿದರೆ ಹೈಬ್ರಿಡ್ ತಳಿಗಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುತ್ತದೆ ಹಾಗೂ ಕಾಯಿಲೆಗಳ ತೀವ್ರತೆ ಹೆಚ್ಚು. ಆದರೆ, 'ದೇಸಿ ಹಸುಗಳಿಗೆ ಕಾಯಿಲೆ ಬರುವುದಿಲ್ಲ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ' ಎಂದು ಬಹುತೇಕ ಪಶುವೈದ್ಯ ತಜ್ಞರು ಹೇಳುತ್ತಾರೆ.

'ರೋಗನಿರೋಧಕ ಶಕ್ತಿ ದೇಸಿ ಹಸುಗಳಲ್ಲಿ ಹೆಚ್ಚಿದ್ದು, ಹೈಬ್ರಿಡ್ ತಳಿಗಳಾದ ಜರ್ಸಿ, ಎಚ್.ಎಫ್ ಹಾಗೂ ರೆಡ್ ಡೇನ್ ತಳಿಗಳಲ್ಲಿ ಕಡಿಮೆ ಇರುತ್ತದೆ. ಕಾಯಿಲೆ ಹರಡಲು ಆರಂಭವಾದರೆ ಎಲ್ಲ ಬಗೆಯ ತಳಿಗಳ ಜಾನುವಾರುಗಳಿಗೂ ರೋಗ ಬರುತ್ತವೆ. ಆದರೆ, ತೀವ್ರತೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು' ಎಂದು ಪಶುವೈದ್ಯ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

'ಉತ್ತರ ಪ್ರದೇಶದಲ್ಲಿರುವ ಭಾರತೀಯ ಪಶು ವೈದ್ಯ ಸಂಶೋಧನಾ ಸಂಸ್ಥೆಯು ವರ್ಷಕ್ಕೆ ನಾಲ್ಕು ಬಾರಿ ಲಸಿಕೆ ನೀಡುವುದರಿಂದ ಕಾಲುಬಾಯಿ ಜ್ವರವನ್ನು ನಿರ್ಮೂಲನೆ ಮಾಡಬಹುದು ಎಂದು ಸರ್ಕಾರಕ್ಕೆ ಸಲಹೆ ನೀಡಿದೆ. ಆದರೆ, ಸರ್ಕಾರ ಕನಿಷ್ಠ ಮೂರು ಬಾರಿಯಾದರೂ ನೀಡಬೇಕಿತ್ತು. ಸದ್ಯ, ನೀಡುತ್ತಿರುವುದು ಎರಡು ಬಾರಿ ಮಾತ್ರ' ಎಂದು ಹಿರಿಯ ಪಶುವೈದ್ಯ ಹಾಗೂ ಪಶು ಆಹಾರ ತಜ್ಞ ಡಾ.ಚನ್ನೇಗೌಡ ಬೇಸರ ವ್ಯಕ್ತಪಡಿಸಿದರು.

'ಮಾರುಕಟ್ಟೆಯಲ್ಲಿ ಲಸಿಕೆಯ ದರ ಕೇವಲ ₹ 10 ಇದೆ. ರೈತರು ಸ್ವತಃ ಹಣ ನೀಡಿ ಹಸುಗಳಿಗೆ ಲಸಿಕೆ ಕೊಡಿಸಬಹುದು. ಆದರೆ, ಜಾಗೃತಿಯ ಕೊರತೆ ಇರುವುದರಿಂದ ರೈತರು ಲಸಿಕೆ ಕೊಡಿಸುತ್ತಿಲ್ಲ' ಎಂದು ಅವರು ಹೇಳಿದರು.

ರೈತರ ಓಡಾಟ ಹಾಗೂ ಪಶು ಸಾಗಣೆ ಹೆಚ್ಚುತ್ತಿರುವುದೂ ಪಶು ರೋಗಗಳ ವ್ಯಾಪಕ ಹರಡುವಿಕೆಗೆ ಕಾರಣವಾಗಿದೆ ಎನ್ನುತ್ತಾರೆ ಮೈಸೂರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿ ಡಾ.ತಿಮ್ಮಯ್ಯ.

'ಒಬ್ಬ ರೈತ ಬೆಳಿಗ್ಗೆ ತನ್ನ ಕೊಟ್ಟಿಗೆಯಲ್ಲಿ ಕೆಲಸ ಮಾಡಿ ಮಧ್ಯಾಹ್ನ ಬೇರೆ ಊರಿಗೆ ಹೋಗಿ, ಅಲ್ಲಿ ಹಸುಗಳನ್ನು ಮೈದಡವಿ ಹಾಗೆಯೇ ಸಂಜೆ ಬಂದು ತನ್ನ ಕೊಟ್ಟಿಗೆಯಲ್ಲಿ ಕೆಲಸ ಮಾಡುವುದರಿಂದಲೂ ಸೋಂಕುಗಳು ಹರಡುವ ಸಂಭವ ಹೆಚ್ಚಿರುತ್ತವೆ. ಜತೆಗೆ, ಹಸುಗಳನ್ನು ಸರಿಯಾಗಿ ಪರಿಶೀಲಿಸದೇ ಬೇರೆ ಬೇರೆ ಕಡೆಗಳಿಂದ ಖರೀದಿಸಿ ತರುವುದರಿಂದಲೂ ಸೋಂಕು ಒಂದು ಊರಿನಿಂದ ಮತ್ತೊಂದು ಊರಿಗೆ ಹರಡುತ್ತದೆ' ಎಂದು ಅವರು ವಿಶ್ಲೇಷಿಸಿದರು.

ವರ್ಷವಿಡೀ ಜಾನುವಾರುಗಳಿಗೆ ರೋಗ

'ಹೈಬ್ರಿಡ್ ತಳಿಗಳನ್ನು ಸಾಕುವ ಮೊದಲೇ ಕಾಲುಬಾಯಿ ರೋಗ ಇತ್ತು. ದೇಶಿ ತಳಿಗಳಲ್ಲಿ ಫೆಬ್ರುವರಿ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು. ಆದರೆ, ತೀವ್ರತೆ ಕಡಿಮೆ ಇರುತ್ತಿತ್ತು. ಬದಲಾದ ಆಹಾರ ಪದ್ಧತಿ ಮತ್ತು ವಾತಾವರಣದ ವ್ಯತ್ಯಾಸದಿಂದ ವರ್ಷಪೂರ್ತಿ ರೋಗಗಳು ಜಾನುವಾರುಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ರೋಗ ಇರುವ ಒಂದು ಜಾನುವಾರನ್ನು ಗ್ರಾಮಕ್ಕೆ ತಂದರೆ, ಊರಿನ ಎಲ್ಲಾ ಜಾನುವಾರುಗಳಿಗೂ ಸೋಂಕು ತಗುಲುತ್ತಿದೆ. ಇತ್ತೀಚಿನ ದಿನಗಳಲ್ಲಿ ಗುಣಮಟ್ಟದ ಲಸಿಕೆಯನ್ನು ಸರಿಯಾದ ಸಮಯಕ್ಕೆ ನೀಡುತ್ತಿಲ್ಲ' ಎಂದು ಹಾಸನ ಜಿಲ್ಲೆಯ ಹೈನುಗಾರ ಸಂತೋಷ ವಿಷಾದಿಸಿದರು.

'ಹೈಬ್ರಿಡ್ ತಳಿಗಳಿಂದ ತಾತ್ಕಾಲಿಕ ಲಾಭ'

'ಹೈಬ್ರಿಡ್ ತಳಿಗಳಿಂದ ದೊರಕುವ ಲಾಭ ತಾತ್ಕಾಲಿಕ. ಕೆಲವೇ ವರ್ಷಗಳಲ್ಲಿ ರಾಸುಗಳು ಸಾವನ್ನಪ್ಪುತ್ತವೆ ಇಲ್ಲವೇ ರೋಗಗಳು ಹೆಚ್ಚಾಗಿ ನಷ್ಟ ಸಂಭವಿಸುತ್ತದೆ. ಅದಕ್ಕೆ ಪ್ರಮುಖ ಕಾರಣ ಪಶು ವೈದ್ಯರ ಕೊರತೆ' ಎಂದು ಬೆಳಗಾವಿ ಜಿಲ್ಲೆಯ ಸಂಕೋನಟ್ಟಿ ಗ್ರಾಮದ ರೈತ ಮುತ್ತಣ್ಣ ಹೇಳಿದರು.

ಗ್ರಾಮೀಣ ಸೇವೆಯಲ್ಲಿ ಪಶು ವೈದ್ಯರು

● ಚಂದ್ರಕಾಂತ ಮಸಾನಿ

ಬೀದರ್: ಇಲ್ಲಿಯ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರತಿ ವರ್ಷ 340 ವಿದ್ಯಾರ್ಥಿಗಳು ಪಶು ವೈದ್ಯರಾಗಿ ಹೊರ ಬರುತ್ತಾರೆ. ಬಹುತೇಕರು ಗ್ರಾಮೀಣ ಪ್ರದೇಶದಲ್ಲೇ ಸೇವೆ ನೀಡುತ್ತಿದ್ದಾರೆ.

ಪಶು ವೈದ್ಯಕೀಯ ಕೋರ್ಸ್‌ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇದೆ. ಹೆಚ್ಚು ಉದ್ಯೋಗ ಅವಕಾಶಗಳೂ ಇವೆ. ಹೀಗಾಗಿ ಒಂದು ಸೀಟು ಸಹ ಖಾಲಿ ಉಳಿಯುವುದಿಲ್ಲ.

ಪಶು ವೈದ್ಯಕೀಯ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಒಂದು ಸಾವಿರ ವಿದ್ಯಾರ್ಥಿಗಳಲ್ಲಿ 40 ವಿದ್ಯಾರ್ಥಿಗಳು ನಾಗರಿಕ ಸೇವೆಯಲ್ಲಿ ಇದ್ದಾರೆ. ಸ್ನಾತಕೋತ್ತರ ಪದವಿ ಪಡೆದವರು ಗ್ರಾಮೀಣ ಪ್ರದೇಶದಲ್ಲಿ ವೈದ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶೇಕಡ 3ರಷ್ಟು ವೈದ್ಯರು ಮಾತ್ರ ವಿದೇಶಕ್ಕೆ ಹೋಗುತ್ತಾರೆ. ಬಹುತೇಕರು ಪಶು ಸಂಗೋಪನೆ ಇಲಾಖೆ, ಐಸಿಎಆರ್‌ನಲ್ಲಿ ವಿಜ್ಞಾನಿಗಳಾಗಿ, ಪಶು ವೈದ್ಯಕೀಯ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಹಾಗೂ ಇನ್ನು ಕೆಲವರು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಗುಣಮಟ್ಟದ ಪಶು ವೈದ್ಯಕೀಯ ಶಿಕ್ಷಣ ದೊರೆಯುತ್ತಿರುವ ಕಾರಣ ಇಲ್ಲಿ ಪದವಿ ಪಡೆದ ಒಬ್ಬ ಅಭ್ಯರ್ಥಿಯೂ ನಿರುದ್ಯೋಗಿಯಾಗಿ ಉಳಿದಿಲ್ಲ. ದೇಶ ವಿದೇಶಗಳಲ್ಲಿರುವ ಖಾಸಗಿ ಕಂಪನಿಗಳು ಪಶು ವೈದ್ಯರಿಗೆ ಆಕರ್ಷಕ ವೇತನ ಕೊಡುತ್ತಿವೆ. ಪದವಿ ಪಡೆದ ಕೆಲವರು ವಿದೇಶಗಳಲ್ಲಿ ಕ್ಲಿನಿಕ್‌ಗಳನ್ನು ಸಹ ಆರಂಭಿಸಿ ಉತ್ತಮ ಆದಾಯ ಪಡೆಯುತ್ತಿದ್ದಾರೆ.

ಸ್ನಾತಕೋತ್ತರ ಪದವಿ ಪಡೆದ ವೈದ್ಯರು ಸರ್ಕಾರಿ ಸೇವೆಗೆ ಬರಲು ಹಿಂದೇಟು ಹಾಕುತ್ತಾರೆ ಎನ್ನುವುದು ತಪ್ಪು ಕಲ್ಪನೆ. ಪಿಎಚ್‌.ಡಿ ಪಡೆದವರೂ ಗ್ರಾಮೀಣ ಪ್ರದೇಶದಲ್ಲಿ ಪಶು ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ನಾರಾಯಣಸ್ವಾಮಿ ಹೇಳುತ್ತಾರೆ.

ಹೈರಾಣಾದ ಹೈನುಗಾರ

ಒಂದನೇ ಪುಟದಿಂದ...

ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 3 ಲಕ್ಷ ಜಾನುವಾರು ಹಾಗೂ 17.25 ಲಕ್ಷ ಮೇಕೆ ಮತ್ತು ಕುರಿಗಳಿವೆ. ಐದು ಸಾವಿರ ಜಾನುವಾರುಗಳಿಗೆ ಒಂದು ಪಶು ವೈದ್ಯಕೀಯ ಆಸ್ಪತ್ರೆ ಇರಬೇಕು ಎಂಬ ನಿಯಮವಿದೆ. ಆದರೆ, ಜಿಲ್ಲೆಯಲ್ಲಿ ಇರುವುದು 156 ಆಸ್ಪತ್ರೆಗಳು ಮಾತ್ರ.

ಆಸ್ಪತ್ರೆಗೆ ಕಟ್ಟಡದ ಸಮಸ್ಯೆಯೂ ಇದೆ. ಕೆಲವು ಸೋರುತ್ತಿವೆ. ಮೂಲಸೌಲಭ್ಯದ ಕೊರತೆ ಎದ್ದುಕಾಣುತ್ತಿದೆ. ಆಸ್ಪತ್ರೆ ನಿರ್ವಹಣೆ ಹಾಗೂ ಔಷಧ ಖರೀದಿಗೆ ನೀಡುವ ಅನುದಾನ ಸಾಕಾಗುತ್ತಿಲ್ಲ ಎಂಬ ದೂರುಗಳೂ ಇವೆ.

ದಾವಣಗೆರೆ, ಶಿವಮೊಗ್ಗ, ಬಾಗಲಕೋಟೆ, ಬೆಳಗಾವಿ ಸೇರಿದಂತೆ ಬಹುಪಾಲು ಜಿಲ್ಲೆಗಳಲ್ಲೂ ಇದೇ ಸಮಸ್ಯೆಯನ್ನು ಹೈನುಗಾರರು ಎದುರಿಸುತ್ತಿದ್ದಾರೆ.

ಹೈನುಗಾರರಿಂದಲೇ 'ಸೇವೆ': ಉತ್ತರ ಕನ್ನಡವೂ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಇಲಾಖೆಯ ಪಶು ಆಸ್ಪತ್ರೆಗಳು, ಚಿಕಿತ್ಸಾಲಯಗಳಿಗೆ ಸ್ವಂತ ಕಟ್ಟಡಗಳಿವೆ. ಆವರಣದಲ್ಲಿ ಆಕಳಿನ ಕೃತಕ ಗರ್ಭಧಾರಣೆ ಹಾಗೂ ಚಿಕಿತ್ಸೆಗೆಂದು ಅಳವಡಿಸಿದ ಉಪಕರಣಗಳು ಅನಾಥವಾಗಿ ನಿಂತಿವೆ. ಇಡೀ ಕಾಂಪೌಂಡ್‌ಗೆ ಬೀಗ ಹಾಕಿ 'ಭದ್ರ' ಪಡಿಸಲಾಗಿದೆ. ಕಟ್ಟಡದ ಸುತ್ತಮುತ್ತ ಗಿಡಗಂಟೆಗಳು ಬೆಳೆದಿವೆ. ವರ್ಷಕ್ಕೆ ಒಂದೆರಡು ಸಲ ಗ್ರಾಮ ಪಂಚಾಯಿತಿಗಳಿಂದ ಅಥವಾ ಸಮೀಪದಲ್ಲಿರುವ, ಸ್ವಲ್ಪ ಸ್ಥಿತಿವಂತ ಹೈನುಗಾರರು ಅವುಗಳನ್ನು ಸ್ವಚ್ಛಗೊಳಿಸುತ್ತಾರೆ. ಈ ಮೂಲಕ ಇಲಾಖೆಗೆ 'ಸೇವೆ' ಸಲ್ಲಿಸುತ್ತಾರೆ.

'ನಾವು ಸಾಕಿರುವ ಹಸುಗಳು ದಿನಕ್ಕೆ ಸುಮಾರು 90 ಲೀಟರ್ ಹಾಲು ಕೊಡುತ್ತವೆ. ಸುಮಾರು 30 ಕಿಲೋಮೀಟರ್ ದೂರದ ದೇವಳಮಕ್ಕಿ ಪಶು ಚಿಕಿತ್ಸಾಲಯದಲ್ಲಿ ಮೊದಲು ವೈದ್ಯರಿದ್ದರು. ಅವರು ವರ್ಗಾವಣೆಯಾದ ಬಳಿಕ ಮತ್ತೊಬ್ಬರ ನೇಮಕವಾಗಿಲ್ಲ. ಅಲ್ಲಿ ಸಿಬ್ಬಂದಿ ಕೊರತೆಯೂ ಇರುವ ಕಾರಣ ನಾನೇ ಒಂದೆರಡು ಸಲ ಪರಿಚಯದವರನ್ನು ಕಳುಹಿಸಿ ಸ್ವಚ್ಛಗೊಳಿಸಲು ನೆರವಾಗಿದ್ದೇನೆ' ಎನ್ನುತ್ತಾರೆ ಕಾರವಾರ ತಾಲ್ಲೂಕಿನ ಮಲ್ಲಾಪುರ ಗ್ರಾಮ ಪಂಚಾಯಿತಿಯ ಕುಚೇಗಾರದ ಹೈನುಗಾರ ಮಹಾಬಲೇಶ್ವರ ಭಟ್.

'ಈಗ ಜಾನುವಾರುಗಳಿಗೆ ಔಷಧ ಬೇಕಿದ್ದರೆ ಅಥವಾ ಕೃತಕ ಗರ್ಭಧಾರಣೆ ಮಾಡಿಸಬೇಕಾದರೆ 60 ಕಿಲೋಮೀಟರ್ ದೂರದ ಕಾರವಾರದಿಂದಲೇ ವೈದ್ಯರು, ಸಿಬ್ಬಂದಿ ಬರಬೇಕು. ಅಲ್ಲಿ ಲಭ್ಯವಿಲ್ಲದಿದ್ದರೆ ಯಲ್ಲಾಪುರದಿಂದ ಕರೆಸಿಕೊಳ್ಳಬೇಕಾಗುತ್ತದೆ' ಎಂದು ಸಮಸ್ಯೆ ಬಿಚ್ಚಿಡುತ್ತಾರೆ.

'ನಾವು ಸುಮಾರು 100 ಮಲೆನಾಡು ಗಿಡ್ಡ ಆಕಳುಗಳನ್ನು ಸಾಕಿದ್ದೇವೆ. ಅವುಗಳಿಗೆ ಅನಾರೋಗ್ಯವಾದರೆ ಸಮೀಪದಲ್ಲಿ ಪಶು ಆಸ್ಪತ್ರೆಯಿಲ್ಲ. 15 ಕಿಲೋಮೀಟರ್ ದೂರದ ಹೊನ್ನಾವರಕ್ಕೆ ವಾಹನದಲ್ಲಿ ಹೇರಿಕೊಂಡು ಹೋಗುತ್ತೇವೆ. ಗ್ರಾಮೀಣ ಭಾಗದಲ್ಲಿ ಸಾಕುಪ್ರಾಣಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲು ತಜ್ಞರಿಲ್ಲ. ಮತ್ತೆಲ್ಲಿಂದಲೋ ಬರಬಹುದೇ ಎಂದು ಕಾಯುವಂತಾಗಿದೆ' ಎಂದು ಹೊನ್ನಾವರ ತಾಲ್ಲೂಕಿನ ಕವಲಕ್ಕಿಯ ವಿನಯ ಶೆಟ್ಟಿ ಬೇಸರ ವ್ಯಕ್ತಪಡಿಸುತ್ತಾರೆ.



ಗ್ರಾಮೀಣ ಭಾಗದಲ್ಲಿ ಹೈನುಗಾರಿಕೆಗೆ ಅನುಕೂಲವಾಗುವಂತೆ ಸಂಚಾರಿ ಪಶು ಚಿಕಿತ್ಸಾಲಯಗಳನ್ನು ಹೆಚ್ಚಿಸಬೇಕು

ವಿನಯ ಶೆಟ್ಟಿ
ಹೈನುಗಾರ ಕವಲಕ್ಕಿ, ಹೊನ್ನಾವರ

ಪಶು ಆಸ್ಪತ್ರೆಗಳಿಗೆ ಕಟ್ಟಡದಷ್ಟೇ ಸೂಕ್ತ ಸಿಬ್ಬಂದಿ ಇರುವುದೂ ಮುಖ್ಯ. ಸರ್ಕಾರವು ಖಾಲಿ ಹುದ್ದೆಗಳ ಭರ್ತಿಗೆ ಆದ್ಯತೆ ನೀಡಬೇಕು

ಮಹಾಬಲೇಶ್ವರ ಭಟ್
ಹೈನುಗಾರ ಕುಚೇಗಾರ, ಕಾರವಾರ

ಉತ್ತರ ಕನ್ನಡದಲ್ಲಿ ಇಲಾಖೆಯ ಶೇ 20ರಷ್ಟು ಮಾತ್ರ ಸಿಬ್ಬಂದಿ ಇದ್ದಾರೆ. ಅವರೆಲ್ಲ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದಾರೆ

ಡಾ.ನಂದಕುಮಾರ ಪೈ
ಉಪ ನಿರ್ದೇಶಕ ಪಶುಪಾಲನೆ ಮತ್ತು ಪಶು ವೈದ್ಯ ಸೇವೆ ಇಲಾಖೆ, ಕಾರವಾರ

ವರ್ಷದಿಂದ ವರ್ಷಕ್ಕೆ ಇಳಿಕೆ

ಜಿಲ್ಲೆಯಲ್ಲಿ ಎರಡು ವರ್ಷಗಳ ಹಿಂದೆ ನಡೆದ ಗಣತಿಯ ಪ್ರಕಾರ 3.58 ಲಕ್ಷ ಜಾನುವಾರು ಇವೆ. ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಅನುಗುಣವಾಗಿ ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ಆದರೆ, ಇಲಾಖೆಯ ಪ್ರೋತ್ಸಾಹದ ಕೊರತೆಯಿಂದಾಗಿ ಉತ್ತರ ಕನ್ನಡವೊಂದರಲ್ಲೇ ಜಾನುವಾರು ಸಾಕಣೆ ಪ್ರಮಾಣವು ವರ್ಷದಿಂದ ವರ್ಷಕ್ಕೆ ಶೇ 10ರಿಂದ ಶೇ 15ರಷ್ಟು ಇಳಿಕೆಯಾಗುತ್ತಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಉತ್ತರ ಕನ್ನಡ ಜಿಲ್ಲೆಯ ಅಧಿಕಾರಿಯೊಬ್ಬರು ವಿಷಾದಿಸುತ್ತಾರೆ.

ಕಾರವಾರದಲ್ಲಿರುವ ಇಲಾಖೆಯ ಉಪ ನಿರ್ದೇಶಕರ ಕಚೇರಿಯ ಪಕ್ಕದಲ್ಲೇ ಇರುವ ಪಶು ಚಿಕಿತ್ಸಾಲಯದಲ್ಲಿ ವೈದ್ಯರಿಲ್ಲ. ಅಲ್ಲಿಗೆ ನೆರೆಯ ಅಂಕೋಲಾದಿಂದ ವೈದ್ಯರು ಕರೆಯ ಮೇರೆಗೆ ಭೇಟಿ ನೀಡುತ್ತಾರೆ. ಭಟ್ಕಳ, ಹಳಿಯಾಳ ಮತ್ತು ಕಾರವಾರ ತಾಲ್ಲೂಕುಗಳಲ್ಲಿ ಇಡೀ ತಾಲ್ಲೂಕಿಗೆ ಒಬ್ಬರೇ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೀದರ್‌ನಲ್ಲಿರುವ ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಸರ್ಕಾರ ಮರೆತಿರುವುದು

- ಇಲಾಖೆಯ ಖಾಲಿ ಹುದ್ದೆಗಳಿಗೆ ಹಲವು ವರ್ಷಗಳಿಂದ ಸಿಬ್ಬಂದಿ ನೇಮಿಸಿಲ್ಲ
- ಎರಡು ವರ್ಷಗಳಿಂದ ಹೊಸ ಯೋಜನೆಗಳ ಘೋಷಣೆ ಇಲ್ಲ
- ಜಾನುವಾರುಗಳ ಆಕಸ್ಮಿಕ ಸಾವಿಗೆ ₹ 10 ಸಾವಿರ ಪರಿಹಾರ ಎರಡು ವರ್ಷಗಳಿಂದ ಮಂಜೂರಾಗಿಲ್ಲ
- ಬೇಡಿಕೆಗೆ ಅನುಗುಣವಾಗಿ ಸಂಚಾರಿ ಪಶು ಆಸ್ಪತ್ರೆಗಳ ಸಂಖ್ಯೆ ಹೆಚ್ಚಳ ಆಗಿಲ್ಲ
- ಹೊಸ ಸಿಬ್ಬಂದಿಗೆ ಕನಿಷ್ಠ ಮೂರು ವರ್ಷ ಒಂದೇ ಕಡೆ ಕರ್ತವ್ಯ ನಿರ್ವಹಿಸಲು ಸೂಚನೆ

ಪದಬಂಧ 4723 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಭೇದ ಭಾವವಿಲ್ಲದಿರುವುದು (5)
4.ಆ ಮೋದಕ ಕೊಟ್ಟದ್ದಕ್ಕೇ ಈ ಸಂತೋಷ! (3)
5.ಮಧುರ ಫಲ ನೀಡುವ ವೃಕ್ಷ (2)
7.ವಿವಿಧದಲ್ಲಿ ರೀತಿಯನ್ನು ನೋಡಿ! (2)
10.ಕಮರಿಯೊಳಗೆ ಕಾಣಿಸಿದ ಆನೆ (2)
13.ನೈಪುಣ್ಯದಿಂದ ಗಳಿಸಿಕೊಂಡಿರುವ ಸುಕೃತ (2)
15.ಮರಳು ಇಲ್ಲಿದೆ (3)
16.ಆಕಾಶವನ್ನು ಮುಟ್ಟುವಂತಹ ಕಟ್ಟಡ (5)

ಮೇಲಿಂದ ಕೆಳಕ್ಕೆ
1.ಅಕ್ಷರಗಳನ್ನು ತಿಳಿದವನು (4)
2.ದರ್ಶನ ತೋರಿದರೆ ದೃಷ್ಟಾಂತ ಕಾಣುವುದು (4)
3.ಮತ ಹಾಕುವಾಗ ಆವರಿಸಿದ ಕತ್ತಲು (2)
4. ಪೂಜೆ ಮಾಡುವವನು (4)
6.ಸೂರ್ಯನ ಇನ್ನೊಂದು ಹೆಸರು (2)
8.ಅಧಮನ ಹತ್ತಿರವಿರುವ ಸಿರಿವಂತ (4)
9.ಶಾಖದಿಂದ ಕೂಡಿದ ನೆತ್ತರು ಉಲ್ಲಾಕಾಣುತ್ತಿದೆ (4)
11.ಪುಢಾರಿ ಹತ್ತಿರದಲ್ಲಿರುವ ಶತ್ರು (2)
12.ತೆಳ್ಳಗಿನ ಸೊಂಟ (4)
14.ಗಣನೀಯವಾದವನು ಏಕೋ ತಿರುಗಿದ್ದಾನಲ್ಲಾ? (2)



4722ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಗಮ 3.ದಿನಾಂಕ 4.ಮಡದಿ 6.ಆಟ 7.ನವ 9.ಹುತ್ತ 13.ವರ 14.ಚಿಲುಕ 15.ಜತನ 16.ನಗಾರಿ

ಮೇಲಿಂದ ಕೆಳಕ್ಕೆ: 1.ಆಕಳು 2.ಮಮತೆ 3.ದಿಟ 5.ದಿನ 6.ಅಜಾನುಬಾಹು 8.ವರ್ಣವಿಕಾರ 10.ತ್ರಿಚಿ 11.ಅಂಕನ 12.ಗುಜರಿ 13.ವನ

ಸುಡೊಕು 5109

		3	1			4		
6				5				8
	4		8				6	
4			5		9	2		1
	2			4			5	
3		5	2		8		4	6
5	7					8		9
		1	4	8	5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5108 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಂದೇ ದಿನದಲ್ಲಿ 2.5 ಕೋಟಿ ಡೋಸ್‌ಗಳಷ್ಟು ಲಸಿಕೆ ನೀಡಿಕೆ; ವಿಶ್ವ ದಾಖಲೆ ಬರೆದ ಭಾರತ

‘ಲಸಿಕೆ ಅಭಿಯಾನದಿಂದ ಪಕ್ಷವೊಂದಕ್ಕೆ ಜ್ವರ’

ಪಣಜಿ (ಪಿಟಿಐ): ದೇಶದಾದ್ಯಂತ 2.50 ಕೋಟಿ ಡೋಸ್‌ಗಳಷ್ಟು ಕೋವಿಡ್ ಲಸಿಕೆಗಳನ್ನು ನೀಡುವ ಮೂಲಕ ತಮ್ಮ ತಮ್ಮ 71ನೇ ಜನ್ಮದಿನವನ್ನು ಸ್ಮರಣೀಯವಾಗಿಸಿದ ಬಗ್ಗೆ ದೇಶಕ್ಕೆ ಧನ್ಯವಾದ ಸಮರ್ಪಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಪ್ರತಿಪಕ್ಷಗಳನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಗೋವಾದ ಆರೋಗ್ಯ ಕಾರ್ಯಕರ್ತರು ಮತ್ತು ಫಲಾನುಭವಿಗಳೊಂದಿಗೆ ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಸಿದ ಸಂವಾದದಲ್ಲಿ ಮಾತನಾಡಿದ ಪ್ರಧಾನಿ ಮೋದಿ ಅವರು, ‘ಲಸಿಕೆ ತೆಗೆದುಕೊಂಡಾಗ ಜ್ವರ ಬರುತ್ತದೆ. ಅದು ಲಸಿಕೆಯ ಅಡ್ಡಪರಿಣಾಮ’ ಎಂದು ಜನರು ಮಾತನಾಡಿಕೊಳ್ಳುತ್ತಾರೆ. ಆದರೆ, ನನ್ನ ಜನ್ಮದಿನದಂದು ದೇಶದಾದ್ಯಂತ 2.5 ಕೋಟಿ ಲಸಿಕೆಗಳನ್ನು ನೀಡಿದ್ದನ್ನು ನೋಡಿ ರಾಜಕೀಯ ಪಕ್ಷವೊಂದಕ್ಕೆ ಜ್ವರ ಬಂದುಬಿಟ್ಟಿದೆ’ ಎಂದು ಯಾವುದೇ ಪಕ್ಷದ ಹೆಸರು ಉಲ್ಲೇಖಿಸಿದೇ ಹೇಳಿದರು.

‘ನಿಮ್ಮೆಲ್ಲರ ಪ್ರಯತ್ನದಿಂದಾಗಿ ಒಂದೇ ದಿನದಲ್ಲಿ 2.5 ಕೋಟಿಗೂ ಹೆಚ್ಚು ಕೋವಿಡ್ ಲಸಿಕೆಗಳನ್ನು ನೀಡುವ ಮೂಲಕ ಭಾರತ ವಿಶ್ವದಾಖಲೆ ಸೃಷ್ಟಿಸಿದೆ. ಅತ್ಯಂತ ಶಕ್ತಿ ಶಾಲಿ ಎನಿಸಿಕೊಳ್ಳುವ ರಾಷ್ಟ್ರಗಳು ಈವರೆಗೂ ಇಂಥದ್ದೊಂದು ಸಾಧನೆ ಮಾಡಲು ಸಾಧ್ಯವಾಗಿಲ್ಲ’ ಎಂದು ಪ್ರಶಂಸಿಸಿದರು.

ಪ್ರಧಾನಿ ನರೇಂದ್ರ ಮೋದಿ

‘ನಿನ್ನೆ ಇಡೀ ರಾಷ್ಟ್ರದ ಕಣ್ಣು ಕೋವಿನ್ ಪೋರ್ಟಲ್‌ನ ಡ್ಯಾಷ್‌ಬೋರ್ಡ್‌ನಲ್ಲಿ ಬದಲಾಗುತ್ತಿದ್ದ ದತ್ತಾಂಶಗಳ ಮೇಲೆ ನೆಟ್ಟಿತ್ತು. ಆ ಪ್ರಕಾರ ಪ್ರತಿ ಗಂಟೆಗೆ 15 ಲಕ್ಷಕ್ಕೂ ಹೆಚ್ಚು ಮಂದಿಗೆ ಲಸಿಕೆಗಳನ್ನು ಪಡೆದಿದ್ದಾರೆ. ಪ್ರತಿ ನಿಮಿಷಕ್ಕೆ 26 ಸಾವಿರ ಮಂದಿಗೆ ಲಸಿಕೆ ನೀಡಲಾಗಿದೆ. ಪ್ರತಿ ಸೆಕೆಂಡಿಗೆ 425ಕ್ಕೂ ಹೆಚ್ಚು ಮಂದಿ ಲಸಿಕೆಗಳನ್ನು ತೆಗೆದುಕೊಂಡಿದ್ದಾರೆ’ ಎನ್ನುತ್ತಾ ಮೋದಿಯವರು ಅಂಕಿ ಅಂಶಗಳ ಸಹಿತ ಲಸಿಕೆ ಅಭಿಯಾನದ ವೇಗವನ್ನು ಉಲ್ಲೇಖಿಸಿದರು.

‘ಇಂಥದ್ದೊಂದು ಉತ್ತಮ ಪ್ರಯತ್ನಕ್ಕಾಗಿ ದೇಶದ ಎಲ್ಲ ವೈದ್ಯರು, ವೈದ್ಯಕೀಯ ಸಿಬ್ಬಂದಿ ಮತ್ತು ಆಡಳಿತದಲ್ಲಿರುವ ಸಿಬ್ಬಂದಿಯನ್ನು ನಾನು ಪ್ರಶಂಸಿಸುತ್ತೇನೆ’ ಎಂದು ಮೋದಿ ಹೇಳಿದರು. ಇಂಥದ್ದೊಂದು ಕಾರ್ಯವನ್ನು ಯಶಸ್ವಿಗೊಳಿಸಲು ಬೇಕಾದ ಬಹುದೊಡ್ಡ ಪ್ರಯತ್ನ ಹಾಗೂ ನುರಿತ ಮಾನವ ಸಂಪನ್ಮೂಲ ಭಾರತದಲ್ಲಿದೆ ಎಂಬುದು ಸಾಬೀತಾಯಿತು’ ಎಂದು ಅವರು ಹೇಳಿದರು.

‘ಜನ್ಮದಿನಗಳು ಬರುತ್ತವೆ, ಹೋಗುತ್ತವೆ. ನಾನು ಇಂತಹ ವಿಷಯಗಳಿಂದ ದೂರವಿರುತ್ತೇನೆ. ಆದರೆ ನಿನ್ನೆಯ ದಿನ ಮಾತ್ರ ನನಗೆ ತುಂಬಾ ಭಾವನಾತ್ಮಕವಾಗಿತ್ತು. ಇದು ಮರೆಯಲಾಗದ ದಿನವೂ ಹೌದು’ ಎಂದರು.

ಇದೇ ಸಂದರ್ಭದಲ್ಲಿ, ಮೊದಲ ಡೋಸ್ ಕೋವಿಡ್ ಲಸಿಕೆ ನೀಡಿಕೆಯಲ್ಲಿ ಗೋವಾ ರಾಜ್ಯ ಶೇ 100ರಷ್ಟು ಸಾಧನೆ ಮಾಡಿರುವುದಕ್ಕೆ ಪ್ರಧಾನಿಯವರು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

30.68 ಲಕ್ಷ ಜನರಿಗೆ ಲಸಿಕೆ: ರಾಜ್ಯ ನಂ. 1

ಬೆಂಗಳೂರು: ‘ರಾಜ್ಯದಲ್ಲಿ ಶುಕ್ರವಾರ (ಸೆ. 17) ನಡೆದ ಲಸಿಕೆ ಅಭಿಯಾನದಲ್ಲಿ 30.68 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ. ಇದು ಇಡೀ ದೇಶದಲ್ಲಿ ನೀಡಿದ ಒಟ್ಟು ಲಸಿಕೆಯಲ್ಲಿ ಶೇ 11ರಷ್ಟು ರಾಜ್ಯದಲ್ಲಿ ನೀಡಲಾಗಿದೆ. ಆ ಮೂಲಕ, ಕರ್ನಾಟಕ ಹೊಸ ಸಾಧನೆ ಮಾಡಿದೆ’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಸಚಿವರು, ‘ಪ್ರಧಾನಿ ನರೇಂದ್ರ ಮೋದಿ ಜನ್ಮದಿನವನ್ನು ಲಸಿಕೆ ನೀಡುವ ಮೂಲಕ ರಾಜ್ಯದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಗಿತ್ತು. ಒಂದೇ ದಿನ 30 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿತ್ತು’ ಎಂದರು.

‘ಇಡೀ ದೇಶದಲ್ಲಿ ಅತಿ ಹೆಚ್ಚು ಲಸಿಕೆಯನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ (4.09 ಲಕ್ಷ) ನೀಡಲಾಗಿದೆ. ಬೆಳಗಾವಿಯಲ್ಲಿ 2.57 ಲಕ್ಷ ಲಸಿಕೆ ನೀಡಲಾಗಿದೆ. ಜಿಲ್ಲಾಮಟ್ಟದ ಸಾಧನೆಯಲ್ಲಿ ಎರಡು ಸ್ಥಾನಗಳು ರಾಜ್ಯಕ್ಕೆ ಬಂದಿವೆ. ಒಟ್ಟು 14.96 ಲಕ್ಷ ಮಹಿಳೆಯರು ಲಸಿಕೆ ಪಡೆದಿದ್ದು, ಪುರುಷರಿಗಿಂತ (14.53 ಲಕ್ಷ) ಮುಂದಿದ್ದಾರೆ. ಈವರೆಗೆ 5 ಕೋಟಿ ಲಸಿಕೆ ನೀಡಿದ್ದು, ಕಳೆದ 20 ದಿನಗಳಲ್ಲಿ 1 ಕೋಟಿ ಲಸಿಕೆ ನೀಡಲಾಗಿದೆ. 1 ಕೋಟಿ ಜನರಿಗೆ ಎರಡೂ ಡೋಸ್ ನೀಡಲಾಗಿದೆ’ ಎಂದರು.

‘ಲಸಿಕೆ ನೀಡಿಕೆಯಲ್ಲಿ ಕಲಬುರ್ಗಿ ಶೇ 41, ಕೊಪ್ಪಳ ಶೇ 62, ಉಡುಪಿ ಶೇ 63, ಬೆಂಗಳೂರು ನಗರ ಶೇ 143, ಶಿವಮೊಗ್ಗ ಶೇ 134, ಧಾರವಾಡ, ಹಾಸನ, ಚಿಕ್ಕಬಳ್ಳಾಪುರ, ರಾಮನಗರ, ದಾವಣಗೆರೆ ತಲಾ ಶೇ 120 ಸಾಧನೆ ಮಾಡಿವೆ’ ಎಂದರು.

> **ರಾಜ್ಯದಲ್ಲಿ ಒಂದೇ ದಿನ 30 ಲಕ್ಷ ಜನರಿಗೆ ಲಸಿಕೆ ಹಾಕುವ ಗುರಿಯನ್ನು ಸಾಧಿಸಲಾಗಿದೆ. ಪ್ರಧಾನಿ ಮತ್ತು ಕೇಂದ್ರ ಆರೋಗ್ಯ ಸಚಿವರ ಸಹಕಾರದಿಂದ ಇದು ಸಾಧ್ಯವಾಗಿದೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ರಕ್ತ ಸಂಗ್ರಹ, ಅಂಗಾಂಗ ದಾನ: ‘ರಾಜ್ಯದಾದ್ಯಂತ ನಡೆದ ರಕ್ತದಾನ ಶಿಬಿರದಲ್ಲಿ 5,201 ಯುನಿಟ್ ರಕ್ತ ಸಂಗ್ರಹಿಸಲಾಗಿದೆ. ಬಿಬಿಎಂಪಿಯಲ್ಲಿ 1,240 ಯುನಿಟ್, ಬಳ್ಳಾರಿಯಲ್ಲಿ 298, ದಕ್ಷಿಣ ಕನ್ನಡದಲ್ಲಿ 295 ಯುನಿಟ್ ಸಂಗ್ರಹವಾಗಿದೆ. ಎರಡು ವಾರಗಳಲ್ಲಿ ಒಂದು ಲಕ್ಷ ಯುನಿಟ್ ರಕ್ತ ಸಂಗ್ರಹಿಸಬೇಕೆಂಬ ಗುರಿ ಹೊಂದಲಾಗಿದೆ’ ಎಂದರು.

‘ಅಂಗಾಂಗ ಕಸಿಗೂ ದಾನ ಹೆಚ್ಚಬೇಕಿದೆ. ಇದಕ್ಕಾಗಿ ಮೆಡಿಕಲ್ ಕಾಲೇಜು, ಜಿಲ್ಲಾಸ್ಪತ್ರೆಗಳಲ್ಲಿ ಅಂಗಾಂಗ ದಾನ ವಿಭಾಗ ಆರಂಭಿಸಲು ತೀರ್ಮಾನಿಸಲಾಗಿದೆ. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಕಾರ್ಡ್ ಅನ್ನು ಪ್ರತಿ ಕುಟುಂಬಕ್ಕೆ ನೀಡಲು ಮೂರು ತಿಂಗಳ ಗುರಿ ನೀಡಲಾಗಿದೆ’ ಎಂದರು.

ವಿಷನ್ ವರದಿ: ‘250 ತಜ್ಞರು ರೂಪಿಸಿದ ಆರೋಗ್ಯ ವಲಯದ ವಿಷನ್ ವರದಿಯನ್ನು ಮುಖ್ಯಮಂತ್ರಿ ಮೂಲಕ ಪ್ರಧಾನಿಗೆ ನೀಡಿ ಚಾಲನೆ ನೀಡಲಾಗುವುದು’ ಎಂದರು.

ಕೋವಿಡ್: 777 ಡೆಲ್ಟಾ ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 561 ಡೆಲ್ಟಾ ಹಾಗೂ 216 ಡೆಲ್ಟಾ ರೂಪಾಂತರಿ ತಳಿಯ ಪ್ರಕರಣಗಳು ದೃಢಪಟ್ಟಿವೆ.

ಈವರೆಗೆ ವರದಿಯಾದ ಡೆಲ್ಟಾ (ಬಿ.1617.2.1(ಎ.ವೈ.1) ಪ್ರಕರಣಗಳ ಒಟ್ಟು ಸಂಖ್ಯೆ 1,653ಕ್ಕೆ ಏರಿಕೆಯಾಗಿದೆ. ಡೆಲ್ಟಾ ಎ.ವೈ.4 ಹಾಗೂ ಡೆಲ್ಟಾ ಎ.ವೈ 12 ಅನ್ನು ಉಪತಳಿ ಎಂದು ಗುರುತಿಸಲಾಗಿದ್ದು, ಕ್ರಮವಾಗಿ 202 ಹಾಗೂ 14 ಪ್ರಕರಣಗಳು ದೃಢಪಟ್ಟಿವೆ. ಕೆಲದಿನಗಳ ಹಿಂದೆ ಕೋವಿಡ್ ಪೀಡಿತರಾದವರಲ್ಲಿ ಕೆಲವರ ಮಾದರಿಗಳನ್ನು ಅನುಕ್ರಮಣಿಕೆ (ಜಿನೋಮಿಕ್ ಸಿಕ್ವೆನ್ಸೀಸ್) ಪರೀಕ್ಷೆಗೆ ಪ್ರಯೋಗಾಯಲಕ್ಕೆ ಕಳುಹಿಸಲಾಗಿತ್ತು. ಅವುಗಳ ವರದಿ ಈಗ ಬಂದಿದ್ದು, ಸೋಂಕಿತರಾದವರಲ್ಲಿ ಬಹುತೇಕರು ಚೇತರಿಸಿಕೊಂಡಿದ್ದಾರೆ.

ಹೊಸದಾಗಿ 889 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.67 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.38 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.63 ರಷ್ಟು ವರದಿಯಾಗಿದೆ. 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಚಿಕ್ಕಬಳ್ಳಾಪುರ, ಹಾವೇರಿ, ಕೊಪ್ಪಳ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 133, ಮೈಸೂರಿನಲ್ಲಿ 74 ಹಾಗೂ ಕೊಡಗಿನಲ್ಲಿ 45 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 263 ಹಾಗೂ ಉಡುಪಿಯಲ್ಲಿ 86 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 14 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 7 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 6, ಉಡುಪಿ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ತುಮಕೂರು ಸೇರಿದಂತೆ 4 ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.57 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,587ಕ್ಕೆ ತಲುಪಿದೆ.

ಸೋಂಕಿತರಲ್ಲಿ 1,080 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.13 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 15,755ಕ್ಕೆ ಏರಿಕೆಯಾಗಿದೆ.

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸ್ವೀಕರಿಸಿದ ಎಂ.ವೀರಪ್ಪ ಮೊಯಿಲಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕನ್ನಡದ ಸಾಹಿತಿ ಎಂ.ವೀರಪ್ಪ ಮೊಯಿಲಿ ಸೇರಿದಂತೆ ರಾಷ್ಟ್ರದ ವಿವಿಧ ಭಾಷೆಯ 22 ಜನ ಸಾಹಿತಿಗಳು ಶನಿವಾರ ಇಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ 2020ನೇ ಸಾಲಿನ ಪ್ರಶಸ್ತಿ ಸ್ವೀಕರಿಸಿದರು.

ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಅವರು ₹ 1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಮೊಯಿಲಿ ಅವರ ‘ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ’ ಕೃತಿಯು ಪ್ರಶಸ್ತಿಗೆ ಆಯ್ಕೆಯಾಗಿತ್ತು. ಕಳೆದ ಜನವರಿಯಲ್ಲಿ ನಡೆಯಬೇಕಿದ್ದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿತ್ತು.

‘ನಮ್ಮ ದೇಶದ ಶ್ರೀಮಂತ ಸಂಸ್ಕೃತಿಯನ್ನು ಅಭಿವ್ಯಕ್ತಿಪಡಿಸುವ ನುಡಿಗಟ್ಟನ್ನು ಕಂಡುಕೊಳ್ಳಲು ಸಾಹಿತಿಗಳು ಯತ್ನಿಸಬೇಕಿದೆ’ ಎಂದು ಸಮಾರಂಭದ ಅಧ್ಯಕ್ಷತೆವಹಿಸಿದ್ದ ಡಾ. ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.

‘ಭಾರತೀಯ ಭಾಷೆಗಳಲ್ಲದೆ, ಇಂಗ್ಲಿಷ್ ಮತ್ತಿತರ ಭಾಷೆಗಳಲ್ಲೂ ವೈವಿಧ್ಯಮಯ ಸಾಹಿತ್ಯ ಸೃಷ್ಟಿಸಲು ನಮ್ಮ ಸಾಹಿತಿಗಳು ಮುಂದಾಗಬೇಕಿದೆ’ ಎಂದು ಅವರು ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಅವರು ದೆಹಲಿಯಲ್ಲಿ ಶನಿವಾರ ಸಂಜೆ ನಡೆದ ಸಮಾರಂಭದಲ್ಲಿ ಕನ್ನಡದ ಸಾಹಿತಿ ಎಂ.ವೀರಪ್ಪ ಮೊಯಿಲಿ ಅವರಿಗೆ 2020ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಿದರು

ಅಕಾಡೆಮಿಯ ಪ್ರಶಸ್ತಿಯು ರಾಷ್ಟ್ರ ಹಾಗೂ ಜಾಗತಿಕ ಮಟ್ಟದಲ್ಲಿ ಖ್ಯಾತಿ ಪಡೆಯಲು ಸಹಕಾರಿಯಾಗಲಿದೆ. ಮಾತೃ ಭಾಷೆಯಲ್ಲೇ ಸಾಹಿತ್ಯ ಸೃಷ್ಟಿಸಿದರೂ ಗಡಿಗಳನ್ನು ದಾಟಿ ಗುರುತಿಸಿಕೊಳ್ಳಲು ಈ ಪ್ರಶಸ್ತಿಯು ಸೇತುವೆಯಾಗಿ ಕೆಲಸ ಮಾಡಲಿದೆ ಎಂದು ಅವರು ಹೇಳಿದರು.

ಹಿರಿಯ ಸಾಹಿತಿ ವಿಶ್ವನಾಥ ಪ್ರಸಾದ್ ತಿವಾರಿ ಅತಿಥಿಯಾಗಿ ಪಾಲ್ಗೊಂಡಿದ್ದರು. ಅಕಾಡೆಮಿ ಉಪಾಧ್ಯಕ್ಷ ಮಾಧವ ಕೌಶಿಕ್, ಕಾರ್ಯದರ್ಶಿ ಕೆ.ಶ್ರೀನಿವಾಸ ರಾವ್ ಹಾಜರಿದ್ದರು.

ರಾಜ್ಯಸಭೆಗೆ ಉಪ ಚುನಾವಣೆ: ಬಿಜೆಪಿ ಅಭ್ಯರ್ಥಿಗಳ ಘೋಷಣೆ

ನವದೆಹಲಿ (ಪಿಟಿಐ): ಅಸ್ಸಾಂ ಮತ್ತು ಮಧ್ಯಪ್ರದೇಶದಿಂದ ರಾಜ್ಯಸಭೆಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಕೇಂದ್ರ ಸಚಿವರಾದ ಸರ್ಬಾನಂದ ಸೋನೊವಾಲ್ ಮತ್ತು ಎಲ್.ಮುರುಗನ್ ಅವರನ್ನು ಅಭ್ಯರ್ಥಿಗಳನ್ನಾಗಿ ಘೋಷಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರು ಈ ಇಬ್ಬರು ನಾಯಕರನ್ನು ಇತ್ತೀಚೆಗಷ್ಟೇ ತಮ್ಮ ಸಚಿವ ಸಂಪುಟಕ್ಕೆ ಸೇರಿಸಿಕೊಂಡಿದ್ದರು. ಈ ಇಬ್ಬರನ್ನೂ ರಾಜ್ಯಸಭೆಗೆ ಆಯ್ಕೆ ಮಾಡಲು ಆರು ತಿಂಗಳೊಳಗೆ ಚುನಾವಣೆ ನಡೆಸುವುದು ಅಗತ್ಯವಾಗಿತ್ತು.

ಅಸ್ಸಾಂನಲ್ಲಿ ವಿಶ್ವಜಿತ್ ಡೈಮುರಿಯವರು ವಿಧಾನಸಭಾ ಅಧ್ಯಕ್ಷರಾಗಿ ನೇಮಕಗೊಂಡ ನಂತರ ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಮಧ್ಯಪ್ರದೇಶದಲ್ಲಿ ತಾವರ್ ಚಂದ್ ಗೆಹ್ಲೋಟ್ ಅವರು ಕರ್ನಾಟಕದ ರಾಜ್ಯಪಾಲರಾಗಿ ನೇಮಗೊಂಡ ನಂತರ, ತಮ್ಮ ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಇಬ್ಬರು ನಾಯಕರ ರಾಜೀನಾಮೆಯಿಂದ ತೆರವಾದ ರಾಜ್ಯಸಭಾ ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿದೆ. ಈ ಎರಡೂ ರಾಜ್ಯಗಳ ವಿಧಾನಸಭೆಯಲ್ಲಿ ಬಿಜೆಪಿ ಬಹುಮತವಿರುವ ಕಾರಣ, ರಾಜ್ಯಸಭೆಗೆ ಇಬ್ಬರು ನಾಯಕರ ಆಯ್ಕೆ ಖಚಿತವಾಗಿದೆ.

ಅಶ್ಲೀಲ ಚಿತ್ರ ನಿರ್ಮಾಣ ಪ್ರಕರಣ: ನ್ಯಾಯಾಲಯಕ್ಕೆ ರಾಜ್ ಕುಂದ್ರಾ ಮನವಿ

‘ನನ್ನ ವಿರುದ್ಧ ಸಾಕ್ಷ್ಯ ಇಲ್ಲ: ಜಾಮೀನು ನೀಡಿ’

ಮುಂಬೈ (ಪಿಟಿಐ): ‘ಅಶ್ಲೀಲ ಚಿತ್ರ ನಿರ್ಮಾಣ ಆರೋಪಗಳಿಗೆ ಸಂಬಂಧಿಸಿ ಸಲ್ಲಿಸಲಾಗಿರುವ ಪೂರಕ ದೋಷಾರೋಪ ಪಟ್ಟಿಯಲ್ಲಿ ನನ್ನ ವಿರುದ್ಧ ಒಂದೂ ಸಾಕ್ಷ್ಯ ಇಲ್ಲ. ಹೀಗಾಗಿ ಜಾಮೀನು ನೀಡಬೇಕು’ ಎಂದು ಕೋರಿ ಉದ್ಯಮಿ ರಾಜ್ ಕುಂದ್ರಾ ಇಲ್ಲಿನ ಕೋರ್ಟ್‌ಗೆ ಶನಿವಾರ ಸಲ್ಲಿಸಿರುವ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಈ ಸಂಬಂಧ ಅವರ ಪರ ವಕೀಲ ಪ್ರಶಾಂತ್ ಪಾಟೀಲ ಅರ್ಜಿ ಸಲ್ಲಿಸಿದ್ದಾರೆ.

‘ಹಾಟ್‌ಶಾಟ್ಸ್ ಆ್ಯಪ್‌ನಲ್ಲಿ ಅಶ್ಲೀಲ ಚಿತ್ರಗಳನ್ನು ಅಪ್‌ಲೋಡ್ ಮಾಡಿದ ಆರೋಪದ ಮೇಲೆ ಕುಂದ್ರಾ ಅವರನ್ನು ಬಂಧಿಸಲಾಗಿದೆ. ಆದರೆ, ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ಮುಂಬೈ ಪೊಲೀಸರು ಈವರೆಗೆ ಒಂದೇ ಒಂದು ಸಾಕ್ಷ್ಯವನ್ನು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿಲ್ಲ’ ಎಂದು ವಕೀಲ ಪಾಟೀಲ ಅರ್ಜಿಯಲ್ಲಿ ತಿಳಿಸಿದ್ದಾರೆ.

ವಾಸ್ತವವಾಗಿ, ಹಾಟ್‌ಶಾಟ್ಸ್ ಆ್ಯಪ್‌ಗೆ ತಮ್ಮ ಕಂಟೆಂಟ್‌ಗಳನ್ನು ಅಪ್‌ಲೋಡ್ ಮಾಡುವುದು ಕಲಾವಿದರ ವೈಯಕ್ತಿಕ ವಿವೇಚನೆಯಾಗಿದೆ. ಹಾಗಾಗಿ, ರಾಜ್ ಕುಂದ್ರಾ ವಿರುದ್ಧ ಸುಳ್ಳು ಆರೋಪ ಹೊರಿಸಲಾಗಿದೆ. ಅವರ ಅಪರಾಧ ಸಾಬೀತುಪಡಿಸುವ ಯಾವುದೇ ಸಾಕ್ಷ್ಯ ಚಾರ್ಜ್‌ಶೀಟ್‌ನಲ್ಲಿಲ್ಲ ಎಂದೂ ವಾದಿಸಲಾಗಿದೆ.

ರಾಜ್ ಕುಂದ್ರಾ

ಎಫ್‌ಐಆರ್‌ನಲ್ಲಿ ಅವರ ಹೆಸರಿಲ್ಲ. ಆದರೂ ಪೊಲೀಸರು ಅವರನ್ನು ಎಳೆದು ತಂದಿದ್ದಾರೆ. ಅವರನ್ನು ವಿನಾಕಾರಣ ‘ಬಲಿಪಶು’ಮಾಡಲಾಗುತ್ತಿದೆ ಎಂದು ವಕೀಲರು ಹೇಳಿದ್ದಾರೆ. ಇಲ್ಲಿಯವರೆಗಿನ ತನಿಖೆಯಲ್ಲಿ ಕುಂದ್ರಾ ಯಾವುದೇ ಅಪರಾಧದಲ್ಲಿ ಭಾಗಿಯಾಗಿಲ್ಲ ಎಂಬುದು ಸ್ಪಷ್ಟವಾಗಿದೆ ಎಂದು ಕುಂದ್ರಾ ಪರ ವಕೀಲರು ಜಾಮೀನು ಅರ್ಜಿಯಲ್ಲಿ ತಿಳಿಸಿದ್ದಾರೆ.

‘ವಿನಾಕಾರಣ ಅವರನ್ನು ಬಲಿಪಶು ಮಾಡಲಾಗುತ್ತಿದೆ’ ಎಂದೂ ವಕೀಲರು ವಾದಿಸಿದ್ದಾರೆ.

ಪ್ರಕರಣದ ವಿಚಾರಣೆ ನಡೆಸುತ್ತಿರುವ ಮುಂಬೈನ ಅಪರಾಧ ವಿಭಾಗವು ಇತ್ತೀಚೆಗೆ ಕುಂದ್ರಾ ಮತ್ತು ಇತರ ಮೂವರ ವಿರುದ್ಧ ಪೂರಕ ಚಾರ್ಜ್‌ಶೀಟ್ ಸಲ್ಲಿಸಿತ್ತು.

ಆ ಬಳಿಕ ಮುಂಬೈ ಮೆಟ್ರೋಪಾಲಿಟನ್ ಕೋರ್ಟ್ ಮೆಟ್ಟಿಲೇರಿರುವ ಕುಂದ್ರಾ ಪರ ವಕೀಲರು, ವಾಸ್ತವವಾಗಿ ಪ್ರಕರಣದ ತನಿಖೆಯು ಸಂಪೂರ್ಣ ಮುಗಿದಿದೆ. ಹಾಗಾಗಿ, ಜಾಮೀನು ನೀಡಬಹುದು ಎಂದು ಮನವಿ ಮಾಡಿದ್ದಾರೆ.

ನಟಿ ಶಿಲ್ಪಾ ಶೆಟ್ಟಿ ಪತಿ ರಾಜ್ ಕುಂದ್ರಾ ಅವರನ್ನು ಅಶ್ಲೀಲ ಚಿತ್ರ ನಿರ್ಮಾಣ ಆರೋಪದಡಿ ಜುಲೈ 19ರಂದು ಬಂಧಿಸಲಾಗಿತ್ತು. ಕುಂದ್ರಾ ವಿರುದ್ಧ ನಿಷೇಧಿತ ಅಶ್ಲೀಲ ಚಿತ್ರ ನಿರ್ಮಾಣಕ್ಕೆ ಸಂಬಂಧಿತ ಐಪಿಸಿ ಸೆಕ್ಷನ್ ಮತ್ತು ಐಟಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಸದ್ಯ, ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

‘ಹೊಸ ಅಂತ್ಯದ ಸಾಧ್ಯತೆಯ’ ಕುರಿತಾಗಿ ನಟಿ ಶಿಲ್ಪಾ ಶೆಟ್ಟಿ ಹಂಚಿಕೊಂಡಿದ್ದೇನು?

ಮುಂಬೈ: 'ಹೊಸ ಆರಂಭವನ್ನು ಹಿಂತಿರುಗಿ ಸೃಷ್ಟಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ, ಈಗಿನಿಂದಲೇ ಪ್ರಯತ್ನಿಸುವ ಮೂಲಕ ಹೊಸ ಅಂತ್ಯವನ್ನು ಸೃಷ್ಟಿಸಬಹುದು' ಎಂಬ ಕಾರ್ಲ್ ಬಾರ್ಡ್ ಅವರ ಸಾಲುಗಳನ್ನು ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಇನ್‌ಸ್ಟಾಗ್ರಾಮ್ ಸ್ಟೇಟಸ್‌ನಲ್ಲಿ ಹಂಚಿಕೊಂಡಿದ್ದಾರೆ.

ಶಿಲ್ಪಾ ಶೆಟ್ಟಿ ಹಂಚಿಕೊಂಡಿರುವ ಅಧ್ಯಾಯಕ್ಕೆ 'ಹೊಸ ಅಂತ್ಯ' ಎಂದು ಹೆಸರಿಸಲಾಗಿದೆ. 'ನಾವು ತೆಗೆದುಕೊಂಡ ಕೆಟ್ಟ ನಿರ್ಧಾರಗಳು, ಮಾಡಿದ ತಪ್ಪುಗಳು, ನೋಯಿಸಿದ ಸ್ನೇಹಿತರನ್ನು ವಿಶ್ಲೇಷಿಸಲು ಸಾಕಷ್ಟು ಸಮಯವನ್ನು ವ್ಯಯಿಸಬಹುದು. ಒಂದು ವೇಳೆ, ನಾವು ಬುದ್ಧಿವಂತರಾಗಿದ್ದರೆ, ಹೆಚ್ಚು ತಾಳ್ಮೆಯಿಂದ ಇರಬೇಕಿದೆ. ನಾವು ಎಷ್ಟು ವಿಶ್ಲೇಷಿಸಿದರೂ ಸಹ ಹಿಂದಿನದನ್ನು ಬದಲಿಸಲು ಸಾಧ್ಯವಿಲ್ಲ' ಎಂದು ಅಧ್ಯಾಯದ ಆಯ್ದ ಭಾಗವು ಹೇಳುತ್ತದೆ.

ಬಿಜೆಪಿ ಸಂಸದ ಬಾಬುಲ್ ಸುಪ್ರಿಯೋ ಟಿಎಂಸಿಗೆ ಸೇರ್ಪಡೆ

ನವದೆಹಲಿ: ಕೆಲವು ದಿನಗಳ ಹಿಂದಷ್ಟೇ ರಾಜಕೀಯ ನಿವೃತ್ತಿ ಪಡೆಯುವುದಾಗಿ ಘೋಷಿಸಿದ್ದ ಕೇಂದ್ರದ ಮಾಜಿ ಸಚಿವ ಹಾಗೂ ಬಿಜೆಪಿ ಸಂಸದ ಬಾಬುಲ್ ಸುಪ್ರಿಯೋ ಅವರು ಶನಿವಾರ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ (ಟಿಎಂಸಿ) ಸೇರ್ಪಡೆಯಾಗುವ ಮೂಲಕ ಅಚ್ಚರಿ ಮೂಡಿಸಿದ್ದಾರೆ.

ಟಿಎಂಸಿಯ ಮುಖ್ಯಸ್ಥೆ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಟೀಕಿಸುತ್ತಿದ್ದವರಲ್ಲಿ ಪ್ರಮುಖರಾಗಿದ್ದ ಬಾಬುಲ್, ಜುಲೈನಲ್ಲಿ ರಾಜಕೀಯ ನಿವೃತ್ತಿ ಘೋಷಿಸಿದ್ದರು ಮತ್ತು ಮುಂದೆ ಯಾವುದೇ ಪಕ್ಷವನ್ನು ಸೇರುವುದಿಲ್ಲ ಎಂದು ತಿಳಿಸಿದ್ದರು.

ಮೋದಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ 2014ರಿಂದಲೂ ಹಲವು ಖಾತೆಗಳನ್ನು ನಿರ್ವಹಿಸಿದ್ದ ಸುಪ್ರಿಯೋ ಅವರನ್ನು ಜುಲೈ ತಿಂಗಳ ಆರಂಭದಲ್ಲಿ ನಡೆದ ಕೇಂದ್ರ ಸಚಿವ ಸಂಪುಟದ ಪುನರ್‌ರಚನೆ ವೇಳೆ ಸಚಿವ ಸ್ಥಾನದಿಂದ ತೆಗೆದುಹಾಕಲಾಗಿತ್ತು.

ಅದಾದ ಕೆಲವೇ ದಿನಗಳ ನಂತರ ಅವರು ರಾಜಕೀಯ ನಿವೃತ್ತಿ ನಿರ್ಧಾರ ಪ್ರಕಟಿಸಿದ್ದರು.

ಸಚಿವ ಸ್ಥಾನ ಕಳೆದುಕೊಂಡಿರುವುದರ ಬಗ್ಗೆ ಬೇಸರ ಹೊಂದಿರುವುದಾಗಿ ಸ್ಪಷ್ಟಪಡಿಸಿದ್ದ ಸುಪ್ರಿಯೋ, ಪಶ್ಚಿಮ ಬಂಗಾಳದ ಬಿಜೆಪಿ ನಾಯಕತ್ವದೊಂದಿಗೆ ಭಿನ್ನಾಭಿಪ್ರಾಯಗಳಿರುವುದಾಗಿಯೂ ತಿಳಿಸಿದ್ದರು. ಆದಾಗ್ಯೂ ಅವರು ಸಂಸದ ಸ್ಥಾನಕ್ಕೆ ಅಧಿಕೃತವಾಗಿ ರಾಜೀನಾಮೆ ನೀಡಿರಲಿಲ್ಲ.

ಇಬ್ಬರು ಮಕ್ಕಳಿಗೆ ಕೋವಿಡ್ ದೃಢಪಟ್ಟಿದ್ದರಿಂದ ಶಾಲೆಯ ಕೊಠಡಿಯನ್ನು ಸ್ಯಾನಿಟೈಸ್ ಮಾಡಲಾಯಿತು

ಇಬ್ಬರು ವಿದ್ಯಾರ್ಥಿಗಳಿಗೆ ಕೋವಿಡ್

ಚಾಮರಾಜನಗರ: ಯಳಂದೂರು ತಾಲ್ಲೂಕಿನ ಆದರ್ಶ ವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ.

‘ಮೂರು ದಿನಗಳ ಹಿಂದೆ ಮಕ್ಕಳನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿದಾಗ ಒಬ್ಬ ವಿದ್ಯಾರ್ಥಿಗೆ ಕೋವಿಡ್ ದೃಢಪಟ್ಟಿತ್ತು. ನಂತರ ತರಗತಿಯ ಎಲ್ಲ ವಿದ್ಯಾರ್ಥಿಗಳ ಗಂಟಲು ದ್ರವವನ್ನು ಸಂಗ್ರಹಿಸಲಾಗಿತ್ತು. ಶುಕ್ರವಾರ ಇನ್ನೊಬ್ಬ ವಿದ್ಯಾರ್ಥಿಗೆ ಸೋಂಕು ದೃಢಪಟ್ಟಿದೆ’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಮಂಜುನಾಥ್ ಹೇಳಿದರು.

‘ಸೋಮವಾರದವರೆಗೆ ಶಾಲೆಗೆ ರಜೆ ಘೋಷಿಸಲಾಗಿದೆ. ಶಾಲೆಯ ಆವರಣ ಹಾಗೂ ಕೊಠಡಿಗಳನ್ನು ಸ್ಯಾನಿಟೈಸ್ ಮಾಡಲಾಗಿದೆ’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ.ತಿರುಮಲಾಚಾರಿ ಹೇಳಿದರು. 398 ವಿದ್ಯಾರ್ಥಿಗಳಿರುವ ಶಾಲೆಯಲ್ಲಿ 6ರಿಂದ 10ನೇ ತರಗತಿಯವರೆಗೆ ಪಾಳಿ ಪದ್ಧತಿಯಲ್ಲಿ ಪಾಠಗಳು ನಡೆಯುತ್ತಿವೆ.

25 ವರ್ಷಗಳ ಹಿಂದೆ — ಗುರುವಾರ, 19-9-1996

● **ರಾಜ್ಯಸಭೆಗೆ ದೇವೇಗೌಡರ ಅವಿರೋಧ ಆಯ್ಕೆ ಖಚಿತ**

ಬೆಂಗಳೂರು, ಸೆ. 18– ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುತ್ತಿರುವ ಮರು ಚುನಾವಣೆಯಲ್ಲಿ ಸ್ಪರ್ಧಿಸಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಇಂದು ನಾಮಪತ್ರ ಸಲ್ಲಿಸಿದರು. ಗೌಡರು ಸ್ಪರ್ಧಾ ಕಣದಲ್ಲಿರುವ ಏಕೈಕ ಅಭ್ಯರ್ಥಿಯಾಗಿದ್ದು ಅವರ ಅವಿರೋಧ ಆಯ್ಕೆ ಖಚಿತವಾಗಿದೆ.

ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಇಂದು ಅಂತಿಮ ಗಳಿಗೆಗೆ ಒಂದು ಗಂಟೆ ಮುಂಚಿತವಾಗಿ ನಾಲ್ಕು ಸೆಟ್‌ಗಳಲ್ಲಿ ಅವರು ನಾಮಪತ್ರ ಸಲ್ಲಿಸಿದರು. ನಾಮಪತ್ರ ಹಿಂತೆಗೆದುಕೊಳ್ಳುವ ಕೊನೆಯ ದಿನವಾದ ಶನಿವಾರ (ಸೆ.21) ಅಧಿಕೃತವಾಗಿ ಆಯ್ಕೆ ಘೋಷಣೆಯಾಗಲಿದೆ.

50 ವರ್ಷಗಳ ಹಿಂದೆ — ಭಾನುವಾರ, 19-9-1971

● **ವಿದ್ಯಾರ್ಥಿಗಳ ಮುಷ್ಕರಕ್ಕೆ ಯಾವ ಕಾರಣವೂ ಇಲ್ಲ: ತುಕೋಳ್ ವಿವರಣೆ**

ಬೆಂಗಳೂರು, ಸೆ.18– ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮುಷ್ಕರ ಹೂಡಲು ‘ಯಾವ ಕಾರಣವೂ’ ಇಲ್ಲವೆಂದು ಉಪಕುಲಪತಿ ಟಿ.ಕೆ. ತುಕೋಳ್ ಅವರು ಇಂದು ವರದಿಗಾರರಿಗೆ ತಿಳಿಸಿದರು.

ವಿದ್ಯಾರ್ಥಿ ನಾಯಕರು ತಿಳಿಸಿರುವ ‘ಕುಂದುಕೊರತೆಗಳಲ್ಲಿ’ ಬಹುಭಾಗ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟವಲ್ಲವೆಂದು ಅಭಿಪ್ರಾಯಪಟ್ಟರು.

ಕೆಲ ದಿನಗಳ ಹಿಂದೆ ಕೆಲ ವಿದ್ಯಾರ್ಥಿ ನಾಯಕರು ತಮ್ಮನ್ನು ಭೇಟಿ ಮಾಡಿದಾಗ ‘ಕ್ಯಾರಿ ಓವರ್ ಪದ್ಧತಿ ಹಾಗೂ ನಾಲ್ಕು ಮಂದಿ ವಿದ್ಯಾರ್ಥಿಗಳ ಫಲಿತಾಂಶ ಬದಲಾವಣೆ ವಿಷಯಗಳನ್ನು ಮಾತ್ರ ಚರ್ಚಿಸಿದರು’ ಎಂದರು.

ಗುಂಡಣ್ಣ

ಡೆಂಗಿ: 6 ವರ್ಷದ ಮಗು ಸಾವು

ಸಿಂಧನೂರು (ರಾಯಚೂರು ಜಿಲ್ಲೆ): ನಗರದ ಮಹಿಬೂಬಿಯಾ ಕಾಲೊನಿಯ ಅಂಗನವಾಡಿ ಕಾರ್ಯಕರ್ತೆ ಅನಿತಾ ಅವರ ಪುತ್ರಿ ಸೋನು (6) ಡೆಂಗಿ ಜ್ವರದಿಂದ ಗುಣಮುಖವಾಗದೆ ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಶುಕ್ರವಾರ ರಾತ್ರಿ ಮೃತಪಟ್ಟಿದ್ದಾಳೆ.

ಕಳೆದ ವಾರ ಜ್ವರ ಕಾಣಿಸಿಕೊಂಡಾಗ ಸಿಂಧನೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಜ್ವರ ಕಡಿಮೆಯಾಗದ ಕಾರಣ ಖಾಸಗಿ ಆಸ್ಪತ್ರೆಯಲ್ಲೂ ತಪಾಸಣೆ ಮಾಡಿಸಿದ್ದರು. ಪ್ಲೇಟ್‌ಲೆಟ್ ಗಣನೀಯ ಇಳಿಮುಖವಾಗುವುದು ಕಂಡು ಬಂದಿತ್ತು. ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಗುರುವಾರ ಮಗುವನ್ನು ದಾಖಲಿಸಲಾಗಿತ್ತು.

‘ಇದು ಶಂಕಿತ ಡೆಂಗಿ ಪ್ರಕರಣ ಇರಬಹುದು. ಈ ಬಗ್ಗೆ ವರದಿಗಳನ್ನು ಪರಿಶೀಲಿಸಿ ನಿರ್ಧಾರಕ್ಕೆ ಬರಬೇಕಿದೆ’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಅಯ್ಯನಗೌಡ ತಿಳಿಸಿದರು.

ದಿನ ಭವಿಷ್ಯ — ಭಾನುವಾರ ಸೆಪ್ಟೆಂಬರ್ 19, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಚತುರ್ದಶೀ ಗಂ. 56-29 (ರಾ. 4-50) ಭಾನುವಾರ ನಿತ್ಯ ನಕ್ಷತ್ರ ಶತಭಿಷ ಗಂ. 54-25 (ರಾ. 4-01) ಧೃತಿ ನಾಮ ಯೋಗ ಗಂ. 30-14 ಗರಜ ಕರಣ ಗಂ. 27-26 ವಿಷ ಗಂ. 12-42 ಅಮೃತ ಗಂ 36-46: ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 2

ಮೇಷ: ಪ್ರಮುಖ ಯೋಜನೆಗಳ ಆಗುಹೋಗುಗಳ ಬಗ್ಗೆ ಪರಿಣಿತ ವ್ಯಕ್ತಿಗಳೊಂದಿಗೆ ಸಮಾಲೋಚನೆಯ ಸಾಧ್ಯತೆ. ಸರಿಯಾದ ನಿರ್ಧಾರದಿಂದಾಗಿ ಪ್ರಶಂಸೆಗೆ ಪಾತ್ರರಾಗುವಿರಿ. ನಿಶೆ ಏರಿಸುವ ವಸ್ತುಗಳಿಂದ ದಿನದಮಟ್ಟಿಗೆ ದೂರವಿರಿ.

ವೃಷಭ: ಎದುರಾದ ಸಮಸ್ಯೆಗಳನ್ನು ಮೆಟ್ಟಿನಿಲ್ಲುವ ದಿಟ್ಟ ಸಾಮರ್ಥ್ಯ ನಿಮ್ಮದು. ಯಾವುದೇ ವಿಚಾರದಲ್ಲಿ ರಾಜಿಯಾಗದ ಮನಸ್ಥಿತಿ. ಪ್ರೀತಿಪಾತ್ರರಿಂದ ಸಮಯೋಚಿತ ಭರವಸೆಯ ಬಲ. ಕಚೇರಿ ಕೆಲಸಗಳಿಗೆ ಅಡೆತಡೆ ಸಂಭವ.

ಮಿಥುನ: ಆಕರ್ಷಣೀಯ ವ್ಯಕ್ತಿತ್ವದ ಜೊತೆಗೆ ನಡವಳಿಕೆಯಿಂದಾಗಿ ಅಭಿಮಾನಿಗಳು ಹೆಚ್ಚುವ ಸಾಧ್ಯತೆ. ಸಮರ್ಥ ಕಾರ್ಯ ಯೋಜನೆಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ.

ಕರ್ಕಾಟಕ: ಮಹತ್ತರವಾದ ಕನಸೊಂದು ಈಡೇರುವ ದಿಶೆಯಲ್ಲಿ ಬಂಧುಗಳಿಂದ ಸಲಹೆಗಳು ಬರುವ ಸಾಧ್ಯತೆ. ನಿಮ್ಮ ದಿಟ್ಟ ನಿಲುವಿನಿಂದ ಹಿಂದೆ ಸರಿಯುವ ಅವಶ್ಯಕತೆ ಇಲ್ಲ.

ಸಿಂಹ: ನಿಮ್ಮ ಹವ್ಯಾಸವೇ ನಿಮಗೊಂದು ವೃತ್ತಿಯಾಗಿ ಮಾರ್ಪಾಡಾಗುವ ಸಾಧ್ಯತೆ. ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಭಾಗಿ. ಸಂದರ್ಭೋಚಿತವಾದ ಸಲಹೆ, ಸಹಕಾರ ದೊರೆತು ಶುಭ ಲಾಭಗಳನ್ನು ತಂದುಕೊಡಲಿವೆ.

ಕನ್ಯಾ: ನಿಮ್ಮ ಗುರಿಸಾಧನೆಯಲ್ಲಿ ಯಶಸ್ಸನ್ನು ಕಾಣುವಿರಿ. ಅಂದುಕೊಂಡ ಕಾರ್ಯ ಸಾಧನೆಗಾಗಿ ಸಮರ್ಥ ಮಾರ್ಗ ಗೋಚರವಾಗಲಿದೆ. ಸರ್ಕಾರಿ ಉದ್ಯೋಗಿಗಳು ಸ್ವಲ್ಪಮಟ್ಟಿನ ವಿರೋಧಗಳನ್ನು ಎದುರಿಸಬೇಕಾದೀತು.

ತುಲಾ: ಏಕಕಾಲದಲ್ಲಿ ಅನೇಕ ಕಾರ್ಯಗಳನ್ನು ಮಾಡಿ ಮುಗಿಸುವ ತವಕದಿಂದಾಗಿ ಗೊಂದಲ ಉಂಟಾಗಬಹುದು. ದುಂದುವೆಚ್ಚವನ್ನು ಭರಿಸಬೇಕಾಗಬಹುದು.

ವೃಶ್ಚಿಕ: ಅಡೆತಡೆಗಳ ನಡುವೆಯೂ ಉದ್ದೇಶಿತ ಕಾರ್ಯಗಳಲ್ಲಿ ಯಶಸ್ಸು. ಬುದ್ಧಿವಂತಿಕೆಯಿಂದ ಕಾರ್ಯ ಸಾಧನೆ ಮಾಡುವಿರಿ. ಮಹಿಳೆಯರಿಂದ ಬಂದ ಸಲಹೆಗಳಿಗೆ ಆದ್ಯತೆ ನೀಡಲಿದ್ದೀರಿ. ಮಾನಸಿಕ ಶಾಂತಿ ಲಭಿಸಲಿದೆ.

ಧನು: ಅನಿವಾರ್ಯ ಒತ್ತಡಕ್ಕೆ ಒಳಗಾಗಿ ಎಲ್ಲವನ್ನು ತಾಳಿಕೊಳ್ಳಬೇಕಾದೀತು. ಒಳ್ಳೆಯ ಯೋಜನೆಯೊಂದಕ್ಕೆ ಮುನ್ನುಡಿ ಹಾಡುವ ಸಾಧ್ಯತೆ. ವಿಶ್ವಾಸ, ಪ್ರೀತಿಪಾತ್ರ ನಡೆಗಳಿಂದಾಗಿ ಎಲ್ಲರಲ್ಲೂ ಪ್ರಶಂಸೆಗೆ ಪಾತ್ರರಾಗುವಿರಿ.

ಮಕರ: ಕುಟುಂಬದ ಸದಸ್ಯರೊಂದಿಗೆ ಸಂತಸದ ದಿನವನ್ನು ಕಳೆಯುವಿರಿ. ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ. ಶಿಸ್ತಿನ ನಡವಳಿಕೆ. ಸಮಸ್ಯೆಗಳಿಗೆ ಸುಲಭ ಪರಿಹಾರ ದೊರೆಯಲಿದೆ.

ಕುಂಭ: ಕಾರ್ಯಯೋಜನೆಯ ಯಶಸ್ಸಿಗಾಗಿ ಅನೇಕ ಸಲಹೆಗಳು ಬಂದರೂ ಸ್ವಯಂ ತುಲನೆ ಮಾಡಿ ನಿರ್ಧಾರಕ್ಕೆ ಬರುವುದು ಒಳ್ಳೆಯದು. ಉದ್ಯೋಗದಲ್ಲಿ ಅಡೆತಡೆಗಳು ಕಂಡುಬಂದರೂ ನಿವಾರಣೆ ಕಂಡುಕೊಳ್ಳುವಿರಿ.

ಮೀನ: ಸ್ವತಂತ್ರ ನಿರ್ಧಾರ ಕೈಗೊಳ್ಳುವಲ್ಲಿ ಹಿಂಜರಿಕೆ ಇಲ್ಲ. ಸಮತೋಲನ ಕಾಯ್ದುಕೊಳ್ಳುವ ಚಾಣಾಕ್ಷತೆಯಿಂದಾಗಿ ಮಾನಸಿಕ ನೆಮ್ಮದಿ. ಸ್ನೇಹಿತರೊಂದಿಗೆ ಹಿತವಾದ ಚರ್ಚೆಗಳು ನಡೆದು ಪ್ರಮುಖ ನಿರ್ಧಾರ ಕೈಗೊಳ್ಳುವ ಸಾಧ್ಯತೆ.

ನಿಮ್ಮ ಜನ್ಮದಿನ 19-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ರಾಜಕೀಯದ ಬಗೆಗಿನ ಉನ್ನತ ವಿಚಾರ ಚಿಂತನೆಗಳಿಂದಾಗಿ ಸಾಮಾಜಿಕ ಗೌರವಗಳು ಪ್ರಾಪ್ತವಾಗುವವು. ಹೂವು ಹಣ್ಣು ತರಕಾರಿ ಮುಂತಾದ ವ್ಯಾಪಾರಗಳಲಿ ತೊಡಗಿದವರಿಗೆ ವ್ಯಾಪಾರ ವೃದ್ಧಿಯಾಗಿ ಆರ್ಥಿಕ ಸಂಕಷ್ಟಗಳು ನಿವಾರಣೆಯಾಗಲಿವೆ.

ಸಂಕ್ಷಿಪ್ತ ಸುದ್ದಿ

ವಿಚಾರಣೆಗೆ ದೇಶಮುಖ್ ಗೈರು; ಕೋರ್ಟ್ ಮೊರೆ ಹೋದ ಇ.ಡಿ

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗೆ ಗೈರು ಹಾಜರಾಗಿರುವ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ನ್ಯಾಯಾಲಯದ ಮೊರೆ ಹೋಗಿದೆ.

ಅನಿಲ್ ದೇಶಮುಖ್

ಅನಿಲ್ ದೇಶಮುಖ್ ಅವರಿಗೆ ಹಲವು ಬಾರಿ ಸಮನ್ಸ್ ಜಾರಿ ಮಾಡಲಾಗಿದೆ. ಆದರೂ, ಅವರು ವಿಚಾರಣೆಗೆ ಗೈರು ಹಾಜರಾಗಿದ್ದಾರೆ. ಹಾಗಾಗಿ ಅವರ ವಿರುದ್ಧ ಐಪಿಸಿ ಕಲಂ 174ರ ಪ್ರಕಾರ ಕ್ರಮಕೈಗೊಳ್ಳಬೇಕೆಂದು ವಿಶೇಷ ನ್ಯಾಯಾಲಯದಲ್ಲಿ ಇ.ಡಿ ಶುಕ್ರವಾರ ಅರ್ಜಿ ಸಲ್ಲಿಸಿದೆ.

ಈ ಕಲಂನಡಿ ಒಂದು ತಿಂಗಳ ಸರಳ ಜೈಲು ಶಿಕ್ಷೆ ಅಥವಾ ₹500 ದಂಡ, ಇಲ್ಲವೇ ಎರಡನ್ನೂ ವಿಧಿಸಲು ಅವಕಾಶವಿದೆ.

ಡಿ. 16ರಿಂದ ಕೇಂದ್ರೀಯ ಶಿಕ್ಷಕ ಅರ್ಹತಾ ಪರೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಡಿಸೆಂಬರ್ 16ರಿಂದ ಜನವರಿ 13ರ ವರೆಗೆ ‘ಕೇಂದ್ರೀಯ ಶಿಕ್ಷಕ ಅರ್ಹತಾ ಪರೀಕ್ಷೆ’ (ಸಿಟಿಇಟಿ) ನಡೆಸಲಿದೆ.

‘ದೇಶದ ವಿವಿಧ ಕೇಂದ್ರಗಳಲ್ಲಿ, 20 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗುವುದು. ಕಂಪ್ಯೂಟರ್ ಆಧಾರಿತ ಪರೀಕ್ಷೆ ಇದಾಗಿರಲಿದೆ’ ಎಂದು ಸಿಬಿಎಸ್‌ಇ ಪ್ರಕಟಣೆಯಲ್ಲಿ ತಿಳಿಸಿದೆ.

‘ಪಠ್ಯಕ್ರಮ, ಭಾಷೆಗಳು, ಅರ್ಹತೆ, ಶುಲ್ಕ, ಪರೀಕ್ಷಾ ಕೇಂದ್ರಗಳು ಸೇರಿದಂತೆ ಪರೀಕ್ಷೆಗೆ ಸಂಬಂಧಿಸಿದ ವಿವರಗಳು ‘https://ctet.nic.in ’ ವೆಬ್‌ಸೈಟ್‌ನಲ್ಲಿ ಸೆ. 20ರಿಂದ ಲಭ್ಯ ಇರಲಿವೆ’ ಎಂದು ತಿಳಿಸಿದೆ.

ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಅಕ್ಟೋಬರ್ 19 ಕೊನೆಯ ದಿನವಾಗಿದೆ ಎಂದೂ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 19 ಸೆಪ್ಟೆಂಬರ್ 2021

ಉತ್ತರ ಮಲೆಯ ಹಸಿರು ಹಾದಿಯಲ್ಲಿ 9

ಸಂಗೀತ ಸೇವೆ ಮಾಡಿದ ತೃಪ್ತಿ ನನಗೆ 10

ಕಥೆ ಹೇಳುವ ಪಟ ಚಿತ್ರಗಳು 11

ಕೃಷ್ಣ ಸುಂದರಿಯರ ಕಲರವ

ದಕ್ಷಿಣ ಭಾರತದ ಟಿ.ವಿ ಧಾರಾವಾಹಿಗಳು ಇತ್ತೀಚೆಗೆ 'ಕೃಷ್ಣ ಸುಂದರಿ'ಯರ ಜಪ ಮಾಡುತ್ತಿವೆ. ಲಾಗಾಯ್ತಿನಿಂದಲೂ ಹಿಂದೆ ತಳ್ಳುತ್ತಾ ಬಂದಿದ್ದ ಈ ಸುಂದರಿಯರನ್ನು ಈಗ ಮುನ್ನೆಲೆಗೆ ತಂದಿದ್ದೇಕೆ? ಕಪ್ಪು ಮೈಬಣ್ಣದ ಕುರಿತು ಜನರ ಮನೋಭಾವ ನಿಜಕ್ಕೂ ಬದಲಾಗಿದೆಯೇ? ಅಥವಾ ಬೂದಿ ಮುಚ್ಚಿದ ಕೆಂಡದಂತೆ ಸುಡುತ್ತಿದೆಯೇ? 'ಕೃಷ್ಣ ಪಕ್ಷ' ಹಿಡಿದು ಹೀಗೊಂದು ಸುತ್ತಾಟ...

ಸುಕೃತ ಎಸ್.

ಕಲೆ: ಸುಜಾತಾ ಶೆಟ್ಟಿ

ಕಪ್ಪುವರ್ಣದ ಮಹಿಳೆಯರನ್ನು ನಮ್ಮ ಸಮಾಜ ಸುತರಾಂ ಇಷ್ಟಪಡುವುದಿಲ್ಲ. ಕಪ್ಪು ಎನ್ನುವ ಕಾರಣಕ್ಕೆ ಕಾಳಿ ದೇವಿಯನ್ನೂ ನಾವು ದೂರವೇ ಇಟ್ಟಿದ್ದೇವೆ, ಅಲ್ಲವೇ? ಕಪ್ಪು ಬಣ್ಣ ಕುರಿತ ಈ ಚರ್ಚೆ ಇಂದು, ನಿನ್ನೆಯದಲ್ಲ. ಟಿ.ವಿಗಳಲ್ಲಿ ಈಗ ಕಿಕ್ಕಿರಿದು ತುಂಬಿರುವ ಕೃಷ್ಣ ತುಳಸಿ, ಲಕ್ಷಣ, ಮುದ್ದು ಲಕ್ಷ್ಮಿ, ಸುಂದರಿ ಮೊದಲಾದ ಧಾರಾವಾಹಿಗಳು ಕಪ್ಪುಬಣ್ಣದ ಮಹಿಳೆಯರ ಕುರಿತೇ ಮಾತನಾಡುತ್ತಿವೆ. ಮೈಬಣ್ಣದ ಕಾರಣಕ್ಕಾಗಿ ಶತಮಾನಗಳಿಂದ ಶೋಷಿತರಾದ ಮಹಿಳೆಯರು ಅದೆಷ್ಟೋ, ಲೆಕ್ಕವನ್ನು ಇಟ್ಟವರಿಲ್ಲ. ಸುಮ್ಮನೆ ಕೆದಕುತ್ತಾ ಹೋದರೆ ನಮ್ಮ ಮನೆಯಲ್ಲೋ ಪಕ್ಕದ ಮನೆಯಲ್ಲೋ ಅಂತಹ ಹತ್ತಾರು ಕಥೆಗಳು ಸದ್ದಿಲ್ಲದೆ ನಮ್ಮ ಕಾಲುಗಳ ಅಡಿಯಲ್ಲೇ ಬಿಚ್ಚಿಕೊಳ್ಳುತ್ತವೆ.

ಶಿವಮೊಗ್ಗ ಜಿಲ್ಲೆಯ ಆ ಪುಟ್ಟ ಊರಿನ ಮನೆಯ ಜಗುಲಿಯ ಮೇಲೆ ಕುಳಿತ 70 ವರ್ಷದ ಕಮಲಕ್ಕಜ್ಜಿ ಆಕಾಶವನ್ನೇ ದಿಟ್ಟಿಸಿ ನೋಡುತ್ತಿದ್ದರು. ಸಂಜೆ ತನ್ನ ರಂಗು ಕಳಚಿ ಕತ್ತಲು ಇನ್ನೇನು ಆವರಿಸುವುದರಲ್ಲಿ ಇತ್ತು. ಮಳೆಗಾಲ ಬೇರೆ. ತುಂಡು ತುಂಡು ಕಪ್ಪು ಮೋಡಗಳು ಒಟ್ಟುಗೊಳ್ಳುತ್ತಾ ಇದ್ದವು. 'ಮಳೆ ಶುರು ಆಗೋ ಲಕ್ಷಣ ಕಾಣ್ತಿದೆ' ಎಂದಿದ್ದು ಅವರ ಕಿವಿಗೆ ಬೀಳಲಿಲ್ಲ.

'ಕತ್ತಲು ಇದ್ದರೆ ತಾನೆ ನಕ್ಷತ್ರ-ತಾರೆಗಳಿಗೆ ಅಸ್ತಿತ್ವ. ಬಿಳಿಯಂತೆಯೇ ಕಪ್ಪು ಕೂಡ ಇನ್ನೊಂದು ಬಣ್ಣವಷ್ಟೆ. ಮಳೆ ಸುರಿಸುವ ಮೋಡ ಅವರು ಕಪ್ಪು, ಇವರು ಬಿಳಿ ಎಂದು ಮಳೆ ಸುರಿಸುತ್ತಾ...' ಯಾವುದೋ ಧಾರಾವಾಹಿಯಲ್ಲಿ ಬಂದ ಈ ಮಾತು ಕಮಲಕ್ಕಜ್ಜಿಯನ್ನು ಬಹುವಾಗಿ ಕಾಡಿತ್ತು. ಸಂಜೆ ಆಕಾಶವನ್ನು ನೋಡುತ್ತಾ ಕಮಲಕ್ಕಜ್ಜಿ ಅದನ್ನೇ ನೆನಪು ಮಾಡಿಕೊಳ್ಳುತ್ತಿದ್ದಳು. ಬಿಳಿ ಮಾತ್ರವೇ ಚಂದ ಎನ್ನುವಂತಹ ಮಾತುಗಳನ್ನು ಈ ಅಜ್ಜಿ, ತಮ್ಮ ಕಿವಿಯ ತಮಟೆ ಹರಿದು ಹೋಗುವಷ್ಟು ಬಾರಿ ಕೇಳಿದ್ದರು. ಅದರಿಂದ ಅಸಾಧ್ಯ ಚಿತ್ರಹಿಂಸೆಯನ್ನೂ ಅನುಭವಿಸಿದ್ದರು.

'ಸಮಾಜದಲ್ಲಿ ಕಪ್ಪು ಎಂದಾಕ್ಷಣ ಒಂದು ರೀತಿಯ ತಾತ್ಸಾರ, ಅಸಹ್ಯ, ಜುಗುಪ್ಸೆ. ನನ್ನ ಬದುಕಿನಲ್ಲೂ 'ಕಪ್ಪು' ವಹಿಸಿದ ಪಾತ್ರವನ್ನು ಮರೆಯಲು ಬಯಸಿದಷ್ಟೂ ಗಟ್ಟಿಯಾಗಿ ಮನದಂಗಳದಲ್ಲಿ ಬೇರೂರುತ್ತಲೇ ಇದೆ' ಎಂದು ಅವರು ಕಣ್ಣೀರು ತುಂಬಿಕೊಂಡರು. 'ಹುಟ್ಟಿದ ಮಗು ನನ್ನಂತೆ ಕಪ್ಪಗಿಲ್ಲ ಎಂದು ಖಾತರಿಪಡಿಸಿಕೊಳ್ಳುವವರೆಗೆ ನನಗೆ ಸಮಾಧಾನವಿರಲಿಲ್ಲ' ಎಂದು ಹೇಳುವಾಗ ಅವರ ಕಣ್ಣುಗಳಲ್ಲಿ ನೀರು ಧಾರೆಯಾಗಿ ಹರಿಯುತ್ತಿತ್ತು. ಕಪ್ಪು ಎನ್ನುವ ಒಂದೇ ಕಾರಣಕ್ಕೆ ಅವರ ಮನಸ್ಸನ್ನು ಅಷ್ಟೊಂದು ನೋಯಿಸಿದ ಸಮಾಜದ ಕುರಿತು ನನ್ನಲ್ಲೂ ಜುಗುಪ್ಸೆ ಮೂಡಿತ್ತು.

ಸೆರೆನಾ ವಿಲಿಯಮ್ಸ್

ನಂದಿತಾ ದಾಸ್

'ಇದು ಆಧುನಿಕ ಯುಗ, 21ನೇ ಶತಮಾನದಲ್ಲಿ ಕಪ್ಪು, ಬಿಳಿ ಎಂದೆಲ್ಲಾ ಯಾರೂ ನೋಡುವುದಿಲ್ಲ ಎನ್ನುವ ಮಾತುಗಳನ್ನೆಲ್ಲ ಸುತ್ತಿ ಬಿಸಾಡಬೇಕು. #blackivesmatter' ಎಂದು ಇತ್ತೀಚೆಗಷ್ಟೆ ಟ್ವೀಟ್ ಮಾಡಿದ್ದ ನನಗೆ ಕಮಲಕ್ಕಜ್ಜಿ ಅನುಭವವನ್ನು ಕೇಳಿ ಗಾಸಿಯಾಯಿತು. ಎಷ್ಟೋ ಬಾರಿ ಜಗತ್ತಿನಲ್ಲಿ ಆಗುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ನಾವು ನಮ್ಮ ಹತ್ತಿರದಲ್ಲೇ ಆಗುವ ಅನ್ಯಾಯಕ್ಕೆ ಸ್ಪಂದಿಸುವುದೇ ಇಲ್ಲ. ಹೆಚ್ಚೆಂದರೆ ಮಾತಿನ ಸಾಂತ್ವನವಷ್ಟೆ. ಎಂಥ ವಿಪರ್ಯಾಸ!

ನಮ್ಮ ಬಾಲಿವುಡ್ ಚಿತ್ರಗಳೂ ಸಮಾಜದ ಇಂತಹ ಮನಃಸ್ಥಿತಿಯ ಪ್ರತಿಬಿಂಬದಂತೆಯೇ ಇವೆ. 'ತು ಹಸೀನ್ ಲಡ್ಕಿ ಹೈ, ಮೈ ಜವಾನ್ ಲಡ್ಕಾ ಹ್ಞೂಂ' (ನೀನು ಸುಂದರ ಹುಡುಗಿ, ನಾನು ಯೌವನ ಉಕ್ಕೇರುವ ಹುಡುಗ) ಎಂಬರ್ಥದ ಹಾಡು ಹೇಳುವುದಾದರೂ ಏನನ್ನು? ಹುಡುಗಿಯರು ಮಾತ್ರ ತೆಳ್ಳಗೆ-ಬೆಳ್ಳಗೆ ಇರಬೇಕು, ಹುಡುಗರಿಗೆ ಯೌವನ ಒಂದಿದ್ದರೆ ಸಾಕು ಎಂದಲ್ಲವೇ? ಹೀಗೆ ತೆಳ್ಳಗೆ-ಬೆಳ್ಳಗೆ ಕಾಣಿಸಿಕೊಳ್ಳಲು ಹುಡುಗಿಯರು ಹೇಗೆಲ್ಲ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ನೆನಪಿಸಿಕೊಂಡರೆ ಎದೆ ಝಲ್ ಎನ್ನುತ್ತದೆ. ಬ್ಲೀಚಿಂಗ್ ಮಾಡಿಸಿಕೊಂಡು, ಬಟ್ಟೆ ಸುತ್ತಿಕೊಂಡು, ಚುಚ್ಚುಮದ್ದು ಹಾಕಿಸಿಕೊಂಡು ಅವರು ಅನುಭವಿಸುವ ಹಿಂಸೆ ಅಷ್ಟಿಷ್ಟಲ್ಲ.

'ನೀವು ಎಲ್ಲಿಯಾದರೂ ನೋಡಿ ಅಥವಾ ಎಲ್ಲ ಕಡೆಗೂ ನೋಡಿ. ಬಿಳಿಬಣ್ಣ ಮಾತ್ರ ಸುಂದರವಾಗಿ ಕಾಣುತ್ತದೆ ಎನ್ನುವ ಗಟ್ಟಿ ಹಾಗೂ ಆಳವಾದ ನಂಬಿಕೆ ಬೇರೂರಿದೆ. ಮೈಬಣ್ಣವನ್ನು ಬಿಳಿ ಮಾಡಿಕೊಳ್ಳಲು ಅದೆಷ್ಟೊಂದು ಕ್ರೀಮುಗಳು. ಬಿಳಿಯರಾಗಲು ಬೆಟ್ಟದಷ್ಟು ಒತ್ತಡ. ಆದರೆ, ಈ ವಿಷಯವಾಗಿ ನಮ್ಮಲ್ಲಿ ಪುಟ್ಟ ಚರ್ಚೆಯೂ ನಡೆದಿಲ್ಲ. ಬಿಳಿಯರಾಗಲು ಹೋಗಬೇಡಿ, ಆದರೆ ಸುಂದರವಾಗಿರಿ' ಎಂಬ ದಿಟ್ಟ ಮಾತುಗಳನ್ನು ಆಡಿದವರು ನಟಿ ನಂದಿತಾ ದಾಸ್. ಬ್ಲ್ಯಾಕ್ ಈಸ್ ಬ್ಯೂಟಿಫುಲ್ ಎಂಬ ಆಂದೋಲನವನ್ನೂ ನಡೆಸಿದವರು ಆಕೆ.

'ಸಾವಿರ ಸಾವಿರ ಸಂಖ್ಯೆಯಲ್ಲಿ ಯುವತಿಯರು ನನಗೆ ಇ-ಮೇಲ್ ಮಾಡುತ್ತಿದ್ದರು. ಕಪ್ಪು ಮೈಬಣ್ಣದ ಕಾರಣದಿಂದ ಅವರು ಹೇಗೆಲ್ಲ ನೋವು ಅನುಭವಿಸುತ್ತಿದ್ದಾರೆ ಎಂಬುದನ್ನು ವಿವರಿಸುತ್ತಿದ್ದರು. ಮೈಬಣ್ಣದ ಕಾರಣಕ್ಕಾಗಿ ಅನುಭವಿಸುತ್ತಿರುವ ಹಿಂಸೆಯಿಂದ ಸಾಕಾಗಿದೆ, ಆತ್ಮಹತ್ಯೆ ಮಾಡಿಕೊಳ್ಳೋಣ ಎನಿಸುತ್ತದೆ ಎಂದೂ ಕೆಲವರು ಬರೆದಿದ್ದರು. ಹೀಗಾಗಿ ನಾವು ಬ್ಲ್ಯಾಕ್ ಈಸ್ ಬ್ಯೂಟಿಫುಲ್ ಆಂದೋಲನ ಶುರು ಮಾಡಿದೆವು' ಎಂದು ನೆನೆಯುತ್ತಾರೆ ನಂದಿತಾ.

ಬ್ಲ್ಯಾಕ್ ಈಸ್ ಬ್ಯೂಟಿಫುಲ್ ಎನ್ನುವುದು ನಮ್ಮ ಪರಂಪರೆಯಲ್ಲೂ ಇದೆ. ಮಹಾಭಾರತದ ದ್ರೌಪದಿಯ ಬಣ್ಣ ಕಪ್ಪು. ನಾವು ಪೂಜಿಸುವ ಕೃಷ್ಣ ಕೂಡ ಕಪ್ಪು. ಆತನಿಂದಾಗಿಯೇ ಕಪ್ಪು ಬಣ್ಣಕ್ಕೆ ಕೃಷ್ಣವರ್ಣ ಎಂದೇ ಹೆಸರು. ಕೃಷ್ಣನನ್ನು ಆರಾಧಿಸುವ, ದ್ರೌಪದಿಯನ್ನು ಮೆಚ್ಚುಗೆಯಿಂದ ನೋಡುವ ಸಮಾಜವೇ ನಮ್ಮ ಮನೆಯ ಹೆಣ್ಣುಮಕ್ಕಳು ಕಪ್ಪಾಗಬಾರದು ಎಂದರೆ, ಕಪ್ಪು ಎನ್ನುವ ಕಾರಣಕ್ಕೇ ಅವರನ್ನು ನಿಕೃಷ್ಟವಾಗಿ ಕಂಡರೆ ಹೇಗೆ? ಆತ್ಮಾವಲೋಕನ ಮಾಡಿಕೊಳ್ಳುವುದು, ತಪ್ಪನ್ನು ತಿದ್ದಿಕೊಳ್ಳುವುದು ಇಂದಿನ ಜರೂರು.

'ನಾನು ಕಪ್ಪಗಿರುವುದನ್ನು ಪ್ರೀತಿಸುತ್ತೇನೆ. ಆದರೆ, ಈ ಪಾಪ್ ಸಂಗೀತ ಜಗತ್ತು, ಕಾಸ್ಮೆಟಿಕ್ಸ್ ಜಗತ್ತು ನಮ್ಮಂಥವರನ್ನು ಕಪ್ಪು ಎನ್ನುವ ಕಾರಣಕ್ಕೆ ಮತ್ತೆ ಮತ್ತೆ ಹೊರಗಿಡಲು ಯತ್ನಿಸುತ್ತದೆ. ನಾನು ಹಾಡಿದರೆ, ನೃತ್ಯ ಮಾಡಿದರೆ ಎಲ್ಲರೂ ಖುಷಿಪಡುತ್ತಾರೆ, ಎಂಜಾಯ್ ಮಾಡುತ್ತಾರೆ. ಆಗ ನಾನು ಕಪ್ಪು ಎನ್ನುವ ಸತ್ಯ ಅವರ ಸಂತೋಷಕ್ಕೆ ಅಡ್ಡಿ ಬರುವುದಿಲ್ಲ. ಆದರೆ, ನನ್ನ ಆಲ್ಬಮ್‌ನ ಮಾರಾಟ, ಖರೀದಿಯ ವಿಚಾರ ಬಂದರೆ, ನೀನು ಕಪ್ಪು ಎಂದುಬಿಡುತ್ತಾರೆ...' ಅಮೆರಿಕದ ಪಾಪ್ ಗಾಯಕಿ ರಿಯಾನಾ ಅವರ ನೋವಿನ ಮಾತಿದು.


ರಿಯಾನಾ

ವರ್ಣಭೇದ ಎನ್ನುವುದು ಅಮೆರಿಕ ಮತ್ತು ಆಫ್ರಿಕಾ ಖಂಡಗಳಲ್ಲಿ ಢಾಳಾಗಿ ಎದ್ದುಕಂಡರೆ, ನಮ್ಮಲ್ಲಿ ಹಲವು ಶೇಡ್‌ಗಳಲ್ಲಿ, ಹಲವು ಸ್ತರಗಳಲ್ಲಿ ಗೆದ್ದಲಿನಂತೆ ಸ್ತ್ರೀ ಅಸ್ಮಿತೆಯನ್ನು ತಿನ್ನುತ್ತಿದೆ. ಜಾತಿಗಳ ಕುರಿತ ಸಂಕಥನಗಳು, ದುರ್ಬಲ ವರ್ಗದ ಮಹಿಳೆಯರನ್ನು ಸಮಾಜ ಕಾಣುವ ರೀತಿ-ರಿವಾಜುಗಳು ತರತಮದ ಕಥೆಗಳನ್ನು ಗೊಂದಲಕ್ಕೆ ಎಡೆ ಇಲ್ಲದಂತೆ ಟಾಮ್ ಟಾಮ್ ಎಂದು ಹೇಳುತ್ತವೆ. 'ನಿನಗೆ ಬೇಗ ಮದುವೆ ಆಗಬೇಕಾದರೆ ನಿನ್ನ ಮೈಬಣ್ಣ ಬೆಳ್ಳಗಿರಬೇಕು' ಎನ್ನುವ ಮಾತು ಸಾಮಾನ್ಯ. ಕಪ್ಪು ಮೈಬಣ್ಣದ ಯುವತಿಯರಿಗೆ ಬೇಗ ಮದುವೆ ಆಗದಿರುವುದು ಕೂಡ ನಿಜ. ಇದು ನಾವು ಬದುಕಿರುವ ಸಮಾಜದ ಮನಃಸ್ಥಿತಿಯನ್ನು ಎತ್ತಿ ತೋರುತ್ತದೆ.

ಅಮೆರಿಕದಿಂದ ಪ್ರಾರಂಭವಾದ, ಯುವಜನರೇ ಕಟ್ಟಿದ ಬ್ಲ್ಯಾಕ್‌ಲೈವ್ಸ್‌ಮ್ಯಾಟರ್ ಹೋರಾಟ ಜಗತ್ತಿನಾದ್ಯಂತ ಸಂಚಲನ ಸೃಷ್ಟಿಸಿದ್ದು ಸುಳ್ಳಲ್ಲ. 'ಫೇರ್ ಆ್ಯಂಡ್ ಲವ್ಲಿ' 'ಗ್ಲೋ ಆ್ಯಂಡ್ ಲವ್ಲಿ' ಕ್ರೀಮ್ ಆದದ್ದೇ ಇದಕ್ಕೆ ಉದಾಹರಣೆ. ನಮ್ಮ ದೇಶದಲ್ಲಿ ಇತ್ತೀಚೆಗೆ ಕಪ್ಪು-ಬಿಳಿ ಎನ್ನುವಂಥ ಕಥೆ ಇಟ್ಟುಕೊಂಡ ಧಾರಾವಾಹಿಗಳೂ ಬರುತ್ತಿವೆ. ಇದು ಲಕ್ಷಾಂತರ ಜನರನ್ನು ತಲುಪುವ ಮಾಧ್ಯಮ. ಏನೋ ಅದ್ಭುತವಾದದ್ದನ್ನು ತೋರಿಸುತ್ತಿದ್ದಾರೆ ಎಂದಲ್ಲ. ಆದರೆ, ಸ್ವಲ್ಪ ಮಟ್ಟಿಗಾದರೂ ಜನರು ಯೋಚಿಸುವಂತಾಗಿದೆ.

'ನನ್ನ ಮಟ್ಟಿಗಂತೂ ಪರಿಸ್ಥಿತಿ ಉತ್ತಮಗೊಳ್ಳುವ ಸಾಧ್ಯತೆ ಇಲ್ಲ. ಆದರೆ, ಕಪ್ಪುವರ್ಣೀಯ ಮಹಿಳೆಯರಿಗೂ ಧ್ವನಿ ಇದೆ ಎಂಬುದನ್ನು ಯಾರಾದರೂ ತೋರಿಸಿಕೊಡಬೇಕು' ಎನ್ನುತ್ತಾರೆ ಟೆನಿಸ್ ತಾರೆ ಸೆರೆನಾ ವಿಲಿಯಮ್ಸ್. ಹೌದು, ನಾವು ಈ ವಿಷಯವನ್ನು ಮತ್ತೆ ಮತ್ತೆ ಹೇಳುತ್ತಲೇ ಇರಬೇಕು. ಸಮಾಜದ ಜಾಣ ಕಿವುಡನ್ನು ದಾಟಿಕೊಂಡು ಅದರ ಪ್ರಜ್ಞೆಯನ್ನು ಜಾಗೃತಗೊಳಿಸುವವರೆಗೆ, ನಡೆದಿರುವ ಅನ್ಯಾಯದ ಬಗೆಗಿನ ವಿವರಗಳನ್ನು ಕಾದ ಸೀಸದಂತೆ ಅದರ ಕಿವಿಗಳಲ್ಲಿ ನಾವು ಸುರಿಯುತ್ತಲೇ ಇರಬೇಕು.

ಮೇಲುಕೋಟೆ ಎಂದೊಡನೆ ಪುಳಿಯೋಗರೆ ಬೆನ್ನಿಗೇ ನೆನಪಾಗುವುದು ಖಾದಿ ಬಟ್ಟೆ. ಸುರೇಂದ್ರ ಕೌಲಗಿ ಅವರು ಬಹುಹಿಂದೆಯೇ ತೋರಿಸಿದ 'ಹೊಸ ಜೀವನ ದಾರಿ'ಯಲ್ಲಿ ಗ್ರಾಮಾಭಿವೃದ್ಧಿಯ ಪ್ರಗತಿಯ ತೇರು ಎಲ್ಲಿಯವರೆಗೆ ಉರುಳಿದೆ? ಮತ್ತೆ ಮುಂದೆ ಎತ್ತ ಹೊರಳಲಿದೆ?

ಇದೋ ಹೊಸ ಜೀವನ ದಾರಿ...

'ಹೊಸ ಜೀವನ ದಾರಿ' ಆವರಣದಲ್ಲಿ ಖಾದಿ ವಸ್ತ್ರ ನೇಯ್ಗೆಯಲ್ಲಿ ತೊಡಗಿರುವ ಪುಷ್ಪಲತಾ

ಎಂ.ಎನ್.ಯೋಗೇಶ್

ಒಂದು ಕಾಲಕ್ಕೆ ಮೇಲುಕೋಟೆಯು ಪುಳಿಯೋಗರೆಗೆ ಮಾತ್ರವಲ್ಲ, ಖಾದಿ ಪಂಚೆಗೂ ಪ್ರಸಿದ್ಧಿ ಪಡೆದಿತ್ತು. ಇಲ್ಲಿಯ ಪಂಚೆ, ಶಲ್ಯ, ಟವೆಲ್, ಸೀರೆ, ಕರವಸ್ತ್ರಗಳು ದಕ್ಷಿಣ ಭಾರತದಾದ್ಯಂತ ಹೆಸರುವಾಸಿಯಾಗಿದ್ದವು. ಮೇಲುಕೋಟೆ ಪಂಚೆ ಮಧುಮಕ್ಕಳ ನೆಚ್ಚಿನ ಆಯ್ಕೆಯಾಗಿತ್ತು. ದಕ್ಷಿಣ ಬದರಿಕಾಶ್ರಮ ಎಂದೇ ಪ್ರಸಿದ್ಧಿ ಪಡೆದಿರುವ ಈ ಪವಿತ್ರ ಕ್ಷೇತ್ರದಲ್ಲಿ ಗಂಟೆ, ಜಾಗಟೆಗಳ ಜೊತೆಗೆ ಕೈಮಗ್ಗಗಳ ಸದ್ದೂ ಕಿವಿಗಡಚುತ್ತಿತ್ತು. ಗುಡಿ ಕೈಗಾರಿಕೆ, ಕರಕುಶಲ ಚಟುವಟಿಕೆಗಳೂ ಇದ್ದವು.

60ರ ದಶಕದಲ್ಲಿ ಸುರೇಂದ್ರ ಕೌಲಗಿ- ಗಿರಿಜಾ ಕೌಲಗಿ ದಂಪತಿ ಗಾಂಧಿ ತತ್ವಾಧಾರಿತ ಚಟುವಟಿಕೆಗಳ ಮೂಲಕ ಮೇಲುಕೋಟೆಗೆ ಹೊಸ ಸ್ಪರ್ಶ ನೀಡಿದರು. ಜಯಪ್ರಕಾಶ ನಾರಾಯಣರ ಆಪ್ತ ಕಾರ್ಯದರ್ಶಿಯಾಗಿದ್ದ ಸುರೇಂದ್ರ ಕೌಲಗಿ ಅವರು ಮೇಲುಕೋಟೆಯಲ್ಲಿ ನೆಲೆ ನಿಂತರು. 'ಜನಪದ ಸೇವಾ ಟ್ರಸ್ಟ್' ಸ್ಥಾಪಿಸುವ ಮೂಲಕ ಸ್ವರಾಜ್ಯ ಕಲ್ಪನೆಗೆ ನೀರೆರೆದರು. ಆಧುನಿಕತೆಯ ಪ್ರಭಾವ, ವಾಣಿಜ್ಯ ಚಟುವಟಿಕೆಗಳ ಬೆಳವಣಿಗೆಯಿಂದಾಗಿ ಮೇಲುಕೋಟೆಯಲ್ಲಿ ಸದ್ಯ ಕೈಮಗ್ಗಗಳ ಸದ್ದಡಗಿದೆ, ಕರಕುಶಲ ಚಟುವಟಿಕೆಗಳು ಇನ್ನಿಲ್ಲವಾಗಿವೆ. ಆದರೆ, ಸುರೇಂದ್ರ ಕೌಲಗಿ ಅವರು ಸ್ಥಾಪಿಸಿದ ಗಾಂಧಿ ತತ್ವಾಧಾರಿತ ಚಟುವಟಿಕೆಗಳು ಈಗಲೂ ಜೀವಂತವಾಗಿವೆ.

1980ರಲ್ಲಿ ಅವರು ಆರಂಭಿಸಿದ 'ಹೊಸ ಜೀವನ ದಾರಿ'ಯ ಚಟುವಟಿಕೆಗಳು ಈಗಲೂ ಸುಸ್ಥಿರ ಬದುಕಿನ ಹುಡುಕಾಟ ನಡೆಸುತ್ತಿವೆ. ಖಾದಿ, ಕೈಮಗ್ಗ, ಸಾವಯವ ಕೃಷಿ, ಪರಿಸರ ಅಭಿವೃದ್ಧಿಯ ಕೆಲಸಗಳು ಆರ್ಥಿಕ ಸ್ವಾವಲಂಬನೆಯ ಹಾದಿಯಲ್ಲಿ ಹೆಜ್ಜೆ ಇಟ್ಟಿವೆ. ಮೇಲುಕೋಟೆ ಬೆಟ್ಟದ ತಟದ ಭೂಮಿಯಲ್ಲಿ ಅರಳಿ ನಿಂತಿರುವ 'ಹೊಸ ಜೀವನ ದಾರಿ'ಯು ಧಾವಂತದ ಬದುಕು, ಕೊಳ್ಳುಬಾಕ ಸಂಸ್ಕೃತಿ, ಲಾಭಕೋರತನ ಕುರಿತ ಪ್ರಶ್ನೆಗಳಿಗೆ ಉತ್ತರ ಒದಗಿಸುತ್ತದೆ.

ಜನಪದ ಸೇವಾ ಟ್ರಸ್ಟ್ ಖಾದಿ ವಸ್ತ್ರ ಮಾರಾಟ ಮಳಿಗೆ

'ಹೊಸ ಜೀವನ ದಾರಿ'ಯಲ್ಲಿ 15 ಕುಟುಂಬಗಳು ಕೈಮಗ್ಗಗಳಿಂದ ಬದುಕು ಕಟ್ಟಿಕೊಂಡಿವೆ. 8 ಕೈಮಗ್ಗಗಳಿದ್ದು 20 ನೌಕರರು ಖಾದಿ ವಸ್ತ್ರ ನೇಯ್ಗೆಯಲ್ಲಿ ತೊಡಗಿಕೊಂಡಿದ್ದಾರೆ. ಅವರು ನೇಯ್ದ ಬಟ್ಟೆಗಳನ್ನು ಮೇಲುಕೋಟೆಯ ಜನಪದ ಟ್ರಸ್ಟ್ ಮಳಿಗೆಯಲ್ಲಿ ಮಾರಾಟ ಮಾಡಲಾಗುತ್ತದೆ. ಸಂಪೂರ್ಣವಾಗಿ ಗಾಂಧಿ ತತ್ವ, ಜನಪದ ಖಾದಿ ತತ್ವದೊಂದಿಗೆ ನಡೆಯುತ್ತಿರುವ ನೇಯ್ಗೆ ಚಟುವಟಿಕೆಯ ಹಿಂದೆ ಲಾಭದಾಸೆ, ವಿಸ್ತರಣಾವಾದದ ಸೋಂಕಿಲ್ಲ. ಕೈಮಗ್ಗಗಳಲ್ಲಿ ತೊಡಗಿಸಿಕೊಂಡವರು ಕಾರ್ಮಿಕರಲ್ಲ, ಮಾಲೀಕ-ಕಾರ್ಮಿಕ ಎನ್ನುವ ಶ್ರೇಣಿ ಇಲ್ಲ. ಎಲ್ಲರೂ ಮಾಲೀಕರೇ ಆಗಿದ್ದು ಇರುವ 20 ಮಂದಿಗೆ ಭದ್ರತೆಯ ಬದುಕು ಕಟ್ಟಿಕೊಡಲಾಗಿದೆ.

ಇಷ್ಟೇ ಬಟ್ಟೆ ನೇಯ್ಗೆ ಮಾಡಬೇಕು, ಇಷ್ಟು ಗಂಟೆ ಕೆಲಸ ಮಾಡಬೇಕು ಎಂಬ ಮಿತಿ ಇಲ್ಲ. ಯಾವುದೇ ಸಮಯದಲ್ಲಿ ಬಂದು ಕೆಲಸ ಮಾಡಬಹುದು. ನೇಕಾರಿಕೆ ಗೊತ್ತಿಲ್ಲದವರೂ ಇಲ್ಲಿ ಕೆಲಸ ಕಲಿತು ನೇಯ್ಗೆ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ಮಾಡಿದವರು, ಟೇಲರ್ ವೃತ್ತಿಯಲ್ಲಿದ್ದವರು ಖಾದಿ ಚಟುವಟಿಕೆಯಲ್ಲಿ ಹೊಸ ಬದುಕು ಕಂಡಿದ್ದಾರೆ.

'ನಾನು ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೆ. ₹ 4 ಸಾವಿರಕ್ಕಾಗಿ ಬೆಳಿಗ್ಗೆಯಿಂದ ಸಂಜೆವರೆಗೂ ಕೆಲಸ ಮಾಡಬೇಕಾಗಿತ್ತು. ಮನೆ, ಮಕ್ಕಳಿಂದ ಬದುಕು ದೂರವಾಗಿತ್ತು. 6 ವರ್ಷಗಳಿಂದ ಹೊಸಜೀವನ ದಾರಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ಹೊಸ ಬದುಕು ಕಂಡಿದ್ದೇನೆ' ಎಂದು ನೇಯ್ಗೆ ಕೆಲಸ ಮಾಡುವ ಪುಷ್ಪಲತಾ ಹೇಳುತ್ತಾರೆ.

9ನೇ ಪುಟಕ್ಕೆ...

ಜಾಹೀರಾತು

ಸೋರಿಯಾಸಿಸ್‌ಗೆ ಇದೆ ಮದ್ದು

ಡಾ॥ ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವ ಕಾಯಿಲೆಗಳಲ್ಲಿ ಸೋರಿಯಾಸಿಸ್ ಕೂಡ ಒಂದು. ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ. ಸೋರಿಯಾಸಿಸ್ ಗೆ ಕಾರಣ ಚರ್ಮದ ತಳದ ಪದರುಗಳ ಜೀವಕೋಶದ ವಿಪರೀತ ವಿಭಜನೆಯಾಗುವುದು. ಈ ಕಾಯಿಲೆ ವಿಶ್ವದ ಶೇ.2 ರ ಜನರನ್ನು ಕಾಡುತ್ತಿದೆ. ವಿಶ್ವದಲ್ಲಿ ಸುಮಾರು 125 ದಶಲಕ್ಷ ಜನರು ಈ ಕಾಯಿಲೆಗೆ ತುತ್ತಾಗಿದ್ದಾರೆ. ಇದು ನಮ್ಮ ಶರೀರದಲ್ಲಿ ರೋಗ ನಿರೋಧಕ ಶಕ್ತಿ ಕುಂದಿದಾಗ ಬರುವಂತಹ ಚರ್ಮದ ಸಮಸ್ಯೆ.

ಸಾಮಾನ್ಯವಾಗಿ ಚರ್ಮವು ಹಳೆಯ ಪದರವನ್ನು ತೆಗೆದುಹಾಕಿ ಹೊಸ ಪದರವನ್ನು ರೂಪಿಸಿಕೊಳ್ಳುವುದಕ್ಕೆ ಕೆಲುವು ದಿನಗಳ ಸಮಯ ತೆಗೆದುಕೊಳ್ಳುತ್ತದೆ .ಆದರೆ, ಈ ಕ್ರಿಯೆ ಸೋರಿಯಾಸಿಸ್ ನಲ್ಲಿ ಬಲುಬೇಗ ಮುಗಿಯುತ್ತದೆ. ಹಾಗೂ ಈ ಸಮಯದಲ್ಲಿ ಉದುರಿ ಹೋಗಬೇಕಾದ ಹಳೆಯ ಚರ್ಮದ ಪದರವು ಹಾಗೆಯೇ ಉಳಿದು ಹೊಸ ಚರ್ಮದ ಪದರ ರಚನೆಯಾಗುತ್ತದೆ. ಇದರಿಂದ ಚರ್ಮದ ಮಡಿಕೆಗಳು ನಿರ್ಮಾಣವಾಗುತ್ತವೆ.
ಇದು ವ್ಯಕ್ತಿಯ ದೈಹಿಕ, ಭಾವನಾತ್ಮಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ.

ಸೋಂಕುಗಳು:-
ಎಚ್ ಐ ವಿ ಯಂತಹ ಸಮಸ್ಯೆಗಳು, ಸ್ಟೆಪ್ಟೋಕೊಕಲ್, ಸ್ಟಾಫಿಲೋಕೊಕಲ್ ಸೋಂಕುಗಳು ಇತ್ಯಾದಿ.
ಅತಿಯಾದ ಚಳಿಯ ವಾತಾವರಣ, ದೈಹಿಕ ಗಾಯ ಇತ್ಯಾದಿ ಮಾನಸಿಕ ಒತ್ತಡ, ದೈಹಿಕ ವ್ಯಾಯಾಮದ ಕೊರತೆ ದೇಹದ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುತ್ತವೆ.

ವಿಧಗಳು:-
ಗುಣಲಕ್ಷಣಗಳನ್ನು ಆಧಾರಿಸಿ ಸೋರಿಯಾಸಿಸ್ ಅನ್ನು ಐದು ವಿಧಗಳಾಗಿ ವಿಗಂಡಿಸಬಹುದು. ಪ್ಲೇಕ್ ಸೋರಿಯಾಸಿಸ್, ಗಟ್ಟೇಟ್ ಸೋರಿಯಾಸಿಸ್, ಪುಸ್ಟ್ಯುಲರ್ ಸೋರಿಯಾಸಿಸ್, ಇನ್ವರ್ಸ್ ಸೋರಿಯಾಸಿಸ್, ಎರಿಥ್ರೋಡರ್ಮಿಕ್ ಸೋರಿಯಾಸಿಸ್.

ಲಕ್ಷಣಗಳು:-
ತಲೆ, ಮೊಣಕೈ, ಮೊಣಕಾಲು, ಅಂಗೈ, ಪಾದ ಹಾಗೂ ಹೊಟ್ಟೆಯ ಮೇಲ್ಭಾಗದ ಚರ್ಮದ ಮೇಲೆ ಸೋರಿಯಾಸಿಸ್ ಪ್ರಭಾವ ಬೀರುತ್ತದೆ. ಚರ್ಮ ಕೆಂಪಗಾಗಬಹುದು, ಸಾಧಾರಣದಿಂದ ಅತಿ ತೀವ್ರ ತುರಿಕೆ, ಚರ್ಮ ಒಡೆದು ಹೋಗುವುದರಿಂದ ತೀವ್ರವಾದ ನೋವು, ಸೋರಿಯಾಸಿಸ್ ತಲೆಯಲ್ಲಿ ಇದ್ದಾಗ ಹೊಟ್ಟು ಹಾಗೂ ಕೂದಲು ಉದುರುವಿಕೆ, ಅಂಗೈ ಪಾದಗಳಲ್ಲಿನ ಚರ್ಮ ಹೊಟ್ಟಿನ ರೂಪದಲ್ಲಿ ಉದುರುವುದು. ಸೋರಿಯಾಸಿಸ್ ತೀವ್ರವಿದ್ದಾಗ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ.

ಪರಿಣಾಮಗಳು:
ಸೋರಿಯಾಟಿಕ್ ಆರ್ಥ್ರೈಟಿಸ್, ಮಾನಸಿಕ ಅಶಾಂತಿ, ಲವಣಗಳು ಹಾಗೂ ವಿಟಮಿನ್‌ಗಳು ದೇಹದಲ್ಲಿ ಕಡಿಮೆಯಾಗುವುದು ಇತ್ಯಾದಿ.

ರೋಗ ಪತ್ತೆ ಪರೀಕ್ಷೆಗಳು:
ಸಿಬಿಸಿ, ಇಎಸ್ ಆರ್, ಚರ್ಮದ ಬಯಾಪ್ಸಿ, ಕ್ಷ-ಕಿರಣ

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

(ಸೋರಿಯಾಸಿಸ್ ನಿಂದ ಕೀಲುಗಳ ನೋವು ಹೆಚ್ಚಾದಾಗ).
ಸಾದಾರಣವಾಗಿ ಚರ್ಮವನ್ನು ಸೂಕ್ಷ್ಮವಾಗಿ ಪರಿಶೀಲಿಸುವದರಿಂದ ಪತ್ತೆ ಹಚ್ಚಬಹುದಾಗಿದೆ.

ಹೋಮಿಯೋಕೇರ್ ಚಿಕಿತ್ಸೆ:-
ಹೋಮಿಯೋಕೇರ್ ನಲ್ಲಿ ನೀಡುವ ಕಾನ್ಸ್ಟಿಟ್ಯೂಷನಲ್ ಚಿಕಿತ್ಸೆಯು ರೋಗಿಯ ದೈಹಿಕ, ಸಮಸ್ಯೆಗಳು ಜೊತೆಗೆ ಮಾನಸಿಕ ಬದಲಾವಣೆಗಳು, ಭಾವನಾತ್ಮಕ ಪರಿಸ್ಥಿಗಳನ್ನು ಅಧ್ಯಯನ ಮಾಡಿ ನೀಡುವಂತಹುದಾಗಿದೆ. ಇದು ಕೇವಲ ರೋಗ ಲಕ್ಷಣವಷ್ಟೇ ಅಲ್ಲದೆ ರೋಗಿಯ ಸಂಪೂರ್ಣ ಆರೋಗ್ಯಕ್ಕೆ ಕಾರಣವಾಗುತ್ತದೆ. ಈ ರೀತಿಯ ಲಕ್ಷಣಗಳಿಂದ ಬಳಲುತ್ತಿದ್ದ ಅನೇಕರು ಹೋಮಿಯೋಕೇರ್ ಚಿಕಿತ್ಸೆಯಿಂದ ಗುಣಮುಖರಾಗಿದ್ದಾರೆ ಎನ್ನುತ್ತಾರೆ ಈ ಸಂಸ್ಥೆಯ ತಜ್ಞರು.

ಸಂಪರ್ಕ:-
ಹೋಮಿಯೋಕೇರ್ ಇಂಟರ್ ನ್ಯಾಷನಲ್: ಕರ್ನಾಟಕದಲ್ಲಿ ಶಾಖೆಗಳು: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್ ಎಸ್ ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ ದಾವಣಗೆರೆ,ಬೆಳಗಾವಿ, ಬಿಜಾಪುರ, ಬೀದರ್, ಕಲ್ಬುರ್ಗಿ, ಶಿವಮೊಗ್ಗ, ತುಮಕೂರು, ಹಾಸನ. ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು ಹಾಗೂ ಪುದುಚೇರಿ.
ಉಚಿತ ಸಲಹೆಗೆ: 1800 108 1212 (ಟೋಲ್ ಫ್ರೀ) 9550001133
(ಈ ಕ್ಷೇತ್ರದಲ್ಲಿ ತಜ್ಞರ ತಿಳಿವಳಿಕೆಗೆ ಆಧಾರಿತ ಬರಹ)

ಕಾರಣಗಳು
ಅನುವಂಶಿಕ: ಸಂಶೋಧಕರ ಪ್ರಕಾರ ತದ್ರೂಪಿ ಅವಳಿಯರಲ್ಲಿ ಶೇ. 70 ರಷ್ಟು ಕಂಡರೆ ಅವಳಿಯಲ್ಲದ ಜನರಲ್ಲಿ ಶೇ. 30 ರಷ್ಟು ಅಪಾಯ ಕಂಡುಬರುತ್ತದೆ.
ಜೀವನಶೈಲಿ : ಪದೇಪದೇ ಸೋಂಕುಗಳಿಂದ ಮಾನಸಿಕ ಒತ್ತಡ ವಿಪರೀತ ಮದ್ಯಪಾನ ಸೇವನೆ, ಧೂಮಪಾನ ಮತ್ತು ಬೊಜ್ಜು.
ಔಷದಗಳು : ಕೆಲವು ಔಷಧಿಗಳ ಧೀರ್ಘಕಾಲದ ಸೇವನೆ ಸೋರಿಯಾಸಿಸ್ ಗೆ ಪ್ರೇರೇಪಣೆ ನೀಡುತ್ತದೆ.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಶಿಥಿಲಗೊಂಡಿರುವ ಕೋಟೆಯ ಗೋಡೆ

ಉತ್ತರ ಮಲೆಯ ಹಸಿರು ಹಾದಿಯಲ್ಲಿ

ಬೃಹತ್ ಗಾತ್ರದ ಬಂಡೆಯ ಮೇಲೆ ನಿರ್ಮಿಸಲಾಗಿರುವ ಬುರುಜಿನಂತಹ ರಚನೆ

ಜಿ.ನಾಗೇಂದ್ರ

ಸಂಡೂರಿನ ಸುತ್ತಮುತ್ತಲೂ ಇರುವ ಹಲವಾರು ಇತಿಹಾಸ ಪ್ರಸಿದ್ಧ ಸ್ಥಳಗಳು, ಪುರಾತನ ದೇವಾಲಯಗಳು, ಕೋಟೆ ಕೊತ್ತಲಗಳು, ಬೆಟ್ಟಗಳ ಸಾಲು ಎಂಥವರನ್ನೂ ಆಕರ್ಷಿಸುತ್ತವೆ. ಸಂಡೂರನ್ನು ಬಯಲುಸೀಮೆಯ ಚಾರಣಿಗರ ಸ್ವರ್ಗವೆಂದರೂ ತಪ್ಪಾಗಲಾರದು. ರಾಮಗಡ, ತಿಮ್ಮಪ್ಪನ ಬೆಟ್ಟ, ಧುಂಕು ಫಾಲ್ಸ್, ಭೈರವತೀರ್ಥ, ಭೀಮತೀರ್ಥ, ಜೋಗಿಕೊಳ್ಳ, ಮಲಿಯಮ್ಮ ಗುಹೆಗಳು ಚಾರಣಿಗರ ಪ್ರಿಯತಾಣಗಳು. ಬಿರು ಬೇಸಿಗೆಯಲ್ಲಿ ಚಾರಣ ಮಾಡಲು ಸೂಕ್ತ ಸಮಯವಲ್ಲದಿದ್ದರೂ ಜುಲೈನಿಂದ ನವೆಂಬರ್‌ವರೆಗೆ ಹಸಿರಿನಿಂದ ಕಂಗೊಳಿಸುವ ಬೆಟ್ಟ ಗುಡ್ಡಗಳು, ತಂಪಾದ ವಾತಾವರಣ ಚಾರಣಿಗರನ್ನು ತನ್ನತ್ತ ಸೆಳೆಯುತ್ತವೆ. ಈ ಅವಧಿಯಲ್ಲೇ ಚಾರಣಕ್ಕೆ ಯೋಜನೆ ರೂಪಿಸಿದ ನಮ್ಮ ತಂಡ ಹೊರಟಿದ್ದು 'ಉತ್ತರ ಮಲೆ'ಯತ್ತ...

> ಸಂಡೂರನ್ನು ಬಯಲುಸೀಮೆಯ ಚಾರಣಿಗರ ಸ್ವರ್ಗ ಎಂದೇ ಕರೆಯಲಾಗುತ್ತದೆ. ಬೆಟ್ಟ, ಗುಡ್ಡ, ಝರಿ, ಜಲಪಾತಗಳ ಹಸಿರು ಹಾದಿಯಲ್ಲಿ ಚಾರಣ ನಡೆಸಿದ ವಿಶಿಷ್ಟ ಅನುಭವವೊಂದು ಇಲ್ಲಿದೆ. ಅಂದಹಾಗೆ, ಈ ಚಾರಣಿಗರನ್ನು ಸ್ಥಳೀಯರು ಕಿಡ್ನಿ ಕಳ್ಳರೆಂದು ಅಟ್ಟಿಸಿಕೊಂಡು ಬಂದಿದ್ದೇಕೋ?

'ಸಂಡೂರು ಸಮಿಟರ್ಸ್' ತಂಡದ ರೂವಾರಿ ಚಾರಣ ಶ್ರೀನಿವಾಸ ರಾಮಗಡ. ಇವರ ಮಾರ್ಗದರ್ಶನದಲ್ಲಿ, ಸಹ ಚಾರಣಿಗರಾದ ಜಟಿಂಗ್ ರಾಜ್ ಹಾಗೂ ಮುತ್ತು ಪ್ರಕಾಶ್‌ರೊಂದಿಗೆ ಬೆಳಿಗ್ಗೆ 9 ಗಂಟೆಗೆ ನಮ್ಮ ಪಯಣ ಸಂಡೂರಿನಿಂದ ಪ್ರಾರಂಭವಾಯಿತು. ಕೂಡ್ಲಿಗಿ ರಸ್ತೆಯಲ್ಲಿ ಸುಮಾರು 22 ಕಿ.ಮೀ ದೂರದಲ್ಲಿ ಬಂಡ್ರಿ ಗ್ರಾಮವಿದೆ. ಅಲ್ಲಿಂದ 5 ಕಿ.ಮೀ ದೂರದಲ್ಲಿರುವ ಗ್ರಾಮವೇ ಉತ್ತರ ಮಲೆ. ಈ ಗ್ರಾಮಕ್ಕೆ ಬಸ್ ಸೌಕರ್ಯ ಬಹಳ ಕಡಿಮೆ. ಹೀಗಾಗಿ ನಾವೆಲ್ಲರೂ ಆಟೊ ರಿಕ್ಷಾದಲ್ಲಿ ಉತ್ತರ ಮಲೆ ಗ್ರಾಮ ತಲುಪಿದೆವು. ಅದುವರೆಗೆ ಯಾವುದೇ ಪುಸ್ತಕಗಳಲ್ಲಿ ಉತ್ತರ ಮಲೆ ಬೆಟ್ಟದ ಬಗ್ಗೆ ಉಲ್ಲೇಖವಿಲ್ಲದಿದ್ದರೂ ಗ್ರಾಮದ ಹಲವು ಜನರನ್ನು ಸಂಪರ್ಕಿಸಿ ಬೆಟ್ಟ ಹಾಗೂ ಅಲ್ಲಿರುವ ಕೋಟೆಯ ಇತಿಹಾಸದ ಬಗ್ಗೆ ಮಾಹಿತಿ ಪಡೆದುಕೊಂಡೆವು.

ಮಲೆಯಮ್ಮ ದೇವಿಯ ದೇವಾಲಯ

ಗ್ರಾಮದಿಂದ ಸುಮಾರು ಎರಡು ಕಿ.ಮೀ ದೂರದಲ್ಲಿ ಉತ್ತರ ಮಲೆ ಬೆಟ್ಟವಿದೆ. ದ್ವಿಚಕ್ರ ವಾಹನಗಳೂ ಹೋಗಲಾಗದಂತಹ ಮಣ್ಣಿನ ರಸ್ತೆಯಲ್ಲಿ ನಡೆದುಕೊಂಡೇ ಹೋಗಬೇಕು. ಹಿಂದಿನ ರಾತ್ರಿ ಮಳೆ ಸುರಿದಿದ್ದ ಕಾರಣ ರಸ್ತೆಯೆಲ್ಲವೂ ಕೆಸರುಮಯವಾಗಿತ್ತು. ಕಷ್ಟಪಟ್ಟು ಒಂದು ಕಿ.ಮೀ ಕ್ರಮಿಸಿದ ನಂತರ ಸಜ್ಜೆ, ಜೋಳ, ತೊಗರಿ, ಹಾಗೂ ಕಡಲೆಕಾಯಿ ಹೊಲಗಳ ಹಚ್ಚ ಹಸುರಿನ ಪರಿಸರ ಮನಸ್ಸಿಗೆ ಮುದ ನೀಡಿತು. ಅಲ್ಲಿಂದ ಬೆಟ್ಟದ ಬುಡ ತಲುಪಲು ಮತ್ತೊಂದು ಕಿ.ಮೀ ಕಾಲುದಾರಿಯಲ್ಲಿ ಸಾಗಿದೆವು. ತಂಪಾದ ವಾತಾವರಣದಲ್ಲಿ ಬೆಟ್ಟದ ತಪ್ಪಲು ತಲುಪಿದ್ದೇ ಗೊತ್ತಾಗಲಿಲ್ಲ.

ಹತ್ತಿರದಲ್ಲಿದ್ದ ಕುರಿಗಾಹಿಗಳ ಮಾರ್ಗದರ್ಶನ ಪಡೆದು ಬೆಟ್ಟವನ್ನು ಏರಲು ಪ್ರಾರಂಭಿಸಿದೆವು. ಕುರುಚಲು ಕಾಡನ್ನು ಹೊಂದಿರುವ ಬೆಟ್ಟ ಪ್ರದೇಶದಲ್ಲಿ ಆಗೊಮ್ಮೆ, ಈಗೊಮ್ಮೆ ಚಿರತೆ ದರ್ಶನ ನೀಡುತ್ತದೆಂದು ತಿಳಿದ ಮೇಲಂತೂ ಒಳಗೊಳಗೇ ಭಯ ನಮ್ಮ ಜೊತೆಯೇ ಹೆಜ್ಜೆ ಹಾಕುತ್ತಿತ್ತು. ಕರಡಿ ಹಾಗೂ ಕಾಡು ಹಂದಿಗಳೂ ಬೆಟ್ಟದ ಪ್ರದೇಶದಲ್ಲಿವೆಯಂತೆ. ಕುರಿಗಾಹಿಗಳು ಕುರಿಗಳನ್ನು ಮೇಯಿಸುವಾಗ ನಿರ್ಮಾಣವಾಗಿರುವ ದಾರಿಯ ಜಾಡು ಹಿಡಿದು ಸಾಗಿದೆವು. ಕೆಲವು ಕಡೆ ಗಿಡಗಳ ಮಧ್ಯೆ ನುಸುಳಿಕೊಂಡೇ ಕ್ರಮಿಸಿದೆವು.

ಬೆಟ್ಟದಲ್ಲಿ ಹಾದಿಯುದ್ದಕ್ಕೂ ಕಾಣಿಸಿದ ಪಚ್ಚೇರಿ, ಪೊಳಕೆ, ಹಲಗಿಲಿ, ಭೋಜಪತ್ರೆ, ಹೊಂಗೆ, ಜಾಲಿ ಹೀಗೆ ವಿವಿಧ ಬಗೆಯ ಮರಗಳ ಪರಿಚಯ ಹಾಗೂ ಉಪಯೋಗಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡೆವು. ಸೀತಾಫಲ ಹಾಗೂ ಬಿಕ್ಕೆ ಹಣ್ಣು ಗಿಡಗಳೂ ಹೇರಳವಾಗಿದ್ದವು. ಮರದ ಕಾಂಡವಿಡೀ ಸೀಮೆಎಣ್ಣೆ ಹಾಕಿ ಸುಟ್ಟಂತೆ ಕಪ್ಪಗಿರುವ, ಮುಟ್ಟಿದರೆ ಮಸಿ ಮೆತ್ತಿಕೊಳ್ಳುವ 'ಮಸಿವಾಳ' ಮರವಂತೂ ಅಚ್ಚರಿ ಮೂಡಿಸಿತು.

ನಡುವೆ ಸಿಕ್ಕ ವಿಶಾಲವಾದ ಬಯಲು ಪ್ರದೇಶದಲ್ಲಿದ್ದ ಹುಲ್ಲಿನ ಮೇಲೆ ಕುಳಿತು ವಿಶ್ರಮಿಸಿ, ಲಘು ಉಪಾಹಾರ ಸೇವಿಸಿ ಒಟ್ಟು ಎರಡು ಗಂಟೆಗಳ ಕಾಲ ನಡೆದು ಬೆಟ್ಟದ ತುದಿಯನ್ನು ತಲುಪುವಷ್ಟರಲ್ಲಿ ಮಧ್ಯಾಹ್ನ ಸುಮಾರು 12 ಗಂಟೆಯಾಗಿತ್ತು.

ಬೆಟ್ಟದ ಮೇಲೆ ಜನವಸತಿಯಿದ್ದ ಕುರುಹುಗಳು ಅಲ್ಲಲ್ಲಿ ಕಾಣಸಿಕ್ಕವು. ಅಲ್ಲಿ 'ಮಲೆಯಮ್ಮ ದೇವಿ'ಯ ಪುಟ್ಟ ದೇವಾಲಯವಿದ್ದು, ಉತ್ತರ ಮಲೆ, ಕಾಟಿನ ಕಂಬ ಹಾಗೂ ಬಂಡ್ರಿ ಗ್ರಾಮಗಳ ಭಕ್ತರು ಶ್ರಾವಣ ಮತ್ತು ಮಾರ್ಗಶಿರ ಮಾಸದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸುತ್ತಾರಂತೆ.

ಬೆಟ್ಟದ ಒಂದು ಮೂಲೆಯಲ್ಲಿರುವ ವಿಶಾಲವಾದ ಕೊಳ ಗಮನ ಸೆಳೆಯುತ್ತದೆ. ಬಹುಶಃ ಒಂದು ಕಾಲದಲ್ಲಿ ಇದ್ದಿರಬಹುದಾದ ಜನರಿಗೆ ಈ ಕೊಳದ ನೀರು ಜೀವನಾಧಾರವಾಗಿರಬಹುದು. ಈಗ ಈ ಕೊಳ ಗಿಡಗಂಟಿಗಳಿಂದ ತುಂಬಿಹೋಗಿದೆ. ಕೋಟೆಯ ಗೋಡೆ ಬಹುತೇಕ ಶಿಥಿಲಗೊಂಡಿದೆಯಾದರೂ ಅಲ್ಲಲ್ಲಿ ಇರುವ ಬುರುಜುಗಳು ಸುಸ್ಥಿತಿಯಲ್ಲಿವೆ.

ಉತ್ತರ ಮಲೆಯ ಶೃಂಗದಲ್ಲಿರುವ ಬೃಹತ್ ಗಾತ್ರದ ಬಂಡೆಯ ಮೇಲೆ ನಿರ್ಮಿಸಲಾಗಿರುವ ಬುರುಜಿನಂತಹ ರಚನೆಯನ್ನು ತಲುಪುವ ಮಾರ್ಗವು ಶಿಥಿಲಗೊಂಡಿರುವುದರಿಂದ, ಅಲ್ಲಿಗೆ ಹೋಗುವ ನಮ್ಮ ಪ್ರಯತ್ನ ವಿಫಲವಾಯಿತು. ಮೂರು ಕೋಣೆಗಳನ್ನು ಹೊಂದಿರುವ ಮೇಲ್ಛಾವಣಿಯಿಲ್ಲದ ಕಲ್ಲಿನ ಕಟ್ಟಡ ಅಚ್ಚರಿ ಮೂಡಿಸುತ್ತದೆ. ಈ ಕಟ್ಟಡವನ್ನು ಪ್ರವೇಶಿಸಲು ಒಂದು ಪಾರ್ಶ್ವದಲ್ಲಿ ಮೆಟ್ಟಿಲುಗಳಿದ್ದು, ಮತ್ತೊಂದು ಪಾರ್ಶ್ವ ಶಿಥಿಲಗೊಂಡಿದೆ. ಮೂರೂ ಕೋಣೆಗಳಲ್ಲಿ ಗಿಡಗಳು ಬೆಳೆದಿವೆ. ನಡುಕೋಣೆಯಲ್ಲಿರುವ ಬಾವಿಯಂತಹ ರಚನೆಯಲ್ಲಿ ಮದ್ದು ಗುಂಡುಗಳನ್ನು ಶೇಖರಿಸಿಡುತ್ತಿದ್ದರಂತೆ.

ಉತ್ತರ ಮಲೆ ಪ್ರದೇಶ ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿತ್ತೆಂದು ಸ್ಥಳೀಯರು ಹೇಳುತ್ತಾರಾದರೂ ನಿಖರವಾದ ಮಾಹಿತಿ ಯಾರಲ್ಲೂ ಲಭ್ಯವಿಲ್ಲ. ಅಂದು ಪಾಳೆಯಗಾರರು ರಕ್ಷಣೆಗಾಗಿ ಉಪಯೋಗಿಸುತ್ತಿದ್ದ ಆಯುಧಗಳು ಕೆಲವರ ಸುಪರ್ದಿಯಲ್ಲಿವೆಯಂತೆ.

ಕಾಡಿನಲ್ಲಿ 'ಕಿಡ್ನಿ' ಕಳ್ಳರು

ಮೂರು ಗಂಟೆಯವರೆಗೂ ಕೋಟೆಯ ಆವರಣದಲ್ಲಿ ಅಲೆದಾಡಿದೆವು. ಬೆಟ್ಟವನ್ನು ಹತ್ತಿದ ವಿರುದ್ಧ ದಿಕ್ಕಿನಿಂದ ಇಳಿಯಬೇಕೆಂದು ಮೊದಲೇ ನಿರ್ಧರಿಸಿದ್ದೆವು. ಅದೇ ರೀತಿ ಇಳಿಯುವಾಗ ಕೇವಲ ಕಲ್ಲು ಬಂಡೆಗಳ ಹಾದಿಯಲ್ಲೇ ಇಳಿದೆವು. ಮುಖ್ಯ ರಸ್ತೆಯನ್ನು ತಲುಪಲು ಕಾಲುದಾರಿಯಲ್ಲಿ ಆರು ಕಿ.ಮೀ ಕುರುಚಲು ಕಾಡಿನಲ್ಲಿ ಸಾಗಬೇಕು. ಅಲ್ಲಿ ನಮಗೊಂದು ಅನಿರೀಕ್ಷಿತ ಘಟನೆ ನಡೆಯಿತು. ಒಬ್ಬ ಮಹಿಳೆ ಹಾಗೂ ಪುರುಷ ನಮ್ಮನ್ನು ನೋಡಿ ಭಯಭೀತರಾಗಿ ಜೋರಾಗಿ ಕಿರುಚಾಡುತ್ತಾ ಓಡಿಹೋದರು. ಹತ್ತಿರ ಹೋಗಿ ನೋಡಿದಾಗ, ಒಣ ಕಟ್ಟಿಗೆಗಳ ರಾಶಿ ಕಾಣಿಸಿತು. ಬಹುಶಃ ನಮ್ಮನ್ನು ಅರಣ್ಯ ಇಲಾಖೆಯ ಅಧಿಕಾರಿಗಳೆಂದು ಭಾವಿಸಿ ಭಯದಿಂದ ಓಡಿಹೋಗಿರಬಹುದೆಂದು ಭಾವಿಸಿದೆವು.

ಮುಂದೆ ಸಾಗಿ ಮುಖ್ಯ ರಸ್ತೆಯ ಸಮೀಪವೇ ಇದ್ದ ಎತ್ತರದ ಪ್ರದೇಶದಲ್ಲಿ ವಿಶ್ರಮಿಸುತ್ತಿರುವಾಗ, ಏಳೆಂಟು ಜನರ ಗುಂಪೊಂದು ಕೈಯಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ನಮ್ಮ ಕಡೆಗೆ ಬರುತ್ತಿರುವುದನ್ನು ನೋಡಿ ಹೆದರಿದೆವು. ನಮ್ಮನ್ನು ನೋಡಿ ಹೆದರಿ ಓಡಿಹೋದ ಮಹಿಳೆ ಹಾಗೂ ಪುರುಷ ಇಬ್ಬರೂ ಆ ಗುಂಪಿನಲ್ಲಿದ್ದರು. ನಮ್ಮನ್ನು 'ಕಿಡ್ನಿ' ಕದಿಯಲು ಬಂದವರೆಂದು ತಿಳಿದು ಮೊಬೈಲ್ ಮೂಲಕ ಹಳ್ಳಿಯವರಿಗೆ ತಿಳಿಸಿದ ಕಾರಣ ಅವರೆಲ್ಲರೂ ನಮಗೆ ಹೊಡೆಯಲು ಬಂದಿದ್ದರಂತೆ. ನಮ್ಮ ಪರಿಚಯ ಹಾಗೂ ನಾವು ಬಂದ ಉದ್ದೇಶವನ್ನು ತಿಳಿಸಿದ ನಂತರ ಅವರೆಲ್ಲರೂ ನಕ್ಕು, ನಮ್ಮನ್ನು ಬೀಳ್ಕೊಟ್ಟರು. ದಿನದ ಅನುಭವಗಳನ್ನು ಮೆಲುಕು ಹಾಕುತ್ತಾ ಸಂಡೂರು ತಲುಪಿದಾಗ ಸಂಜೆ ಆರು ಗಂಟೆಯಾಗಿತ್ತು.

ಬೆಟ್ಟದ ಮೇಲಿನಿಂದ ಕಾಣುವ ತುಂಗಭದ್ರಾ ಅಣೆಕಟ್ಟಿನ ಹಿನ್ನೀರಿನ ನೋಟ, ಕೆರೆಗಳು, ಸಮತಟ್ಟಾದ ಪ್ರದೇಶದಲ್ಲಿ ಕಾಣುವ ಹಚ್ಚ ಹಸಿರಿನ ಹೊಲಗಳು, ಮೇಯುತ್ತಿರುವ ಕುರಿ ಮಂದೆಗಳು, ಸುತ್ತಲೂ ಇರುವ ಬೆಟ್ಟಗಳ ಸಾಲು ಎಂತಹವರನ್ನೂ ಮಂತ್ರಮುಗ್ಧರನ್ನಾಗಿಸುತ್ತವೆ.

ಉತ್ತರ ಮಲೆ ಬೆಟ್ಟ ಒಂದು ದಿನದ ಚಾರಣಕ್ಕೆ ಹೇಳಿ ಮಾಡಿಸಿದಂತಿದೆ. ಇಲ್ಲಿಗೆ ಸಂಪರ್ಕ ನೀಡುವ ರಸ್ತೆ ಅಭಿವೃದ್ಧಿಪಡಿಸಬೇಕಾಗಿದೆ ಹಾಗೂ ಬೆಟ್ಟದ ಮೇಲೆ ಕೋಟೆಯ ಇತಿಹಾಸ ತಿಳಿಸುವ ಫಲಕಗಳು ಹಾಗೂ ಮಾರ್ಗಸೂಚಿ ಫಲಕಗಳನ್ನು ಅಳವಡಿಸಿದಲ್ಲಿ ಮುಂದೊಂದು ದಿನ ಉತ್ತರ ಮಲೆ ಬೆಟ್ಟ ಮತ್ತಷ್ಟು ಪ್ರವಾಸಿಗರನ್ನು ಆಕರ್ಷಿಸುವುದರಲ್ಲಿ ಅನುಮಾನವಿಲ್ಲ.

ಚಿತ್ರಗಳು: ಸಂಡೂರ್ ಸಮಿಟರ್ಸ್ ತಂಡ

ಇದೋ ಹೊಸ ಜೀವನದ ದಾರಿ...

...8ನೇ ಪುಟದಿಂದ

ಲಾಭದ ಹಂಚಿಕೆ

ದೇಶದ ಬಹುತೇಕ ಕಡೆ ಕೈಮಗ್ಗ ಚಟುವಟಿಕೆ, ಖಾದಿ ಗ್ರಾಮೋದ್ಯೋಗ ವಹಿವಾಟು ನಷ್ಟದಲ್ಲಿ ಮುಳುಗಿದೆ. ಆದರೆ ಹೊಸ ಜೀವನ ದಾರಿ ಚಟುವಟಿಕೆಗಳು ನಷ್ಟ ಕಂಡಿಲ್ಲ. ಬಂದ ಲಾಭವನ್ನು ಮೂರು ಹಂತದಲ್ಲಿ ಹಂಚಿಕೆ ಮಾಡಲಾಗುತ್ತದೆ. ಶೇ 60ರಷ್ಟು ಲಾಭವನ್ನು ಜನಪದ ಟ್ರಸ್ಟ್, ಕೆಲಸಗಾರರು ಹಾಗೂ ಸಂಯೋಜಕರಿಗೆ ಸಮನಾಗಿ ಹಂಚಿಕೆ ಮಾಡಲಾಗುತ್ತದೆ. ಉಳಿದ ಶೇ 40ರಷ್ಟನ್ನು ಸಾಮಾಜಿಕ ಭದ್ರತೆಗಾಗಿ ಮೀಸಲಿಡಲಾಗಿದೆ.

ಅದರಲ್ಲಿ ಶೇ 10ರಷ್ಟನ್ನು ಗುಂಪು ಅಭಿವೃದ್ಧಿ ಚಟುವಟಿಕೆಗೆ ಎತ್ತಿಡಲಾಗಿದ್ದು ಅದನ್ನು ಕೆಲಸಗಾರರ ಸಾಂಸ್ಕೃತಿಕ ಚಟುವಟಿಕೆ, ವ್ಯಕ್ತಿತ್ವ ವಿಕಸನ ಶಿಬಿರಗಳಿಗೆ ವಿನಿಯೋಗಿಸಲಾಗುತ್ತಿದೆ. ಶೇ 2ರಷ್ಟು ಹಣವನ್ನು ಆರೋಗ್ಯಕ್ಕಾಗಿ ತೆಗೆದಿರಿಸಲಾಗಿದೆ. ಶೇ 5ರಷ್ಟು ಹಣ ಭವಿಷ್ಯ ನಿಧಿಗೆ ಪಾವತಿಸಲಾಗುತ್ತದೆ. ದೇವರ ನಿಧಿ ವಿಶೇಷವಾಗಿದ್ದು ಶೇ 1ರಷ್ಟು ಹಣ ಮೀಸಲಿಡಲಾಗಿದೆ. ಆವರಣದಲ್ಲಿ ಒಂದು ಹಣದ ಡಬ್ಬಿ ಇದ್ದು ಯಾರಿಗೇ ತುರ್ತು ಅಗತ್ಯವಿದ್ದರೂ ಅದರಲ್ಲಿ ಹಣ ತೆಗೆದುಕೊಂಡು ಅಲ್ಪ ಬಡ್ಡಿಯೊಂದಿಗೆ ಹಣ ವಾಪಸ್ ತಂದಿಡಬಹುದು. ಇದನ್ನು ಯಾರು ಕೂಡ ನಿರ್ವಹಣೆ ಮಾಡುವುದಿಲ್ಲ. ಕೆಲಸಗಾರರ ನಡುವಿನ ವಿಶ್ವಾಸದ ಮೇಲೆ ಈ ನಿಧಿ ಸಹಾಯಕ್ಕೆ ಬರುತ್ತಿದೆ.

ನೂಲಿಗೆ ಬಣ್ಣದ ಡೈ ಮಾಡುತ್ತಿರುವುದು

ಖಾದಿ ವಸ್ತ್ರದ ನೇಯ್ಗೆ

'ಹೊಸ ಜೀವನ ದಾರಿ' ಆವರಣದಲ್ಲಿ ಬಣ್ಣದ ಮನೆ (ಡ್ರೈಯಿಂಗ್ ಯೂನಿಟ್) ಇದ್ದು ಖಾದಿ ನೂಲಿಗೆ ನೈಸರ್ಗಿಕವಾಗಿ ಬಣ್ಣಗಟ್ಟಿಸಲಾಗುತ್ತಿದೆ. ಪರಿಣತ ಕುಶಲಕರ್ಮಿಗಳು ದೇಸಿ ಮಾದರಿಯಲ್ಲಿ ಡೈಯಿಂಗ್ ಮಾಡುತ್ತಾರೆ. ರಾಸಾಯನಿಕಮುಕ್ತವಾಗಿ ಸಸ್ಯ, ಹಣ್ಣು, ಬೇರು ಬಳಸಿ ಬಣ್ಣ ತುಂಬಲಾಗುತ್ತದೆ.

ಸಾವಯವ ಕೃಷಿ

ಹೊಸ ಜೀವನ ದಾರಿ ಆವರಣದ ಅರ್ಧ ಭಾಗದಲ್ಲಿ ಖಾದಿ ಚಟುವಟಿಕೆ, ತರಬೇತಿ ಕೊಠಡಿ, ಕುಟೀರಗಳಿವೆ. ಉಳಿದರ್ಧ ಭಾಗವನ್ನು ಸಾವಯವ ಕೃಷಿಗೆ ಬಳಕೆ ಮಾಡಿಕೊಳ್ಳಲಾಗಿದೆ. ಕೃಷಿಯಿಂದ ಸಿಗುವ ಉತ್ಪನ್ನಗಳಿಗೆ ಜನಪದ ರುಜು ಆಹಾರ ಸಂಸ್ಕೃತಿ ರೂಪ ನೀಡಲಾಗಿದ್ದು ಮಾರುಕಟ್ಟೆಗೆ ಕೊಂಡೊಯ್ದು ಮಾರುವುದಿಲ್ಲ. ಬದಲಾಗಿ ನೇಯ್ಗೆ, ಕೃಷಿ ಕೆಲಸಗಳಲ್ಲಿ ತೊಡಗಿರುವ ಕೆಲಸಗಾರರಿಗೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗುತ್ತದೆ. ಏಳೆಂಟು ಥರದ ತರಕಾರಿ, ಹಣ್ಣುಗಳನ್ನು ಇಲ್ಲಿ ಬೆಳೆಯಲಾಗುತ್ತಿದೆ.

ನೆನೆ ಬನ

'ಹೊಸ ಜೀವನ ದಾರಿ' ಸಂಸ್ಥೆಯ ಎದುರಿನ ಭೂಮಿಯಲ್ಲಿ ಜನಪದ ಸೇವಾ ಟ್ರಸ್ಟ್ ಜೀವವೈವಿಧ್ಯ ಅರಣ್ಯ ನಿರ್ಮಿಸುತ್ತಿದೆ. ಇದಕ್ಕೆ 'ನೆನೆ ಬನ' ಎಂದು ನಾಮಕರಣ ಮಾಡಲಾಗಿದೆ. ಜನಪದ, ಖಾದಿ, ಸಾವಯವ ಕೃಷಿಯ ಜೊತೆಗೆ ಪರಿಸರ ಸಂರಕ್ಷಣೆಯೂ ಟ್ರಸ್ಟ್‌ನ ಉದ್ದೇಶವಾಗಿದ್ದು ನೆನೆ ಬನದಲ್ಲಿ 300 ಗಿಡಗಳು ಬೆಳೆಯುತ್ತಿವೆ. ಆಲ ಜಾತಿಯ ನೂರಾರು ಗಿಡಗಳನ್ನು ಬೆಳೆಸಲಾಗುತ್ತಿದೆ. ಬೆಟ್ಟದ ತಟದಲ್ಲೇ ನೆನೆ ಬನ ರೂಪುಗೊಳ್ಳುತ್ತಿದ್ದು ಪಕ್ಷಿಕಾಶಿಯಾಗಿ ರೂಪುಗೊಳ್ಳುವ ಲಕ್ಷಣ ಗೋಚರಿಸುತ್ತಿದೆ.

ಕರುಣಾ ಗೃಹ, ಕಸ್ತೂರಬಾ ಸಂಕ್ಷಿಪ್ತ ಶಿಕ್ಷಣ ಶಾಲೆ, ಜನಪದ ಮುದ್ರಣಾಲಯ, ಜನಪದ ವಿದ್ಯಾಲಯ, ಖಾದಿ, ಕೈಮಗ್ಗ, ಹೊಸ ಜೀವನ ದಾರಿ, ವಿಶೇಷ ದತ್ತು ಕೇಂದ್ರ, ನನೆ ಬನ ಚಟುವಟಿಕೆಗಳ ಮೂಲಕ ಸುಸ್ಥಿರ ಅಭಿವೃದ್ಧಿಯ ಮಾದರಿ ರೂಪಿಸಿರುವ ಜನಪದ ಸೇವಾ ಟ್ರಸ್ಟ್ ಹೊಸ ಕಾಲಘಟ್ಟದಲ್ಲೂ ಪ್ರೇರಕಶಕ್ತಿಯಾಗಿ ನಿಂತಿದೆ. ಸರ್ಕಾರಗಳಿಂದ ಯಾವುದೇ ರೀತಿಯಾದ ಸಹಾಯ ಪಡೆಯದೆ ಸಹಕಾರ ತತ್ವದ ಮೇಲೆ ನಡೆಯುತ್ತಿದೆ. 'ಗಾಂಧಿ ಕನಸಿನ ಸಮಾಜ ನಿರ್ಮಾಣ ಕಾರ್ಯದಲ್ಲಿ ಜನಪದ ಸೇವಾ ಟ್ರಸ್ಟ್ ಮುನ್ನಡೆಯುತ್ತಿದೆ. ಸಹಕಾರ, ಸ್ವಾವಲಂಬನೆ, ಸಮುದಾಯದ ಭಾಗಿದಾರಿಕೆಗೆ ಮನ್ನಣೆ ನೀಡಿ ಹೊಸ ತಲೆಮಾರಿನ ಯುವಕರಲ್ಲಿ ವೈಚಾರಿಕ ನಿಲುವು ಸೃಷ್ಟಿಸುತ್ತಿದೆ' ಎಂದು ಜನಪದ ಸೇವಾ ಟ್ರಸ್ಟ್ ಕಾರ್ಯದರ್ಶಿ ಸಂತೋಷ್ ಕೌಲಗಿ ಹೇಳುತ್ತಾರೆ.

'ಹೊಸ ಜೀವನ ದಾರಿ' ಆವರಣದ ನೋಟ

ಮುನ್ನೋಟ 19-09-2021 ರಿಂದ 25-09-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಭೂ ವ್ಯವಹಾರದಲ್ಲಿ ಹೆಚ್ಚು ಶ್ರಮ ವಹಿಸಿದರೂ ಲಾಭ ಕಡಿಮೆ ಇರುತ್ತದೆ. ಕೊಟ್ಟ ಸಾಲದಲ್ಲಿ ಸ್ವಲ್ಪ ಭಾಗ ವಾಪಸ್ಸು ಬರುತ್ತದೆ. ವಿದೇಶಿ ಹಣ ಬದಲಾವಣೆಯನ್ನು ಮಾಡುವವರಿಗೆ ವ್ಯವಹಾರ ವೃದ್ಧಿಸುತ್ತದೆ. ರಾಜಕೀಯ ರಂಗದಲ್ಲಿರುವ ಕೆಲವರಿಗೆ ಸೂಕ್ತ ಸ್ಥಾನಮಾನ ಹತ್ತಿರದಲ್ಲೇ ದೊರೆಯುವ ಸಾಧ್ಯತೆ ಇದೆ. ಮನೆಯ ಜವಾಬ್ದಾರಿಯಲ್ಲಿ ನಿರ್ಲಕ್ಷ್ಯ ಬೇಡವೇ ಬೇಡ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಮುಂದಾಲೋಚನೆಯಿಂದ ಮುಂಬರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಸ್ತ್ರೀ ವರ್ಗದವರಿಗೆ ಅತ್ಯಂತ ಸಂತೋಷಕರವಾದ ವಾತಾವರಣ ದೊರೆಯಲಿದೆ. ವೈರಿಗಳ ವೈಯಕ್ತಿಕ ಕಿರುಕುಳದಿಂದ ಮುಕ್ತರಾಗುವಿರಿ. ಚಿನ್ನದ ಆಭರಣಗಳನ್ನು ಕೊಳ್ಳಲು ಮುಂದಾಗುವಿರಿ. ಸರ್ಕಾರಿ ಕೆಲಸಗಳಲ್ಲಿ ಮುನ್ನಡೆ ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸ್ನೇಹಿತರು ಮತ್ತು ಬಂಧುಗಳೊಂದಿಗೆ ಸಂಬಂಧ ಗಟ್ಟಿಗೊಳ್ಳುವ ಅವಕಾಶವಿದೆ. ಗೃಹ ಆಲಂಕಾರಿಕ ವಸ್ತುಗಳನ್ನು ಖರೀದಿ ಮಾಡುವಿರಿ. ಪಿತ್ರಾರ್ಜಿತ ಆಸ್ತಿಯನ್ನು ಪಡೆಯುವ ಯೋಗವಿದೆ. ಹಿರಿಯರ ಸಹಕಾರದಿಂದ ಹೊಸ ಆದಾಯದ ಮೂಲಗಳನ್ನು ಶೋಧಿಸುವಿರಿ. ಸಂಗಾತಿಯಿಂದ ನಿಮಗೆ ಉತ್ತಮ ಉಡುಗೊರೆ ದೊರೆಯುತ್ತದೆ. ಭೂ ವ್ಯವಹಾರ ಮಾಡುವವರಿಗೆ ಸ್ವಲ್ಪ ಅಭಿವೃದ್ಧಿ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ ಇದೆ. ಕುಟುಂಬದಲ್ಲಿನ ಅಶಾಂತಿಯನ್ನು ಕುಳಿತು ಮಾತನಾಡಿ ಪರಿಹರಿಸಿಕೊಳ್ಳುವುದು ಒಳ್ಳೆಯದು. ಕೆಲವು ರಾಜಕಾರಣಿಗಳಿಗೆ ಉತ್ತಮ ಸ್ಥಾನ ಸಿಗುವ ಸಾಧ್ಯತೆ ಇದೆ. ಉದ್ಯೋಗಾಕಾಂಕ್ಷಿಗಳಿಗೆ ಪರಿಚಿತರ ಮೂಲಕ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ದಿನಸಿ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಯಾಗಿ ಆದಾಯವೂ ಹೆಚ್ಚುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಉನ್ನತ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗಿರುವವರಿಗೆ ಉತ್ತಮ ಸೌಕರ್ಯಗಳು ದೊರೆಯುತ್ತವೆ. ವಾಹನ ಮಾರಾಟ ಮಾಡುವವರ ವ್ಯವಹಾರ ಅಭಿವೃದ್ಧಿಯತ್ತ ಸಾಗುತ್ತದೆ. ಕಳೆದುಕೊಂಡಿದ್ದ ವಸ್ತುವೊಂದು ಮತ್ತೆ ದೊರೆತು ಸಂತಸವಾಗುತ್ತದೆ. ಧನದ ಒಳಹರಿವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ಬೆನ್ನುನೋವು ಇರುವವರಿಗೆ ಅದರ ಯಾತನೆ ಹೆಚ್ಚಾಗಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವೃತ್ತಿಜೀವನದಲ್ಲಿ ಸಾಕಷ್ಟು ಬದಲಾವಣೆಯನ್ನು ಕಾಣಬಹುದು. ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು. ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರನ್ನು ಸಾಮಾಜಿಕವಾಗಿ ಜನರು ಗುರುತಿಸಿ ಅಭಿನಂದನೆ ಸಲ್ಲಿಸುವರು. ಸಂಗಾತಿಯ ಮಾತಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡದಿರುವುದು ಒಳ್ಳೆಯದು. ವಿದ್ಯಾರ್ಥಿಗಳ ವ್ಯಾಸಂಗದ ಹಾದಿ ಸುಗಮವಾಗಲಿದೆ. ಶೀತಬಾಧೆ ಇರುವವರು ಎಚ್ಚರ ವಹಿಸಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಅನಗತ್ಯ ಮಾತುಕತೆಗಳಲ್ಲಿ ಭಾಗವಹಿಸುವುದು ಬೇಡ. ಯಾರಿಗೋ ನೀತಿ ಹೇಳಲು ಹೋಗಿ ನೀವು ಮುಜುಗರಕ್ಕೀಡಾಗುವ ಸಂದರ್ಭವಿದೆ. ಭೂ ವಿವಾದಗಳಲ್ಲಿ ಸಿಲುಕಿಕೊಳ್ಳುವ ಸಾಧ್ಯತೆಯಿದೆ. ಸ್ವಲ್ಪ ಎಚ್ಚರ ವಹಿಸಿರಿ. ವೈಯಕ್ತಿಕ ಜೀವನದಲ್ಲಿ ಸ್ವಲ್ಪ ಅಭಿವೃದ್ಧಿಯನ್ನು ಕಾಣಬಹುದು. ಸಾಮಾಜಿಕ ಕೆಲಸ ಕಾರ್ಯಗಳನ್ನು ಮಾಡುವವರು ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟುಕೊಳ್ಳುವುದು ಉತ್ತಮ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಸ್ವಲ್ಪ ಹಣ ಕಾಣೆಯಾಗಿ ಕಷ್ಟನಷ್ಟಗಳನ್ನು ಅನುಭವಿಸುವ ಸಾಧ್ಯತೆಯಿದೆ. ಉದ್ಯೋಗ ಬದಲಾವಣೆಗಾಗಿ ಚಿಂತನೆ ಮಾಡುವಿರಿ. ಸರಿಯಾದ ಉದ್ಯೋಗ ದೊರೆಯುವವರೆಗೆ ಬದಲಾವಣೆಯ ಚಿಂತೆ ಬೇಡ. ಹಣದ ಹರಿವು ಅಷ್ಟು ಪ್ರೋತ್ಸಾಹದಾಯಕವಾಗಿರುವುದಿಲ್ಲ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ದೊಡ್ಡ ದೊಡ್ಡ ವ್ಯವಹಾರಸ್ಥರ ಸಂಪರ್ಕದಿಂದಾಗಿ ನಿಮ್ಮ ವ್ಯವಹಾರವು ಒಂದು ಸ್ಪಷ್ಟ ತಿರುವನ್ನು ಪಡೆಯುತ್ತದೆ. ನಿಮ್ಮ ಪ್ರಭಾವದಿಂದಾಗಿ ನೆರೆಹೊರೆಯವರ ಸಮಸ್ಯೆಗಳನ್ನು ಪರಿಹರಿಸುವಿರಿ. ಕೋರ್ಟು ಕಚೇರಿ ದಾವೆಯ ವ್ಯವಹಾರಗಳಲ್ಲಿ ನಿಮಗೆ ಅನುಕೂಲಕರ ವಾತಾವರಣವಿರುತ್ತದೆ. ಆದಾಯದಲ್ಲಿ ಕಡಿಮೆ ಇದ್ದರೂ ಖರ್ಚು ಕಡಿಮೆ ಮಾಡಿ ಸರಿದೂಗಿಸುವುದು ಅನಿವಾರ್ಯ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಿದ್ಯಾರ್ಥಿಗಳು ಶ್ರಮವಹಿಸಿ ಮಾಡಿದ ಅಧ್ಯಯನಕ್ಕೆ ಸೂಕ್ತ ಫಲ ದೊರೆಯುತ್ತದೆ. ಸರ್ಕಾರಿ ನೌಕರರಿಗೆ ಸ್ಥಾನಪಲ್ಲಟದ ಯೋಗವಿದೆ. ಸ್ವಯಂ ಉದ್ಯೋಗಿಗಳ ಆದಾಯದಲ್ಲಿ ಅಲ್ಪ ಹೆಚ್ಚಳವನ್ನು ಕಾಣಬಹುದು. ಸಾಲ ಕೊಡುವುದು ಬೇಡ. ಕೊಟ್ಟಲ್ಲಿ ಮೋಸಹೋಗುವ ಸಾಧ್ಯತೆಗಳಿವೆ. ಮನೆಯಲ್ಲಿ ವಸ್ತ್ರಾಭರಣಗಳ ಖರೀದಿ ಬಗ್ಗೆ ಚರ್ಚೆ ನಡೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಗೃಹಾಲಂಕಾರ ಸಾಮಗ್ರಿಗಳನ್ನು ತಯಾರು ಮಾಡುವವರಿಗೆ ಬೇಡಿಕೆ ಬರುತ್ತದೆ. ಚಿನ್ನಾಭರಣಗಳಿಗೆ ಕುಸುರಿ ಕೆಲಸವನ್ನು ಮಾಡುವವರಿಗೆ ಹೆಚ್ಚು ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ವಿದೇಶ ಪ್ರಯಾಣದ ಕನಸು ಗರಿಗೆದರುವ ಸಾಧ್ಯತೆಗಳಿವೆ. ಆರ್ಥಿಕ ವಿಷಯಗಳಲ್ಲಿ ಎಚ್ಚರಿಕೆ ಅಗತ್ಯ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆರ್ಥಿಕ ಸದೃಢತೆಯಿಂದ ಗೃಹ ನಿರ್ಮಾಣ ಕಾರ್ಯದಲ್ಲಿ ಯಶಸ್ಸನ್ನು ಕಾಣುವಿರಿ. ಸಂಶೋಧನಾ ಕೇಂದ್ರಗಳಲ್ಲಿ ಕೆಲಸ ಮಾಡುವವರಿಗೆ ಹೊಸ ಆಶಾಕಿರಣವೊಂದು ಮೂಡಿಬರಲಿದೆ. ಅನವಶ್ಯಕ ವ್ಯವಹಾರಗಳಲ್ಲಿ ಅಥವಾ ವಿಚಾರಗಳಲ್ಲಿ ತಲೆ ಹಾಕದಿರುವುದು ಬಹಳ ಉತ್ತಮ. ಮಾತೃವರ್ಗದವರಿಂದ ನಿಮ್ಮ ಕೆಲಸಗಳಿಗೆ ಸಾಕಷ್ಟು ಸಹಕಾರ ದೊರೆಯುತ್ತದೆ.

ಪದಬಂಧ 2705



ಮೇಲಿನಿಂದ ಕೆಳಕ್ಕೆ

1. ಮಂದಿಗೆ ಚಿಂತೆಯನ್ನುಂಟು ಮಾಡುವ ಮೊದಲ ಆಂಗ್ಲ ತಿಂಗಳು 4
2. ವಧು ಹಾಕುವ ಶ್ರೇಷ್ಠ ಹೂವಿನ ಹಾರ 5
3. ಸೂರ್ಯ ಪ್ರಕಾಶದ ಬುದ್ಧಿವಂತೆ 4
4. ಏಳನೇ ಮನುವಿನ ಯುಗಾಂತರ 4
7. ವೀರನಾದ ಅರಸನಿಗೆ ಇರಬೇಕಾದ ಲಕ್ಷಣ 4
10. ವಂಶವನ್ನು ಉದ್ಧರಿಸುವ ಮಗ ಇವನೇ 4
13. ಒಂದು ರೀತಿ ಚೆನ್ನಾಗಿ ಬೆಂದ ಅಡುಗೆ 4
15. ಬಯಕೆಯ ಮದನನ್ನು ಉರಿಸಿಬಿಡುವಿಕೆ 5
17. ಕಳ್ಳ ಬೇಟೆಗೆ ರಸ್ತೆಯ ಎಲ್ಲಾ ದಿಕ್ಕುಗಳಲ್ಲಿ ಹಾಕುವ ಬಂಧ 4
19. ಸಿದ್ಧಲಿಂಗೇಶ್ವರ ಸ್ವಾಮಿಯ ಎಡೆಗೆ ಪ್ರಶಸ್ತ ಸ್ಥಳ 4

ಎಡದಿಂದ ಬಲಕ್ಕೆ

1. ರಾಧಾ ಕೃಷ್ಣರ ಪ್ರೇಮವನ್ನು ಕೃತಿ ಮೂಲಕ ಅಮರಗೊಳಿಸಿದ ಕವಿ 4
3. ನಮ್ಮೆಲ್ಲರ ತೂಕ ಹೊತ್ತ ನಮ್ಮ ರಾಷ್ಟ್ರ 3
4. ವಿಷ್ಣು ಪಂಥಾನುಯಾಯಿ 3
5. ಅಮ್ಮನಿಗಾಗಿ ಇರುವ ಅಕ್ಕರೆ 4
6. ಮುಗ್ಗಾಲಿಯನ್ನು ಓಡಿಸುವಾಕಿ 4
8. ವಾಪಸ್ಸಾದರೆ ಗುರುವೂ ಕಾಣಿಸುತ್ತಾನೆ 3
9. ತಪ್ಪಾಗಿರುವ ವಿಷಯವನ್ನು ಮತ್ತೆ ಮೇಲೆತ್ತು 3
11. ಶರಣಾದಂತೆ ಶಿರವನ್ನು ನೆಲಮುಖ ಮಾಡು 4
12. ನೂರು ಸಾವಿರ ನಡುಗಡ್ಡೆ 4
14. ಹಿಂದುಮುಂದಾದ ಕಾರ್ಯ ನಿಮಿತ್ತ 3
16. ಕೈಗೆ ನಿಲುಕದ ಆಗಸದ ದೀರ್ಘ ಹರಹು 3
18. ಮೂರು ಶಕ್ತಿಗಳ ಬೃಹತ್ ಸಮ್ಮಿಲನ 4
20. ಪದ್ಯ ರಚನೆಯಲ್ಲಿ ಸಂತೋಷ ಪಡುವ ಕವಿ 4
21. ದುಡಿಯುವ ಎತ್ತಿನ ಮೂಗಿಗೆ ಕಟ್ಟುವ ಆಟದ ವಸ್ತು ಹಿಂದು ಮುಂದಾಗಿದೆ 3
22. ಮೂರು ಪಾದಗಳು ಸರ್ವಜ್ಞನಿಗೆ ಬಲು ಪ್ರಿಯ 3
23. ಮೊಹಮದ್ದೀಯ ದೊರೆಗಳಿವರು 4

ಪದಬಂಧ ಉತ್ತರ -2704

ಮೇಲಿಂದ ಕೆಳಕ್ಕೆ

1. ರಿಲೀಸು 2.ರವಿಗತಿ 3.ನಾಮಬಲ 4.ಹರಿದ್ರ 7.ಮಹಡಿಮನೆ 10.ಮಜನು 11.ಕವನ 12.ಗತವೈಭವ 13.ಮಾಧುರಿ 15.ಲಾವಂಚ 19.ಪಂಗನಾಮ 20.ತರುಲತೆ 21.ಚರಕ 23.ರಮಿಸು

ಎಡದಿಂದ ಬಲಕ್ಕೆ

1.ರಿಪುಸಂಹಾರ 3.ನಾರಸಿಂಹ 5.ವಿಶ್ವಪ್ರೇಮ 6.ಸುಗಮರಾಗ 8.ಬಲಭದ್ರ 9.ತಿರುಮಲ 11.ಕರಡಿ 12.ಗರಿಮಾ 14.ಮಲಾಲಾ 16.ನುರಿತ 17.ನಮ್ಮನೆ 18.ವೈಖರಿ 19.ಪಂಚಭೂತ 21.ಚದುರಂಗ 22.ರುದ್ರಾವತಾರ 24.ನಾಯಿಬಾಲ 25.ಕಡುಕಾಮ 26.ತೆನೆಗೂಡಿಸು

ಸಂಸ್ಕೃತಿ ಚಿಂತನೆಗೊಂದು ಬೆಳಕಿಂಡಿ

ಎಚ್. ದಂಡಪ್ಪ

ವಿಮರ್ಶೆ



ಲೋಕ ರೂಢಿಯ ಮೀರಿ
ಲೇ: ಚೇತನ ಸೋಮೇಶ್ವರ
ಪ್ರ: ಬಹುರೂಪಿ
ಸಂ:7019182729

ಪು: 220 ₹150

'ಲೋಕ ರೂಢಿಯ ಮೀರಿ' ಕೃತಿಯು ಚೇತನ ಸೋಮೇಶ್ವರ ಅವರು ಮಂಗಳೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಮಹಾಪ್ರಬಂಧ. ಈ ಕೃತಿಯಲ್ಲಿ ಎ.ಎನ್. ಮೂರ್ತಿರಾಯರ ವಿವಿಧ ಸಾಹಿತ್ಯ ಪ್ರಕಾರಗಳಿಗೆ ಸೇರಿದ ಮೂವತ್ತು ಕೃತಿಗಳಲ್ಲಿನ ಸಂಸ್ಕೃತಿ ಚಿಂತನೆಯ ಸ್ವರೂಪ ಹಾಗೂ ಅದು ಜನರ ಬದುಕನ್ನು ರೂಪಿಸಲು ವಿಶ್ವಾತ್ಮಕ ಭಾವನೆಗಳನ್ನು ಒಳಗೊಂಡಿರುವ ಬಗೆಯನ್ನು ವಿವರಿಸಲಾಗಿದೆ.

'ಸಂಸ್ಕೃತಿ' ಎಂಬ ಪದಕ್ಕೆ ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ತತ್ವಶಾಸ್ತ್ರಜ್ಞರು ಹಲವಾರು ಬಗೆಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಸಾಹಿತ್ಯ ಮೀಮಾಂಸೆಯಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಚಿಂತಕರು ವಿವಿಧ ನೆಲೆಗಳಲ್ಲಿ ಈ ಪದದಿಂದ ಬೆಳಕು ಹೊಮ್ಮಿಸಿದ್ದಾರೆ, ವ್ಯಾಖ್ಯೆಗಳನ್ನು ನೀಡಿದ್ದಾರೆ. ಇದರ ಜತೆಗೆ ಸಾಹಿತ್ಯ ಕೃತಿಯೊಂದರಲ್ಲಿ ಸಂಸ್ಕೃತಿಯು ಯಾವ ರೀತಿ ಅಂತರ್ಗತವಾಗಿರುತ್ತದೆ, ಸಾಹಿತ್ಯದೊಡನೆ ಅದರ ಸಂಬಂಧವೆಂಥದ್ದು ಎಂಬ ಚಿಂತನೆಗಳನ್ನು ಇಂದಿಗೂ ಮಾಡುತ್ತಲೇ ಇದ್ದಾರೆ. ಕನ್ನಡದ ಸಂದರ್ಭದಲ್ಲಿ ಈ ಕುರಿತು ಆಳ ಅಗಲವಾಗಿ ಚರ್ಚಿಸಿದ ಹಲವಾರು ಚಿಂತಕರಲ್ಲಿ, ವಿಮರ್ಶಕರಲ್ಲಿ ಮೂರ್ತಿರಾಯರೂ ಒಬ್ಬರು.

ಹಾಗೆ ನೋಡಿದರೆ ಸಂಸ್ಕೃತಿ ವಿಮರ್ಶೆಯು ಇತ್ತೀಚಿನದ್ದೇನಲ್ಲ. ರವೀಂದ್ರನಾಥ ಟ್ಯಾಗೋರರ 'ಪ್ರಾಚೀನ ಸಾಹಿತ್ಯ' (ಅನುವಾದ: ಟಿ.ಎಸ್. ವೆಂಕಣ್ಣಯ್ಯ), ಸಂಸ್ಕೃತಿ ವಿಮರ್ಶೆಗೆ ಉತ್ತಮ ಉದಾಹರಣೆ. ಅಲ್ಲಿಂದ ನಿರಂತರವಾಗಿ ಬೇರೆ ಬೇರೆ ಚಿಂತಕರಿಂದ ಬೆಳೆಯುತ್ತಲೇ ಬಂದಿರುವ ಸಂಸ್ಕೃತಿಯು ಬದುಕಿನ ಒಂದು ನಿರ್ದಿಷ್ಟ ಸ್ವರೂಪವನ್ನು ಮೈಗೊಳ್ಳುತ್ತಿದೆ.

'ಸಂಸ್ಕೃತಿ' ಎಂಬುದು 'ಬದುಕಿನ ಬೆಂಬಲ ಪಡೆದು ನಿರಂತರವಾಗಿ ಹರಿದು ಬಂದಿರುವ ಜೀವನದಿ. ವ್ಯಕ್ತಿಯ ಮನಸ್ಸನ್ನು ಅರಳಿಸಿ ಅವನ ಮಾನವೀಯ ವಿಕಾಸಕ್ಕೆ ದಾರಿ ಹುಡುಕುವ ಮೂಲಕ ವಿಶ್ವಮಾನವ ಪ್ರಜ್ಞೆಯನ್ನು ಬೆಳೆಸುವ ವಿಚಾರಗಳು ಮತ್ತು ಮೌಲ್ಯಗಳು' ಎಂದು ವ್ಯಾಖ್ಯಾನಿಸಲಾಗಿದೆ. ಮೂರ್ತಿರಾಯರ 'ಸಾಹಿತ್ಯ-ಸಂಸ್ಕೃತಿ' ಲೇಖನದಲ್ಲಿಯೂ ಇದೇ ಬಗೆಯ ವ್ಯಾಖ್ಯಾನವಿದೆ, ವಿಶ್ವಮಾನವ ಪ್ರಜ್ಞೆ ಬೆಳೆಸುವ ಉದ್ದೇಶ ಸಾಧನೆಗಾಗಿ ಸಾಹಿತ್ಯದ ಅಗತ್ಯವಿದೆ ಎಂಬ ವಾದವೂ ಇಲ್ಲಿ ಸೇರಿದೆ.

ಸಾಹಿತ್ಯ ಕೃತಿಗಳಲ್ಲಿರುವ ಸಂಸ್ಕೃತಿಯನ್ನು ಜ್ಞಾನ ಎಂದು ಕರೆಯಲಾಗುತ್ತದೆ. ಯಾವುದೋ ಅಗೋಚರವಾದ ವಿಚಾರವನ್ನು ಕುರಿತು ಯೋಚಿಸುತ್ತ ಕೂರುವುದು ಸಂಸ್ಕೃತಿಯ ಉದ್ದೇಶವಲ್ಲ. ಹೇಗೆ ವಿಜ್ಞಾನವು ಅದ್ಭುತ ಚಮತ್ಕಾರಗಳನ್ನು ಒಳಗೊಂಡಿದೆಯೋ ಹಾಗೆಯೇ ಸಾಹಿತ್ಯ ಕೂಡ ಅದ್ಭುತ ಕಲ್ಪನೆಗಳನ್ನೊಳಗೊಂಡು ಭಾಷೆಯಲ್ಲಿ ಮೈಗೂಡಿರುತ್ತದೆ. ಅದು ಓದುಗನ ಹೃದಯದ ಮೇಲೆ ಹಲವು ಬಗೆಯ ಪರಿಣಾಮವನ್ನು ಉಂಟುಮಾಡುತ್ತದೆ. ಆದುದರಿಂದ ಸಾಹಿತ್ಯವು ಶ್ರೇಷ್ಠವಾದ, ಉದಾತ್ತವಾದ ಮೌಲ್ಯಗಳನ್ನು ಉಳಿಸಿ ಬೆಳೆಸುವಂತಹ ಸಾಧನವಾಗಿದ್ದು, ಎಲ್ಲರ ಒಳಿತನ್ನು ಬಯಸುವ ಮೌಲ್ಯಗಳೇ 'ಸಂಸ್ಕೃತಿ'ಯಾಗಿದೆ ಎಂಬ ನಂಬಿಕೆ ಮೂರ್ತಿರಾಯರದ್ದು. ಈ ವಿಚಾರಗಳನ್ನು ಸೋಮೇಶ್ವರರ ಕೃತಿಯಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಸಾಹಿತ್ಯ ಕೃತಿಗಳಲ್ಲಿ ಸಂಸ್ಕೃತಿ ಚಿಂತನೆಯ ಸ್ವರೂಪವನ್ನು ಅಧ್ಯಯನ ಮಾಡುವ ಸಂಶೋಧಕನು ಆ ಕೃತಿಯಲ್ಲಿರುವ ಮನುಷ್ಯ ಬದುಕನ್ನು ಹಾಗೂ ಆತ ಅನುಸರಿಸುತ್ತಿರುವ ಮೌಲ್ಯಗಳನ್ನು ಅನ್ವೇಷಿಸಿ ಸಮಕಾಲೀನ ಸಾರ್ವಕಾಲಿಕ ಪ್ರಜ್ಞೆಯನ್ನು ಇಟ್ಟುಕೊಂಡು, ಇತರ ಕೃತಿಗಳ ಬಳಿ ಇಟ್ಟು ತುಲನಾತ್ಮಕವಾಗಿ ವಿಮರ್ಶಿಸಬೇಕಾಗುತ್ತದೆ. ಸಾಹಿತ್ಯ ಕೃತಿಗಳಲ್ಲಿ ಕೃತಿಕಾರನ ಕಲ್ಪನೆಗಳು ಮಾತ್ರ ಇರುವುದಿಲ್ಲ, ಬೌದ್ಧಿಕ ಹೊಳಹುಗಳು ಕೂಡ ಇರುತ್ತವೆ. ಅವುಗಳಲ್ಲಿ ಮನುಷ್ಯನ ಪ್ರಗತಿಗೆ ಸಂಬಂಧಿಸಿದ ಬದುಕಿನ ಅನುಭವಗಳು ಮತ್ತು ಬೌದ್ಧಿಕ ವಿಚಾರಗಳು ದಾಖಲಾಗಿರುತ್ತವೆ. ಈ ಸಂಗತಿಗಳನ್ನೆಲ್ಲ ವಿಮರ್ಶಕರು ತೌಲನಿಕವಾಗಿಯಲ್ಲದಿದ್ದರೂ ವಿಸ್ತಾರವಾಗಿ ಎಳೆ ಎಳೆಯಾಗಿ ಬಿಡಿಸಿಡುತ್ತಾರೆ.

'ಸಂಸ್ಕೃತಿ ಚಿಂತನೆ', 'ಸಂಸ್ಕೃತಿ ಚಿಂತನೆಯ ನೆಲೆಗಳು', 'ಜಾತಿ ಕುರಿತ ಚಿಂತನೆಗಳು', 'ಮತ-ಧರ್ಮ-ಅಧ್ಯಾತ್ಮ ಕುರಿತ ನಿಲುವುಗಳು', 'ಸ್ವಾತಂತ್ರ್ಯದ ಪರಿಕಲ್ಪನೆ ಹಾಗೂ ಕೇಡಿನ ಕಲ್ಪನೆ', 'ದೇವರ ಕುರಿತು ಚಿಂತನೆ', 'ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿ', 'ಹೆಣ್ಣಿನ ಕುರಿತು ಧೋರಣೆಗಳು', 'ಭಾಷೆ-ಶಿಕ್ಷಣ ಆಲೋಚನೆಗಳು', 'ಸಾಹಿತ್ಯ- ಕಲೆಯ ಚಿಂತನೆ' ಮುಂತಾದ ಬೇರೆ ಬೇರೆ ಶೀರ್ಷಿಕೆಗಳಡಿಯಲ್ಲಿ ಮೂರ್ತಿರಾಯರು ಸಂಸ್ಕೃತಿಯ ಆಳವಾದ ಚಿಂತನೆಯನ್ನು ನಡೆಸುತ್ತಾರೆ. 'ಮೂರ್ತಿರಾಯರ ಸಂಸ್ಕೃತಿ ಚಿಂತನೆ ನಮ್ಮ ಕಾಲಕ್ಷೇಪ ಅಲ್ಲ, ಎಲ್ಲ ಕಾಲಗಳಿಗೂ ಪ್ರಸ್ತುತವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು' ಎಂದಿರುವುದು ಈ ಕೃತಿಯ ಅಧ್ಯಯನದ ಮಹತ್ವವನ್ನು ಸೂಚಿಸುತ್ತದೆ.

ಲೇಖಕರು ಸಂಸ್ಕೃತಿಯನ್ನು ವ್ಯಾಖ್ಯಾನಿಸುವಾಗ ಮಾನವಶಾಸ್ತ್ರಜ್ಞರ ಹಾಗೂ ಸಾಹಿತ್ಯಚಿಂತಕರ ವ್ಯಾಖ್ಯಾನಗಳನ್ನು ಸಂಗ್ರಹಿಸಿ ಕೊಡುತ್ತಾರೆ. ಈ ವ್ಯಾಖ್ಯಾನಗಳನ್ನು ಮೂರ್ತಿರಾಯರ ಕೃತಿಗಳಿಗೆ ಅನ್ವಯಿಸಿ ವಿಶ್ಲೇಷಣೆ ಮಾಡುವುದಿಲ್ಲ. ಉದಾಹರಣೆಗೆ, 'ಸಂಸ್ಕೃತಿ ಚರ್ಚೆ-ತೌಲನಿಕ ವಿಧಾನ' ಎಂಬ ಭಾಗ ನೋಡಬಹುದು (ಪುಟ 60ರಿಂದ 75). ಸಂಶೋಧನೆಯಾಗಿರಲಿ, ವಿಶ್ಲೇಷಣೆಯಾಗಿರಲಿ-ಮಾಹಿತಿ ಸಂಗ್ರಹಣೆ, ಪರಿಶೀಲನೆ, ವಿವರಣೆ, ವಿಶ್ಲೇಷಣೆಗಳಿರಬೇಕು. ಸಂಶೋಧನಾ ಪ್ರಬಂಧಗಳಲ್ಲಂತೂ ತೌಲನಿಕ ವಿಶ್ಲೇಷಣೆ ಅತ್ಯಗತ್ಯ. ಇಲ್ಲಿ ತೌಲನಿಕ ಅಧ್ಯಯನ ಕಡಿಮೆಯಿದ್ದರೂ ಪದಗಳ ವಿಜೃಂಭಣೆಯಿಂದ ವಿಚಾರಗಳು ಸೊರಗಿದಂತೆ ಭಾಸವಾದರೂ ಚೇತನ ಸೋಮೇಶ್ವರರು ಮೂರ್ತಿರಾಯರ ಚಿಂತನೆಗಳ ಬಗ್ಗೆ ಮಾಡಿರುವ ಈ ಸಂಶೋಧನೆಯು ಸಂಸ್ಕೃತಿ ಚಿಂತನೆಯ ದೃಷ್ಟಿಯಿಂದ ಮುಂದಿನ ಸಂಶೋಧಕರಿಗೆ, ಓದುಗರಿಗೆ ಅಧ್ಯಯನಕ್ಕೆ ಬೇಕಾದ ಹೇರಳವಾದ ಮಾಹಿತಿಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದೆ. ❖

ಎರಡು ಚಿತ್ರ-ಕಥೆ, ನೂರಾರು ಹಾಡು!

ಮಹತಿ



ಪು: 196 ₹200

ಪು: 156 ₹160



ಪು: 228 ₹230

ನಾಗತಿಹಳ್ಳಿ ಚಂದ್ರಶೇಖರರ ಈ ಮೂರು ಪುಸ್ತಕಗಳ ಪ್ರಕಾಶಕರು: ಟೆಂಟ್ ಸಿನಿಮಾ, ಬೆಂಗಳೂರು. ಫೋನ್: 9900555255.

ಸಾಹಿತ್ಯ ಮತ್ತು ಸಿನಿಮಾ ಎರಡೂ ಕ್ಷೇತ್ರಗಳಲ್ಲಿ ಯಶಸ್ಸನ್ನು ಪಡೆದ ವಿರಳ ಉದಾಹರಣೆಗಳಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಅವರ ಹೆಸರು ಮುಖ್ಯವಾದುದು. ಕಥೆ-ಕಾದಂಬರಿಕಾರರಾಗಿ ಅಪಾರ ಜನಪ್ರಿಯತೆ ಗಳಿಸಿದ್ದ ಅವರು, ಕಿರುತೆರೆ ಧಾರಾವಾಹಿ ಮತ್ತು ಸಿನಿಮಾ ನಿರ್ದೇಶನದಲ್ಲೂ ಯಶಸ್ಸನ್ನು ಗಳಿಸಿದರು. ಹೀಗೆ ಎರಡು ದೋಣಿಯ ಪ್ರಯಾಣದಲ್ಲಿ ಸಮಾನ ಯಶಸ್ಸನ್ನು ಗಳಿಸಿದ ಉದಾಹರಣೆಗಳು ಕನ್ನಡದಲ್ಲಿ ಅಪರೂಪ ಅಥವಾ ಇಲ್ಲವೆಂದರೂ ನಡೆದೀತು.

ಈಗ ಪೂರ್ಣಾವಧಿ ಸಿನಿಮಾ ನಿರ್ದೇಶಕರಾಗಿರುವ ನಾಗತಿಹಳ್ಳಿ ಚಂದ್ರಶೇಖರ್, ತಮ್ಮ ಸಾಹಿತ್ಯದ ಹಿನ್ನೆಲೆಯ ಕಾರಣದಿಂದಲೋ ಏನೋ ಸಿನಿಮಾ ಕೃತಿಗಳನ್ನು ಸಾಹಿತ್ಯ ರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ತಮ್ಮ ಜನಪ್ರಿಯ ಸಿನಿಮಾಗಳಾದ 'ಅಮೃತಧಾರೆ' ಮತ್ತು 'ಕೊಟ್ರೇಶಿ ಕನಸು'ಗಳ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ನಾಗತಿಹಳ್ಳಿಯವರ ಸಿನಿಮಾಜೀವನದಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಮುಖ್ಯವಾದ ಈ ಎರಡು ಸಿನಿಮಾಗಳು, ಮಧುರಸ್ವಪ್ನಗಳನ್ನು ನೆನಪಿಸುವಂತೆ ಈಗ ಕೃತಿರೂಪದಲ್ಲಿ ಸಹೃದಯರ ಮುಂದಿವೆ.

'ಕಾದಂಬರಿಯನ್ನು ಚಿತ್ರಕಥೆ ಯಾಗಿಸುವುದು ಹೇಗೆ?' ಎನ್ನುವ 'ಕೊಟ್ರೇಶಿ ಕನಸು' ಕೃತಿಯ ಅಡಿ ಟಿಪ್ಪಣಿ ಹಾಗೂ 'ನೈಜ ಘಟನೆಯನ್ನು ಚಿತ್ರಕಥೆಯಾಗಿಸುವುದು ಹೇಗೆ?' ಎನ್ನುವ 'ಅಮೃತಧಾರೆ' ಪುಸ್ತಕದ ವಿಶೇಷಣ, ಈ ಸಿನಿಮಾ ಪುಸ್ತಕಗಳು ಸಿನಿಮಾ ವಿದ್ಯಾರ್ಥಿಗಳಿಗೆ ಉಪಯುಕ್ತ ಎನ್ನುವುದನ್ನು ಹೇಳುವಂತಿವೆ. ಕನ್ನಡದಲ್ಲಿ ಸಿನಿಮಾ ಪಠ್ಯಗಳು ಅಪರೂಪವಾಗಿರುವ ಹಿನ್ನೆಲೆಯಲ್ಲಿ, ಈ ಕೃತಿಗಳು ಚಲನಚಿತ್ರದ ವ್ಯಾಕರಣ ಮತ್ತು ಬರವಣಿಗೆಯನ್ನು ತಿಳಿಯಬಯಸುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿವೆ.

ಒಳನೋಟ

ಸಿನಿಮಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸಾಮಾನ್ಯ ಓದುಗರಿಗೂ ನಾಟಕ ಕಥನದ ರೂಪದಲ್ಲಿ ನಾಗತಿಹಳ್ಳಿಯವರ ಸಿನಿಮಾ ಕಥನದ ಕೃತಿಗಳು ಇಷ್ಟವಾಗುವಂತಿವೆ. 'ಅಮೃತಧಾರೆ' ಸಿನಿಮಾ, ಬದುಕಿನ ಬಗ್ಗೆ ಆಸೆ ಹುಟ್ಟಿಸುವ ಪ್ರೇಮ ಹಾಗೂ ಅನಿವಾರ್ಯ ವಾಸ್ತವವಾದ ಸಾವನ್ನು ಎದುರುಗೊಳ್ಳುವ ದಿಟ್ಟ ಹೆಣ್ಣು ಹಾಗೂ ಆಕೆಯ ಸಂಗಾತಿಯ ಕಥೆ. ಒಲವಿನ ಅಮೃತಧಾರೆಯನ್ನು ಸಹೃದಯರಿಗೆ ಉಣಬಡಿಸಿದ ಈ ಸಿನಿಮಾ ಕನ್ನಡ ಸಿನಿಮಾ ಪರಂಪರೆಯ ಸುಂದರ ಹಾಗೂ ಅರ್ಥಪೂರ್ಣ ಪ್ರೇಮಕಥೆಗಳಲ್ಲೊಂದು. 'ಕೊಟ್ರೇಶಿ ಕನಸು' ಚಿತ್ರದ ಆಶಯ ಭಿನ್ನವಾದುದು. ದಲಿತ ಹುಡುಗನೊಬ್ಬನ ಅಕ್ಷರ ಆಕಾಂಕ್ಷೆ ಹಾಗೂ ಅದಕ್ಕೆ ಎದುರಾಗುವ ಅಡೆತಡೆಗಳನ್ನು 'ಕೊಟ್ರೇಶಿ ಕನಸು' ಸೊಗಸಾಗಿ ಚಿತ್ರಿಸಿದೆ. ಕುಂ. ವೀರಭದ್ರಪ್ಪನವರ ಕಥನ ಆಧರಿಸಿದ ಈ ಸಿನಿಮಾ, ಶಿಕ್ಷಣದ ಮೂಲಕ ದಲಿತವರ್ಗ ಸಾಧಿಸಿಕೊಳ್ಳಬಹುದಾದ ವಿಮೋಚನೆಯ ಸಾಧ್ಯತೆಯನ್ನು ಸಹೃದಯರ ಮುಂದಿಡುತ್ತದೆ.

ಎಲ್ಲರಿಗೂ ಬೇಕಾದ ಪ್ರೇಮ ಹಾಗೂ ಸಮಾಜದ ಆರೋಗ್ಯಕ್ಕೆ ಬೇಕಾದ ಮಾನವೀಯ ಸ್ಪಂದನವನ್ನು ನಾಗತಿಹಳ್ಳಿಯವರ ಈ ಎರಡು ಸಿನಿಮಾಗಳು ನಮ್ಮ ಮುಂದಿಡುತ್ತವೆ. ಪ್ರೇಕ್ಷಕರೂ ಇಷ್ಟಪಟ್ಟ ಹಾಗೂ ಪ್ರಶಸ್ತಿ ಪುರಸ್ಕಾರಗಳನ್ನೂ ಗಳಿಸಿದ ಈ ಸಿನಿಮಾಗಳನ್ನು ಮತ್ತೆ ನೆನಪಿಸಿಕೊಳ್ಳಲು ಪ್ರಸಕ್ತ ಪುಸ್ತಕಗಳು ಅವಕಾಶ ಕಲ್ಪಿಸಿವೆ. ಬರಹರೂಪದ ಕಥನ ದೃಶ್ಯರೂಪ ತಳೆದಾಗ ಪಡೆಯುವ ಹೊಸ ಬಣ್ಣಗಳನ್ನು ಅರಿಯುವುದಕ್ಕೂ ಈ ಪುಸ್ತಕಗಳು ಉಪಯುಕ್ತ.

ಆಯಾ ಸಿನಿಮಾಗಳಿಗೆ ಬಂದ ಪತ್ರಿಕಾ ವಿಮರ್ಶೆಗಳು ಹಾಗೂ ಸಿನಿಮಾದ ಛಾಯಾಚಿತ್ರಗಳನ್ನು ಪುಸ್ತಕಗಳ ಕೊನೆಯಲ್ಲಿ ನೀಡಲಾಗಿದೆ. 'ಕೊಟ್ರೇಶಿ ಕನಸು' ಕೃತಿಯ ಕೊನೆಯಲ್ಲಿ, ಆ ಚಿತ್ರಕ್ಕೆ ಪ್ರೇರಕಶಕ್ತಿಯಾದ ಸಿ. ಅಶ್ವತ್ಥ್‌ರ ಬಗೆಗಿನ ಬರಹ ಆಪ್ತವಾಗಿದೆ.

'...ಈಗ ನಿಮ್ಮ ಮೆಚ್ಚಿನ ಚಿತ್ರಗೀತೆಗಳು' ಕೃತಿ ನಾಗತಿಹಳ್ಳಿ ಅವರು ತಮ್ಮ ಸಿನಿಮಾಗಳಿಗೆ ಹಾಗೂ ಬೇರೆಯವರ ಸಿನಿಮಾಗಳಿಗಾಗಿ ಬರೆದ ಗೀತೆಗಳ ಸಂಕಲನ. ಸಿನಿಮಾ ಮಾತ್ರವಲ್ಲದೆ, ಬೇರೆ ಬೇರೆ ಕಾರಣಗಳಿಗಾಗಿ ಬರೆದ ಕೆಲವು ಗೀತೆಗಳೂ ಇಲ್ಲಿವೆ. ಬರೀ ಗೀತೆಗಳ ಸಂಕಲನವಾಗಿದ್ದರೆ, ಇದು ಸಿನಿಮಾದ ಹಾಡಿನ ಪುಸ್ತಕಗಳ ಸಾಲಿಗೆ ಸೇರುತ್ತಿತ್ತು. ಆದರೆ, ಹಾಡಿಗೆ ಸಂಬಂಧಿಸಿದ ವಿವರ-ವಿಶೇಷಗಳ ಟಿಪ್ಪಣಿಗಳೂ ಇರುವುದು ಈ ಕೃತಿಗೆ ಹೊಸ ರೂಪು ತಂದುಕೊಟ್ಟಿದೆ.

ಕವಿತೆ ಬರೆಯುವುದು ಹೇಗೆ ಎಂದು ಸಾಹಿತ್ಯದ ವಿದ್ಯಾರ್ಥಿಗಳಿಗೆ ಕಮ್ಮಟ ಮಾಡಿದಂತೆ, ಸಿನಿಮಾ ಸಾಹಿತಿಗಳಿಗೆ 'ಚಿತ್ರಗೀತೆ ಬರೆಯುವುದು ಹೇಗೆ?' ಎನ್ನುವ ಪ್ರಶ್ನೆಗೆ ಉತ್ತರದ ರೂಪದಲ್ಲಿ ಈ ಕೃತಿಯನ್ನು ಗಮನಿಸಬಹುದು.

ಹೊಸ ತಲೆಮಾರಿನ ತರುಣ ತರುಣಿಯರು ದೊಡ್ಡ ಸಂಖ್ಯೆಯಲ್ಲಿ ದೃಶ್ಯ ಮಾಧ್ಯಮದತ್ತ ಆಕರ್ಷಿತರಾಗುತ್ತಿದ್ದಾರೆ. ಆದರೆ, ಅವರಿಗೆ ಕನ್ನಡ ಸಿನಿಮಾಪಠ್ಯಗಳು ಬರವಣಿಗೆಯ ರೂಪದಲ್ಲಿ ದೊರೆಯುವುದು ತುಂಬಾ ಕಡಿಮೆ. ಈ ಕೊರತೆಯನ್ನು ಸ್ವಲ್ಪಮಟ್ಟಿಗೆ ನೀಗಿಸುವ ದೃಷ್ಟಿಯಿಂದ ನಾಗತಿಹಳ್ಳಿಯವರ ಮೂರೂ ಕೃತಿಗಳಿಗೆ ಮಹತ್ವವಿದೆ. ಸಿನಿಮಾ ದಿನಗಳಿಗೆ ಮುನ್ನ ಉಪನ್ಯಾಸಕರಾಗಿದ್ದ, ಈಗ 'ಟೆಂಟ್ ಶಾಲೆ'ಯ ಮೂಲಕ ಸಿನಿಮಾ ವ್ಯಾಕರಣ ಕಲಿಸುತ್ತಿರುವ ನಾಗತಿಹಳ್ಳಿಯವರ ಮೇಷ್ಟ್ರ ಮನಸ್ಸನ್ನು ಈ ಕೃತಿಗಳ ಹಿನ್ನೆಲೆಯಲ್ಲಿ ಕಾಣಬಹುದು. ❖

ಡಾ. ಲಕ್ಷ್ಮಣ ವಿ.ಎ. ಬರೆದ ಕಥೆ ವಾರ್ ರೂಂ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ನಿಂಗಪ್ಪ ಮುದೇನೂರು ಬರೆದ ಕವಿತೆ ಅಂಬೇಡ್ಕರ್ ಬಂದ...
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

'ಸಂಗೀತ ಸೇವೆ ಮಾಡಿದ ತೃಪ್ತಿ ನನಗೆ

ಚಿನ್ಮಯ ಭಟ್ಟ /ಸಚ್ಚಿದಾನಂದ ಹೆಗಡೆ

ಸಂದರ್ಶನ

ಭಾರತೀಯ ಶಾಸ್ತ್ರೀಯ ಸಂಗೀತದ ಸಂಘಟನೆಯ ಕ್ಷೇತ್ರದಲ್ಲಿ ಬೆಂಗಳೂರಿನ 'ಸಪ್ತಕ' ಸಂಸ್ಥೆಯ ಕೊಡುಗೆ ಬಹಳ ಮಹತ್ವದ್ದು. ಇಲ್ಲಿಯವರೆಗೆ ಸಪ್ತಕ 1800ಕ್ಕೂ ಹೆಚ್ಚು ಕಲಾವಿದರಿಗೆ ವೇದಿಕೆ ಕಲ್ಪಿಸಿದೆ. ಅಷ್ಟೇ ಅಲ್ಲದೆ, ಸಂಗೀತ ಶಾಲೆಗಳಿಗೆ ಸಂಗೀತ ಉಪಕರಣ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿದೆ. ಕೊರೊನಾ ಸಂಕಷ್ಟದ ಸಮಯದಲ್ಲಿ ಕಲಾವಿದರಿಗೆ ಆರ್ಥಿಕ ನೆರವನ್ನೂ ನೀಡಿದೆ. ಜಿ.ಎಸ್. ಹೆಗಡೆಯವರೇ ಸಪ್ತಕದ ಈ ದೊಡ್ಡ ಸಾಹಸದ ಹಿಂದಿನ ಶಕ್ತಿ. ಅವರೊಂದಿಗೆ ಒಂದು ಮಾತುಕತೆ ಇಲ್ಲಿದೆ:

- **ಸಂಗೀತದ ಒಲವು ನಿಮ್ಮಲ್ಲಿ ಬೆಳೆದಿದ್ದು ಹೇಗೆ?**

ಬಾಲ್ಯದಲ್ಲಿಯೇ ನನಗೆ ಸಂಗೀತದ ಪರಿಚಯವಾಯಿತು. ಭಜನಾ ಕಾರ್ಯಕ್ರಮಗಳು ಅದಕ್ಕೆ ನೆರವಾದವು. ಅಂದು ನಮ್ಮ ಇಡೀ ಜಿಲ್ಲೆಯಲ್ಲಿ ಯಕ್ಷಗಾನ ಬಿಟ್ಟರೆ ಸಾಂಸ್ಕೃತಿಕವಾಗಿ ಒಗ್ಗೂಡುವಂತಹ, ಸಂತೋಷ ಕೊಡುವಂತಹ ಇನ್ನೊಂದು ವೇದಿಕೆ ಅಂದರೆ ಭಜನೆ ಸಪ್ತಾಹ. ಕೆರೆಮನೆ ಮಹಾಬಲ ಹೆಗಡೆ, ಗಜಾನನ ಹೆಗಡೆ, ಗಜಾನನ ಯಾಜಿ ಇಡಗುಂಜಿ, ಕೋಣಾರ ರಾಮ ಮಾಸ್ತರ ಹೀಗೆ ಹಲವಾರು ವಿಶೇಷ ವ್ಯಕ್ತಿಗಳು ಬಂದು ಹಾಡುವಾಗ ನಮಗೆ ತುಂಬಾ ಸುಖ ಅನಿಸುತ್ತಿತ್ತು. ಅದೆಲ್ಲಾ ಕೇಳ್ತಾ ಕೇಳ್ತಾ ಬೆಳೀತಾ ಇರುವಾಗ್ಲೇ ನನಗೆ ಶಾಸ್ತ್ರೀಯ ಸಂಗೀತದ ರಾಗದ ಚಲನೆ, ಸ್ವರದ ಆಟ ಎಲ್ಲ ತುಂಬಾ ಗುಂಗು ಹಿಡಿಸಿದವು. ಹಾಗೇ ಆ ಹುಚ್ಚು ಬೆಳೀತಾ ಹೋಯಿತು.

- **ಸಪ್ತಕ ಹೇಗೆ ಪ್ರಾರಂಭ ಆಯಿತು? ಸಂಗೀತ ಸಂಘಟನೆಯ ಅನುಭವದ ಕುರಿತು ಹೇಳುವಿರಾ?**

ನಾನು ಕರ್ನಾಟಕ ಬ್ಯಾಂಕ್ ಉದ್ಯೋಗಿಯಾಗಿದ್ದೆ. ಗೋಕರ್ಣ, ಹುಬ್ಬಳ್ಳಿ-ಧಾರವಾಡ, ಹಾವೇರಿಯಲ್ಲಿ ಕೆಲಸ ಮಾಡಿದೆ. ಬೆಂಗಳೂರಿಗೆ ನಾನು ಬಂದಿದ್ದು 1989ನೇ ಇಸವಿಯಲ್ಲಿ. ಆಗ ವಿನಾಯಕ ತೊರವಿಯವರು ಗುರುರಾವ ದೇಶಪಾಂಡೆ ಸಂಗೀತ ಸಭಾ ಅಂತ ಒಂದು ಸಂಸ್ಥೆ ಆರಂಭಿಸಿದ್ದರು. ವರ್ಷಕ್ಕೊಂದು ಅಹೋರಾತ್ರಿ ಕಾರ್ಯಕ್ರಮ ಮಾಡ್ತಿದ್ರು. ತೊರವಿಯವರು ಸಂಸ್ಥೆಯನ್ನು ನೋಂದಣಿ ಮಾಡಿ ಒಂದು ಟ್ರಸ್ಟ್ ಮಾಡಬೇಕು ಅಂತ ಹೇಳಿದರು. ನಾನೇ ಆ ಟ್ರಸ್ಟ್‌ನ ಡೀಡ್ ತಯಾರು ಮಾಡಿದ್ದೆ. ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ಹೊರುತ್ತಿದ್ದೆ. ಅನಿವಾರ್ಯ ಕಾರಣದಿಂದ ಸಂಘಟನೆ ಬಿಟ್ಟು ಹೊರಬರಬೇಕಾಯಿತು.

ನೀವು ಇಷ್ಟು ವರ್ಷ ಕೆಲಸ ಮಾಡಿದಿರಿ, ಒಂದು ಸಂಘಟನೆ ಮಾಡ್ಬಿಡಿ ಅಂತ ಎಲ್ಲರೂ ಹೇಳತೊಡಗಿದರು. ಹಾಗೇ ನಾನು ಈ ಸಪ್ತಕವನ್ನು 2006ರ ಮೇ 5ನೇ ತಾರೀಖಿಗೆ ಪ್ರಾರಂಭ ಮಾಡಿದೆ. ಸಪ್ತಕ ಶುರು ಮಾಡುವಾಗ ನನಗೆ 55 ವರ್ಷ. ನನಗೀಗ 70. ಅಷ್ಟೂ ವರ್ಷದ ಅನುಭವದ ಒಂದು ಗಟ್ಟಿ ಆಧಾರದ ಮೇಲೆ ಸಂಸ್ಥೆ ಬೆಳೆದಿದೆ.

ನನ್ನ ಒಂದು ಸಂಘಟನಾತ್ಮಕ ಶಕ್ತಿಗೆ ಮೆಚ್ಚಿಯೇ ಇರಬೇಕು ಬೇರೆ ರಾಜ್ಯದಿಂದ ಬಂದಂತಹ ಕಲಾವಿದರು ಮತ್ತು ಅವರ ತಂಡ ಅಥವಾ ಬೇರೆ ರಾಜ್ಯದ ಸಂಸ್ಥೆಗಳು ಬೆಂಗಳೂರಿನಲ್ಲಿ ಕಾರ್ಯಕ್ರಮ ಮಾಡಬೇಕೆಂದರೆ ಸಪ್ತಕದೊಟ್ಟಿಗೆ ಮಾಡಬೇಕೆಂದು ಬಂದವು. ಉತ್ತರ ಕನ್ನಡದಲ್ಲೂ ಕಾರ್ಯಕ್ರಮ ಮಾಡಿದೆ. ಆಮೇಲೆ ದಕ್ಷಿಣ ಕನ್ನಡ, ಉಡುಪಿ, ಧಾರವಾಡ ಹೀಗೆ ಬೆಳೀತಾ ಹೋಯಿತು. ಮುಂಬೈಗೆ ಹೋಗಿನೂ ಕಾರ್ಯಕ್ರಮ ಆಯಿತು. ನಂತರ ಹೈದರಾಬಾದಿನಲ್ಲೂ ಕಾರ್ಯಕ್ರಮ ಆಯಿತು. ಸಪ್ತಕದ ಕಾರ್ಯಕ್ರಮದ ಪ್ರಾರಂಭದಲ್ಲಿ ಮೊದಲು ಒಬ್ಬ ಕಿರಿಯ ಕಲಾವಿದರಿಗೆ ಅವಕಾಶ ನಂತರ ಹಿರಿಯರಿಗೆ. ಇದರಿಂದ ಎಲ್ಲರೂ ಬೆಳೆಯಲು ಸಾಧ್ಯವಾಯಿತು ಎನ್ನುವ ಸಮಾಧಾನ ನನಗೆ.

- **ಕಾಲ ಕಳೆದಂತೆ ಶ್ರೋತೃವಿನ ಜವಾಬ್ದಾರಿ ಕಡಿಮೆ ಆಯಿತೇ?**

ಉಚಿತ ಕಛೇರಿಗಳ ಕಾರಣಕ್ಕಾಗಿ ಶ್ರೋತೃವಿನ ಜವಾಬ್ದಾರಿ ಖಂಡಿತ ಕಡಿಮೆ ಆಗಿರಬಹುದು, ಆದರೆ ನನ್ನ ತಿಳಿವಳಿಕೆಯ ಮಟ್ಟಿಗೆ ಪ್ರೇಕ್ಷಕ ಯಾವ ಊರಿನವನು, ಯಾವ ಕ್ಷೇತ್ರದವನು ಎನ್ನುವುದರ ಮೇಲೆ ಹೋಗುತ್ತದೆ. ಮಹಾರಾಷ್ಟ್ರ ಹಾಗೂ ಬಹಳ ಕಡೆ ಟಿಕೆಟ್ ಇಟ್ಟೇ ಕಾರ್ಯಕ್ರಮ ನಡೆಸಲಾಗುತ್ತದೆ. ನಮ್ಮಲ್ಲಿ ಯಾಕೆ ತಪ್ಪಿಹೋಯಿತು? ದೊಡ್ಡ ಕಾರ್ಯಕ್ರಮಗಳಿಗೆ ಮಾತ್ರ ಟಿಕೆಟ್ ಇರುತ್ತದೆ. ತೊರವಿಯವರ ಸಂಗಡ ಮಾಡಿದ ಅಹೋರಾತ್ರಿ ಕಾರ್ಯಕ್ರಮದಲ್ಲಿ ಶ್ರೋತೃಗಳಿಗೆ ಒಮ್ಮೆ ಮೂರು ಸಲ ಚಹಾ ಕೊಟ್ಟಿದ್ವಿ. ನಿದ್ದೆಯನ್ನು ಓಡಿಸಲು ಈ ವ್ಯವಸ್ಥೆ ಮಾಡಿದ್ದೆವು. ಶ್ರೋತೃಗಳು ಕಾರ್ಯಕ್ರಮ ಆಯೋಜನೆಯ ಹೊಣೆ ಹೊತ್ತರೆ ಸಂಘಟಕರ ಕೆಲಸ ಸಲೀಸಾಗುತ್ತದೆ.

- **ಸಂಗೀತದ ಗುಣಮಟ್ಟದಲ್ಲಿ ಯಾವ ರೀತಿಯ ಬದಲಾವಣೆ ಕಂಡಿದ್ದೀರಿ?**

ಸಂಗೀತದ ಗುಣಮಟ್ಟದ ಬಗ್ಗೆ ನಾನು ಹೆಚ್ಚು ವಿಮರ್ಶೆಗೆ ಹೋಗುವುದಿಲ್ಲ. ಶುದ್ಧ ಶಾಸ್ತ್ರೀಯ ಸಂಗೀತ, ರಾಗಬದ್ಧ ಸಂಗೀತ, ರಾಗದಾರ ಸಂಗೀತ, ಸ್ವರ, ಲಯ, ತಾಳ ಇವೆಲ್ಲ ಇರಲೇಬೇಕು. ಒಂದು ರಾಗದ ಹಾಡುವಿಕೆಯೂ ಒಬ್ಬ ಕಲಾವಿದನಿಂದ ಇನ್ನೊಬ್ಬ ಕಲಾವಿದನಿಗೆ ಬೇರೆ ಆಗುತ್ತದೆ. ಇನ್ನು ಬೆಳವಣಿಗೆಯ ಬಗ್ಗೆ ಹೇಳುವುದಿದ್ದರೆ ಈಗಿನ ಯುವಕಲಾವಿದರು ಸ್ವಲ್ಪ ಹಿಂದೆ ಅಂತ ಹೇಳಬಹುದು.

ಶಾಸ್ತ್ರೀಯ ಸಂಗೀತಕ್ಕೆ ಸಿಗುವಂತಹ ಅವಕಾಶಗಳೂ ತುಂಬಾ ಕಡಿಮೆ. ಈಗಿನ ಹೊಸಬರಿಗೆ ಪ್ರೋಗ್ರಾಮುಗಳೂ ಅಷ್ಟು ಸಿಗುವುದಿಲ್ಲ. ಶಾಸ್ತ್ರೀಯ ಸಂಗೀತ ಬೆಳೆಯಲು ಬೇಕಾಗುವಂತಹ ಪೂರಕವಾದ ವಾತಾವರಣ ಬಹಳ ಕಡಿಮೆಯಿದೆ. ಏಕೆಂದರೆ ಅವರಿಗೆ ಬೇಕಾಗುವಂತಹ ಪ್ರೋತ್ಸಾಹ, ಸ್ಕಾಲರ್‌ಶಿಪ್, ಸಂಗೀತದ ಉಪಕರಣ, ಯಾವುದೋ ರೀತಿಯಲ್ಲಿ ಸಮಾಜದಿಂದಲೋ ಸರ್ಕಾರದಿಂದಲೋ ಅವರಿಗೆ ನಿಗದಿತವಾಗಿ ಸಿಗುತ್ತದೆ ಅಂತಾದರೆ ಆಗ ತೊಡಗಿಸಿಕೊಳ್ಳಲು ಹೆಚ್ಚಿನ ಕಷ್ಟವಾಗುವುದಿಲ್ಲ.

- **ಸಂಗೀತ ಕಲಾವಿದರಿಗೆ ಆದಾಯ ಸಿಗುತ್ತಿದೆಯೇ?**

ಸಂಗೀತಗಾರ ಆರ್ಥಿಕವಾಗಿ ಒಂದು ಥರ ಸಬಲನಾಗುತ್ತಾ ಇರುವುದು ಹೌದು, ಅದು ಅವಶ್ಯವೂ ಹೌದು. ಏಕೆಂದರೆ ಅವನಿಗೆ ಒಂದು ಕಡೆಯಿಂದ ಸಮಾಧಾನ ಬೇಕಾಗುತ್ತದಲ್ಲ. ಒಂದು ಕಾಲದಲ್ಲಿ ಸಂಗೀತಗಾರ ಸಂಗೀತದ ಒಂದು ವೈಶಿಷ್ಟ್ಯಕ್ಕೆ ಮಾರುಹೋಗಿ ಹಾಡಿದ್ದೇ ಬಿಟ್ಟರೆ ತನಗೆ ಬಡತನ ಇದೆ, ಹಾಡಲು ಬರುತ್ತದೆ, ಹಾಡಿದರೆ ಹಣ ಮಾಡಬಹುದು ಎಂದು ಹಾಡುವುದಿಲ್ಲವಾಗಿತ್ತು. ಈಗ ಹಾಡಿದ್ದಕ್ಕೆ ದುಡ್ಡು ಬರುತ್ತದೆ ಎನ್ನುವುದು ಒಂದು ಪ್ಲಸ್ ಪಾಯಿಂಟ್ ಆಗಿದೆಯೇ ವಿನಾ ಸಾಧನೆಗೆ ಅದು ಅಡ್ಡಿ ಬರುವುದಿಲ್ಲ. ಆದರೆ, ಸಂಗೀತಗಾರ ಏನಾದರೂ ಹಾಡಿ ದುಡ್ಡು ಮಾಡುತ್ತಾನೆ ಎನ್ನುವುದು ಶಾಸ್ತ್ರೀಯ ಸಂಗೀತದಲ್ಲಿ ಇವತ್ತಿಗೂ ಸಾಧ್ಯವಿಲ್ಲ. ❖


ಜಿ.ಎಸ್. ಹೆಗಡೆ

'ಗೋಕರ್ಣದಲ್ಲಿ ಮನ್ಸೂರರಿಂದ ಹಾಡಿಸಿದ್ದೆವು'

ನಾನು ಗೋಕರ್ಣದಲ್ಲಿದ್ದಾಗ ಆದ ಒಂದೆರಡು ಕಥೆ ಹೇಳುತ್ತೇನೆ. ಅಂದರೆ ಆ ಸಂಗೀತ ನಡೆಯಬೇಕು ಎನ್ನುವ ಉದ್ದೇಶ ಹೇಗಿತ್ತು ಅಂದರೆ ಅಲ್ಲಿದ್ದಂತಹ ಇತಿಮಿತಿಯಲ್ಲಿ, ನಾವು ಗೋಕರ್ಣದಲ್ಲಿದ್ದಾಗಲೇ ಮಲ್ಲಿಕಾರ್ಜುನ ಮನ್ಸೂರರು ಯಾವುದೋ ಪೂಜೆಯ ಸಲುವಾಗಿ ಅಲ್ಲಿಗೆ ಬರುತ್ತಾರೆ ಎಂದು ತಿಳಿದು, ಕಮಲಾಕರ ಭಟ್ಟರಿಗೆ ಹೇಳಿ, ಹಿರೇಮಠ ಅವರಿಗೆ ದಮ್ಮಯ್ಯ ಹಾಕಿ, ಆ ದಿನ ಸಂಜೆ ಗೋಕರ್ಣದ ದೇವಸ್ಥಾನದ ಪೌಳಿಯ ಮೇಲೆ ಒಂದು ಕಾರ್ಯಕ್ರಮ ಮಾಡಿಸಿದ್ದೆವು. ಅಂದು ಗೌರೀಶ ಕಾಯ್ಕಿಣಿ ಅವರೆಲ್ಲ ಇದ್ದರು. ಅಂದರೆ ಗೋಕರ್ಣದಂತಹ ಏನೂ ಇಲ್ಲದೇ ಇದ್ದಲ್ಲೂ ಮಲ್ಲಿಕಾರ್ಜುನ ಮನ್ಸೂರರ ಕಾರ್ಯಕ್ರಮ ಮಾಡಿಸಿದ್ದು ನನ್ನ ಇಡೀ ಜೀವನದಲ್ಲಿ ಮರೆಯುವ ಹಾಗಿಲ್ಲ. ಬಸವರಾಜ ರಾಜಗುರು ಹಾಗೆಯೇ ಬಂದಿದ್ದರು. ಅವರ ಕಾರ್ಯಕ್ರಮವನ್ನೂ ಹೀಗೆಯೇ ಮಾಡಿಸಿದ್ದೆ. ಆಮೇಲೆ ಗಂಗೂಬಾಯಿ ಹಾನಗಲ್, ಮಾಧವ ಗುಡಿ ಅವರಿಂದ ಕಛೇರಿ ಏರ್ಪಡಿಸಿದ್ದೆವು.

ಧರ್ಮ-ರಾಜಕಾರಣಗಳ ಅಪವಿತ್ರ ಮೈತ್ರಿಯ ದುರಂತ

ಮೊದಲ ಓದು

ಧರ್ಮ ಯುದ್ಧ
ಲೇ: ಡಾ. ನಾ. ಮೊಗಸಾಲೆ
ಪ್ರ: ಮನೋಹರ ಗ್ರಂಥಮಾಲ
ಸಂ: 08362441823

ಪು: 232 ₹230

ಸಂಘಟನೆ, ಕಾವ್ಯ, ಕಥೆ-ಕಾದಂಬರಿಗಳು ಹೀಗೆ ಹಲವು ಮುಖಗಳಲ್ಲಿ ತಮ್ಮ ಸೃಜನಶೀಲತೆಯನ್ನು ಸಫಲವಾಗಿ ಹರಿಸುತ್ತಿರುವ ಡಾ. ನಾ. ಮೊಗಸಾಲೆ ಅವರ ಹೊಸ ಕಾದಂಬರಿ 'ಧರ್ಮ ಯುದ್ಧ'. ಕಾದಂಬರಿ ಪ್ರಕಾರ ಅವರಿಗೆ ಹೊಸದೇನೂ ಅಲ್ಲ; ಇಪ್ಪತ್ತಕ್ಕಿಂತ ಅಧಿಕ ಕಾದಂಬರಿಗಳನ್ನು ಅವರು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ.

ಕರಾವಳಿಯ ಒಂದು ಸಾಮಾನ್ಯ ಊರಿನಲ್ಲಿ ನಡೆಯುವ ಸಾಮಾನ್ಯ ಕಥನದ ಹಾಗೆ ಕಾಣುವ ಈ ಕಾದಂಬರಿಗೆ, ನಂಬಲಸಾಧ್ಯವಾಗಿ ಜಾಗತಿಕಪ್ರಪಂಚದಲ್ಲಿ ನಡೆಯುತ್ತಿರುವ ಹಲವು ಪಲ್ಲಟಗಳನ್ನು, ಮನುಷ್ಯಸಂಕಟದ ಮೂಲಗಳನ್ನು ಕಾಣಿಸುವ ಸುಪ್ತ ಉದ್ದೇಶವೂ ಇದ್ದಂತಿದೆ. ಬಾವಿಯಲ್ಲಿ ಒಂದು ತಿಂಗಳ ಅಂತರದಲ್ಲಿಯೇ ಮೂರು ಕರಿ ಬೆಕ್ಕುಗಳು ಬಿದ್ದು ಸಾಯುವ ಒಂದು ಸಣ್ಣ ಘಟನೆಯ ಮೂಲಕ ಈ ಕಥನದ ಪದರಗಳು ತೆರೆದುಕೊಳ್ಳುತ್ತ ಹೋಗುತ್ತವೆ.

ನಂತರ ಅದು ಊರು, ಧರ್ಮ, ರಾಜಕೀಯ, ಮೂಢನಂಬಿಕೆಗಳು, ಸಣ್ಣತನಗಳು, ದುಷ್ಟತನಗಳು, ಪ್ರಾಮಾಣಿಕತೆ, ನಂಬಿಕೆ, ಅಮಾಯಕ ಮನಸ್ಸುಗಳು... ಹೀಗೆ ಬೇರೆ ಬೇರೆ ರೀತಿಯಲ್ಲಿ ಬಿಚ್ಚಿಕೊಳ್ಳುತ್ತ ಬೆಳೆಯುತ್ತದೆ. ಕೊನೆಗೆ ನಿಜವಾಗಿ ಬಾವಿಯಲ್ಲಿ ಬಿದ್ದ ಬೆಕ್ಕುಗಳು ಮನುಷ್ಯಕುಲದ ದುರಂತವನ್ನೇ ಸೂಚಿಸುವ ಅಪಶಕುನವೇ ಅನ್ನಿಸುವವರೆಗೂ ಹೋಗುತ್ತದೆ. ಇದು ಬರೀ ಮೂಢನಂಬಿಕೆಯ ಪರಿಭಾಷೆಯ ಅಪಶಕುನವಲ್ಲ. ಧರ್ಮ, ನೈತಿಕತೆ, ಮಾನವೀಯತೆ, ಮೌಲ್ಯಗಳು, ಸಹಜೀವನದ ತತ್ವಗಳನ್ನು ಅಪಭ್ರಂಶಗೊಳಿಸಿ, ಸ್ವಾರ್ಥದ ನಖವನ್ನು ಬಿಚ್ಚಿ ಕುಣಿಯುತ್ತಿರುವ ಮನುಷ್ಯ ತಾನೇ ತಂದುಕೊಳ್ಳುತ್ತಿರುವ ದುರಂತದ ಸೂಚಕ.

ಧರ್ಮ ಮತ್ತು ರಾಜಕೀಯದ ನಡುವಿನ ವ್ಯತ್ಯಾಸವನ್ನು ಮರೆತ ಕಾಲವಿದು. ಈ ಎರಡರ ಅಪವಿತ್ರ ಸಂಯೋಗದ ಫಲವನ್ನು ನಾನಾರೂಪದಲ್ಲಿ ನಾವು ಕಾಣುತ್ತಲೇ ಇದ್ದೇವೆ. ಈ ಕಾದಂಬರಿಯ ಸೀತಾಪುರದಲ್ಲಿ ನಡೆಯುವುದೂ ಇದೇ. ಮನುಷ್ಯನನ್ನು ಪೊರೆಯಬೇಕಾಗಿದ್ದ ಧರ್ಮ, ಅಪಭ್ರಂಶಗೊಂಡಾಗ ಅವನ ಬದುಕನ್ನೇ ಉರಿಸುತ್ತದೆ. ಈ ಉರಿಯಲ್ಲಿ ನಾಶವಾಗುವುದು ಬರೀ ಮನುಷ್ಯನಲ್ಲ, ಪ್ರಕೃತಿಯೂ ಹೌದು. ಉದ್ಧಾರದ ಮುಖವಾಡ ಹೊತ್ತು ಸರ್ವನಾಶದ ವಿಷವನ್ನು ಮುಷ್ಟಿಯಲ್ಲಿಟ್ಟುಕೊಂಡಿರುವ ನಮ್ಮ ರಾಜಕೀಯ ಮತ್ತು ಕಾರ್ಪೊರೇಟ್ ಪ್ರಭುಗಳ ಪಿತೂರಿಗೂ ಈ ಕಾದಂಬರಿಯಲ್ಲಿ ಪಂಜುರ್ಲಿಗುಡ್ಡದ ಜೀರ್ಣೋದ್ಧಾರದ ರೂಪದಲ್ಲಿ ನಡೆಯುವ ಕಪಟನಾಟಕಗಳಿಗೂ ವ್ಯತ್ಯಾಸ ಬಹಳವಿಲ್ಲ.

'ಧರ್ಮಯುದ್ಧ' ಎಂಬ ಶಬ್ದ ಕೇಳಿದ ತಕ್ಷಣವೇ ಒಂದು ಸಮುದಾಯ, ಒಂದಿಷ್ಟು ಘಟನೆಗಳನ್ನು ಮನಸ್ಸಲ್ಲಿ ಮೂಡಿಸಿಕೊಂಡುಬಿಡುವ ವಿಕ್ಷಿಪ್ತ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮೆಲ್ಲರ ಮನಸ್ಸೊಳಗೆ ಸ್ಥಾಪನೆಗೊಳಿಸಿರುವ ಆ ವಿಕೃತ ಚಿತ್ರವನ್ನೂ ಸಶಕ್ತವಾಗಿ ಒಡೆಯುತ್ತದೆ ಎಂಬುದೂ ಈ ಕಾದಂಬರಿ ಸಾಧಿಸುವ ಮುಖ್ಯವಾದ ಉದ್ದೇಶಗಳಲ್ಲೊಂದು. ❖

ಮೊಸಾದ್ ಸಾಹಸದ ಕಥೆ

ಇಸ್ರೇಲ್‌ನ ಗುಪ್ತಚರ ಸಂಸ್ಥೆಯ ಸಾಹಸ ಬಲುದೊಡ್ಡದು. ಅಡಾಲ್ಫ್ ಹಿಟ್ಲರ್‌ನ ನೆಚ್ಚಿನ ಬಂಟನಾಗಿದ್ದ ನಾಜಿ ಸೇನೆಯ ಅಡಾಲ್ಫ್ ಐಷ್ಮನ್‌ನನ್ನು 1960ರಲ್ಲಿ ಸೆರೆ ಹಿಡಿದು ತಂದಿದ್ದು ಇದೇ ಮೊಸಾದ್ ಪಡೆ. ಇಸ್ರೇಲ್ ಕೋರ್ಟ್‌ನಲ್ಲಿ ವಿಚಾರಣೆ ನಡೆದು ಕೊನೆಗೆ ಆತನಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಲಾಯಿತು. 1972ರ ಮ್ಯೂನಿಕ್ ಒಲಿಂಪಿಕ್ ಕೂಟದಲ್ಲಿ ಪಾಲ್ಗೊಂಡಿದ್ದ ಇಸ್ರೇಲ್ ಕ್ರೀಡಾಪಟುಗಳನ್ನು ಹತ್ಯೆ ಮಾಡಿದವರ ವಿರುದ್ಧ ಸೇಡು ತೀರಿಸಿಕೊಂಡಿದ್ದು ಸಹ ಇದೇ ಪಡೆ. ಮೊಸಾದ್ ಗೂಢಚಾರರ ಇಂತಹ ರೋಚಕ ಕಾರ್ಯಾಚರಣೆಗಳ ಕಥೆಯೇ ಡಾ.ಡಿ.ವಿ. ಗುರುಪ್ರಸಾದ್ ಅವರ ಹೊಸ ಕೃತಿ 'ಪ್ರತೀಕಾರ'.



ಪ್ರತೀಕಾರ
ಲೇ: ಡಾ.ಡಿ.ವಿ.ಗುರುಪ್ರಸಾದ್
ಪ್ರ: ಸಪ್ನ
ಸಂ: 080 40114455

ಪು: 248 ₹220

ಅದು 1976ರಲ್ಲಿ ನಡೆದ ಘಟನೆ. ಟೆಲ್ ಅವಿವ್‌ನಿಂದ ಪ್ಯಾರಿಸ್‌ಗೆ ಹೊರಟಿದ್ದ ವಿಮಾನವನ್ನು ಹೈಜಾಕ್ ಮಾಡಿದ್ದ ಪ್ಯಾಲೆಸ್ಟೀನ್‌ನ ಉಗ್ರರು ಆ ವಿಮಾನದಲ್ಲಿದ್ದ ಇಸ್ರೇಲ್ ಪ್ರಜೆಗಳನ್ನು ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದರು. ಆ ವಿಮಾನ ಉಗಾಂಡಾದ ಎಂಟೆಬೆಯಲ್ಲಿ ಲ್ಯಾಂಡ್ ಆಗಿತ್ತು. ಸುಮಾರು ನಾಲ್ಕು ಸಾವಿರ ಕಿ.ಮೀ. ದೂರದಲ್ಲಿದ್ದ ಎಂಟೆಬೆಗೆ ರಾತ್ರಿ ವೇಳೆಯಲ್ಲಿ ದಾಳಿಯಿಟ್ಟ ಇಸ್ರೇಲ್ ಸೇನೆ, ಉಗ್ರರನ್ನು ಕೊಂದು, ತನ್ನ ಪ್ರಜೆಗಳನ್ನು ಸುರಕ್ಷಿತವಾಗಿ ದೇಶಕ್ಕೆ ಕರೆದೊಯ್ದಿತ್ತು. ಈ ಕಾರ್ಯಾಚರಣೆಯಲ್ಲೂ ಮೊಸಾದ್ ಮಹತ್ವದ ಪಾತ್ರ ವಹಿಸಿತ್ತು.

ತನ್ನ ಬದ್ಧ ವೈರಿ ಇರಾನ್‌ಗೆ 2018ರಲ್ಲಿ ನುಗ್ಗಿದ್ದ ಮೊಸಾದ್ ಪ್ರತಿನಿಧಿಗಳು, ಅಲ್ಲಿಂದ ಅಣುಶಕ್ತಿಗೆ ಸಂಬಂಧಿಸಿದ ರಹಸ್ಯ ದಾಖಲೆಗಳನ್ನು ಕದ್ದು ತಂದಿದ್ದರು. ಇದಲ್ಲದೆ ಆಪರೇಷನ್ ರಾತ್ ಆಫ್ ಗಾಡ್, ಆಪರೇಷನ್ ಒಪೇರಾ ಮತ್ತಿತರ ಕಾರ್ಯಾಚರಣೆಗಳ ಕಥೆಗಳು ಇಲ್ಲಿವೆ. ಪತ್ತೇದಾರಿ ಕಾದಂಬರಿಯಂತೆ ಓದಿಸಿಕೊಂಡು ಹೋಗುವ ಗುಣ ಇಲ್ಲಿಯ ಬರಹಗಳಿಗೆ ಸಿದ್ಧಿಸಿದೆ. ❖

ವರ್ತಮಾನಕ್ಕೆ ಕನ್ನಡಿ ಹಿಡಿವ ದೇವರುಗಳು

ದೇವರುಗಳಿವೆ ಎಚ್ಚರಿಕೆ!
ಲೇ: ಸಂಗಮೇಶ ಉಪಾಸೆ
ಪ್ರ: ಬೆರಗು ಪ್ರಕಾಶನ
ಸಂ: 77953 41335

ಪು: 276 ₹250

ನಾಟಕ ಕೃತಿಗಳು ಇತ್ತೀಚಿನ ದಿನಗಳಲ್ಲಿ ಕಡಿಮೆ ಆಗುತ್ತಿವೆ ಎನ್ನುವ ಕೊರಗೊಂದು ಇದೆ. ಇಂತಹ ಹೊತ್ತಿನಲ್ಲಿ 'ದೇವರುಗಳಿವೆ ಎಚ್ಚರಿಕೆ!' ಎಂಬ ವೈಚಾರಿಕ, ವೈನೋದಿಕ, ವಿಡಂಬನಾತ್ಮಕ ನಾಟಕವೊಂದು ಬಂದಿದೆ. ವಿಡಂಬನೆ, ಕವನಗಳ ಮೂಲಕ ಈಗಾಗಲೇ ಸಾಹಿತ್ಯ ಲೋಕದಲ್ಲಿ ಹೆಜ್ಜೆ ಗುರುತು ಮೂಡಿಸಿರುವ ಕೆಎಎಸ್ ಅಧಿಕಾರಿ ಸಂಗಮೇಶ ಉಪಾಸೆ ಅವರು ಬರೆದ ನಾಟಕ ಇದಾಗಿದೆ.

ತಲೆಬರಹ ನೋಡಿದ ಮಾತ್ರಕ್ಕೆ ದೇವರನ್ನು ಹೀಗಳೆಯುವುದು ಈ ನಾಟಕದ ಉದ್ದೇಶ ಎಂದು ಪರಿಭಾವಿಸಬೇಕಿಲ್ಲ. ಲೋಕಕ್ಕೆ ಒಳಿತನ್ನು ಬಯಸಿ ಧರ್ಮಮಾರ್ಗಗಳನ್ನು ತೋರಿದ ಶ್ರೀಕೃಷ್ಣ, ಬುದ್ಧ, ಮಹಾವೀರ, ಏಸುಕ್ರಿಸ್ತ, ಪೈಗಂಬರರ ಕುರಿತು ನಿವೇದಿಸುವುದು ಈ ನಾಟಕದ ಒಳಗಿನ ತಿರುಳು. ದೇವರು-ಧರ್ಮದ ಪರಿಕಲ್ಪನೆಯನ್ನು ಹಾಸ್ಯ ಲೇಪನದೊಂದಿಗೆ ಮುಂದಿಡುವ ಈ ನಾಟಕವು ವಿಚಾರ ಪ್ರಚೋದನೆಯನ್ನೂ ಮಾಡುತ್ತದೆ. ದೇವರ ಹುಡುಕಾಟದ ಲೀಲಾವಿನೋದ ವೈಶಿಷ್ಟ್ಯಪೂರ್ಣವಾಗಿ ಮೂಡಿಬಂದಿದೆ.

ಧರ್ಮ ಎನ್ನುವುದು ಅವರವರ ಮನೆಯ ಕಾಂಪೌಂಡಿನೊಳಗೆ ಇದ್ದರೆ ಚಂದ. ಸಂವಿಧಾನದ ಆಶಯ ಕೂಡ ಅದೇ ಆಗಿದೆ ಎನ್ನುವ ಲೇಖಕರು, ಭಾರತದಂತಹ ಬಹುಧರ್ಮೀಯ, ಬಹು ಭಾಷಿಕ, ಬಹು ಸಂಸ್ಕೃತಿಗಳ ದೇಶದಲ್ಲಿ ಧರ್ಮ ನಾಲ್ಕು ಗೋಡೆಗಳಿಂದ ಹೊರಬಿದ್ದರೆ ಏನೆಲ್ಲ ಅವಾಂತರ ಆಗಬಹುದು ಎನ್ನುವುದನ್ನು ನಾಟಕದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ದೇವರು-ಧರ್ಮದಂತಹ ಸೂಕ್ಷ್ಮ ವಿಚಾರಗಳನ್ನು ವಿಷಯ ವಸ್ತುವನ್ನಾಗಿ ಮಾಡಿಕೊಂಡ ಉಪಾಸೆಯವರು ನಾಟಕವನ್ನು ಅಷ್ಟೇ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ.

ಲೋಕದ ಜನರಿಗಿರುವ ಪಾಪ, ಪುಣ್ಯ, ಸ್ವರ್ಗ, ನರಕದ ಮೂಲಭೂತ ಪ್ರಶ್ನೆಗಳ ಕುರಿತು, ಕಳ್ಳಸ್ವಾಮಿ ಸುಳ್ಳಾಶ್ರಮದ ಕುರಿತು, ಕೋಮುಗಲಭೆಯ ಕುರಿತು, ಪೂಜಾರಿಗಳ ಕುರಿತು ಈ ನಾಟಕದ ಅಂಕಗಳು ಮಾತನಾಡುತ್ತವೆ. ಮಠದ ಪೀಠಾಧಿಪತಿ ಬಡಂಗ ಬಾಬಾನನ್ನು ಭಕ್ತೆಯೊಬ್ಬಳು 'ಆ ಮಠಾ ಮಣ್ಣಾಗಿಟ್ಟು, ಈ ಮಠಾ ಮುಳುಗಿಸೋಕೆ ಬಂದಿದೀಯೇನೋ ಮುತ್ತ್ಯಾ' ಎಂದು ಕೇಳುವ ಪ್ರಸಂಗ ಭಲೇ ಮಜವಾಗಿದೆ. ಸಂಭಾಷಣೆಗಳ ಚುರುಕುತನ ಗಮನಸೆಳೆಯುತ್ತದೆ. ❖

ಕತೆ ಹೇಳುತಾವ ಪಟಚಿತ್ರಗಳು

ಪಟಚಿತ್ರಗಳಲ್ಲಿ ಅರಳಿದ ಕೃಷ್ಣ ಲೀಲೆ

> ಪಟಚಿತ್ರ ಕಲಾಪ್ರಕಾರಕ್ಕೆ ಪುರಿಯ ಜಗನ್ನಾಥನೇ ಸ್ಫೂರ್ತಿ. ಈ ಕಲೆಯಲ್ಲಿ ಎಲ್ಲ ದೇವರುಗಳೂ ಅರಳಿದ್ದಾರೆ. ಪೌರಾಣಿಕ ಪ್ರಸಂಗಗಳು ಜೀವತಾಳಿವೆ. ಚಿತ್ರವೇ ಕಥೆಯನ್ನು ಹೇಳುವುದು ಈ ಕಲೆಯ ವೈಶಿಷ್ಟ್ಯ. ಒಡಿಶಾದ ರಘುರಾಜ್‌ಪುರ ಎಂಬ ಪುಟ್ಟ ಗ್ರಾಮದ ಈ ಪುರಾತನ ಕಲೆ ಜಗತ್ತಿನ ಕಲಾಪ್ರೇಮಿಗಳ ಗಮನವನ್ನೂ ಸೆಳೆದಿದೆ.

ಮಂದಾಕಿನಿ

ಅದು ಗೋಪಿಕೆಯರ ನಡುವೆ ಇರುವ ಕೃಷ್ಣನ ಒಂದು ವರ್ಣಚಿತ್ರ. ಸುತ್ತಲೂ ರಂಗೋಲಿ ರೀತಿಯಲ್ಲಿ ಕೃಷ್ಣನ 20 ಪುಟ್ಟ ಚಿತ್ರಗಳು. ಈ ಎಲ್ಲದರಲ್ಲೂ ಕೃಷ್ಣನ ಭಂಗಿ ಒಂದೇ ರೀತಿ ಇದ್ದರೂ ಬಣ್ಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ. ಇದಕ್ಕೆ ಚೌಕಾಕಾರದ ಚೌಕಟ್ಟು. ಅಕ್ಕ-ಪಕ್ಕದ ಚೌಕಟ್ಟು ಕೇವಲ ಹೂವಿನ ಬಳ್ಳಿ, ಮೇಲೆ-ಕೆಳಗೆ ಸಣ್ಣ ಚೌಕಾಕಾರದ ತಲಾ ನಾಲ್ಕು ಜಾಗಗಳಲ್ಲಿ ಶ್ರೀಕೃಷ್ಣನ ಲೀಲೆಯ ಪ್ರಸಂಗಗಳ ಚಿತ್ರಣ, ಇದರ ಮೇಲೆ ಹೂವಿನಬಳ್ಳಿಯ ಅಲಂಕಾರ.

ಹತ್ತಿರದಿಂದ ಈ ವರ್ಣಚಿತ್ರದ ವಿವರ ನೋಡಿದವರು ಅಬ್ಬಾ..! ಎಂದು ಉದ್ಗರಿಸದೆ ಇರಲು ಸಾಧ್ಯವೇ ಇಲ್ಲ, ಅಷ್ಟರ ಮಟ್ಟಿಗೆ ಕುಶಲ ಕಲೆಗಾರಿಕೆ. ಒಂದು ವರ್ಣಚಿತ್ರದಲ್ಲಿ ಅಷ್ಟೊಂದು ಮಾಹಿತಿ, ವಿವರಣೆ. ಎದ್ದು ಕಾಣುವ ಬಣ್ಣದಲ್ಲಿ ಆಕರ್ಷಕ ವಿನ್ಯಾಸದೊಂದಿಗೆ ಮೂಡುವ ಈ ಚಿತ್ರಗಳಿಗೆ ವೀಕ್ಷಕ ಎಷ್ಟೇ ದೂರದಲ್ಲಿದ್ದರೂ ಮರುಳಾಗಲೇ ಬೇಕು. ಚಿತ್ರವೇ ಕತೆಯನ್ನೂ ಹೇಳುವ ವಿಧಾನ- ಇದು ಒಡಿಶಾ ರಾಜ್ಯದ ಪುರಾತನ ಮತ್ತು ಸಾಂಪ್ರದಾಯಿಕ ಕಲೆ ಪಟಚಿತ್ರದ ಹೆಗ್ಗಳಿಕೆ. ಪಟ ಎಂದರೆ ಬಟ್ಟೆ. ಬಟ್ಟೆ ಮೇಲೆ ಬಿಡಿಸುವ ವರ್ಣಚಿತ್ರಗಳ ಗುಚ್ಛವೇ ಪಟಚಿತ್ರ. ವರ್ಣಚಿತ್ರ ದೃಶ್ಯಗಳ ಮೂಲಕ ಕತೆಗಳನ್ನು ಬಿಂಬಿಸುವ ವಿಶಿಷ್ಟ ಪ್ರಕಾರ.

‘ಒಡಿಶಾದ ಪಟಚಿತ್ರ ಕಲಾಪ್ರಕಾರದ ಆರಂಭಕ್ಕೆ ಪುರಿಯ ಜಗನ್ನಾಥನೇ ಸ್ಫೂರ್ತಿಯ ಸೆಲೆ. ಹಲವು ಶತಮಾನಗಳ ಹಿಂದಿನ ಪ್ರಾಚೀನ ಕಲೆ ಇದು. ಜಗನ್ನಾಥ ಮಂದಿರದ ಜತೆಗೇ ಈ ಕಲೆಯ ಉಗಮವೂ ಬೆಸೆದುಕೊಂಡಿದೆ’ ಎಂಬುದು ಆ ರಾಜ್ಯದ ಪಟಚಿತ್ರ ಕಲಾವಿದ ಅಪೀಂದ್ರ ಸ್ವೇನ್ ಅವರ ವಿವರಣೆ.

ಪುರಿ ಜಿಲ್ಲೆಯಲ್ಲಿರುವ ರಘುರಾಜ್‌ಪುರ ಗ್ರಾಮದ ಬಹುತೇಕ ಕುಟುಂಬದವರಿಗೆ ಪಟಚಿತ್ರ ರೂಪಿಸುವುದೇ ಕಾಯಕ. ದೇಶ, ವಿದೇಶಗಳಿಂದ ಇಲ್ಲಿಗೆ ಬರುವ ಪ್ರವಾಸಿಗರು ಪಟಚಿತ್ರ ಖರೀದಿಸುವ ಗ್ರಾಹಕರೂ ಆಗಿದ್ದಾರೆ. ಈ ಗ್ರಾಮವನ್ನು ಪಟಚಿತ್ರ ಕಲೆಯ ಜನ್ಮಸ್ಥಳವೆಂದೂ ಹೇಳಲಾಗುತ್ತದೆ. ಪಾರಂಪರಿಕ ಗ್ರಾಮವಾಗಿ ಕೂಡ ಇದು ವಿಶ್ವದ ಗಮನ ಸೆಳೆದಿದೆ. ಈ ಗ್ರಾಮದವರೇ ಆಗಿರುವ ಅಪೀಂದ್ರ ಅವರಿಗೆ ಇದು ಹೆಮ್ಮೆಯ ವಿಷಯ.

ಕಲಾಕೃತಿಗಳಿಗೆ ಅಂತಿಮ ಸ್ಪರ್ಶ ನೀಡುತ್ತಿರುವ ಅಪೀಂದ್ರ ಸ್ವೇನ್

ಇತ್ತೀಚೆಗೆ ಬೆಂಗಳೂರಿನಲ್ಲಿ ದಸ್ತಕಾರ್ ಮೇಳದಲ್ಲಿ ಭಾಗವಹಿಸಿದ್ದ ಅವರು ಪಟಚಿತ್ರ ಕಲೆಯ ವೈಶಿಷ್ಟ್ಯವನ್ನು ವಿವರಿಸಿದ್ದು ಹೀಗೆ:

ಕಲೆ

ಪಟಚಿತ್ರಗಳಲ್ಲಿ ನೈಸರ್ಗಿಕ ಬಣ್ಣಗಳನ್ನೇ ಹೆಚ್ಚಾಗಿ ಬಳಸಲಾಗುತ್ತದೆ. ಈ ಚಿತ್ರ ಬಿಡಿಸುವವರು ಒಡಿಶಾದಲ್ಲಿ ‘ಚಿತ್ರಕಾರರು’ ಎಂದೇ ಪ್ರಸಿದ್ಧಿ. ಗೋಡೆಗಳು, ತಾಳೆಗರಿಗಳ ಮೇಲೂ ಇಂಥದ್ದೇ ವರ್ಣಚಿತ್ರವನ್ನು ಬಿಡಿಸಲಾಗುತ್ತದೆ.

ವೈಷ್ಣವ ಪಂಥದ ನಂಬಿಕೆ ಮತ್ತು ಸಿದ್ಧಾಂತಗಳ ಸುತ್ತಲೇ ಪಟಚಿತ್ರದ ಮೂಲ ಕತೆಗಳು ಚಿತ್ರಿತವಾಗುತ್ತವೆ. ವಿಷ್ಣುವಿನ ಅವತಾರವೇ ಆಗಿರುವ ಜಗನ್ನಾಥ ಅಲ್ಲದೆ ರಾಧಾ-ಕೃಷ್ಣ, ಬಾಲಭದ್ರ ಮತ್ತು ಸುಭದ್ರ, ವಿಷ್ಣುವಿನ ಹತ್ತು ಅವತಾರಗಳು, ಗಣೇಶ, ಶಿವ- ಇತ್ಯಾದಿ ದೇವತೆಗಳಿಗೆ ಸಂಬಂಧಿಸಿದ ಕಥಾನಕಗಳು, ರಾಮಾಯಣ, ಮಹಾಭಾರತದ ದೃಶ್ಯಾವಳಿಗಳೂ ಮೂಡಿಬರುತ್ತವೆ. ಪೌರಾಣಿಕ ಪ್ರಸಂಗಗಳ ಈ ಪಟಚಿತ್ರಗಳನ್ನು ನೋಡುತ್ತಿದ್ದಂತೆಯೇ ಕತೆಯೂ ಕಣ್ಣಿಗೆ ಕಟ್ಟುತ್ತದೆ.

ಪ್ರತಿ ಪಟಚಿತ್ರಕ್ಕೆ ಆಲಂಕಾರಿಕ ಚೌಕಟ್ಟು ಇರುತ್ತದೆ. ವರ್ಣಚಿತ್ರದಲ್ಲಿ ಸಾಮಾನ್ಯವಾಗಿ ಬಳಕೆಯಾಗುವುದು ಕಪ್ಪು, ಕೆಂಪು, ಹಳದಿ, ಕಿತ್ತಳೆ, ನೀಲಿ, ನೇರಳೆ ಬಣ್ಣಗಳೇ.

ಪುರಿ, ಕೊನಾರ್ಕ್ ಮತ್ತು ಭುವನೇಶ್ವರದ ಕೆಲವೆಡೆ ಗೋಡೆಗಳ ಮೇಲೆ ಮೂಡಿಬಂದಿರುವ ಚಿತ್ರಗಳಲ್ಲಿಯೂ ಈ ಕಲೆಯ ಹೊಳಹುಗಳು ಕಾಣಸಿಗುತ್ತವೆ. ದೇವಾಲಯದಲ್ಲಿ ವಿಧಿಯುಕ್ತ ಆಚರಣೆಗಳ ಸಂದರ್ಭದಲ್ಲಿ ಕೆಲವೊಮ್ಮೆ ದೇವರ ಮೂರ್ತಿಗಳಿಗೆ ಬದಲಾಗಿ ಪಟಚಿತ್ರಗಳನ್ನು ಬಳಸುವ ಪದ್ಧತಿಯೇ ಇವುಗಳಿಗಿರುವ ಮಹತ್ವವನ್ನೂ ಸಾರುತ್ತದೆ ಎಂಬ ಅಭಿಮಾನ ಕಲಾವಿದರದ್ದು.

ಪಟಚಿತ್ರದ ತಯಾರಿ: ಸೀಮೆಸುಣ್ಣ ಮತ್ತು ಹುಣಸೆಬೀಜದ ಪುಡಿಯಿಂದ ಮಾಡಿದ ಅಂಟಿನ ಮಿಶ್ರಣವನ್ನು ಕಾಟನ್ ಬಟ್ಟೆ ಮೇಲೆ ಮೊದಲು ಲೇಪಿಸುತ್ತಾರೆ. ಇದು ಒಣಗಿದ ನಂತರ ವಿಶೇಷ ರೀತಿಯ ಕಲ್ಲಿನಿಂದ ಬಟ್ಟೆಯ ಮೇಲೆ ಉಜ್ಜುತ್ತಾರೆ. ಕ್ಯಾನ್‌ವಾಸ್ ಸಿದ್ಧವಾಗುತ್ತದೆ. ಚಿತ್ರಕಾರರು ಇದರ ಮೇಲೆ ನೈಸರ್ಗಿಕ ಬಣ್ಣದಿಂದ ಚಿತ್ರ ಬಿಡಿಸುತ್ತಾರೆ. ಪೆನ್ಸಿಲ್‌ನಿಂದ ಗೆರೆಗಳನ್ನು ಮೂಡಿಸದೆ ನೇರವಾಗಿ ಬ್ರಶ್ ಬಳಸುವಷ್ಟು ಪರಿಣತರು ಈ ಚಿತ್ರಕಾರರು.

ಮನೆಮಂದಿಯೆಲ್ಲಾ ಪಟಚಿತ್ರದ ತಯಾರಿಯಲ್ಲಿ ತೊಡಗುತ್ತಾರೆ. ಚಿತ್ರ ಪೂರ್ಣಗೊಂಡ ಬಳಿಕ ಬಟ್ಟೆಯ ಹಿಂಬದಿಯನ್ನು ಸ್ವಲ್ಪ ಶಾಖಕ್ಕೆ ಒಡ್ಡಲಾಗುತ್ತದೆ. ವಾತಾವರಣದಿಂದ ಆಗಬಹುದಾದ ಹಾನಿಯಿಂದ ಸಂರಕ್ಷಿಸಲು ಅದರ ಮೇಲ್ಭಾಗಕ್ಕೆ ಮೆರುಗೆಣ್ಣೆ ಸವರಲಾಗುತ್ತದೆ. ಇದರಿಂದಾಗಿ ಈ ಚಿತ್ರಗಳು ವರ್ಷಾನುಗಟ್ಟಲೆ ಮಾಸದೆ ಉಳಿಯುತ್ತವೆ.

ಮೂಲ ಆಶಯವನ್ನು ಉಳಿಸಿಕೊಂಡೇ ಪಟಚಿತ್ರ ಕಲಾವಿದರು ಇಂದು ತಮ್ಮ ಕಲೆಯನ್ನು ಇತರ ವಸ್ತು ಮತ್ತು ಮಾಧ್ಯಮಗಳಿಗೆ ವಿಸ್ತರಿಸಿ ಹೊಸರೂಪ ನೀಡಿದ್ದಾರೆ. ಅಪೀಂದ್ರ ಅವರೂ ಇದಕ್ಕೆ ಹೊರತಾಗಿಲ್ಲ. ‘ಮರ, ಅಲ್ಯೂಮಿನಿಯಂ, ಚರ್ಮದ ಉತ್ಪನ್ನಗಳು, ಸ್ಟೀಲ್- ಹೀಗೆ ಎಲ್ಲಾ ವಿಧದ ವಸ್ತುಗಳ ಮೇಲೆಯೂ ಈ ವರ್ಣಚಿತ್ರಗಳನ್ನು ಮೂಡಿಸಿದ್ದೇನೆ. ವಾಲ್ ಹ್ಯಾಂಗಿಂಗ್ಸ್ ರೀತಿಯ ಶೋ-ಪೀಸ್‌ಗಳು, ಬಾಟಲ್, ಬ್ಯಾಗ್, ಸೀರೆ, ಫ್ಯಾನ್, ಪೆನ್‌ಸ್ಟ್ಯಾಂಡ್, ಬುಕ್‌ಮಾರ್ಕ್ ಮೇಲೆ ಕೂಡ ಈ ಕಲೆ ಮೈದಳೆದಿದೆ. ಆದರೆ ಇಲ್ಲಿ ಎಲ್ಲಾ ಕಡೆಯೂ ಪೌರಾಣಿಕ ಪ್ರಸಂಗವೇ ಇರುತ್ತದೆ ಎಂದೇನೂ ಇಲ್ಲ. ವಿವಿಧ ವಸ್ತುವಿಷಯಗಳ ಚಿತ್ರಣ ಪಟಚಿತ್ರದ ಮಾದರಿಯಲ್ಲೇ ಇರುತ್ತದೆ’ ಎಂದು ವಿವರಿಸುತ್ತಾರೆ.

ಏಕೆ ಹೀಗೆ ಎಂದು ಕೇಳಿದರೆ, ‘ಸಾಂಪ್ರದಾಯಿಕ ಪಟಚಿತ್ರವನ್ನು ಕೊಠಡಿಯಲ್ಲಿ ಒಂದು ಕಡೆ ಇಡಲು ಮಾತ್ರ ಸಾಧ್ಯ. ಇದು ಹೆಚ್ಚು ಜನರ ಗಮನ ಸೆಳೆಯುವುದಿಲ್ಲ. ಆದರೆ ನಾವು ನಿತ್ಯ ಬಳಸುವ ಇತರೆ ವಸ್ತುಗಳ ಮೇಲೆಯೂ ಈ ರೀತಿ ಕಲೆ ಮೂಡಿದರೆ ಹೆಚ್ಚು ಗಮನ ಮತ್ತು ಪ್ರಚಾರ ಪಡೆಯಲು ಸಾಧ್ಯ. ಈಗ ಟಸ್ಸರ್ ಸಿಲ್ಕ್‌ನಂತಹ ಬಟ್ಟೆ ಮೇಲೂ ಪಟಚಿತ್ರ ರೂಪಿಸುತ್ತಿದ್ದೇವೆ’ ಎನ್ನುತ್ತಾರೆ.

‘ವರ್ಣಚಿತ್ರ ಬಿಡಿಸುವಾಗಲೂ ಹೊಸತನ ಇರಬೇಕು. ಕೃಷ್ಣ ಗೋಪಿಕಾ ಸ್ತ್ರೀಯರೊಂದಿಗೆ ಇರುವ ಚಿತ್ರ ಎಂದಷ್ಟೇ ಮೇಲ್ನೋಟಕ್ಕೆ ಕಾಣುವ ಚಿತ್ರದಲ್ಲಿ ಗೋಪಿಕಾ ಸ್ತ್ರೀಯರ ಸಮೂಹವೇ ಆನೆಯ ರೂಪವಾಗಿಯೂ ಕಾಣುವ ರೀತಿ ಮಾಡಲಾಗುತ್ತದೆ. ಗೋಪಿಕೆಯರೊಂದಿಗೆ ಕೃಷ್ಣ ಇರುವಂತೆ ತಕ್ಷಣಕ್ಕೆ ಕಂಡರೂ ಅದೇ ಸಮಯದಲ್ಲಿ ಆನೆಯ ಮೇಲೂ ಆಸೀನನಾಗಿರುತ್ತಾನೆ. ಇದು ವೀಕ್ಷಕರಿಗೆ ವಿಶೇಷ ಅನುಭೂತಿ ನೀಡುತ್ತದೆ’ ಎಂಬುದು ಅವರ ಅನುಭವ.

‘ಪ್ರತಿದಿನ 8ರಿಂದ 9ಗಂಟೆಯವರೆಗೆ ಕೆಲಸ ಮಾಡಬೇಕು. ಸತತ ಪರಿಶ್ರಮ, ತಾಳ್ಮೆ ಮತ್ತು ಧ್ಯಾನಸ್ಥ ಮನಸ್ಥಿತಿ ಬೇಡುವ ಕೆಲಸ ಇದು. ಕಾಲಕ್ಕೆ ತಕ್ಕಂತೆ ಕೆಲಸದಲ್ಲಿ ಮಾಡಿಕೊಂಡ ಕೆಲ ಮಾರ್ಪಾಡುಗಳು ಈ ಕಲೆಯನ್ನು ಮುಂದುವರಿಸಿಕೊಂಡು ಹೋಗಲು ನೆರವಾಗಿವೆ’ ಎಂದು 30 ವರ್ಷಗಳಿಂದ ಇದರಲ್ಲಿ ತೊಡಗಿಕೊಂಡಿರುವ ಹಿಂದಿನ ಗುಟ್ಟನ್ನು ಬಹಿರಂಗಪಡಿಸುತ್ತಾರೆ.

ಹಾಂಕಾಂಗ್, ಸಿಂಗಪುರ, ಶ್ರೀಲಂಕಾ, ಮಾಲ್ಡೀವ್ಸ್‌ಗೂ ತೆರಳಿ ಪಟಚಿತ್ರ ಕಲೆಯ ಸೊಬಗನ್ನು ವಿದೇಶಿಯರಿಗೆ ಪರಿಚಯಿಸಿರುವ ಇವರು, ಪಾರಂಪರಿಕವಾಗಿ ಬಂದಿರುವ ಈ ಅಪೂರ್ವ ಕಲೆಯನ್ನು 4ನೇ ತರಗತಿಯಲ್ಲಿದ್ದಾಗಲೇ ನೆಚ್ಚಿಕೊಂಡಿದ್ದಾಗಿ ಹೇಳುತ್ತಾರೆ . ಈಗ ಇವರ ಇಬ್ಬರು ಮಕ್ಕಳು, ಪತ್ನಿ, ಅಣ್ಣ-ಅತ್ತಿಗೆ ಎಲ್ಲರೂ ಪಟಚಿತ್ರವನ್ನು ರೂಪಿಸುವವರೇ. ಇವುಗಳ ಕನಿಷ್ಠ ದರ ₹ 10ರಿಂದ ಗರಿಷ್ಠ ದರ ₹ 1.20 ಲಕ್ಷದವರೆಗೆ ಇದೆ. ಅಂತೆಯೇ ಒಂದು ಪಟಚಿತ್ರವನ್ನು ಒಂದು ದಿನದಿಂದ ಹಿಡಿದು ಆರು ತಿಂಗಳು, ವರ್ಷದವರೆಗೂ ರೂಪಿಸಿದ್ದೂ ಇದೆಯಂತೆ. ಇಂತಹ ವಿಶೇಷ ಕಲಾಪ್ರಕಾರ ಅಳಿಯದಿರಲು ಚಿತ್ರಕಾರರಿಗೆ ಬೇಕು ನಿರಂತರ ಪ್ರೋತ್ಸಾಹ ಎಂಬುದು ಇವರ ಆಶಯ.

ಪಟಚಿತ್ರ ಸೇರಿದಂತೆ ಭಾರತದ ಸಾಂಪ್ರದಾಯಿಕ ಕಲಾ ಪ್ರಕಾರಗಳು ಜಾಗತಿಕವಾಗಿಯೂ ಈಗ ಮನ್ನಣೆ ಪಡೆದುಕೊಂಡಿವೆ. ಪ್ರಾಚೀನ ಸಂಸ್ಕೃತಿ, ಜನಜೀವನ ಅರಿಯಲು ನೆರವಾಗುತ್ತಿವೆ.

ಸಂಪರ್ಕ: 09938620662

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಿಕ್ಕ ಶ್ರೇಷ್ಠ ಕಥೆಯ ಸರ್ ಎಂ.ವಿಶ್ವೇಶ್ವರಯ್ಯ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಸರ್ ಎಂ.ವಿಶ್ವೇಶ್ವರಯ್ಯ ಅವರು, ದೇಶದ ಮೇಧಾವಿ ಎಂಜಿನಿಯರ್‌ಗಳಲ್ಲಿ ಒಬ್ಬರು. 1912ರಿಂದ 1918ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದರು. ನಾಡಿನ ಅಭಿವೃದ್ಧಿಗೆ ದೂರದೃಷ್ಟಿಯ ಯೋಜನೆಗಳನ್ನು ಜಾರಿಗೆ ತಂದು ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾರೆ.

ವಿಶ್ವೇಶ್ವರಯ್ಯ ಅವರು ಕಾವೇರಿ ನದಿಗೆ ಕೃಷ್ಣರಾಜಸಾಗರ ಅಣೆಕಟ್ಟೆ ಕಟ್ಟುವಲ್ಲಿ ನಿರ್ವಹಿಸಿದ ಪಾತ್ರ ಅವಿಸ್ಮರಣೀಯ. ಅಣೆಕಟ್ಟೆಗಳಲ್ಲಿ ಬಳಸುವ ಸ್ವಯಂಚಾಲಿತ ಫ್ಲಡ್ ಗೇಟ್ ವಿನ್ಯಾಸ ರೂಪಿಸಿ ಅಳವಡಿಸಿದವರೂ ಅವರೇ

ಕನ್ನಡ ಸಾಹಿತ್ಯ ಪರಿಷತ್‌ನ ಸ್ಥಾಪನೆಗೆ ವಿಶ್ವೇಶ್ವರಯ್ಯ ಮೂಲಕಾರಣಕರ್ತರು. 1911ರಲ್ಲಿ ಮೈಸೂರು ಸಂಪದಭಿವೃದ್ಧಿ ಸಮಾಜ ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಈ ಸಂಸ್ಥೆಯ ವಿದ್ಯಾ ಸಮಿತಿ ಅಡಿ ಆರಂಭವಾದದ್ದೇ ಕನ್ನಡ ಅಕಾಡೆಮಿ ಅಥವಾ ಇಂದಿನ ಕನ್ನಡ ಸಾಹಿತ್ಯ ಪರಿಷತ್ತು

ನಮ್ಮ ಎಲ್ಲ ಆರ್ಥಿಕ ರೋಗಗಳಿಗೂ ವಿದ್ಯಾಭ್ಯಾಸವೇ ಮದ್ದು ಎಂದು ವಿಶ್ವೇಶ್ವರಯ್ಯ ನಂಬಿದ್ದರು. ವಿದ್ಯಾ ಸಮಿತಿ ಅಡಿ ಮೈಸೂರು ವಿಶ್ವವಿದ್ಯಾಲಯ ಆರಂಭವಾಯಿತು. ಈಗ ಅದು ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಪೈಕಿ ಒಂದಾಗಿದೆ.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ವಿಶ್ವೇಶ್ವರಯ್ಯ ಅವರು ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕು ತಯಾರಿಸುವ ಕಾರ್ಖಾನೆ ಸ್ಥಾಪಿಸಿದರು. 1936ರಲ್ಲಿ ಮೈಸೂರು ಕಾಗದ ಕಾರ್ಖಾನೆಯೂ ಇಲ್ಲಿ ಆರಂಭವಾಯಿತು.

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ದಿವಾನ್ ಸರ್ ಶೇಷಾದ್ರಿ ಅಯ್ಯರ್ ಸ್ಮಾರಕ ಭವನ ಕಟ್ಟಡವನ್ನು ವಿಶ್ವೇಶ್ವರಯ್ಯ ಅವರು ರಾಜ್ಯ ಸಾರ್ವಜನಿಕ ಗ್ರಂಥಾಲಯಕ್ಕಾಗಿ ಹಸ್ತಾಂತರಿಸಿದರು. 1915ರಲ್ಲಿ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆಗೆ ವಿಶ್ವೇಶ್ವರಯ್ಯ ಕಾರಣರಾದರು.

ಗಣಿತದಲ್ಲಿ ಗರ್ದಿ ಗಮ್ಮತ್ತು

ಕಳೆಯುವ ಮೊದಲೇ ಉಳಿಯುವ ಸಂಖ್ಯೆ ಹೇಳಲೇ?

ನೀನು ಯಾವುದಾದರೊಂದು ಸಂಖ್ಯೆ ಬರೆದುಕೊ. ಆ ಸಂಖ್ಯೆಯಲ್ಲಿ 9 ಅನ್ನು ಕಳೆ. ಬಂದ ಉತ್ತರದಲ್ಲಿ ಮತ್ತೆ 9 ಕಳೆ. ಹೀಗೆ ಕಳೆಯುತ್ತಾ ಹೋಗು. ಆದರೆ ನಾನು ನೀನು ಕಳೆಯುವ ಮೊದಲೇ, ಕೊನೆಗೆ ಉಳಿಯುವ ಸಂಖ್ಯೆ ಹೇಳಿ ಬಿಡಬಲ್ಲೆ. ಅದು ಹೇಗೆ?

ಹೀಗೆ: ನೀನು ಬರೆದುಕೊಂಡ ಸಂಖ್ಯೆಯಲ್ಲಿನ ಅಂಕೆಗಳನ್ನು ಕೂಡುತ್ತಾ ಕೂಡುತ್ತಾ ಆ ಸಂಖ್ಯೆಯ ಸೂಚ್ಯಂಕ (ಏಕಾಂಕ) ಮಾಡಿದರೆ, ಅದೇ ಕೊನೆಗೆ ಉಳಿಯುವ ಸಂಖ್ಯೆ. ನೀನು 69 ಎಂದು ಬರೆದುಕೊಂಡರೆ, ನಾನು 6 = 9 = 15 ಮತ್ತು 1 = 5 = 6 ಅಂದರೆ, ನಾನು ಹೇಳುವ ಸಂಖ್ಯೆ 6. ನೀನು ಕಳೆದು ನೋಡಿದರೆ 6 ಉಳಿದಿರುತ್ತದೆ. ಆದರೆ ಸೂಚ್ಯಂಕ 9 ಆದರೆ, ಕೊನೆಗೆ 0 ಉಳಿಯುತ್ತದೆಂದು ತಿಳಿದಿರಲಿ.

ಉದಾಹರಣೆ 1:	ಉದಾಹರಣೆ 2:
69	81
-9	-9
60	72
-9	-9
51	63
-9	-9
42	54
-9	-9
33	45
-9	-9
24	36
-9	-9
15	27
-9	-9
6	18
	-9
	09
	-9
	0



ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕಾರಿ 2. ಕೇರಿ 3. ಹದಿ, 4. ಸರ 5. ಬೆಳ್ಳಿ 6. ಹುಳಿ 7. ತುಸು 8. ಕಳೆ

1. [ ] ರು [ ]
2. [ ] ಳ್ಳೊ [ ]
3. [ ] ವೇ [ ]
4. [ ] ಸ [ ]
5. [ ] ಹ [ ]
6. [ ] ಮ [ ]
7. [ ] ರಿ [ ]
8. [ ] ಳ [ ]

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ದಾರಿಹಸ = ______
2. ನವದಾರ = ______
3. ನಮ್ಮ ಚಿಕ್ಕಮನೆ = ______
4. ಸಮಾನ ಜನ = ______

ಟ್ವೆಂಟಿ – 20 ಮ್ಯಾಚ್

ಅ ವಿಭಾಗ:- ಎಡಗಡೆಯ ನುಡಿಗಟ್ಟಿನಲ್ಲಿ ಬಿಟ್ಟಿರುವ ಸಂಖ್ಯೆಯನ್ನು ಹೊಂದಿಸಿ.

1. ಆ ಕೆಲಸ ಆಗುದ್ರಾಗ 7,- ಆತು	A. 4
2. ಉಂಡ ಮನಿಗೆ - ಬಗಿಬ್ಯಾಡ	B. 3
3. 6ಕ್ಕೇರಲಿಲ್ಲ - ಕ್ಕಿಳಿಯಲಿಲ್ಲ	C. 2
4. 1 ಹೋಗಿ – ಆಗಬಾರ್ದು	D. 11
5. ಸತ್ತಾಗ – ಮಂದಿ ಬಾಯಾಗಿರಬೇಕು	E. 9

ಬ ವಿಭಾಗ: ಎಡಗಡೆಯ ಸೂಚಕ ಪದಗಳಿಗೆ ಬಲಭಾಗದ ಸಂಖ್ಯೆಗಳನ್ನು ಹೊಂದಿಸಿ.

1. ವರ್ಗಸಂಖ್ಯೆ	A. 37
2. ಘನಸಂಖ್ಯೆ	B. 15
3. ಬೆಸಸಂಖ್ಯೆ	C. 8
4. ಸಮಸಂಖ್ಯೆ	D. 16
5. ಅವಿಭಾಜ್ಯ ಸಂಖ್ಯೆ	E. 20

ಕ ವಿಭಾಗ

1. ಭೂಮಿಯ ಉಪಗ್ರಹಗಳ ಸಂಖ್ಯೆ	A. 7
2. ವೇದಗಳ ಸಂಖ್ಯೆ	B. 6
3. ಆಹಾರದಲ್ಲಿ ರಸಗಳ ಸಂಖ್ಯೆ	C. 4
4. ಅಶೋಕ ಚಕ್ರದಲ್ಲಿ ಕವಲುಗಳ ಸಂಖ್ಯೆ	D. 1
5. ಸಂಗೀತದಲ್ಲಿ ಸ್ವರಗಳ ಸಂಖ್ಯೆ	E. 24

ಡ ವಿಭಾಗ

1. ಉಪ್ಪಿನ ಸತ್ಯಾಗ್ರಹ	A. 1905
2. ಬೆಂಗಳೂರಿಗೆ ಮೊದಲು ವಿದ್ಯುತ್ ಬಂದಿದ್ದು	B. 1869
3 ಬೆಂಗಳೂರಿಗೆ ಮೊದಲು ರೈಲು ಬಂದಿದ್ದು	C. 1930
4 ಬೆಂಗಳೂರ ಕೋಟೆಯ ನಿರ್ಮಾಣ	D. 1868
5 ಗಾಂಧೀಜಿಯವರು ಜನಿಸಿದ್ದು	E. 1537

ಶಬ್ದಗಳೊಡನೆ ಸರಸ

ಪದ ಸಂಕಲನ

1. ಇಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ ಇನ್ನಷ್ಟು ಅಕ್ಷರ ಸೇರಿಸಿ ಗಣೇಶನ 7 ಹೆಸರುಗಳನ್ನು ರಚಿಸಿ.

1. ___ ___ ದ ___
2. ___ ___ ಪ ___
3. ___ ಕ ___ ___
4. ___ ರಿ ___ ___
5. ___ ___ ನ ___
6. ___ ___ ___ ರ
7. ___ ___ ಯ ___

2. ಇಲ್ಲಿರುವ ಅಪೂರ್ಣ ಪದಗಳಿಗೆ ಮುಂದೆ ಸೂಚಿಸಿದ ಸಿನಿಮಾ ಹೆಸರುಗಳಲ್ಲಿನ ಒಂದಕ್ಷರ ಆಯ್ಕೆ ಮಾಡಿಕೊಂಡು ತುಂಬಿ, ಮೂರಕ್ಷರದ ಪದ ಮಾಡಿರಿ.

1. ನಾ ____ ಕ (ರವಿಚಂದ್ರ)
2. ನಾ ____ ಕ (ನೋಡಿ ಸ್ವಾಮಿ ನಾವಿರೋದೆ ಹೀಗೆ)
3. ನಾ ____ ಕ (ಸಿಪಾಯಿ ರಾಮು)
4. ನಾ ____ ಕ (ನ್ಯಾಯವೇ ದೇವರು)
5. ನಾ ____ ಕ (ಮಿಂಚಿನ ಓಟ)
6. ನಾ ____ ಕ (ಮಾಸ್ತಿಗುಡಿ)

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ 20 ಮ್ಯಾಚ್

ಅ. ವಿಭಾಗ: 1-E, 2-D, 3-B, 4-C, 5-A,
ಬ. ವಿಭಾಗ: 1-E, 2-D, 3-A, 4-B, 5-C,
ಕ. ವಿಭಾಗ: 1-E, 2-D, 3-B, 4-C, 5-A,
ಡ ವಿಭಾಗ: 1-D, 2-C, 3-B, 4-E, 5-A

ಪದ ಹಿಗ್ಗು: 1. ಸವಾರಿ 2. ಅಬ್ಬಕ್ಕ 3. ನಕಲಿ 4. ಕಲ್ಯಾಣ 5. ಮದ್ದಾನೆ 6. ಗಮ್ಮತ್ತು 7. ತಯಾರಿ 8. ಕರ್ಣ

ಶಬ್ದಗಳೊಡನೆ ಸರಸ: 1. ಕಲಾಭವನ 2. ಮಾನವಕುಲ 3. ನೆಲಮಂಗಲ 4. ದಿನಬಳಕೆ 5. ಸರಿಸಮಾನ

ಅದಲು-ಬದಲು: 1. ಚಾಮರಾಜನಗರ 2. ಮಲಿನ ವನ 3. ನಮ್ಮ ಭಾರತ 4. ದಾಸರಪದ

ಮಜ ಮಜ ಮಜಕೂರದ ಸೆಪ್ಟೆಂಬರ್ 12ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸುಜನ್ ಜೆ. ಬೆಂಗಳೂರು

ರತ್ನಾ ನಾಗಾವಿ ಮೈಲೇಶ್ವರ (ವಿಜಯಪುರ)

ನರೇನ್.ಎನ್.ಮಹಾದೇವ್, ಕೊಳ್ಳೇಗಾಲ (ಚಾಮರಾಜನಗರ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

ಶೇ 85ರಷ್ಟು ಪ್ರಮಾಣದಲ್ಲಿ ವಿಮಾನಗಳ ಹಾರಾಟಕ್ಕೆ ಸಚಿವಾಲಯ ಅನುಮತಿ

ನವದಹೆಲಿ:'ದೇಶೀಯ ವಿಮಾನಯಾನ ಸಂಸ್ಥೆಗಳು ಶೇ 72.5ಕ್ಕೆ ಬದಲಾಗಿ ಶೇ 85ರಷ್ಟು ಪ್ರಮಾಣದಲ್ಲಿ ವಿಮಾನಗಳ ಹಾರಾಟ ನಡೆಸಬಹುದು' ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಶನಿವಾರ ತಿಳಿಸಿದೆ.

ಸಚಿವಾಲಯದ ಆದೇಶದ ಪ್ರಕಾರ, 'ಆಗಸ್ಟ್ 12ರವರೆಗೆ ವಿಮಾನಯಾನ ಸಂಸ್ಥೆಗಳು ಶೇ 72.5ರಷ್ಟು ಪ್ರಮಾಣದಲ್ಲಿ ವಿಮಾನಗಳ ಕಾರ್ಯಾಚರಣೆ ನಡೆಸುತ್ತಿದ್ದವು. ಈ ಪ್ರಮಾಣವು ಜುಲೈ 5ರಿಂದ ಆಗಸ್ಟ್ 12ರವರೆಗೆ ಶೇ 64 ಹಾಗೂ ಜೂನ್ 1ರಿಂದ ಜುಲೈ 5ರವರೆಗೆ ಶೇ 50ರಷ್ಟು ಇತ್ತು' ಎಂದು ಅದು ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪಂಜಾಬ್ ಮುಖ್ಯಮಂತ್ರಿ ರಾಜೀನಾಮೆ

ಒಂದನೇ ಪುಟದಿಂದ

ಆಯ್ಕೆ ಸೋನಿಯಾ ಅಂಗಳಕ್ಕೆ: ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೇ ಪಂಜಾಬ್‌ನ ಮುಂದಿನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲಿ ಎಂದು ಪಂಜಾಬ್ ಕಾಂಗ್ರೆಸ್ ಶಾಸಕಾಂಗ ಪಕ್ಷವು ನಿರ್ಣಯ ಅಂಗೀಕರಿಸಿದೆ.

ಶನಿವಾರ ಸಂಜೆಗೆ ಪೂರ್ವನಿಗದಿಯಾಗಿದ್ದ ಸಭೆಯಲ್ಲಿ ಪಕ್ಷದ 78 ಶಾಸಕರು ಭಾಗಿಯಾಗಿದ್ದರು. ಇಬ್ಬರು ಶಾಸಕರಷ್ಟೇ ಗೈರುಹಾಜರಾಗಿದ್ದರು. ಮುಂದಿನ ಮುಖ್ಯಮಂತ್ರಿ ಆಯ್ಕೆಯನ್ನು ಸೋನಿಯಾ ಅವರೇ ಮಾಡಲಿ ಎಂದು ಸಭೆಯಲ್ಲಿದ್ದವರು ಅವಿರೋಧವಾಗಿ ನಿರ್ಣಯ ಅಂಗೀಕರಿಸಿದರು. ಅಮರಿಂದರ್ ಅವರ ಕಾರ್ಯವನ್ನು ಶ್ಲಾಘಿಸುವ ನಿರ್ಣಯವನ್ನೂ ಅವಿರೋಧವಾಗಿ ಅಂಗೀಕರಿಸಲಾಗಿದೆ.

ವಂಚನೆ: ಮಾಜಿ ಐಟಿ ಉದ್ಯೋಗಿ ಆರೋಪ ಸಾಬೀತು

ವಾಷಿಂಗ್ಟನ್ (ಪಿಟಿಐ): ಭಾರತೀಯ ಮೂಲದ ಅಮೆರಿಕದ ನಿವಾಸಿ ಮಾಹಿತಿ ತಂತ್ರಜ್ಞಾನ (ಐಟಿ) ಕಂಪನಿಯೊಂದರ ಮಾಜಿ ಉದ್ಯೋಗಿ ದಯಾಕರ್ ಮಲ್ಲು (51) ವಿರುದ್ಧ ವಂಚನೆಗಾಗಿ ಸಂಚು ರೂಪಿಸಿರುವುದು ಹಾಗೂ ಸುಳ್ಳು ತೆರಿಗೆ ವರದಿ ತಯಾರಿಕೆಗೆ ನೆರವಾಗಿರುವ ಆರೋಪಗಳು ಸಾಬೀತಾಗಿವೆ.

ತಾಲಿಬಾನಿ ಸೈನಿಕರನ್ನು ಗುರಿಯಾಗಿಸಿಕೊಂಡು ಬಾಂಬ್ ದಾಳಿ

ಅಫ್ಗನ್: ಸ್ಫೋಟಕ್ಕೆ ಇಬ್ಬರು ಬಲಿ

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನದ ಜಲಾಲಾಬಾದ್ ನಗರದಲ್ಲಿ ಶನಿವಾರ ನಡೆದ ಮೂರು ಸ್ಫೋಟಗಳಲ್ಲಿ ಇಬ್ಬರು ಮೃತಪಟ್ಟಿದ್ದು, 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಅಮೆರಿಕ ಸೇನೆಯು ಅಫ್ಗಾನಿಸ್ತಾನದಿಂದ ಸಂಪೂರ್ಣವಾಗಿ ನಿರ್ಗಮಿಸಿದ ನಂತರ ನಡೆದ ಮೊದಲ ಭೀಕರ ದಾಳಿ ಇದಾಗಿದೆ. ಮೂರು ಬಾಂಬ್ ಸ್ಫೋಟಗಳಲ್ಲಿ ಒಂದನ್ನು, ತಾಲಿಬಾನ್ ಸೈನಿಕರ ವಾಹನವನ್ನು ಗುರಿ ಮಾಡಿಕೊಂಡು ನಡೆಸಲಾಗಿದೆ.

ಅಫ್ಗಾನಿಸ್ತಾನದ ಬಹುತೇಕ ಪ್ರಾಂತಗಳನ್ನು ವಶಕ್ಕೆ ಪಡೆದುಕೊಂಡಿರುವ ಇಸ್ಲಾಂ ಮೂಲಭೂತವಾದಿ ತಾಲಿಬಾನ್, ದೇಶದಲ್ಲಿ ಭದ್ರತೆಯನ್ನು ಕಾಯ್ದುಕೊಳ್ಳುವುದಾಗಿ ಹೇಳಿತ್ತು. ಆದರೆ ಇಸ್ಲಾಮಿಕ್ ಸ್ಟೇಟ್‌ನ ಅಫ್ಗನ್ ಘಟಕವು ತಾಲಿಬಾನ್ ಅನ್ನು ಗುರಿ ಮಾಡಿಕೊಂಡು ದಾಳಿ ನಡೆಸಿದೆ ಎನ್ನಲಾಗಿದೆ. ಆದರೆ, ಶನಿವಾರದ ದಾಳಿಯ ಹೊಣೆಯನ್ನು ಯಾವ ಸಂಘಟನೆಯೂ ಹೊತ್ತುಕೊಂಡಿಲ್ಲ.

'ನಂಗಾರ್ಹರ್ ಪ್ರಾಂತದ ರಾಜಧಾನಿ ಜಲಾಲಾಬಾದ್‌ನಲ್ಲಿಯೇ ಮೂರು ಸ್ಫೋಟಗಳು ನಡೆದಿವೆ. ನಗರದಲ್ಲಿ ಗಸ್ತು ತಿರುಗುತ್ತಿದ್ದ ತಾಲಿಬಾನ್‌ನ ಸೈನಿಕರ ವಾಹನವನ್ನು ಗುರಿ ಮಾಡಿಕೊಂಡು ಒಂದು ದಾಳಿ ನಡೆಸಲಾಗಿದೆ. ಈ ಮೂರೂ ದಾಳಿಗಳಲ್ಲಿ ಹಲವು ಮಹಿಳೆಯರು ಮತ್ತು ಮಕ್ಕಳಿಗೆ ಗಾಯಗಳಾಗಿವೆ' ಎಂದು ತಾಲಿಬಾನ್ ಮಾಹಿತಿ ನೀಡಿದೆ. ನಂಗಾರ್ಹರ್ ಪ್ರಾಂತದಲ್ಲಿ ಇಸ್ಲಾಮಿಕ್ ಸ್ಟೇಟ್ ಉಗ್ರರ ಪ್ರಾಬಲ್ಯವಿದೆ. ಹೀಗಾಗಿ ಅವರೇ ಈ ದಾಳಿ ನಡೆಸಿರಬಹುದು ಎಂದು ಶಂಕಿಸಲಾಗಿದೆ.

ಈ ದಾಳಿಗಳಲ್ಲಿ ಮೃತಪಟ್ಟವರ ವಿವರವನ್ನು ತಾಲಿಬಾನ್ ಬಹಿರಂಗಪಡಿಸಿಲ್ಲ. ಆದರೆ ಬಾಂಬ್ ಸ್ಫೋಟದಲ್ಲಿ ಛಿದ್ರವಾಗಿರುವ ತಾಲಿಬಾನ್‌ನ ವಾಹನದ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಛಿದ್ರವಾಗಿರುವ ವಾಹನವನ್ನು ತಾಲಿಬಾನಿಗಳು ಪರಿಶೀಲಿಸುತ್ತಿರುವ ಮತ್ತು ವಾಹನದಲ್ಲಿದ್ದ ತಾಲಿಬಾನ್ ಬಾವುಟದ ದೃಶ್ಯಗಳು ಈ ಚಿತ್ರದಲ್ಲಿವೆ.

ಸ್ಫೋಟದ ನಂತರ ನಂಗಾರ್ಹರ್ ಪ್ರಾದೇಶಿಕ ಆಸ್ಪತ್ರೆ ಎದುರು ಬಿಗಿಭದ್ರತೆ ಒದಗಿಸಲಾಗಿತ್ತು —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು
- 20ಕ್ಕೂ ಹೆಚ್ಚು ಜನರಿಗೆ ಗಾಯ
- ಇಸ್ಲಾಮಿಕ್ ಸ್ಟೇಟ್ ಕೃತ್ಯದ ಶಂಕೆ
- ಹೊಣೆ ಹೊತ್ತುಕೊಳ್ಳದ ಯಾವುದೇ ಸಂಘಟನೆ

ಶಿಕ್ಷಕರಷ್ಟೇ ಹಾಜರಾಗಲು ಸೂಚನೆ

ಶನಿವಾರದಿಂದ ದೇಶದಾದ್ಯಂತ ಎಲ್ಲಾ ಶಾಲೆಗಳಲ್ಲಿ ಶಿಕ್ಷಕರು ಮತ್ತು ಬಾಲಕರಷ್ಟೇ ಹಾಜರಾಗಬೇಕು ಎಂದು ತಾಲಿಬಾನ್ ಸೂಚನೆ ನೀಡಿದೆ. ತಾಲಿಬಾನ್ ಕ್ಯಾಲೆಂಡರ್‌ನ ಪ್ರಕಾರ ಶನಿವಾರವು ವಾರದ ಮೊದಲ ದಿನವಾಗಿದೆ. ಈ ಶನಿವಾರದಿಂದಲೇ ಇದನ್ನು ಪಾಲಿಸಬೇಕು ಎಂದು ತಾಲಿಬಾನ್ ಹೇಳಿದೆ.

ತಾಲಿಬಾನ್ ಹೊರಡಿಸಿರುವ ಈ ಸೂಚನೆಯಲ್ಲಿ ಶಿಕ್ಷಕಿಯರು ಮತ್ತು ಬಾಲಕಿಯರ ಉಲ್ಲೇಖವಿಲ್ಲ. ಈ ಮೂಲಕ ಮಹಿಳೆಯರು ಮತ್ತು ಬಾಲಕಿಯರ ಮತ್ತೊಂದು ಪ್ರಮುಖ ಹಕ್ಕನ್ನು ತಾಲಿಬಾನ್ ಕಸಿದುಕೊಂಡಿದೆ ಎಂದು ಮಾನವ ಹಕ್ಕುಗಳ ರಕ್ಷಣಾ ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಅಡುಗೆ ಭಟ್ಟರು ಬೇಕಾಗಿದ್ದಾರೆ
ಕೆಂಗೇರಿ, ಮೈಸೂರು ರಸ್ತೆಯಲ್ಲಿರುವ ಹೆಸರಾಂತ ವಸತಿ ಕಾಲೇಜಿಗೆ ಆಂಧ್ರಶೈಲಿಯ ಸಸ್ಯಾಹಾರಿ ಮತ್ತು ಮಾಂಸಹಾರಿ ಅಡುಗೆ ಮಾಡಲು ನುರಿತ ಅಡುಗೆ ಭಟ್ಟರು ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಈ ಕೆಳಗಿನ ದೂರವಾಣಿಗೆ ಸಂಪರ್ಕಿಸಬಹುದು.
9686664985
9686664983

Accounts & Finance

ಎಂಎನ್‌ಸಿಗೆ ಅಕೌಂಟೆಂಟ್, ರಿಸೆಪ್ಷನಿಸ್ಟ್, ಆಫೀಸ್/ಅಕೌಂಟ್ಸ್ ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಕ್ಲಾರ್ಕ್ಸ್, ಟೆಲಿಕಾಲರ್ಸ್, ಪರ್ಚೇಸ್/ಸ್ಟೋರ್ ಕೀಪರ್ಸ್. "ರಮ್ಯ": 7204367465/ 8050107101

Call Centre

ತಮಿಳು, ಕನ್ನಡ ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ. (ತಮಿಳು ಮತ್ತು ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡುವುದು ಕಡ್ಡಾಯ) ಮನೆಯಲ್ಲಿಯೇ ಕೆಲಸ, ಸಂಬಳ ರೂ. 10,000/- + ಇನ್ಸೆಂಟಿವ್ಸ್. ಸಂಪರ್ಕಿಸಿ: +91 9943035799

General

TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNC ಕಂಪನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 9611715755

ಮನೆಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಅಡುಗೆ ಮತ್ತು ಇತರ ಕೆಲಸದಲ್ಲಿ ಅನುಭವಸ್ಥರು. ಬೆಂಗಳೂರಿನಲ್ಲಿ ಉಳಕೊಳ್ಳಲು ಸಿದ್ಧರಿರುವವರು. ಸಂಪರ್ಕಿಸಿ: 9535111270/ 9987418006.

Hospital & Medical Jobs

WANTED
For Reputed 50 bedded Hospital in Talikoti Needs Specialist in
MD / DNB General Medicine
MS / DNB General Surgeon
DUTY DOCTORS MBBS
Salary Negotiable
9739288802
9880460890

Multiple Vacancy

SHEET METAL FABRICATION INDUSTRY IN BENGALURU Requires following personnel: 1) DRAUGHTSMAN- Diploma/ BE (Mechanical) knowledge of Solidworks, 3/4 years experience.2) SHEET METAL FABRICATION ENGINEER- ITI/Diploma/ BE (Mechanical) 4/5 years experience in Metal fabrication for machines. 3) MILLING M/C OPERATOR -3/4 year experience. 4) ADMIN : PUC / Degree with Tally knowledge, 2/3 years experience. Contact : 8970070088/ 9844520035/ 55

Wanted

ಬೆಂಗಳೂರಿನ ನಾಗರಭಾವಿಯಲ್ಲಿ ನಡೆಸಲಾಗುತ್ತಿರುವ ಗಂಡು ಮಕ್ಕಳ ಅನಾಥಾಶ್ರಮದಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಮಹಿಳೆ ಕೇರ್ ಟೇಕರ್ ಬೇಕಾಗಿದ್ದಾರೆ. ವಿದ್ಯಾರ್ಹತೆ : 10ನೇ ತರಗತಿ ಮೇಲ್ಪಟ್ಟು, ವಯಸ್ಸು: 18 ರಿಂದ 45ರವರೆಗೆ, ಊಟ, ವಸತಿ ಉಚಿತ, ಆಕರ್ಷಕ ಸಂಬಳ ನೀಡಲಾಗುವುದು. ವಸತಿ ಬೇಡದವರು ಹತ್ತಿರದ ಪ್ರದೇಶದವರಾಗಿರಬೇಕು. ಸಂಪರ್ಕಿಸಿ: 9110846919

WANTED MALE & Female PUC/Graduates Freshers & Experience(M.Sc Chemistry or B.Sc Chemistry): 8660018006/ 9019696123

Teachers/ Professors

REQUIRED
We Required Experienced and Fresher's - Authors / Teachers with Excellent Skills in writing Guides, Digests, Study materials and Sample Papers needed for all subjects in English and Kannada medium for Degree classes like BCom, BBA, BCA, BA, BSc, Etc. in New Syllabus of NEP 2020.
Remuneration will be commensurate with Experience and Quality output in time.
DTP Operators well Experience in PageMaker, Illustrator, CorelDraw, Photoshop, Book work & also need Proof Readers.
Contact send Resume to E-mail or Whatsapp
Email: cpcbooksindia@gmail.com
+91 9844099258
+91 8618012211
Cambridge Publishing Co.Pvt.Ltd
www.cpcbooksindia.com

Part-Time Jobs

WORK FROM Home No Qualification Housewifes, Employes, Students, Visit our Office Near SP Circle, Bellary -8123012124, 7022121569

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land Converted

Tumkur

ಮಾರಾಟಕ್ಕಿದೆ: ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಹುಳಿಗೆರೆ ಪಕ್ಕ ಹರಿಯಜ್ಜಿಹಳ್ಳಿ ಗ್ರಾಮದಲ್ಲಿ ಸರ್ವೆ ನಂ, 23/6, 24ರಲ್ಲಿ 2ಎಕರೆ 29 ಗುಂಟೆ ಜಮೀನು ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಕರೆ ಮಾಡಬಹುದು. ಮೊ: 8277293664, 7676799769.

ವ್ಯಾಪಾರ

Business Offers

Distributors

ಮಣಿವಿಲಾಸ್ ಫುಡ್ ಪ್ರಾಡಕ್ಟ್ ಅಂಡ್ ಕಂಪನಿಯ 'ಚಿಕ್ಕಿ' 'ಮೈಸೂರು ಪಾಕ್' ಉತ್ಪನ್ನಗಳ ಮಾರಾಟಕ್ಕೆ ಕರ್ನಾಟಕದಾದ್ಯಂತ ಡಿಸ್ಟ್ರಿಬ್ಯೂಟರ್ಸ್ ಮತ್ತು ಸೇಲ್ಸ್ ಪಾರ್ಟನರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:9986444464/ 9611110050

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

"ಉಚಿತ ಭವಿಷ್ಯ, ಕ್ಷಣದಲ್ಲಿ ಪರಿಹಾರ" ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ, ಧನವಶೀಕರಣ, ಶತ್ರುವಶೀಕರಣ, ಸ್ತ್ರೀಪುರುಷವಶೀಕರಣ, ನಿಮ್ಮಲ್ಲಿ ಸಮಸ್ಯೆಯೇ?? ಪರಿಹಾರವಾಗಬೇಕೆ?? ಒಂದೇಕರೆಯಲ್ಲಿ ವಶೀಕರಣದ ವಿಶೇಷತಾಂತ್ರಿಕರಾದ ಗುರುರಾಜನ್ "ನಂಬಿದವರ ಪಾಲಿನಬೆಳಕು" 9731309181

★||ಮೋಡಿ ಮಾಂತ್ರಿಕರು||★ ನಂಬರ್.1 ವಶೀಕರಣ ಸಪೆಷಲಿಸ್ಟ್, ಪ್ರೀತಿಪ್ರೇಮ, ಸಾಲದಬಾದೆ, ಗಂಡಹೆಂಡತಿ ವಿಚಾರ ಇನ್ನೂಯಾವುದೆ ಗುಪ್ತ ಸಮಸ್ಯೆಗಳಿಗೆ ಫೋನಿನ_ಮೂಲಕ ಶಾಶ್ವತ_ಪರಿಹಾರ. 9591588881

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ಶ್ರೀಶಾಕಾಂಬರಿದೇವಿ||★ ಆರಾಧಕರು ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂಯಾವುದೇ ಕಠಿಣ,ಗುಪ್ತ ಸಮಸ್ಯೆಗಳಿಗೆ 11 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900222591

ಕೇರಳ ಮತ್ತು ಕೊಳ್ಳೇಗಾಲದ ಪ್ರಚಂಡ ಅಮಾನುಷ ಮಾಂತ್ರಿಕ ವಿದ್ಯೆಯಿಂದ ಪ್ರೀತಿಯಲ್ಲಿ ನಂಬಿ ಮೋಸ ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ/ ಪುರುಷ ವಶೀಕರಣ, ಇನ್ನೂ ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿದ್ದರೂ ಕೇವಲ 2 ದಿನಗಳಲ್ಲಿ 100% ಪರಿಹಾರ ಮಾಡುತ್ತಾರೆ. 9945530666.

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ_ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

"ವಶೀಕರಣ ಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ. ಗುರೂಜಿ ಮಹೇಶ್ 9686999517

ವೈವಾಹಿಕ

Brides Wanted

Brahmin

MADHWA FOSTER SON 26 BE SOFTWARE HARISHTA GOTRA HOROSCOPE NOT REQUIRED 9886788161 lraghavendra333@gmail.com

Hindu

ವಿಚ್ಛೇದಿತ ೪೦ ವರ್ಷದ ವ್ಯಕ್ತಿಗೆ ವಧು ಬೇಕಿದೆ. ಮರಾಠ ಸಮುದಾಯದ ಶಿಂದೆ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ಸ್ವಂತ ವ್ಯಾಪಾರ ಮತ್ತು ಮನೆ ಇದೆ. ಸಂಪರ್ಕಿಸಿ : 9035773451 .

ಇತರೆ

For Sale

ಉತ್ತಮ ಗುಣಮಟ್ಟದ ಬಟರ್ ಫ್ರೂಟ್ ಸಸಿಗಳು ಮಾರಾಟಕ್ಕೆ ಇದೆ. ಕೂಡಲೇ ಸಂಪರ್ಕಿಸಿ 7349251301/ 9886170123

ಪ್ರವಾಸ

Travel

ಶ್ರೇಯಸ್ ಟೂರ್ಸ್★ 10.10.2021 10ದಿನಗಳು 40,000(ವಿಮಾನದಲ್ಲಿ) ಮುಕ್ತಿನಾಥ ಸಹಿತ ನೇಪಾಳ ರಾಷ್ಟ್ರ ಪ್ರವಾಸ ಕಠ್ಮಂಡು,ಪೋಕ್ರಾ, ಲುಂಬಿನಿ,ಚಿತಾವಾನ್,ಜನಕಪುರಿ, ಮನೋಕಾಮನದೇವಿ,. 16.10.2021 10ದಿನಗಳು ನೈಮಿಷ್ಯಾರಣ್ಯ,ಚಿತ್ರಕೂಟ, ಅಲಹಾಬಾದ್,ಕಾಶಿ,ಗಯಾ, ವಿಂದ್ಯಾವಾಸಿನಿ,ರಾಜ್‌ಗಿರ್, ದೇವಘರ್,.6.11.2021 10ದಿನಗಳು 1.ಅಖಂಡ ರಾಜಸ್ಥಾನ್ ರಾಜ್ಯಪ್ರವಾಸ, 2.ಅಖಂಡ ಗುಜರಾತ್ ರಾಜ್ಯ ಪ್ರವಾಸ. 8073824856/ 9206979202/ 9902050065

ದಸರ ರಜಾ ಪ್ರಯುಕ್ತ: 16.10.2021 7ದಿನಗಳ ತಮಿಳುನಾಡು, 24.10.2021 5ದಿನಗಳ ಕಾಶಿ,ಗಯಾ, 18.10.2021 12ದಿನಗಳ ಗುಜರಾತ್,ಮಧ್ಯಪ್ರದೇಶ, 18.10.2021, 24.10.2021 10ದಿನಗಳ ಲೇಹ್‌ಲಡಾಕ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9342848791, 9880847001

24-9-2021 ಚಿಕ್ಕಮಗಳೂರು, ಹೊರನಾಡು, ಶೃಂಗೇರಿ. 24-9-2021 ಗೋಕರ್ಣ, ಗುಣವಂತೆ, ಅಪ್ಸರಕೊಂಡ, ಇಕೋಬೀಚ್, ಹ್ಯಾಂಗಿಂಗ್ ಬ್ರಿಡ್ಜ್, ಯಾಣ, ವಿಭೂತಿಫಾಲ್ಸ್. ಅನುಗ್ರಹಯಾತ್ರಾ. 9880079351

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಜಿಎಸ್‌ಟಿಆರ್–1: ಜನವರಿ 1ರಿಂದ ಹೊಸ ನಿಯಮ

ನವದೆಹಲಿ (ಪಿಟಿಐ): ಹಿಂದಿನ ಒಂದು ತಿಂಗಳ ಜಿಎಸ್‌ಟಿಆರ್–3ಬಿ ವಿವರ ಸಲ್ಲಿಸದವರು, ತಾವು ಪೂರೈಕೆ ಮಾಡಿರುವ ವಸ್ತುಗಳ, ತಾವು ನೀಡಿದ ಸೇವೆಗಳ ವಿವರವನ್ನು ಜಿಎಸ್‌ಟಿಆರ್–1 ಮೂಲಕ ಸಲ್ಲಿಸುವ ಅವಕಾಶ 2022ರ ಜನವರಿ 1ರಿಂದ ಇರುವುದಿಲ್ಲ.

ಕೇಂದ್ರ ಜಿಎಸ್‌ಟಿ ನಿಯಮ 59 (6)ಗೆ ತಿದ್ದುಪಡಿ ತರುವ ಮೂಲಕ ಇದನ್ನು ಜಾರಿಗೆ ತರಲು ಜಿಎಸ್‌ಟಿ ಮಂಡಳಿಯು ನಿರ್ಧರಿಸಿದೆ.

ಸದ್ಯ ಇರುವ ನಿಯಮದ ಪ್ರಕಾರ, ಹಿಂದಿನ 2 ತಿಂಗಳುಗಳಲ್ಲಿ ಸತತವಾಗಿ ಜಿಎಸ್‌ಟಿಆರ್–3ಬಿ ವಿವರ ಸಲ್ಲಿಸದೇ ಇದ್ದರೆ ಅಂತಹವರಿಗೆ ಜಿಎಸ್‌ಟಿಆರ್–1 ಸಲ್ಲಿಸಲು ಸಾಧ್ಯವಾಗುವುದಿಲ್ಲ.

ತೆರಿಗೆ ಮರುಪಾವತಿಗೆ ಅರ್ಜಿ ಸಲ್ಲಿಸಲು ಜಿಎಸ್‌ಟಿ ನೋಂದಣಿ ಸಂಖ್ಯೆಯನ್ನು ಆಧಾರ್‌ನೊಂದಿಗೆ ಜೋಡಿಸುವುದನ್ನು ಕಡ್ಡಾಯ ಮಾಡಲಾಗಿದೆ.

ಸೋನು ಸೂದ್ ವಿರುದ್ಧ ₹ 20 ಕೋಟಿ ತೆರಿಗೆ ವಂಚನೆ ಆರೋಪ

ಒಂದನೇ ಪುಟದಿಂದ

ಮುಂಬೈ, ಲಖನೌ, ಖಾನಪುರ, ಜೈಪುರ, ದೆಹಲಿ ಮತ್ತು ಗುರುಗ್ರಾಮಗಳಲ್ಲಿನ 28 ಕಡೆಗಳಲ್ಲಿ ಶೋಧ ನಡೆಸಲಾಗಿತ್ತು. ಕಳೆದ ವರ್ಷ ಕೋವಿಡ್–19 ಲಾಕ್‌ಡೌನ್ ಸಂದರ್ಭದಲ್ಲಿ ಚಟುವಟಿಕೆ ಆರಂಭಿಸಿದ್ದ ಸೂದ್ ದತ್ತಿ ಪ್ರತಿಷ್ಠಾನ (ಚಾರಿಟಿ ಫೌಂಡೇಶನ್) ಬಗ್ಗೆಯೂ ಇಲಾಖೆ ಪ್ರಸ್ತಾಪಿಸಿದೆ.

ಈ ಪ್ರತಿಷ್ಠಾನವು ಕಳೆದ ವರ್ಷ ಜುಲೈ 21ರಂದು ಆರಂಭವಾಗಿದ್ದು, ಈ ವರ್ಷದ ಏಪ್ರಿಲ್ 1ರವರೆಗೆ ₹ 18.94 ಕೋಟಿ ದೇಣಿಗೆ ಸಂಗ್ರಹಿಸಿದೆ. ಅದರಲ್ಲಿ ವಿವಿಧ ಪರಿಹಾರ ಕಾರ್ಯಗಳಿಗಾಗಿ ₹ 1.9 ಕೋಟಿ ಖರ್ಚು ಮಾಡಲಾಗಿದೆ. ಉಳಿದ ₹ 17 ಕೋಟಿ ಬ್ಯಾಂಕ್ ಖಾತೆಯಲ್ಲಿ ಉಳಿದಿದೆ ಎಂದು ಹೇಳಿದೆ.

ಕ್ರೌಡ್ ಫಂಡಿಂಗ್ ಮೂಲಕ ವಿದೇಶಗಳಿಂದಲೂ ₹ 2.1 ಕೋಟಿ ಹಣ ಸಂಗ್ರಹಿಸಿದ್ದು, ಈ ಸಂದರ್ಭದಲ್ಲಿ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ಊರಿಗೆ ತೆರಳಲಾಗದೇ ಸಂಕಷ್ಟದಲ್ಲಿದ್ದ ವಲಸೆ ಕಾರ್ಮಿಕರಿಗೆ ಉಚಿತವಾಗಿ ರೈಲು, ವಿಮಾನ ಹಾಗೂ ವಾಹನ ಸೌಲಭ್ಯ ಕಲ್ಪಿಸಿದ್ದ ನಟ ಸೂದ್ ಕಾರ್ಯಕ್ಕೆ ದೇಶದಾದ್ಯಂತ ಮೆಚ್ಚುಗೆ ವ್ಯಕ್ತವಾಗಿತ್ತು.

ಸೋನು ಸೂದ್ ಅವರು ತಮ್ಮ ಸರ್ಕಾರದ 'ದೇಶ್ ಕಾ ಮೆಂಟರ್ಸ್' ಕಾರ್ಯಕ್ರಮದ ರಾಯಭಾರಿಯಾಗಲಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಇತ್ತೀಚೆಗಷ್ಟೇ ಪ್ರಕಟಿಸಿದ್ದರು.

ಸಂಕ್ಷಿಪ್ತ ಸುದ್ದಿ

ಜಾರ್ಖಂಡ್: ಹೊಂಡದಲ್ಲಿ ಮುಳುಗಿ 7 ಬಾಲಕಿಯರ ಸಾವು

ಲಾತೇಹಾರ್, ಜಾರ್ಖಂಡ್ (ಪಿಟಿಐ): 'ಕರ್ಮ ಪೂಜಾ' ವಿಧಿವಿಧಾನಗಳನ್ನು ನೆರವೇರಿಸಿದ ನಂತರ ನಡೆಯುವ ವಿಸರ್ಜನೆ ಕಾರ್ಯಕ್ರಮಕ್ಕಾಗಿ ತೆರಳಿದ್ದ ವೇಳೆ ಏಳು ಬಾಲಕಿಯರು ಹೊಂಡದಲ್ಲಿ ಮುಳುಗಿ ಮೃತಪಟ್ಟಿರುವುದು ಲಾತೇಹಾರ್ ಜಿಲ್ಲೆಯಲ್ಲಿ ಶನಿವಾರ ಸಂಭವಿಸಿದೆ.

ಜಿಲ್ಲೆಯ ಬಾಲೂಮತ ಪೊಲೀಸ್ ಠಾಣೆ ವ್ಯಾಪ್ತಿಯ ಬುಕ್ರು ಗ್ರಾಮದಲ್ಲಿ ಈ ಘಟನೆ ನಡೆದಿದೆ ಎಂದು ಜಿಲ್ಲಾಧಿಕಾರಿ ಅಬು ಇಮ್ರಾನ್ ತಿಳಿಸಿದ್ದಾರೆ.

'ಕರ್ಮ ಪೂಜಾ' ಎಂಬುದು ಜಾರ್ಖಂಡ್‌ನಲ್ಲಿ ಆಚರಿಸಲಾಗುವ ದೊಡ್ಡ ಹಬ್ಬಗಳಲ್ಲೊಂದು. ಪ್ರಕೃತಿಯನ್ನು ಪೂಜಿಸುವ ಹಬ್ಬವಾಗಿದೆ.

'ಘಟನಾ ಸ್ಥಳಕ್ಕೆ ರಕ್ಷಣಾ ತಂಡಗಳು ತೆರಳಿದ್ದು, ಹಲವರನ್ನು ರಕ್ಷಿಸಲಾಗಿದೆ. ಈ ಘಟನೆಯಲ್ಲಿ ಹಲವರು ಗಾಯಗೊಂಡಿದ್ದು, ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದೂ ತಿಳಿಸಿದ್ದಾರೆ.

ಕೋವಿಡ್ ಚರ್ಚೆಗೆ ಬೈಡನ್ ಆದ್ಯತೆ

ವಿಶ್ವಸಂಸ್ಥೆ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಮೊದಲ ಬಾರಿಗೆ ವಿಶ್ವಸಂಸ್ಥೆಯ ವಾರ್ಷಿಕ ಮಹಾ ಅಧಿವೇಶನದಲ್ಲಿ ಪಾಲ್ಗೊಳ್ಳುತ್ತಿದ್ದು, ತಮ್ಮ ಚೊಚ್ಚಲ ಭಾಷಣದಲ್ಲಿ ಕೋವಿಡ್ ಬಿಕ್ಕಟ್ಟು ನಿವಾರಣೆ, ಹವಾಮಾನ ಬದಲಾವಣೆ ವಿರುದ್ಧದ ಹೋರಾಟದ ಕುರಿತು ಮಾತನಾಡಲಿದ್ದಾರೆ ಎಂದು ವಿಶ್ವಸಂಸ್ಥೆಯಲ್ಲಿನ ಅಮೆರಿಕದ ರಾಯಭಾರಿ ತಿಳಿಸಿದ್ದಾರೆ.

ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ರಾಜ್ಯಗಳ ಬೇಡಿಕೆ

ಜಿಎಸ್‌ಟಿ ಪರಿಹಾರ ಅವಧಿ ವಿಸ್ತರಿಸಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ರಾಜ್ಯಗಳಿಗೆ ನೀಡುವ ಪರಿಹಾರವನ್ನು 2022ರ ಜೂನ್ ಬಳಿಕವೂ ವಿಸ್ತರಿಸುವಂತೆ ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ರಾಜ್ಯಗಳ ಹಣಕಾಸು ಸಚಿವರು ಜಿಎಸ್‌ಟಿ ಮಂಡಳಿಯ ಎದುರು ಬೇಡಿಕೆ ಇಟ್ಟಿದ್ದಾರೆ.

ಲಖನೌದಲ್ಲಿ ಶುಕ್ರವಾರ ನಡೆದ ಜಿಎಸ್‌ಟಿ ಮಂಡಳಿಯ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಜಿಎಸ್‌ಟಿ ವ್ಯವಸ್ಥೆಯಿಂದ ರಾಜ್ಯಗಳಿಗೆ ಆಗುವ ವರಮಾನ ಕೊರತೆ ತುಂಬಿಕೊಡಲು ನೀಡುವ ಪರಿಹಾರವು 2022ರ ಜೂನ್‌ಗೆ ಅಂತ್ಯಗೊಳ್ಳಲಿದೆ ಎಂದು ತಿಳಿಸಿದ್ದಾರೆ. ಆದರೆ, ಐಷಾರಾಮಿ ಸರಕುಗಳ ಮೇಲಿನ ವಿಧಿಸುವ ಪರಿಹಾರ ಸೆಸ್ ಅನ್ನು 2026ರ ಮಾರ್ಚ್‌ವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಪರಿಹಾರ ವ್ಯವಸ್ಥೆಯು ಮುಂದುವರಿಯಬೇಕು ಎಂದು ತಮಿಳುನಾಡು ಹಣಕಾಸು ಸಚಿವ ಪಿ. ತ್ಯಾಗರಾಜನ್ ಬೇಡಿಕೆ ಇಟ್ಟಿದ್ದಾರೆ. ಈ ವಿಷಯದ ಕುರಿತಾದ ನಿರ್ಧಾರವನ್ನು ಮುಂದೂಡುವಂತೆ ಸಭೆಯಲ್ಲಿ ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರವು ಈಗಾಗಲೇ ತೀವ್ರವಾದ ವರಮಾನ ಕೊರತೆ ಎದುರಿಸುತ್ತಿದೆ. ಹೀಗಾಗಿ ಜಿಎಸ್‌ಟಿ ಪರಿಹಾರವನ್ನು ವಿಸ್ತರಿಸುವಂತೆ ಕೇರಳ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲನ್ ಅವರು ಶನಿವಾರ ಒತ್ತಾಯಿಸಿದ್ದಾರೆ.

ಒಂದೊಮ್ಮೆ ಪರಿಹಾರ ವ್ಯವಸ್ಥೆಯನ್ನು ಮುಂದಿನ ವರ್ಷಕ್ಕೆ ನಿಲ್ಲಿಸಿದರೆ ರಾಜ್ಯವು ಇನ್ನಷ್ಟು ವರಮಾನ ಕೊರತೆ ಎದುರಿಸಬೇಕಾಗಿ ಬರಲಿದೆ. ಆದ್ದರಿಂದ ವಿಸ್ತರಣೆ ಆಗುವ ಭರವಸೆ ಇದೆ ಎಂದು ಹೇಳಿದ್ದಾರೆ.

ಪರಿಹಾರ ಸೆಸ್ ವಿಷಯವನ್ನು ಪರಿಶೀಲಿಸಲು ಸಚಿವರುಗಳ ತಂಡಕ್ಕೆ ನೀಡಬಹುದು ಎಂದು ದೆಹಲಿಯ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸಲಹೆ ನೀಡಿದ್ದಾರೆ.

ರಾಜ್ಯಗಳಿಗೆ ನೀಡಬೇಕಿರುವ ಜಿಎಸ್‌ಟಿ ಪರಿಹಾರ ಮೊತ್ತವು ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 2.59 ಲಕ್ಷ ಕೋಟಿಗಳಷ್ಟಾಗಲಿದೆ ಎಂದು ಕೇಂದ್ರ ಸರ್ಕಾರವು ಅಂದಾಜು ಮಾಡಿದೆ. ಇದರಲ್ಲಿ ₹ 1.59 ಲಕ್ಷ ಕೋಟಿ ಮೊತ್ತವನ್ನು ಈ ವರ್ಷ ಸಾಲ ಪಡೆಯಬೇಕಿದೆ.

ಹಿಂದಿನ ಹಣಕಾಸು ವರ್ಷದಲ್ಲಿಯೂ ಕೇಂದ್ರವು ಸಾಲ ಪಡೆದು ರಾಜ್ಯಗಳಿಗೆ ₹ 1.10 ಲಕ್ಷ ಕೋಟಿಗಳಷ್ಟು ಜಿಎಸ್‌ಟಿ ಪರಿಹಾರ ಮೊತ್ತ ನೀಡಿತ್ತು.

ಮುಖ್ಯಾಂಶಗಳು
- 2022ರ ಜೂನ್‌ಗೆ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನೀಡಿಕೆ ಅಂತ್ಯ
- ಪರಿಹಾರ ಸೆಸ್ 2026ರ ಮಾರ್ಚ್‌ವರೆಗೂ ವಿಸ್ತರಣೆ
- ಪ್ರಸಕ್ತ ಹಣಕಾಸು ವರ್ಷದಲ್ಲಿ ಪರಿಹಾರ ಮೊತ್ತ ₹ 2.59 ಲಕ್ಷ ಕೋಟಿ

'ಚಿನ್ನದ ಬಾಂಡ್: ಬೆಳಗಾವಿ ವಿಭಾಗದಲ್ಲಿ ದಾಖಲೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಭಾರತೀಯ ಅಂಚೆ ಇಲಾಖೆಯಿಂದ ಈಚೆಗೆ ನಡೆದ 'ಚಿನ್ನದ ಬಾಂಡ್' ಮಾರಾಟ ಪ್ರಕ್ರಿಯೆಯಲ್ಲಿ ಬೆಳಗಾವಿ ವಿಭಾಗದಲ್ಲಿ ದಾಖಲೆಯಾಗಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಶನಿವಾರ ಮಾಹಿತಿ ನೀಡಿದ ವಿಭಾಗದ ಅಂಚೆ ಸೂಪರಿಂಟೆಂಡೆಂಟ್ ಎಚ್.ಬಿ. ಹಸಬಿ, 'ನಮ್ಮ ವಿಭಾಗದಲ್ಲಿ 14 ಕೆ.ಜಿ.ಯಷ್ಟು ಚಿನ್ನದ ಬಾಂಡ್ ಖರೀದಿಯಾಗಿದೆ. ಇದರಿಂದ ₹ 6.50 ಕೋಟಿ ಸಂಗ್ರಹವಾಗಿದೆ. ಈ ಮೂಲಕ ವಿಭಾಗವು ದೇಶದಲ್ಲೇ ಮೊದಲ ಸ್ಥಾನ ಗಳಿಸಿದೆ' ಎಂದು ತಿಳಿಸಿದರು.

'1,300 ಮಂದಿ (ಅರ್ಜಿಗಳು) ಬಾಂಡ್‌ಗಳನ್ನು ಖರೀದಿಸಿದ್ದಾರೆ. ಇವರಲ್ಲಿ ಬೆಳಗಾವಿ ನಗರ ಹಾಗೂ ತಾಲ್ಲೂಕಿನವರು ಹೆಚ್ಚಿದ್ದಾರೆ. 2019ರಲ್ಲಿ 213 ಅರ್ಜಿಗಳ ಮೂಲಕ 3,481 ಗ್ರಾಂ ಚಿನ್ನದ ಬಾಂಡ್ ಖರೀದಿಯಾಗಿತ್ತು' ಎಂದು ತಿಳಿಸಿದರು.

'ಈ ಹೂಡಿಕೆಗೆ ಜಿಎಸ್‌ಟಿ ಹೊರೆ ಇಲ್ಲ; ಟಿಡಿಎಸ್ ಕಡಿತ ಆಗುವುದಿಲ್ಲ. ಚಿನ್ನ ಖರೀದಿ ಮೇಲಿನ ಮೇಕಿಂಗ್ ಹಾಗೂ ವೇಸ್ಟೇಜ್ ಶುಲ್ಕದ ಹೊರೆ ಇದರಲ್ಲಿರುವುದಿಲ್ಲ. ಅಗತ್ಯ ಬಿದ್ದಾಗ ಅಡವಿಟ್ಟು ಸಾಲ ಪಡೆಯುವ ಅನುಕೂಲವೂ ಇದೆ. ಆದ್ದರಿಂದ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ' ಎಂದು ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

18-9-2021

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1595 (1595)
ಒಂದು ವಾರದ ಡೆಲಿವರಿ	1590 (1590)
ಸೋಯಾ ಕಚ್ಚಾ	1300 (1302)
ಪಾಮ್ ವಾರದ ಡೆಲಿವರಿ	1208 (1211)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,050 (45,950)
ಬೆಳ್ಳಿ ಕೆ.ಜಿ 60,000 (60,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-49000
ಹಳತು	42500-51000
ಚಿತ್ರದುರ್ಗ	
ಅಪಿ	54039-54469
ಬೆಟ್ಟೆ	39719-40199
ಕೆಂಪುಗೋಟು	32600-33000
ರಾಶಿ	53529-53979
ಕುಮಟ	
ಚಿಪ್ಪು	38679-41299
ಕೋಕ	22019-40169
ಫ್ಯಾಕ್ಟರಿ	20699-21860
ಹೊಸಚಾಲಿ	45699-47569
ಹಳೆಚಾಲಿ	46099-46099
ಕುಂದಾಪುರ	
ಹಳೆಚಾಲಿ	36000-52000
ಹೊಸಚಾಲಿ	36000-46000
ಪುತ್ತೂರು	
ಕೋಕ	10500-26000
ಹೊಸತು	34500-49000
ಶಿರಸಿ	
ಬೆಟ್ಟೆ	38690-49999
ಬಿಳಿಗೋಟು	30899-44192
ಚಾಲಿ	44899-48499
ರಾಶಿ	46030-52299
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	220-486
ದ್ವಿತಳಿ (ಬಿ.ವಿ)	245-580

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13800	13000	13000	188.15ಸೆಂಟ್ಸ್
ಎಸಿ	6300	4800	5150	
ಆರ್‌ಪಿ	6300	6100	6300	ಲಂಡನ್
ಆರ್‌ಸಿ	3590	3500	3675	2107 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1585 (1585)
ಸೋಯಾ (ರಿಫೈನ್ಡ್)	₹1350(1355)
ಸೂರ್ಯಕಾಂತಿ(ರಿಫೈನ್ಡ್)	₹1380(1380)
ಪಾಮೋಲಿನ್	₹1210 (1213)

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮರಳುನಾಡಿನಲ್ಲಿ ಮತ್ತೆ ಐಪಿಎಲ್ ಹಬ್ಬ

ದುಬೈ (ಪಿಟಿಐ): ಮರಳುಗಾಡಿನ ನಾಡಿನಲ್ಲಿ ಈಗ ಮತ್ತೆ ಇಂಡಿಯನ್ ಪ್ರೀಮಿಯರ್ ಕ್ರಿಕೆಟ್ ಲೀಗ್ ಹಬ್ಬದ ಸಂಭ್ರಮ.

ಹೋದ ವರ್ಷ ಇಡೀ ಟೂರ್ನಿಯನ್ನು ಆಯೋಜಿಸಿ ಸೈ ಎನಿಸಿಕೊಂಡಿದ್ದ ಯುನೈಟೆಡ್ ಅರಬ್ ಎಮಿರೇಟ್ಸ್ ಈ ಬಾರಿ ಐಪಿಎಲ್‌ನ ದ್ವಿತೀಯಾರ್ಧವನ್ನು ನಡೆಸಿಕೊಡಲಿದೆ. ಹೋದ ಏಪ್ರಿಲ್–ಮೇ ನಲ್ಲಿ ಭಾರತದಲ್ಲಿಯೇ ಆಯೋಜನೆಗೊಂಡಿದ್ದ 14ನೇ ಆವೃತ್ತಿಯ ಟೂರ್ನಿಯ ಬಯೋಬಬಲ್ ವ್ಯವಸ್ಥೆಯೊಳಗಿದ್ದ ಕೆಲವು ಆಟಗಾರರು, ಸಿಬ್ಬಂದಿಗೆ ಕೋವಿಡ್ ಸೋಂಕು ಕಾಣಿಸಿಕೊಂಡಿತ್ತು. ಅದರಿಂದಾಗಿ ಅರ್ಧಕ್ಕೆ ನಿಲ್ಲಿಸಲಾಗಿತ್ತು.

ಅದರ ಮುಂದುವರಿದ ಭಾಗ ಭಾನುವಾರದಿಂದ ಗಲ್ಫ್ ನಾಡಿನಲ್ಲಿ ಶುರುವಾಗಲಿದೆ. ಮುಂದಿನ ತಿಂಗಳು ಇಲ್ಲಿಯೇ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಪೂರ್ವಭಾವಿ ಸಿದ್ಧತಾ ವೇದಿಕೆಯಾಗಿಯೂ ಈ ಐಪಿಎಲ್ ಗಮನ ಸೆಳೆಯುತ್ತಿದೆ.

ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಹೋದ ವಾರವಷ್ಟೇ ಇಂಗ್ಲೆಂಡ್‌ನಲ್ಲಿದ್ದ ಭಾರತ ತಂಡದಲ್ಲಿ ಕೋಚ್, ನೆರವುಸಿಬ್ಬಂದಿಗೆ ಕೋವಿಡ್ ಸೋಂಕು ತಗುಲಿತ್ತು. ಅದರಿಂದಾಗಿ ಇಂಗ್ಲೆಂಡ್ ಎದುರಿನ ಕೊನೆಯ ಟೆಸ್ಟ್ ಕೂಡ ನಡೆದಿ ರಲಿಲ್ಲ. ಆ ಸಂದರ್ಭದಲ್ಲಿ ಐಪಿಎಲ್ ನಡೆಯುವ ಕುರಿತು ಅನುಮಾನಗಳು ವ್ಯಕ್ತವಾಗಿದ್ದವು. ಆದರೆ, ಇಂಗ್ಲೆಂಡ್ ಮತ್ತು ಭಾರತದ ಆಟಗಾರರು ದುಬೈಗೆ ಸುರಕ್ಷಿತವಾಗಿ ಬಂದಿಳಿಯುವ ಮೂಲಕ ಸಮಸ್ಯೆ ಪರಿಹಾರವಾಗಿದೆ.

ಟಿ20 ವಿಶ್ವಕಪ್ ಟೂರ್ನಿಗೆ ಈಗಾಗಲೇ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಆದರೆ, ಕೊನೆಯ ಕ್ಷಣದಲ್ಲಿ ಗಾಯ ಮತ್ತಿತರ ಸಮಸ್ಯೆಗಳಿಂದಾಗಿ ಯಾರಾದರೂ ಹಿಂದೆ ಸರಿದರೆ ಅವರ ಬದಲಿಗೆ ಅವಕಾಶ ಆಯ್ಕೆ ಮಾಡಲು ಅಕ್ಟೋಬರ್ 10ರವರೆಗೆ ಸಮಯ ಇದೆ.

ಆದ್ದರಿಂದ ಐಪಿಎಲ್‌ನಲ್ಲಿ ಉತ್ತಮವಾಗಿ ಆಡಿ, ಆಯ್ಕೆದಾರರ ಗಮನ ಸೆಳೆಯುವ ಸಣ್ಣ ಅವಕಾಶ ಇನ್ನೂ ಇದೆ.

ಪ್ರೇಕ್ಷಕರಿಗೆ ಅವಕಾಶ

ಈ ಟೂರ್ನಿಯಲ್ಲಿ ಪಂದ್ಯಗಳನ್ನು ವೀಕ್ಷಿಸಲು ಪ್ರೇಕ್ಷಕರಿಗೆ ಅವಕಾಶ ನೀಡಲಾಗುತ್ತಿದೆ.

ದುಬೈನಲ್ಲಿ ಕೋವಿಡ್ ನಿಯಂತ್ರಣದಲ್ಲಿರುವ ಕಾರಣ ಸ್ಥಳೀಯ ಆಡಳಿತ ಮತ್ತು ಕ್ರಿಕೆಟ್ ಮಂಡಳಿಯು ಈ ನಿರ್ಧಾರ ಕೈಗೊಂಡಿದೆ. ಸೀಮಿತ ಸಂಖ್ಯೆಯಲ್ಲಿ ಪ್ರೇಕ್ಷಕರಿಗೆ ಅವಕಾಶ ನೀಡಲಾಗುವುದು.

ತಂಡಗಳು ಈಗಾಗಲೇ ಇಲ್ಲಿಗೆ ಬಂದಿಳಿದಿದ್ದು, ಕಡ್ಡಾಯ ಕ್ವಾರಂಟೈನ್ ಅವಧಿಯನ್ನು ಪೂರೈಸಿ, ಅಭ್ಯಾಸವನ್ನೂ ನಡೆಸುತ್ತಿವೆ.

ಮೊದಲ ಹಂತದ ಪಾಯಿಂಟ್ ಪಟ್ಟಿಯ ಮುಂಚೂಣಿಯಲ್ಲಿದ್ದ ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್, ಮಹೇಂದ್ರಸಿಂಗ್ ಧೋನಿಯ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಇಲ್ಲಿಯೂ ಪೈಪೋಟಿ ನಡೆಸುವ ನಿರೀಕ್ಷೆ ಇದೆ.

ಕನ್ನಡಿಗ ಕೆ.ಎಲ್. ರಾಹುಲ್ ನಾಯಕರಾಗಿರುವ ಪಂಜಾಬ್ ಕಿಂಗ್ಸ್, ಕೇನ್ ವಿಲಿಯಮ್ಸನ್ ನಾಯಕತ್ವದ ಸನ್‌ರೈಸರ್ಸ್ ಹೈದರಾಬಾದ್ ತಂಡಗಳೂ ಪುಟಿದೇಳುವ ನಿರೀಕ್ಷೆ ಇದೆ.

ಕೋವಿಡ್ ನಿಯಮಾವಳಿಯ ಕಟ್ಟುನಿಟ್ಟಿನ ಪಾಲನೆಯ ಜೊತೆಗೆ ಪ್ರಶಸ್ತಿ ಜಯದತ್ತಲೂ ಕಣ್ಣು ನೆಟ್ಟಿರುವ ಆಟಗಾರರಿಗೆ ಇಲ್ಲಿಯ ಬಿಸಿ ವಾತಾವರಣವೂ ಸವಾಲೊಡ್ಡಲಿದೆ. ಆಯೋಜಕರು ಮತ್ತು ಆತಿಥೇಯರಿಗೂ ಇದು ಪ್ರತಿಷ್ಠೆಯ ಸವಾಲು ಕೂಡ ಆಗಿದೆ.

ಈ ಟೂರ್ನಿಯ ಯಶಸ್ಸು ಟಿ20 ವಿಶ್ವಕಪ್ ಆಯೋಜನೆಗೂ ಹುರುಪು ತುಂಬುವುದರಲ್ಲಿ ಸಂದೇಹವಿಲ್ಲ ಎನ್ನಲಾಗಿದೆ.

ಮಹೇಂದ್ರಸಿಂಗ್ ಧೋನಿ

ರೋಹಿತ್ ಶರ್ಮಾ

ಮುಯ್ಯಿ ತೀರಿಸಿಕೊಳ್ಳುವತ್ತ ಧೋನಿ ಚಿತ್ತ

ಐಪಿಎಲ್ ಟೂರ್ನಿಯ ಮೊದಲಾರ್ಧದಲ್ಲಿ ಮುಂಬೈ ಇಂಡಿಯನ್ಸ್ ಎದುರು ಸೋತಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈಗ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ.

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಅವತ್ತು ಮುಂಬೈ ತಂಡವು ನಾಲ್ಕು ವಿಕೆಟ್‌ಗಳಿಂದ ಗೆದ್ದಿತ್ತು. ಚೆನ್ನೈ ನೀಡಿದ್ದ 218 ರನ್‌ಗಳ ಗುರಿಯನ್ನು ಸಾಧಿಸುವಲ್ಲಿ ಮುಂಬೈ ಯಶಸ್ವಿಯಾಗಿತ್ತು. ಅಂಬಟಿ ರಾಯುಡು ಅವರ ಅಮೋಘ ಅರ್ಧಶತಕ ವ್ಯರ್ಥವಾಗಿತ್ತು.

ಆದರೆ, ಕೀರನ್ ಪೊಲಾರ್ಡ್ ಅವರ ಅಬ್ಬರದ 87 ರನ್‌ಗಳ ಆಟಕ್ಕೆ ಜಯ ಒಲಿದಿತ್ತು. ರೋಹಿತ್ ಶರ್ಮಾ ಬಳಗವು ಜಯದ ಸಂಭ್ರಮ ಆಚರಿಸಿತ್ತು.

ಆ ಹಂತದಲ್ಲಿ ಧೋನಿ ಬಳಗವು ಏಳು ಪಂದ್ಯಗಳ ಪೈಕಿ ಐದರಲ್ಲಿ ಗೆದ್ದು ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಅಷ್ಟೇ ಪಂದ್ಯಗಳನ್ನು ಆಡಿರುವ ಮುಂಬೈ ನಾಲ್ಕರಲ್ಲಿ ಗೆದ್ದು ನಾಲ್ಕನೇ ಸ್ಥಾನದಲ್ಲಿದೆ. ಎರಡೂ ತಂಡಗಳಲ್ಲಿ ಅಬ್ಬರದ ಬ್ಯಾಟ್ಸ್‌ಮನ್‌ಗಳು ಮತ್ತು ಆಲ್‌ರೌಂಡರ್‌ಗಳು ಇರುವುದರಿಂದ ಮತ್ತೊಮ್ಮೆ ರನ್‌ಗಳ ಹೊಳೆ ಹರಿಯುವ ಸಾಧ್ಯತೆ ಇದೆ.

ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

‘ಹಸರಂಗ, ಚಮೀರ ಬಲ’

ದುಬೈ (ಪಿಟಿಐ): ‘ಹೊಸ ಆಟಗಾ ರರ ಬರುವಿಕೆಯಿಂದ ತಂಡ ಬಲ ಪಡೆದುಕೊಂಡಿದ್ದು ಎರಡನೇ ಲೆಗ್‌ನಲ್ಲಿ ಇನ್ನಷ್ಟು ಉತ್ತಮ ಸಾಧನೆ ಮಾಡುವ ನಿರೀಕ್ಷೆ ಇದೆ’ ಎಂದು ಆರ್‌ಸಿಬಿ ನಾಯಕ ವಿರಾಟ್ ಕೊಹ್ಲಿ ಹೇಳಿದ್ದಾರೆ.

‘ಶ್ರೀಲಂಕಾದ ವನಿಂದು ಹಸರಂಗ ಮತ್ತು ದುಷ್ಮಂತ ಚಮೀರ ಸೇರ್ಪಡೆಯಿಂದಾಗಿ ತಂಡ ಹೊಸ ರೂಪ ಪಡೆದುಕೊಂಡಿದೆ. ಕೇನ್ ರಿಚರ್ಡ್ಸನ್ ಮತ್ತು ಆ್ಯಡಂ ಜಂಪಾ ಅವರು ಎರಡನೇ ಲೆಗ್‌ನಲ್ಲಿ ಆಡದೇ ಇರಲು ನಿರ್ಧರಿಸಿದ್ದಾರೆ. ಇದಕ್ಕೆ ಅವರು ನೀಡಿರುವ ಕಾರಣಗಳು ಸೂಕ್ತವಾಗಿವೆ’ ಎಂದು ತಂಡದ ವಿಶೇಷ ಜೆರ್ಸಿ ಬಿಡುಗಡೆ ಸಮಾರಂಭದಲ್ಲಿ ಕೊಹ್ಲಿ ಅಭಿಪ್ರಾಯಪಟ್ಟರು.

‘ಹಸರಂಗ ಮತ್ತು ಚಮೀರ ಯುಎಇಯ ವಾತಾವರಣಕ್ಕೆ ಅತ್ಯಂತ ಸೂಕ್ತ. ಶ್ರೀಲಂಕಾದಲ್ಲಿ ಸಾಕಷ್ಟು ಕ್ರಿಕೆಟ್ ಆಡಿರುವ ಅವರು ಇಂಥ ಪಿಚ್‌ಗಳಲ್ಲಿ ಹೇಗೆ ಆಡಬೇಕು ಎಂಬುದನ್ನು ಚೆನ್ನಾಗಿ ಬಲ್ಲರು’ ಎಂದು ಕೊಹ್ಲಿ ನುಡಿದರು.

ಸೋಮವಾರ ನಡೆಯುವ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಆರ್‌ಸಿಬಿ ಎರಡನೇ ಲೆಗ್‌ನ ಅಭಿಯಾನ ಆರಂಭಿಸಲಿದೆ.

ಈ ಪಂದ್ಯಕ್ಕೆ ಅಬುಧಾಬಿ ಆತಿಥ್ಯ ವಹಿಸಲಿದೆ. ಕೋವಿಡ್ ತಡೆಗಾಗಿ ಶ್ರಮಿಸುತ್ತಿರುವ ಆರೋಗ್ಯ ಕಾರ್ಯಕರ್ತರಿಗೆ ಗೌರವ ಸೂಚಿಸುವುದಕ್ಕಾಗಿ ಈ ಪಂದ್ಯದಲ್ಲಿ ಕೊಹ್ಲಿ ಬಳಗ ವಿಶೇಷ ಜೆರ್ಸಿ ತೊಟ್ಟು ಆಡಲಿದೆ. ಈ ಜೆರ್ಸಿಗಳನ್ನು ಹರಾಜು ಮಾಡಿ ಬರುವ ಹಣವನ್ನು ಭಾರತದಲ್ಲಿ ಬಡವರ ಲಸಿಕೆಗಾಗಿ ಬಳಸಲಾಗುವುದು ಎಂದು ಆರ್‌ಸಿಬಿ ತಿಳಿಸಿದೆ.

ವಿಶೇಷ ಜೆರ್ಸಿಯೊಂದಿಗೆ ವಿರಾಟ್ ಕೊಹ್ಲಿ –ಟ್ವಿಟರ್ ಚಿತ್ರ

ವೇಳಾಪಟ್ಟಿ

ದಿನಾಂಕ	ಸ್ಥಳ	ಪಂದ್ಯ	ಆರಂಭ (ಭಾರತೀಯ ಕಾಲಮಾನ)
ಸೆ.19	ದುಬೈ	ಚೆನ್ನೈ ಸೂಪರ್ ಕಿಂಗ್ಸ್–ಮುಂಬೈ ಇಂಡಿಯನ್ಸ್	ಸಂಜೆ 7.30
ಸೆ.20	ಅಬುಧಾಬಿ	ಕೋಲ್ಕತ್ತ ನೈಟ್ ರೈಡರ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ಸಂಜೆ 7.30
ಸೆ.21	ದುಬೈ	ಪಂಜಾಬ್ ಕಿಂಗ್ಸ್–ರಾಜಸ್ಥಾನ ರಾಯಲ್ಸ್	ಸಂಜೆ 7.30
ಸೆ.22	ದುಬೈ	ಡೆಲ್ಲಿ ಕ್ಯಾಪಿಟಲ್ಸ್–ಸನ್‌ರೈಸರ್ಸ್ ಹೈದರಾಬಾದ್	ಸಂಜೆ 7.30
ಸೆ.23	ಅಬುಧಾಬಿ	ಮುಂಬೈ ಇಂಡಿಯನ್ಸ್–ಕೋಲ್ಕತ್ತ ನೈಟ್ ರೈಡರ್ಸ್	ಸಂಜೆ 7.30
ಸೆ.24	ಶಾರ್ಜಾ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಚೆನ್ನೈ ಸೂಪರ್ ಕಿಂಗ್ಸ್	ಸಂಜೆ 7.30
ಸೆ.25	ಅಬುಧಾಬಿ	ಡೆಲ್ಲಿ ಕ್ಯಾಪಿಟಲ್ಸ್–ರಾಜಸ್ಥಾನ ರಾಯಲ್ಸ್	ಮಧ್ಯಾಹ್ನ 3.30
ಸೆ.25	ಶಾರ್ಜಾ	ಸನ್‌ರೈಸರ್ಸ್ ಹೈದರಾಬಾದ್–ಪಂಜಾಬ್ ಕಿಂಗ್ಸ್	ಸಂಜೆ 7.30
ಸೆ.26	ಅಬುಧಾಬಿ	ಚೆನ್ನೈ ಸೂಪರ್ ಕಿಂಗ್ಸ್–ಕೋಲ್ಕತ್ತ ನೈಟ್ ರೈಡರ್ಸ್	ಮಧ್ಯಾಹ್ನ 3.30
ಸೆ.26	ದುಬೈ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಮುಂಬೈ ಇಂಡಿಯನ್ಸ್	ಸಂಜೆ 7.30
ಸೆ.27	ದುಬೈ	ಸನ್‌ರೈಸರ್ಸ್ ಹೈದರಾಬಾದ್–ರಾಜಸ್ಥಾನ ರಾಯಲ್ಸ್	ಸಂಜೆ 7.30
ಸೆ.28	ಶಾರ್ಜಾ	ಕೋಲ್ಕತ್ತ ನೈಟ್ ರೈಡರ್ಸ್–ಡೆಲ್ಲಿ ಕ್ಯಾಪಿಟಲ್ಸ್	ಮಧ್ಯಾಹ್ನ 3.30
ಸೆ.28	ಅಬುಧಾಬಿ	ಮುಂಬೈ ಇಂಡಿಯನ್ಸ್–ಪಂಜಾಬ್ ಕಿಂಗ್ಸ್	ಸಂಜೆ 7.30
ಸೆ.29	ದುಬೈ	ರಾಜಸ್ಥಾನ ರಾಯಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ಸಂಜೆ 7.30
ಸೆ.30	ಶಾರ್ಜಾ	ಸನ್‌ರೈಸರ್ಸ್ ಹೈದರಾಬಾದ್–ಚೆನ್ನೈ ಸೂಪರ್ ಕಿಂಗ್ಸ್	ಸಂಜೆ 7.30
ಅ.1	ದುಬೈ	ಕೋಲ್ಕತ್ತ ನೈಟ್ ರೈಡರ್ಸ್–ಪಂಜಾಬ್ ಕಿಂಗ್ಸ್	ಸಂಜೆ 7.30
ಅ.2	ಶಾರ್ಜಾ	ಮುಂಬೈ ಇಂಡಿಯನ್ಸ್–ಡೆಲ್ಲಿ ಕ್ಯಾಪಿಟಲ್ಸ್	ಮಧ್ಯಾಹ್ನ 3.30
ಅ.2	ಅಬುಧಾಬಿ	ರಾಜಸ್ಥಾನ ರಾಯಲ್ಸ್–ಚೆನ್ನೈ ಸೂಪರ್ ಕಿಂಗ್ಸ್	ಸಂಜೆ 7.30
ಅ.3	ಶಾರ್ಜಾ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಪಂಜಾಬ್ ಕಿಂಗ್ಸ್	ಮಧ್ಯಾಹ್ನ 3.30
ಅ.3	ದುಬೈ	ಕೋಲ್ಕತ್ತ ನೈಟ್ ರೈಡರ್ಸ್–ಸನ್‌ರೈಸರ್ಸ್ ಹೈದರಾಬಾದ್	ಸಂಜೆ 7.30
ಅ.4	ದುಬೈ	ಡೆಲ್ಲಿ ಕ್ಯಾಪಿಟಲ್ಸ್–ಚೆನ್ನೈ ಸೂಪರ್ ಕಿಂಗ್ಸ್	ಸಂಜೆ 7.30
ಅ.5	ಶಾರ್ಜಾ	ರಾಜಸ್ಥಾನ ರಾಯಲ್ಸ್–ಮುಂಬೈ ಇಂಡಿಯನ್ಸ್	ಸಂಜೆ 7.30
ಅ.6	ಅಬುಧಾಬಿ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಸನ್‌ರೈಸರ್ಸ್ ಹೈದರಾಬಾದ್	ಸಂಜೆ 7.30
ಅ.7	ದುಬೈ	ಚೆನ್ನೈ ಸೂಪರ್ ಕಿಂಗ್ಸ್–ಪಂಜಾಬ್ ಕಿಂಗ್ಸ್	ಮಧ್ಯಾಹ್ನ 3.30
ಅ.7	ಶಾರ್ಜಾ	ಕೋಲ್ಕತ್ತ ನೈಟ್ ರೈಡರ್ಸ್–ರಾಜಸ್ಥಾನ ರಾಯಲ್ಸ್	ಸಂಜೆ 7.30
ಅ.8	ಅಬುಧಾಬಿ	ಸನ್‌ರೈಸರ್ಸ್ ಹೈದರಾಬಾದ್–ಮುಂಬೈ ಇಂಡಿಯನ್ಸ್	ಮಧ್ಯಾಹ್ನ 3.30
ಅ.8	ದುಬೈ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಡೆಲ್ಲಿ ಕ್ಯಾಪಿಟಲ್ಸ್	ಸಂಜೆ 7.30
ಅ.10	ದುಬೈ	ಮೊದಲ ಕ್ವಾಲಿಫೈಯರ್	ಸಂಜೆ 7.30
ಅ.11	ಶಾರ್ಜಾ	ಎಲಿಮಿನೇಟರ್	ಸಂಜೆ 7.30
ಅ.13	ಶಾರ್ಜಾ	ಎರಡನೇ ಕ್ವಾಲಿಫೈಯರ್	ಸಂಜೆ 7.30
ಅ.15	ದುಬೈ	ಫೈನಲ್	ಸಂಜೆ 7.30

ಆಧಾರ: ಐಪಿಎಲ್ ವೆಬ್‌ಸೈಟ್

ಇನಿಂಗ್ಸ್‌ವೊಂದರಲ್ಲಿ ಗರಿಷ್ಠ ಮೊತ್ತ

ತಂಡ	ಮೊತ್ತ	ಎದುರಾಳಿ
ಪಂಜಾಬ್	6ಕ್ಕೆ221	ರಾಜಸ್ಥಾನ
ಕನಿಷ್ಠ ಮೊತ್ತ		
ಪಂಜಾಬ್	8ಕ್ಕೆ106	ಚೆನ್ನೈ

ಅತಿ ಹೆಚ್ಚು ರನ್ ಗಳಿಸಿದವರು

ಆಟಗಾರ	ತಂಡ	ಪಂದ್ಯ	ರನ್
ಶಿಖರ್ ಧವನ್	ಡೆಲ್ಲಿ	8	380
ಕೆ.ಎಲ್. ರಾಹುಲ್	ಪಂಜಾಬ್	7	331
ಫಫ್ ಡುಪ್ಲೆಸಿ	ಚೆನ್ನೈ	7	320

ಅತ್ಯುತ್ತಮ ಬೌಲಿಂಗ್ ಎಕಾನಮಿ

ಬೌಲರ್	ತಂಡ	ಎಕಾನಮಿ ರೇಟ್
ಇಮ್ರಾನ್ ತಾಹೀರ್	ಚೆನ್ನೈ	4
ಮೊಯಿಸೆಸ್ ಹೆನ್ರಿಕ್ಸ್	ಪಂಜಾಬ್	4.80
ಹರ್‌ಪ್ರೀತ್ ಬ್ರಾರ್	ಪಂಜಾಬ್	5.42

ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರ ಮೂರು ತಂಡಗಳು

ತಂಡ	ಪಾಯಿಂಟ್ಸ್
ಡೆಲ್ಲಿ ಕ್ಯಾಪಿಟಲ್ಸ್	12
ಚೆನ್ನೈ ಸೂಪರ್ ಕಿಂಗ್ಸ್	10
ರಾಯಲ್ ಚಾಲೆಂಜರ್ಸ್ ಬೆಂಗಳೂರು	10

ಅತಿಹೆಚ್ಚು ದೂರ ಸಿಕ್ಸರ್ ಸಿಡಿಸಿದವರು

ಆಟಗಾರ	ತಂಡ	ಸಿಕ್ಸರ್ ಮೀಟರ್
ಕೀರನ್ ಪೊಲಾರ್ಡ್	ಮುಂಬೈ	105
ಗ್ಲೆನ್ ಮ್ಯಾಕ್ಸ್‌ವೆಲ್	ಬೆಂಗಳೂರು	100
ಸೂರ್ಯ ಕುಮಾರ್ ಯಾದವ್	ಮುಂಬೈ	99

ಅತಿಹೆಚ್ಚು ಬೌಂಡರಿ ಗಳಿಸಿದವರು

ಬ್ಯಾಟ್ಸ್‌ಮನ್	ತಂಡ	ಬೌಂಡರಿ
ಶಿಖರ್ ಧವನ್	ಡೆಲ್ಲಿ	43
ಪೃಥ್ವಿ ಶಾ	ಡೆಲ್ಲಿ	37
ಫಫ್ ಡು ಪ್ಲೆಸಿ	ಚೆನ್ನೈ	29

ಹೆಚ್ಚು ಅರ್ಧಶತಕ ಗಳಿಸಿದವರು

ಕೆ.ಎಲ್.ರಾಹುಲ್	4
ಫಫ್ ಡು ಪ್ಲೆಸಿ	4
ಶಿಖರ್ ಧವನ್	3
ಪೃಥ್ವಿ ಶಾ	3

ಶತಕ ಗಳಿಸಿದ ಆಟಗಾರರು

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	124
ಸಂಜು ಸ್ಯಾಮ್ಸನ್	ರಾಜಸ್ಥಾನ	119
ದೇವದತ್ತ ಪಡಿಕ್ಕಲ್	ಬೆಂಗಳೂರು	101*

ಅತಿ ಹೆಚ್ಚು ವಿಕೆಟ್ ಗಳಿಸಿದವರು

ಆಟಗಾರ	ತಂಡ	ಪಂದ್ಯ	ವಿಕೆಟ್
ಹರ್ಷಲ್ ಪಟೇಲ್	ಬೆಂಗಳೂರು	7	17
ಆವೇಶ್ ಖಾನ್	ಡೆಲ್ಲಿ	8	14
ಕ್ರಿಸ್ ಮೋರಿಸ್	ರಾಜಸ್ಥಾನ	7	14

ಪುಸ್ತಕ ಬಿಡುಗಡೆ ಕಾರ್ಯಕ್ರಮದಿಂದ ಕೋವಿಡ್ ಹರಡಲಿಲ್ಲ: ರವಿಶಾಸ್ತ್ರಿ

ಲಂಡನ್ (ಪಿಟಿಐ): ತಮ್ಮ ಪುಸ್ತಕ ಬಿಡುಗಡೆ ಸಮಾರಂಭದ ಮೂಲಕ ಕೋವಿಡ್ ಪ್ರಸರಣವಾಗಿದೆ ಎಂಬ ಆರೋಪಗಳನ್ನು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರವಿಶಾಸ್ತ್ರಿ ತಳ್ಳಿಹಾಕಿದ್ದಾರೆ.

ಈಚೆಗೆ ಓವಲ್ ಟೆಸ್ಟ್ ಪಂದ್ಯದ ಸಂದರ್ಭದಲ್ಲಿ ಶಾಸ್ತ್ರಿಯವರ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆದಿತ್ತು. ಅದಾಗಿ ಒಂದೆರಡು ದಿನಗಳಲ್ಲಿ ಶಾಸ್ತ್ರಿ, ಫೀಲ್ಡಿಂಗ್‌ಕೋಚ್ ಆರ್. ಶ್ರೀಧರ್, ಬೌಲಿಂಗ್ ಕೋಚ್ ಭರತ್ ಅರುಣ್ ಮತ್ತು ಫಿಸಿಯೊ ನಿತಿನ್ ಪಟೇಲ್ ಅವರಿಗೆ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಅದರ ನಂತರ ಮ್ಯಾಂಚೆಸ್ಟರ್‌ನಲ್ಲಿ ಐದನೇ ಟೆಸ್ಟ್ ಪಂದ್ಯಕ್ಕೂ ಮುನ್ನಾದಿನ ಭಾರತ ತಂಡದ ಸಹಾಯಕ ಫಿಸಿಯೊ ಯೋಗೇಶ್ ಪರ್ಮಾರ್ ಅವರಿಗೂ ಸೋಂಕು ಖಚಿತವಾಗಿತ್ತು. ಅದರಿಂದಾಗಿ ಪಂದ್ಯವನ್ನೇ ನಡೆಸಲಿಲ್ಲ. ಆಗ ರವಿಶಾಸ್ತ್ರಿ ಪುಸ್ತಕ ಸಮಾರಂಭದ ಬಗ್ಗೆ ಕೆಲವರು ಟೀಕೆ ಮಾಡಿದ್ದರು.

‘ಕಾರ್ಯಕ್ರಮದಿಂದಾಗಿ ಕೋವಿಡ್ ಪ್ರಸರಣವಾಗಿದೆಯೆಂದು ನಾನು ಒಪ್ಪುವುದಿಲ್ಲ. ಸಮಾರಂಭವು ಬಹಳ ಚೆನ್ನಾಗಿತ್ತು. ಆಟಗಾರರು ತಮ್ಮ ಕೋಣೆಯೊಳಗೆ ಇದ್ದು ಬೇಸರಗೊಂಡಿದ್ದರು. ಅವರಿಗೂ ಬೇರೆಯವರನ್ನು ಭೇಟಿಯಾಗುವ ಅವಕಾಶ ಈ ಸಮಾರಂಭದಲ್ಲಿ ಲಭಿಸಿತ್ತು’ ಎಂದು ಶಾಸ್ತ್ರಿ ‘ದ ಗಾರ್ಡಿಯನ್’ ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

‘ಓವಲ್ ಟೆಸ್ಟ್ ನಡೆಯುವಾಗ ಇದ್ದ ಹೋಟೆಲ್‌ನಲ್ಲಿ ಮೆಟ್ಟಿಲುಗಳನ್ನು ಐದು ಸಾವಿರ ಜನ ಬಳಸುತ್ತಿದ್ದರು. ಅದೂ ಕಾರಣವಿರಬಹುದೇನೋ. ಅದು ಬಿಟ್ಟು ಪುಸ್ತಕ ಸಮಾರಂಭದತ್ತ ಬೆರಳು ತೋರಿಸುವುದು ಏಕೆ? ಕಾರ್ಯಕ್ರಮದಲ್ಲಿ 250 ಜನ ಇದ್ದರು. ಅದರಲ್ಲಿ ಒಬ್ಬರಿಗೂ ಸೋಂಕು ತಗುಲಿದ ವರದಿಯಾಗಿಲ್ಲ’ ಎಂದಿದ್ದಾರೆ.



ರವಿ ಶಾಸ್ತ್ರಿ

ಭಾರತ ತಂಡಕ್ಕೆ ಕುಂಬ್ಳೆ ಕೋಚ್?

ನವದೆಹಲಿ (ಪಿಟಿಐ): ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಅವರಿಗೆ ಭಾರತ ತಂಡದ ಮುಖ್ಯ ಕೋಚ್ ಆಗುವ ಅವಕಾಶ ಮತ್ತೆ ಒದಗಿಬರುವ ಸಾಧ್ಯತೆಯಿದೆ.

ಟಿ20 ವಿಶ್ವಕಪ್ ಬಳಿಕ ಈಗಿನ ಕೋಚ್ ರವಿಶಾಸ್ತ್ರಿ ಅವರ ಅವಧಿ ಮುಗಿಯಲಿದ್ದು, ಆ ಸ್ಥಾನಕ್ಕೆ ಅಧ್ಯಕ್ಷ ಸೌರವ್ ಗಂಗೂಲಿ ನೇತೃತ್ವದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕುಂಬ್ಳೆ ಅಥವಾ ಮಾಜಿ ಆಟಗಾರ ವಿ.ವಿ.ಎಸ್. ಲಕ್ಷ್ಮಣ್ ಅವರನ್ನು ಕರೆತರುವ ಸಾಧ್ಯತೆಯಿದೆ.

ಕುಂಬ್ಳೆ 2016–17ರ ಅವಧಿಯಲ್ಲಿ ಒಂದು ವರ್ಷ ಕೋಚ್ ಹುದ್ದೆಯಲ್ಲಿದ್ದರು. ನಾಯಕ ವಿರಾಟ್ ಕೊಹ್ಲಿ ಅವರೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ, ಚಾಂಪಿಯನ್ಸ್ ಟ್ರೋಫಿ ಫೈನಲ್ ಬಳಿಕ ಕುಂಬ್ಳೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಕೊಹ್ಲಿ ಈಗಾಗಲೇ ವಿಶ್ವಕಪ್ ಬಳಿಕ ಟಿ20 ಕ್ರಿಕೆಟ್ ನಾಯಕತ್ವದಿಂದ ನಿರ್ಗಮಿಸುವುದಾಗಿ ಹೇಳಿದ್ದಾರೆ.

ಭಾರತದ ಕೋಚ್‌ಗಳೇ ಬಿಸಿಸಿಐ ಆಡಳಿತಕ್ಕೆ ಯಾವಾಗಲೂ ಮೊದಲ ಆಯ್ಕೆಯಾಗಿದ್ದಾರೆ. ಕುಂಬ್ಳೆ ಮತ್ತು ಲಕ್ಷ್ಮಣ್ ಇಬ್ಬರೂ ಭಾರತೀಯ ಕ್ರಿಕೆಟ್‌ನಲ್ಲಿ ಉತ್ತುಂಗಕ್ಕೇರಿದವರು. 100ಕ್ಕೂ ಹೆಚ್ಚು ಟೆಸ್ಟ್ ಪಂದ್ಯಗಳ ಆಡಿದ ಜೊತೆಗೆ ತರಬೇತಿಯ ಅನುಭವವು ಅವರ ಬೆನ್ನಿಗಿದೆ. ವಿದೇಶಿ ಕೋಚ್ ಎರಡನೇ ಆಯ್ಕೆಯಾಗಿದೆ.

ಸ್ನೂಕರ್: ಪ್ರಶಸ್ತಿ ಗೆದ್ದ ಲಕ್ಷ್ಮಣ್

ಬೆಂಗಳೂರು: ಅಮೋಘ ಆಟವಾಡಿದ ಎಂ.ಎಲ್. ಲಕ್ಷ್ಮಣ್ ಅವರು ರಾಜ್ಯ ಬಿಲಿಯರ್ಡ್ಸ್ ಸಂಸ್ಥೆ ಆಯೋಜಿಸಿದ್ದ ರಾಜ್ಯ ರ‍್ಯಾಂಕಿಂಗ್ ಸ್ನೂಕರ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಶನಿವಾರ ನಡೆದ ಅಂತಿಮ ಹಣಾಹಣಿಯಲ್ಲಿ ಅವರು 5–1ರಲ್ಲಿ (71-21, 46-57, 65-53, 68-29, 83 (52)-14, 62-49) ಬಿ.ಭಾಸ್ಕರ್ ವಿರುದ್ಧ ಜಯ ಗಳಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಆದಿಲ್ ಶೆರಾಜಿ 3–2ರಲ್ಲಿ (73-49, 06-111 (87), 46-61, 80-38, 66-36ರಲ್ಲಿ ಡಿ.ರಾಜಕುಮಾರ್ ವಿರುದ್ಧ ಗೆಲುವು ದಾಖಲಿಸಿದರು. ರಾಜಕುಮಾರ್ ನಾಲ್ಕನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಪ್ರಶಸ್ತಿ ಗೆದ್ದ ಲಕ್ಷ್ಮಣ್ ಮತ್ತು ರನ್ನರ್ ಅಪ್ ಭಾಸ್ಕರ್

ಡೇವಿಸ್ ಕಪ್: ಭಾರತಕ್ಕೆ ಸೋಲು

ಎಸ್ಪೊ, ಫಿನ್‌ಲೆಂಡ್ (ಪಿಟಿಐ): ಅನುಭವಿ ರೋಹನ್ ಬೋಪಣ್ಣ ಹಾಗೂ ರಾಮ್‌ಕುಮಾರ್ ರಾಮನಾಥನ್ ಅವರು ಡಬಲ್ಸ್‌ನಲ್ಲಿ ನಿರಾಸೆ ಅನುಭವಿಸಿದರು. ಭಾರತ ತಂಡವು ಡೇವಿಸ್ ಕಪ್ ಟೂರ್ನಿಯ ವಿಶ್ವ ಗುಂಪು ಒಂದರ ಫಿನ್‌ಲೆಂಡ್ ಎದುರಿನ ಪಂದ್ಯದಲ್ಲಿ 0–3ರಿಂದ ಸೋಲು ಅನುಭವಿಸಿತು.

ಶನಿವಾರ ಭಾರತದ ಜೋಡಿಯು 6-7(2), 6-7(2)ರಿಂದ ಹೆನ್ರಿ ಕೊಂಟಿನೆನ್ ಮತ್ತು ಹ್ಯಾರಿ ಹೆಲಿವಿವಾರಾ ಎದುರು ಎಡವಿದರು.

ಭಾರತ ತಂಡದ ನಾಯಕ ರೋಹಿತ್ ರಾಜ್‌ಪಾಲ್ ಪಂದ್ಯ ಆರಂಭವಾಗುವ ಹಂತದಲ್ಲಿ ದಿವಿಜ್ ಅವರ ಬದಲಿಗೆ ರಾಮಕುಮಾರ್ ಅವರನ್ನು ಬೋಪಣ್ಣ ಅವರಿಗೆ ಜೊತೆಗಾರನನ್ನಾಗಿ ಮಾಡಿದರು. ಇದು ಫಲ ನೀಡಲಿಲ್ಲ.

ಪ್ರಜ್ಞೇಶ್ ಗುಣೇಶ್ವರನ್ ಹಾಗೂ ರಾಮ್‌ಕುಮಾರ್ ರಾಮನಾಥನ್ ಸಿಂಗಲ್ಸ್ ವಿಭಾಗದಲ್ಲಿ ಸೋಲು ಅನುಭವಿಸಿದ್ದರು.

ಇನ್ನು ರಿವರ್ಸ್ ಸಿಂಗಲ್ಸ್ ಪಂದ್ಯಗಳಿದ್ದು ಅವು ಕೇವಲ ಔಪಚಾರಿಕ ಎನಿಸಿವೆ.

ಬಾಕ್ಸಿಂಗ್: ಎಂಟರ ಘಟ್ಟ ತಲುಪಿದ ಹಸಮುದ್ದೀನ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಮೊಹಮ್ಮದ್ ಹಸಮುದ್ದೀನ್ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ 57 ಕೆಜಿ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಶನಿವಾರ ನಡೆದ ಬೌಟ್‌ನಲ್ಲಿ ಅವರು ಛತ್ತೀಸ್‌ಘಡದ ಸಾಹಿಲ್ ವಿರುದ್ಧ 5–0ರಲ್ಲಿ ಗೆದ್ದರು.

ಹಸಮುದ್ದೀನ್ ಅವರು ಸರ್ವಿಸಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ ಪ್ರತಿನಿಧಿಸುತ್ತಿದ್ದಾರೆ.

57 ಕೆಜಿ ವಿಭಾಗದ ಮತ್ತೊಂದು ಬೌಟ್‌ನಲ್ಲಿ ವಿಶ್ವ ಯೂತ್ ವಿಭಾಗದ ಚಾಂಪಿಯನ್ ಹರಿಯಾಣದ ಸಚಿನ್ ಮಣಿಪುರದ ಜಾಬಿಸನ್ ಎಂಕೋಪಮ್ ಎದುರು 5–0ಯಿಂದ ಜಯ ಸಾಧಿಸಿದರು. ವಿಶ್ವ ಚಾಂಪಿಯನ್ ಗೌರವ್ ಬಿಧೂರಿ ಅವರನ್ನು ಶುಕ್ರವಾರ ಮಣಿಸಿದ್ದ ಸಚಿನ್ ಶನಿವಾರ ನಿರಾತಂಕವಾಗಿ ಆಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

54 ಕೆಜಿ ವಿಭಾಗದಲ್ಲಿ ಗೋವಾದ ರೋಷನ್ ಜಮೀರ್ ರಾಜಸ್ತಾನದ ಸೂರಜ್ ಭಾನ್ ಸಿಂಗ್ ಎದುರು 3–2ರಲ್ಲಿ ಗೆದ್ದರು.



ಹಸಮುದ್ದೀನ್

51 ಕೆಜಿ ವಿಭಾಗದಲ್ಲಿ ರಾಕಸ್ತಾನದ ಭೀಮ್ ಪ್ರತಾಪ್ ಸಿಂಗ್ ಮತ್ತು 57 ಕೆಜಿ ವಿಭಾಗದಲ್ಲಿ ದೆಹಲಿಯ ರೋಹಿತ್ ಮೋರ್ ಸುಲಭ ಗೆಲುವಿನೊಂದಿಗೆ ಅಂತಿಮ ಎಂಟರ ಘಟ್ಟಕ್ಕೆ ಲಗ್ಗೆ ಇರಿಸಿದರು.

60 ಕೆಜಿ ಬೌಟ್‌ನಲ್ಲಿ ತ್ರಿಪುರದ ಪರ್ವಿಂದರ್ ಪೂನಿಯಾ ತಮಿಳುನಾಡಿನ ಪ್ರಭು ಮುರಳಿ ವಿರುದ್ಧ 5–0ಯಿಂದ ಗೆದ್ದರು.

67 ಕೆಜಿ ವಿಭಾಗದಲ್ಲಿ ಚಂಡೀಗಢದ ಅಮನ್ ಒಡಿಶಾದ ಎಸ್.ಆರ್. ಸಾಹು ವಿರುದ್ಧ ಮತ್ತು 71 ಕೆಜಿ ವಿಭಾಗದಲ್ಲಿ ಸಚಿನ್ ಉತ್ತರಾಖಂಡದ ದೇವೇಂದರ್ ಸಿಂಗ್ ವಿರುದ್ಧ ಭರ್ಜರಿ ಜಯ ಸಾಧಿಸಿದರು.

ಡುರಾಂಡ್ ಕಪ್: ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಕೋಲ್ಕತ್ತ (ಪಿಟಿಐ): ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡ ಡೆಲ್ಲಿ ಎಫ್‌ಸಿಯೊಡನೆ 2–2ರ ಸಮಬಲ ಸಾಧಿಸಿತು.

ಬಿಎಫ್‌ಸಿ ಪರ 27ನೇ ನಿಮಿಷದಲ್ಲಿ ಶಿವಶಕ್ತಿ ಗೋಲು ಗಳಿಸಿದರು. ಆದರೆ 58 ಮತ್ತು 62ನೇ ನಿಮಿಷಗಳಲ್ಲಿ ಡೆಲ್ಲಿ ಎಫ್‌ಸಿಯ ವಿಲ್ಲಿಸ್ ಡಿಯೊನ್ ಕಾಲ್ಚಳಕ ತೋರಿದರು. ವಿದ್ಯಾಸಾಗರ್ ಸಿಂಗ್ 75ನೇ ನಿಮಿಷದಲ್ಲಿ ದಾಖಲಿಸಿದ ಗೋಲು ಬಿಎಫ್‌ಸಿಗೆ ನೆರವಾಯಿತು.

ಪ್ಯಾರಾ ಕ್ಲೈಂಬಿಂಗ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ

ಮಾಸ್ಕೊದಲ್ಲಿ ಬೆಳಗಾವಿಯ ಸುನೀತಾ ಮಿಂಚು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಖಾನಾಪುರ ತಾಲ್ಲೂಕಿನ ತೋಲಗಿ ಗ್ರಾಮದ ಸುನೀತಾ ಎಂ. ದುಂಡಪ್ಪನವರ ಮಾಸ್ಕೊದಲ್ಲಿ ನಡೆದ ಐಎಫ್‌ಎಸ್‌ಸಿ ಪ್ಯಾರಾ ಕ್ಲೈಂಬಿಂಗ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದಾರೆ.

ದೃಷ್ಟಿದೋಷವುಳ್ಳವರ ವಿಭಾಗದಲ್ಲಿ ಭಾರತದ ಕ್ರೀಡಾಪಟುಗಳು ಇದೇ ಮೊದಲ ಬಾರಿ ಸ್ಪರ್ಧಿಸುತ್ತಿದ್ದಾರೆ. 24 ವರ್ಷದ ಸುನೀತಾ ‘ಬಿ3’ ವಿಭಾಗದಲ್ಲಿ ಕಣಕ್ಕೆ ಇಳಿದಿದ್ದರು.

ಬೆಂಗಳೂರಿನ ಸಮರ್ಥನಂ ಅಂಗವಿಕಲರ ಸಂಸ್ಥೆಯಲ್ಲಿ ಐದು ವರ್ಷಗಳಿಂದ ಕ್ರೀಡಾ ತರಬೇತಿ ಪಡೆಯುತ್ತಿರುವ ಸುನೀತಾ 2014ರಲ್ಲಿ ಬೆಳಗಾವಿಯ ಸಮರ್ಥನಂ ಸಂಸ್ಥೆಯಲ್ಲಿ ನಾಲ್ಕು ತಿಂಗಳು ಕಂಪ್ಯೂಟರ್ ತರಬೇತಿ ಪಡೆದಿದ್ದರು. ಅವರ ಪ್ರತಿಭೆ ಗಮನಿಸಿದ ಸಂಸ್ಥೆಯ ಮುಖ್ಯಸ್ಥ ಅರುಣ್‌ಕುಮಾರ್ ಎಂ.ಜಿ ತರಬೇತಿಗಾಗಿ ಕೇಂದ್ರ ಕಚೇರಿಗೆ ಕಳುಹಿಸಿದ್ದರು.

‘ನಿರಂತರ ಪ್ರಯತ್ನದಿಂದ ಅವರು ಸಾಧನೆ ಮಾಡಿದ್ದಾರೆ’ ಎಂದು ಅರುಣ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸುನೀತಾ ದೃಷ್ಟಿದೋಷವುಳ್ಳ ಮಹಿಳಾ ಕ್ರಿಕೆಟ್‌ನಲ್ಲಿ ರಾಷ್ಟ್ರಮಟ್ಟದ ಆಟಗಾರ್ತಿಯೂ ಹೌದು. 2 ವರ್ಷಗಳಿಂದ ಆಡುತ್ತಿದ್ದಾರೆ. ಒಮ್ಮೆ ರಾಜ್ಯ ತಂಡದ ಉಪ ನಾಯಕಿಯಾಗಿದ್ದರು. ಒಳ್ಳೆಯ ಅಥ್ಲೀಟ್ ಕೂಡ ಆಗಿದ್ದಾರೆ. ಸಮರ್ಥನಂ ಮೈಸೂರಿನಿಂದ ಬೆಂಗಳೂರು ವರೆಗೆ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದರು’ ಎಂದು ಮಾಹಿತಿ ನೀಡಿದರು.

‘ಮಗಳು ಪದಕ ಗಳಿಸಿದ್ದಕ್ಕೆ ಖುಷಿಯಾಗಿದೆ. ಬೇರೆ ದೇಶಕ್ಕೆ ಹೋಗಬೇಕು ಎಂದು ಕರೆ ಮಾಡಿ ತಿಳಿಸಿದ್ದಳು. ನಿನಗೆ ಹೇಗೆ ತಿಳಿಯುತ್ತದಯೋ ಹಾಗೆಯೇ ಮಾಡು ಎಂದಿದ್ದೆ’ ಎಂದು ಸುನೀತಾ ತಂದೆ ನೀಲಕಂಠ ಬಸಪ್ಪ ದುಂಡಪ್ಪನವರ ಪ್ರತಿಕ್ರಿಯಿಸಿದರು.

‘ಅಲ್ಟ್ರಾ ಮ್ಯಾರಥಾನ್‌ನಲ್ಲಿ ವಿಶ್ವ ದಾಖಲೆ ಮಾಡಿದ್ದೇನೆ. ರಾಷ್ಟ್ರೀಯ ವಾಲ್ ಕ್ಲೈಂಬಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದ್ದೆ’ ಎಂದು ‘ಪ್ರಜಾವಾಣಿ’ ಜೊತೆ ಮಾತನಾಡಿದ ಸುನೀತಾ ಹೇಳಿದರು.

ಸುನೀತಾ ದುಂಡಪ್ಪನವರ ಜೊತೆ ಕ್ರೀಡಾ ಸಂಯೋಜಕಿ ಶಿಖಾ ಶೆಟ್ಟಿ

ಸಂಕ್ಷಿಪ್ತ ಸುದ್ದಿ

ಗಾಲ್ಫ್: ಪ್ರಶಸ್ತಿ ಗೆದ್ದ ಮೋಹನ್

ಬೆಂಗಳೂರು: ಎಂಇಜಿ ಗಾಲ್ಫ್ ಕ್ಲಬ್‌ನ ವಿ. ಮೋಹನ್ ಅವರು ಅಲ್ಬಾಟ್ರೋಸ್ ಜೂನಿಯರ್ ಗಾಲ್ಫ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ವಿಜೇತರು: **ಎಎ ವಿಭಾಗ:** ವಿ. ಮೋಹನ್, ವಿ.ಮೋಹನ್ ರನ್ನರ್‌ಅಪ್: ಕೃಷಿವ್ ಟೆಕ್‌ಚಾಂದಿನಿ. ಮಹಿಳಾ ವಿಭಾಗ: ಶ್ರೀ ರಿದ್ಧಿ ಲಕ್ಷ್ಮಿ. **ಎ ವಿಭಾಗ: ಬಾಲಕರು:** ಸುಶೀಲ್ ಕುಮಾರ್, ರನ್ನರ್ ಅಪ್: ಮೊಹಮ್ಮದ್ ಸಮಿ ಖಾನ್. **ಬಾಲಕಿಯರು:** ಜಾಸ್ಮಿನ್ ಶೇಖರ್, ರನ್ನರ್ ಅಪ್: ಲತಿಕಾ ಕೃಷ್ಣ ಮತ್ತು ಆರುಷಿ ಭಾನೋಟ್.

ಬಿ ವಿಭಾಗ: ಬಾಲಕರು: ಅಂಗದ್ ಸಿಂಗ್, **ರನ್ನರ್ ಅಪ್:** ಅಹಾನ್ ಮಾಥುರ್. **ಬಾಲಕಿಯರು:** ನೂಮಾ ಅಹಮದ್, **ರನ್ನರ್ ಅಪ್:** ಅಹಾನ್ ತಿವಾರಿ. **ಸಿ ವಿಭಾಗ: ಬಾಲಕರು:** ಆದಿತ್ಯ ಕಾಮತ್, **ರನ್ನರ್‌ಅಪ್:** ಇಶ್ನಿದ್ ವರ್ದಿ. ಬಾಲಕಿಯರು: ದಿಯಾ ಕ್ರಿಸ್ ಕುಮಾರ್.

ಡಿ ವಿಭಾಗ: ಬಾಲಕರು: ಆದಿತ್ಯ ತಿವಾರಿ, **ರನ್ನರ್‌ಅಪ್:** ವಾಸಿಫ್ ರೆಹಮಾನ್. ಬಾಲಕಿಯರು: ತಮನ್ನಾ ಖಾಂಡ್ರಾ. **ಇ ವಿಭಾಗ: ಬಾಲಕರು:** ಅದ್ವೈತ್ ಸುನಿಲ್, **ರನ್ನರ್‌ಅಪ್:** ಆದಿತ್ ವೀರಮಚನೇನಿ. ಬಾಲಕಿಯರು: ಕಿಯಾರ ಯಾದವ್, ರನ್ನರ್ ಅಪ್: ವೇದಿಕಾ ಬನ್ಸಾಲಿ.

ರೂಟ್ಸ್, ಕೊಡಗು ತಂಡಗಳ ಜಯಭೇರಿ

ಬೆಂಗಳೂರು: ಯುನೈಟೆಡ್ ಎಫ್‌ಸಿ ಕೊಡಗು ಮತ್ತು ರೂಟ್ಸ್ ಫುಟ್‌ಬಾಲ್ ಸ್ಕೂಲ್ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆಯ ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿಗಾಗಿ ನಡೆಯುತ್ತಿರುವ ಮಹಿಳೆಯರ ‘ಎ’ ಡಿವಿಷನ್ ಲೀಗ್‌ನಲ್ಲಿ ಶನಿವಾರ ರೋಚಕ ಜಯ ಸಾಧಿಸಿದವು.

ರೂಟ್ಸ್ ಎಫ್‌ಸಿಯ ಸಂಜನಾ (ಬಲ) ಸಹ ಆಟಗಾರ್ತಿ ಜೊತೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಗುಂಪು ಎರಡರ ಪಂದ್ಯದಲ್ಲಿ ಜಯಶ್ರೀ ಧಾಮ (34ನೇ ನಿಮಿಷ) ಗಳಿಸಿದ ಏಕೈಕ ಗೋಲಿನ ನೆರವಿನಿಂದ ಕೊಡಗು ತಂಡ ಜಿಆರ್‌ಕೆ ಎಫ್‌ಸಿಯನ್ನು 1–0 ಅಂತರದಲ್ಲಿ ಮಣಿಸಿತು.

ರೂಟ್ಸ್ ತಂಡ ಪಾಸ್ ಎಫ್‌ಸಿ ಎದುರಿನ ಪಂದ್ಯದಲ್ಲಿ 1–0 ಅಂತರದಿಂದ ಗೆಲುವು ಸಾಧಿಸಿತು.

58ನೇ ನಿಮಿಷದಲ್ಲಿ ಸಂಜನಾ ಅವರು ಗೆಲುವಿನ ಗೋಲು ದಾಖಲಿ ಸಿದರು.

ರಣೆಂದರ್ ಮರು ಆಯ್ಕೆ

ಮೊಹಾಲಿ (ಪಿಟಿಐ): ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ(ಎನ್‌ಆರ್‌ಎಐ) ಅಧ್ಯಕ್ಷರಾಗಿ ರಣೆಂದರ್ ಸಿಂಗ್ ಮರು ಆಯ್ಕೆಯಾದರು. ಬಿಎಸ್‌ಪಿ ಸಂಸದ ಶ್ಯಾಮ್ ಸಿಂಗ್ ಯಾದವ್ ಅವರನ್ನು 56–3 ಮತಗಳಿಂದ ಸೋಲಿಸಿದ ಅವರು ನಾಲ್ಕನೇ ಬಾರಿ ಈ ಹುದ್ದೆಗೆ ಚುನಾಯಿತರಾದರು. ಪ್ರಧಾನ ಕಾರ್ಯದರ್ಶಿಯಾಗಿ ಕುನ್ವರ್ ಸುಲ್ತಾನ್ ಸಿಂಗ್ ಅವಿರೋಧವಾಗಿ ಆಯ್ಕೆಯಾದರೆ, ರಣದೀಪ್ ಮಾನ್ ಖಜಾಂಚಿಯಾದರು. ಒಡಿಶಾ ಸಂಸದ ಕಾಳಿಕೇಶ್ ನಾರಾಯಣ ಸಿಂಗ್ ದೇವ್ ಅವರು ಫೆಡರೇಷನ್‌ನ ಹಿರಿಯ ಉಪಾಧ್ಯಕ್ಷರಾಗಿ ಮುಂದುವರಿದಿದ್ದಾರೆ. ಅವರಲ್ಲದೆ ಎಂಟು ಮಂದಿ ಉಪಾಧ್ಯಕ್ಷರು ಇದ್ದಾರೆ. ಅಪೆಕ್ಸ್ ಮಂಡಳಿಯ ಜಂಟಿ ಕಾರ್ಯದರ್ಶಿಗಳಾಗಿ ಪವನ್ ಕುಮಾರ್ ಸಿಂಗ್ ಮತ್ತು ಶೈಲಾ ಕನುಂಗೊ ಕಾರ್ಯನಿರ್ವಹಿಸಲಿದ್ದಾರೆ.